START

START

START

START

START

START

START

START

MICROFILMED
BY
KARNATAKA STATE
ARCHIVES

CAMP:- DATE

MEGARAVALLI 19th JUNE 91

SHIMOGA DIST. F.NO. ARS21 APP89

MICROFILMED
BY
KARNATAKA STATE
ARCHIVES

CAMP:- DATE
MEGARAVALLI 19th JUNE 91
SHIMOGA DIST. F.NO. ARS21 APP89

MICROFILMED
BY
KARNATAKA STATE
ARCHIVES

CAMP:- DATE

MEGARAVALLI 19th JUNE 91

SHIMOGA DIST. F.No. ARS21 APP89

ಶ್ರೀ. ಶಿ. [illegible] ಕರ್ನಾಟಕ ಪ್ರಕಾಶಕ.

ಇಂದ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ.

ದೃಢೀಕರಣ ಪತ್ರ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ದಿನಾಂಕ 17-6-91 ರಿಂದ 28-6-91 ರವರೆಗೆ ಶಿವಮೊಗ್ಗ ಜಿಲ್ಲಾ, ತೀರ್ಥಹಳ್ಳಿ ತಾಲ್ಲೂಕು, ಮೇಗರವಳ್ಳಿಯಲ್ಲಿರುವ ಶ್ರೀ. ಬಿ.ವಿ. ಮಾಣಿಕ್ಯ ರವರ ಪತ್ರಿಕಾ ಪತ್ರಾಗಾರದ ಸೂಕ್ಷ್ಮ ಚಿತ್ರೀಕರಣವನ್ನು ಈ ಸ್ಥಳದಲ್ಲಿಯೇ ಇಲಾಖಾ ಸೂಕ್ಷ್ಮ ಚಿತ್ರೀಕರಣ (ಸಂಚಾರಿ) ಘಟಕದ ಕಾರ್ಯವನ್ನು ಕೈಗೊಳ್ಳಲಾಯಿತು. ಈ ದಾಖಲೆಗಳು ಐತಿಹಾಸಿಕ ಮಹತ್ವವನ್ನು ಹೊಂದಿದ್ದು ಕನ್ನಡದಲ್ಲಿ ಮೊಟ್ಟಮೊದಲು ಪ್ರಕಟವಾಗುತ್ತಿದ್ದ ಪ್ರಮುಖ ದಿನಪತ್ರಿಕೆ [illegible] ಸಂಗ್ರಹ ಮಾಡಲಾಗುತ್ತದೆ. ಇವುಗಳು [illegible] ಐತಿಹಾಸಿಕ ಮಹತ್ವವುಳ್ಳ ದಾಖಲೆಗಳಾಗಿ [illegible] ಕೋರಿದೆ

ದಿನಾಂಕ 19-6-91

ಕ್ಯಾಂಪ್, ಮೇಗರವಳ್ಳಿ.

(ಸಹಿ)

(ಬಿ.ಶಿ. ಮಲ್ಲಿಕಾರ್ಜುನಪ್ಪ)

ಪತ್ರಪಾಲಕರು

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ.

ಕ್ಯಾಂಪ್, ಮೇಗರವಳ್ಳಿ.

ಪ್ರೊ. ಶಿ. [illegible] ಕರ್ನಾಟಕ ಪ್ರಕಾಶನ.

ಕ. 'ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ.

ದೃಢೀಕರಣ ಪತ್ರ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ದಿನಾಂಕ 19-6-91 ರಿಂದ 28-6-91 ರವರೆಗೆ ಶಿವಮೊಗ್ಗ ಜಿಲ್ಲಾ, ತೀರ್ಥಹಳ್ಳಿ ತಾಲ್ಲೂಕು, ಮೇಗರವಳ್ಳಿಯಲ್ಲಿರುವ ಶ್ರೀ. ಬಿ.ವಿ. ನಾಗರಾಜರವರ ಪತ್ರಿಕಾ ಪತ್ರಾಗಾರದ ಸಂಗ್ರಹ, ಸಂಗ್ರಹಣವನ್ನು ಈ ಸ್ಥಳದಲ್ಲಿಯೇ ಇಲಾಖೆ ಸೂಕ್ಷ್ಮ ಚಿತ್ರೀಕರಣ (ಮೈಕ್ರೋಫಿಲ್ಮ್) ಕಾರ್ಯವನ್ನು ಕೈಗೊಳ್ಳಲಾಯಿತು. ಈ ದಾಖಲೆಗಳು ಐತಿಹಾಸಿಕ ಮಹತ್ವವನ್ನು ಹೊಂದಿದ್ದು ಕನ್ನಡದಲ್ಲಿ ಮೊಟ್ಟಮೊದಲು ಪ್ರಕಟವಾಗುತ್ತಿದ್ದ ಪ್ರಮುಖ ದಿನಪತ್ರಿಕೆಗಳನ್ನು ಒಳಗೊಂಡ ಈ ಪತ್ರಿಕಾ ಸಂಗ್ರಹ ಮಾದರಿಯಾಗಿದೆ. ಅಲ್ಲದೆ ಪ್ರೆಸ್‌ನೋಟ್, ಡಾಯರಿ, ಸಾಮಾಜಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಅನೇಕ ಐತಿಹಾಸಿಕ ಮಹತ್ವವುಳ್ಳ ದಾಖಲೆಗಳು ಇವೆ ಹೊಂದಿವೆ

ದಿನಾಂಕ 19-6-91
ಸ್ಥಳ, ಮೇಗರವಳ್ಳಿ.

(ಸಹಿ)
(ಬಿ.ವಿ. ಮಲ್ಲಿಕಾರ್ಜುನಸ್ವಾಮಿ)
ಪತ್ರಪಾಲಕರು
ಕರ್ನಾಟಕ ರಾಜ್ಯ ಪತ್ರಾಗಾರ
ಇಲಾಖೆ.
ಸ್ಥಳ, ಮೇಗರವಳ್ಳಿ

ಕರ್ನಾಟಕದ ಪತ್ರಗಾರ, ಮೊಗರವಳ್ಳಿ ಬಿ.ಎ. ಮೂರ್ತಿಯವರ ವಿಶ್ವ ವೃತ್ತ ಪತ್ರಿಕಾ ಪ್ರದರ್ಶನದ ಕನ್ನಡ ದಾಖಲೆ ಮತ್ತು ಪತ್ರಿಕಾ ಸಂಗ್ರಹವನ್ನು ದಿನಾಂಕ-19-6-91 ರಂದು ಸಾಕ್ಷ್ಯ ಚಿತ್ರೀಕರಣ ಮಾಡಿರುವುದು.

ಕರ್ನಾಟಕದ ಪತ್ರಕಾರ, ಮೊಗೇರವಳ್ಳಿ
ಬಿ. ಎ. ಮಾತೆಯವರ ವಿಶ್ವ ವೃತ್ತ ಪತ್ರಿಕಾ
ಪ್ರದರ್ಶನದ ಕನ್ನಡ ದಾಖಲೆ ಮತ್ತು
ಪತ್ರಿಕಾ ಸಂಗ್ರಹವನ್ನು ದಿನಾಂಕ-19-6-91
ರಂದು ಸಾಕ್ಷ್ಯ ಚಿತ್ರೀಕರಣ ಮಾಡಿರುವುದು.

ಕರ್ನಾಟಕ ಸರಕಾರ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ.

ದಿನಾಂಕ 17-6-91 ರಿಂದ 22-6-91 ರವರೆವಿಗೆ ಶಿವಮೊಗ್ಗ ಜಿಲ್ಲಾ ತೀರ್ಥಹಳ್ಳಿ ತಾ। ಮೇಗರವಳ್ಳಿ ಶ್ರೀ. ಬಿ.ವಿ. ಮರಾಠೆ ಯವರ ಖಾಸಗಿ ಪತ್ರಾಗಾರದ ಸೂಚಿಪಟ್ಟಿ ತಯಾರಿಸಿದ ವಿವರ.

I ಶಿಕ್ಷಣ.

1 ಕನ್ನಡ ಬಾಲರಿಗೆ ಮೊದಲನೆ ಪುಸ್ತಕ. 1860
2 ಷಡ್ಲಿಂಗತಿ ವ್ಯಾಕರಣ
3 ಕನ್ನಡ ಆಪ್ತನ್ವ ಸೋಲ್ಲು 1901
4 ಭೂಗೋಳ ಶಾಸ್ತ್ರ ಪ್ರಶ್ನೋತ್ತರ 1907

II ಸಮಾಜ

ಕರ್ನಾಟಕ ಜಿಲ್ಲಾ ಗ್ರಾಮಾಂತರೋಪಾಖ್ಯಾನವು 1873
ಶ್ರೀ ದೇವಿ ಭಾಗವತಂ 1912
A Manual of Hindu Law (ವ್ಯವಹಾರ) 1866

III ಜ್ಯೋತಿಷ್ಯ

1 ಜ್ಯೋತಿಷ ಬಾಲಬೋಧೆ 1933
2 ನಕ್ಷತ್ರ ಚಿಂತಾಮಣಿ 1903
3 ಭ್ರಾಂತಿ ನಿವೃತ್ತಿಯು

IV ಸ್ವಾತಂತ್ರ್ಯ ಹೋರಾಟ

ತೀರ್ಥಹಳ್ಳಿ ತಾ। ಗಾಂಧಿ ಬಿನ್ನವತ್ತಳೆ 1927
ಕಾಂಗ್ರೆಸ್ ಫಂಡಿನ ಚೀಟಿ 1927
1934 ರಲ್ಲಿ ಶಿವಮೊಗ್ಗೆಯಲ್ಲಿ ನಡೆದ ಸಮಾರಂಭದ ಬಿನ್ನವತ್ತಳೆ. 1934
ಸ್ವಾತಂತ್ರ್ಯ ಜ್ಯೋತಿ ಸಂದೇಶ —
ಗಾಂಧೀಜಿ ಕರಪತ್ರ 6-12-1936
ಚಿತ್ರಮಯ ವಾರ್ತೆ.

I

37

ಕರ್ನಾಟಕ ಸರ್ಕಾರ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ.

ದಿನಾಂಕ 17-6-91 ರಿಂದ 22-6-91 ರವರೆವಿಗೆ ಬೆಂಗಳೂರು ಜಿಲ್ಲಾ ದಿಬ್ಬೂರಹಳ್ಳಿ ತಾ|| ಮೇಲಿನ ಹಳ್ಳಿ ಶ್ರೀ ಬಿ.ವಿ. ಪಟೇಲ್ ಯವರ ಖಾಸಗಿ ಪತ್ರಾಗಾರದ ಹಸ್ತಪ್ರತಿಗಳ ಕರಡು ಪಟ್ಟಿ

I ಶಿಕ್ಷಣ.

1 ಕನ್ನಡ ವಿಷಯಗಳ ಮೊದಲನೆ ಪುಸ್ತಕ 1869

2 ಸಂಕ್ಷೇಪ ವ್ಯಾಕರಣ

3 ಕನ್ನಡ ಅಕ್ಷರಗಳು ಮೋಡಿ 1891

4 ಭಗವದ್ಗೀತಾ ಶಾಸ್ತ್ರ ಪ್ರಶ್ನೋತ್ತರ 1907

II ಧರ್ಮ

ಕರ್ನಾಟಕ ಶಿವ ಬ್ರಹ್ಮೋತ್ತರ ವ್ಯಾಖ್ಯಾನವು 1873

ಶ್ರೀ ದೇವಿ ಭಾಗವತಂ 1912

A Manual of Hindu Law (ಮೈಸೂರು) 1866

III ಜ್ಯೋತಿಷ್ಯ

1 ಜ್ಯೋತಿಷ್ಯ ಕಾಲ ಚಕ್ರ 1935

2 ನಕ್ಷತ್ರ ಚಿಂತಾಮಣಿ 1903

3 ಭಾಷ ದಿಕ್ಚಿಂತಾ

IV ಸ್ವಾತಂತ್ರ್ಯ ಹೋರಾಟ

1 ಕಾಂಗ್ರೆಸ್ ಹಳ್ಳಿ ತಾ|| ಹಾಡು ಬಿನ್ನವತ್ತಳೆ 1927

ಕಾಂಗ್ರೆಸ್ ಧ್ವಜದ ಹಾಡು 1927

1934 ರಲ್ಲಿ ಶ್ರೀ ಗಾಂಧೀಜಿ ಅವರು ನಾಡಿನ ಜನರಿಗೆ

ಅರ್ಪಿಸಿದ ಬಿನ್ನವತ್ತಳೆ. 1934

ರಾಷ್ಟ್ರೀಯ ಸಭಾ ಕಾರ್ಯಕ್ರಮ —

ಕಾಂಗ್ರೆಸ್ ಕರಪತ್ರ 6-12-1936

ಚಿತ್ರಮಯ ಕಾಂಗ್ರೆಸ್.

V ಬಂಗಾರ

1 ಹೊಸ ಕಾಲುವೆ ಹೊಳೆ ತೆರೆಯಲಾಗಿದೆ

VI 1 ಶಿಲ್ಪಕಲೆ. (ಸಾಹಿತ್ಯ, ವೈದ್ಯಕೀಯ ಶೃಂಗಾರ ಸಾಧನ)

1 ಬ್ರಹ್ಮನ ಪತ್ರಿಕೆ 21-3-1906

2 ಶ್ರೀ. ನಾಗಮಣಿ ಕೃ ಸಭಾ. —

3 ವಿದ್ಯಾರ್ಥಿ ಗ್ರಂಥಾಲಯ, ಬಾಡುವ —

4 ಸಂಗೀತ ಜಬದಸ್ತಾನ —

5 ಗ್ರಾಮಪಂಚಾಯಿತಿ ಸಂಘ —

6 ಆಯುರ್ವೇದ ವೈದ್ಯಶಾಲೆ, ಮಂದಿರ, ಶೃಂಗೇರಿ 1915

7 ಶ್ರೀ ವೇದಾಚಲ ಪ್ರಾರ್ಥನಾ ಮಂದಿರ

ಪ್ರತಿಷ್ಠಾಪನೆ 1934

8 ಪ್ರಾಥಮಿಕ ಶಿಕ್ಷಣ ಕಲಿಯುವ ಬಗ್ಗೆ

ಮುಂದಾಗಿ ಬಡಮಕ್ಕಳಿಗೆ ಸ್ಕೂಲು

ಪ್ರತಿಷ್ಠಾಪನೆ

9 ಯುವಕರ ವೈದ್ಯಶಾಲಾ

10 ಮಹಿಳಾ ಸಮಾಜ ಕಾರ್ಯ

ಕಾರ್ಯಯು:

1 ವೈದ್ಯರು ರಾಜರ ಮನೆತನದ ಚಿತ್ರಗಳು

ನಾಲ್ವಡಿ ಕೃಷ್ಣ ರಾಜ ಒಡೆಯರ ಅವರಿಂದ.

ಮುಂದು ನಡೆದಿದೆ.

V ದೇಣಿಗೆ

1 ಹಿತ್ತ ಗ್ರಾಮ ಪ್ಲೇಟ್ ತಟ್ಟೆಗಳು

VI 1 ಶ್ರೀ ಲಾಜ್ (ಸಾಹಿತ್ಯ, ವೈದ್ಯಕೀಯ ಶೃಂಗಾರ ಸಾಧನ)

1 ವೃತ್ತಾಂತ ಪತ್ರಿಕೆ 21-3-1906
2 ಶ್ರೀ. ನಾರದಮುನಿ ಕೃ ರಾವ್ —
3 ಸಿದ್ಧಾಂತ ಗ್ರಂಥಾಲಯ, ಬಿಜಾಪುರ —
4 ಸಂಜಾ ಬಿದನಾವಾನೆ —
5 ಗ್ರಾಮಾಂತರ ಮೋಹನೆ —
6 ಆಯುರ್ ವೇದ, ಮುದ್ರಣ, ಶೃಂಗೇರಿ 1915
7 ಶ್ರೀ ಶಂಕರ ಪ್ರಾದುರ್ಭಾವ
ಪ್ರಶಸ್ತಿ ಪತ್ರ 1934
8 ಪತ್ರ ಪ್ರಮಾಣ [illegible] ಕಲಾವಿದರ
ಮಂಜುನಾಥ [illegible]
ಪ್ರತಿಗಳು
9 ಯುಗಾದಿ ವೈದ್ಯ ಶಾಲಾ
10 [illegible] ಶಾಸನ

ಶಾಸನಗಳು.

1 ವೃಂದಾವನ ರಾಜರ ಮನೆತನದ ಚಿತ್ರಗಳು
ನಾಲ್ವಡಿ ಕೃಷ್ಣ ರಾಜ ಒಡೆಯರ ಆಡಳಿತದ.

ಮುಂದು ವರಿದೆ.

ಲಕ್ಷಣ

1.

೧೧. ಕ ಕ್ಕ

ಕಳ್ಳ. | ಕದ. | ಕದ್ದ. | ಇಕ್ಕಳ. | ಅಕ್ಕ | ನಕ್ಕ | ಆಕಳ

ಅವ ಕಳ್ಳ.
ಇದು ಕದ.
ನೀ ನನ್ನ ಅಕ್ಕ.
ಕದ್ದ ಅನ್ನ ಇದು.
ನಳ ಇದ್ದವನ ಅದು.
ಅವ ನಕ್ಕ.
ಅಕ್ಕನ ಅನ್ನ ನೀ ತಾ.
ಕಳ್ಳ ಕದ ಕದ್ದ.
ಇದ್ದ ಅನ್ನ ಅಕ್ಕನದು.
ಅದು ನಿನ್ನ ಇಕ್ಕಳ.

ಅಕ್ಕ, ನನ್ನ ಅನ್ನ ತಾ.
ಕದ್ದ ಅನ್ನ ದನದವನದು.
ಅವ ಆಕಳ ಕದ್ದ.
ಅಳದವ ಕಳ್ಳ.
ತಾ ನೀ ಅಕ್ಕನದು.
ಕದ ಅದು.
ನಕ್ಕವ ಅವ.
ಅಕ್ಕನ ಅನ್ನ ತಾ ನೀ.
ಆಕಳ ಕದ್ದವ ಅವ.
ಇದು ಅವನ ಇಕ್ಕಳ.

೧೨. ಕ ದ ದ್ದ ನ ವ ಳ ಉ
ಕು ದು ದ್ದು ನು ವು ಳು

ಉದ್ದ.	ತಾಳವು.	ಅವನು.	ತಾನು.	ಅಳುವದು
ಉದ್ದು.	ಇದ್ದನು.	ಇವನು.	ಉಳು.	ಕಳುವದು

ಇದು ಉದ್ದು, ಅದು ತಾಳವು.
ಅಳುವವಳು ನಿನ್ನ ಅಕ್ಕ.
ಅದು ನನ್ನ ಅಕ್ಕನ ತಾಳವು.
ಅವನು ಉದ್ದ ಇದ್ದನು.
ನಿನ್ನ ಅಕ್ಕ ನಕ್ಕಳು.
ನೀನು ಅದನ್ನು ಉದ್ದು.
ಅವಳು ನನ್ನ ಅವ್ವ.
ಇದು ನನ್ನದು.

ನಿನ್ನ ದನ ಉಳುವದು.
ಉಳದದ್ದು ಅಕ್ಕನದು.
ಅಳುವವನು ಕಳ್ಳ ಕದ್ದವನ
ನಿನ್ನ ಅಕ್ಕ ಇದ್ದಳು.
ನಕ್ಕದ್ದು ನನ್ನ ಅವ್ವ.
ಉಳುವವನು ದನದವನು.
ಅವನು ಅದನ್ನು ತಾಳುವ
ಅದು ನಿನ್ನ ಆಕಳು.

೧೩. ಪ ಪ್ಪ ಪು ಪ್ಪು 13.

ಪದ. | ಅಪ್ಪ. | ಕಪ್ಪು. | ಉಪ್ಪು. | ದಪ್ಪ.

ಇದು ದಪ್ಪ.
ಅವನು ಅದನ್ನು ಕಳವನು.
ಅಕ್ಕಳು ತಾಪ ತಾಳಳು.
ಅಳುವವನು ಕಳ್ಳನು.
ಅಪ್ಪ, ಉಪ್ಪು ತಾ.
ಅಪ್ಪ, ನೀ ಅನ್ನ ಉಪ್ಪು ತಾ!
ನನ್ನ ಉಪ್ಪು ತಾ, ನೀ.
ಅಪ್ಪ, ಇದ್ದ ಅನ್ನ ತಾ.
ಇವನು ನಿನ್ನ ಅಪ್ಪ.
ಅದು ದಪ್ಪ ಕದ.

ಅದು ಕಪ್ಪು.
ಅದು ಅಪ್ಪನ ಆಕಳು.
ಅಪ್ಪನ ವದನ.
ಅದು ಅಪ್ಪನ ಕಪ್ಪು ದನ.
ಕಪ್ಪು ದನ ಅಪ್ಪನದು.
ಅವನ ಅಪ್ಪನು ಉದ್ದನು.
ಅಳದ ಉಪ್ಪು ಇದು.
ಆ ಆಕಳು ಅಪ್ಪನದು.
ಅವಳು ತಾಪವನ್ನು ತಾಳಳು.
ಆ ಆಕಳು ಕಪ್ಪು.

೧೪. ತ ತ್ತ ತಾ ತ್ತಾ ತು ತ್ತು ತಂ 14.

ತನ್ನ.	ತಾತ.	ದತ್ತ.	ಅತ್ತನು.	ತುಪ್ಪ.	ನತ್ತು.
ತಂದದ್ದು.	ತುತ್ತು.	ತುಳು.	ಅತ್ತಳು.	ಉತ್ತನು.	ಇತ್ತ.

ಅಪ್ಪ ತುತ್ತು ಅನ್ನ ತಿಂ.
ನೀ ನನ್ನ ತುಪ್ಪವನ್ನು ತಾ.
ಅದು ನನ್ನ ಅಪ್ಪನ ಆಕಳು.
ಅಕ್ಕನ ನತ್ತು ಇತ್ತ ತಾ ನೀ.
ಆ ಅನ್ನ ಅವನ ತಾತ ತಂದದ್ದು.
ಆ ಉಪ್ಪು ಇತ್ತ ತಾ.
ಅವನ ಅಪ್ಪನು ಅತ್ತನು.
ನೀ ನನ್ನ ಆಕಳ ತಾ.
ಅಕ್ಕನು ನತ್ತನ್ನು ಕಳವಳು.

ಅವನ ಅಕ್ಕ ಅತ್ತಳು.
ಕಳ್ಳ, ಇದು ಕದ್ದ ತುಪ್ಪ.
ಅಕ್ಕ ಉಪ್ಪು ಅನ್ನ ತಂದಳು.
ಅಪ್ಪ, ನೀ ನನ್ನ ಅನ್ನ ತಾ.
ಅದು ದತ್ತ ಅನ್ನ.
ಕಳ್ಳನು ನತ್ತನ್ನು ಕದ್ದನು.
ಅದನ್ನು ಕದ್ದವ ಅವ.
ಆ ದನ ಕಪ್ಪು ದನ.
ಅದು ಅಕ್ಕ ಕಳದ ನತ್ತು.

ಳ ಗ

೧೫.

ಆಗ. | ನಗ. | ತಾಗದು. | ಈತನು. | ದನಗಳು.

ಅಪ್ಪ, ತುಪ್ಪ ಅನ್ನ ಈಗ ತಾ.
ಈ ನತ್ತು ನನ್ನ ಅಕ್ಕನದು.
ಕಳ್ಳ, ನೀ ಕದ್ದ ತುಪ್ಪ ಅದು.
ಈಗ ತುಪ್ಪ ಅನ್ನದ ತುತ್ತು ತಾ.
ನೀನು ಇದ್ದ ಅನ್ನವನ್ನು ತಾ.
ಅದು ನನ್ನ ಅಕ್ಕನ ನಗ.
ಆಕಳು ಆಗ ಇತ್ತು.
ದಪ್ಪ ಕದ ಅದು.
ಈ ನಗ ಆಗ ಕಳೆದ ನಗ.
ಅದು ತಾಗದು.

ಆ ಅನ್ನ ಈಗ ತಂದದ್ದು.
ಈಗ ಈ ತುತ್ತು ಅನ್ನ ತಾ.
ಈ ನತ್ತು ನಿನ್ನ ಅಕ್ಕನದು.
ಈತನು ನಿನ್ನ ಅಪ್ಪನು.
ಅದನ್ನು ಈಗ ಕದ್ದನು.
ಆ ನಗವನ್ನು ಅವನು ಕಳೆದನು
ಕಳೆದದ್ದು ಈ ನಗ.
ಅವು ನನ್ನ ಕಪ್ಪು ದನಗಳು.
ಅವು ನನ್ನ ಅಕ್ಕನ ನಗಗಳು

೧೬. ಕ ತ ದ ನ ಪ ವ ಳ ಗ ಆ
ಕಾ ತಾ ದಾ ನಾ ಪಾ ವಾ ಳಾ ಗಾ

ಆಳು.	ದಾತ.	ಪಾಪ.	ವಾರ.	ನಾತ.	ತಾಪ.
ತಾತ.	ನಾನಾ.	ಪಾನ.	ಗಾಳ.	ಆದದ್ದು.	ಪಾದ.

ಈತನು ನನ್ನ ಅಪ್ಪನ ತಾತನು.
ನೀನು ಕಪ್ಪು ಆಳು.
ಅವನು ಆಗ ನನ್ನನ್ನು ಕಾದನು.
ಆ ನಗವನ್ನು ಕದ್ದದ್ದು ನೀ.
ನೀನು ಈಗ ನನ್ನ ದಾತನು.
ನಾನಾ ಪಾನಗಳು ಉತ್ತಮ.
ಅವನು ಉದ್ದವಾದ ಕಪ್ಪು ಆಳು.
ಪಾಪ, ಪಾಪ, ಅದು ಆಗದು.

ಅದು ಅವಳ ಗಾಳವು.
ದಪ್ಪವಾದ ಕದ, ಅದು.
ಅವನ ಪಾದವು ಕಪ್ಪಾದದ್ದು
ಆತನು ಉದ್ದ ಆಳು.
ಅದು ಉದ್ದವಾಗದು.
ನೀನು ಆ ಉಪ್ಪು ಕಾಳು
ಇದು ಅಪ್ಪನ ನಗ.
ಅವನು ಅದನ್ನು ಅಗೆದನು

ರ ರಾ ರು 17.

ತಾರ. | ಪಾರ. | ಇರವು. | ನಾರು. ಕರದ. | ದರ. | ಆರು.

ಅಪ್ಪನ ಇರವು ನನ್ನ ಇರವು.
ನೀ ಇವುಗಳನ್ನು ಪಾರ ಪಾರ ತಾ.
ಧುರುಳತನವು ಪಾಪವು.
ಇದು ನನ್ನ ಅಕ್ಕನ ಪಾರ.
ಇದರ ತಪ್ಪು ಆರು ಆಗುವದು.
ಅವನನ್ನು ನೀನು ತಳ್ಳು.
ಅದು ನನ್ನ ಅಪ್ಪನ ನಗ.
ಆ ಅಗಳು ಆಳವಾದದ್ದು.
ಅದರ ದರ ಆರು ತಾರ.
ತಾತನು ನಿನ್ನನ್ನು ಕರದನು.

ನೀ ಅಪ್ಪನ ನಾರು ತಾ.
ನನ್ನ ಕಾಗದಗಳು ಕಪ್ಪು.
ಅವನು ಈಗ ಅದನ್ನು ಕದ್ದನು.
ನಿನ್ನ ತಾತನು ನಕ್ಕನು.
ಆತನು ನಿನ್ನನ್ನು ಕರದನು.
ಇದು ಉದ್ದವಾದ ನಾರು.
ಅದು ನಿನ್ನ ಅಪ್ಪನ ನಗ.
ನೀ ಅಕ್ಕನ ತಾರ ಇತ್ತ ತಾ.
ಈ ಕತ್ತವನ್ನು ಈಗ ನೀ ತಾ.
ತಂದ ಕಾಗದಗಳು ಆರು ಇದ್ದವು.

ಮ ಮಾ ಮು ಮ್ಮ 18.

ಮಗ.	ತಮ್ಮ	ಉತ್ತಮ.	ಮಾದಳ.	ಮುದ್ದು.	ತಮ್ಮ
ಮರ.	ರಾಮ.	ಮಾತು.	ಮುತ್ತು.	ಮಾವ.	ಮಾರು

ಪಾಪವು ಮಾನವನ್ನು ತಾರದು.
ಇದನ್ನು ನಿನ್ನ ಮಗನು ಕದ್ದನು.
ಆದು ಮಾವನ ಮುತ್ತು.
ನಿನ್ನ ಆಕಳನ್ನು ಮಾರು.
ಈ ಗಾಳ ನನ್ನ ತಮ್ಮನದು.
ನಮ್ಮ ಕರುವನ್ನು ನಾವು ತರುವ.
ಪಾಪ ಅಪಮಾನ ತರುವದು.
ರಾಮಾ, ನೀನು ಉತ್ತಮನಾಗು.
ಉತ್ತಮ ಮಾತು ಅಪವಾದ ತಾರದು.

ನಮ್ಮ ಮಾದಳ ಉತ್ತಮವು.
ಅವಳು ನನ್ನ ಮುದ್ದು ಅಕ್ಕ.
ಅಮ್ಮ, ತಮ್ಮನ ಗಾಳ ತಾ.
ಅವನು ರಾಮನ ಮಗನು.
ಇವನು ನಿನ್ನ ಮಗನು.
ಮುದ್ದು ರಾಮಾ, ಮುತ್ತು ತಾ.
ಈ ಮರದ ಮಾವು ನೀ ತಾ.
ಅದು ಉದ್ದ ಆಗುವದು.
ಆ ಕಳ್ಳನು ಅತ್ತನು.

೧೯. ಎ ಕೆ ಗೆ ತ್ತ ದೆ ನೆ ಪೆ ಮೆ ರೆ ವೆ 19.

ಎತ್ತು. | ನಾವೆ. | ಆವೆ. | ಇಪ್ಪೆ. | ರೆಪ್ಪೆ. | ಕಾಗೆ. | ಗದ್ದೆ. | ಕೆತ್ತೆ.

ರೆಪ್ಪೆ ಮುದುರುತ್ತದೆ.
ರಾಮನ ಗಾಳಿ ಎರವು ತಾ.
ಅಪ್ಪನು ನಿನ್ನನ್ನು ಕಾದನು.
ಆ ಮಾತು ಮರೆತು ಕಳೆದೆವು.
ಅದು ಆಳವಾದ ಅಗಳತೆ.
ಅದು ಉತ್ತಮವಾದ ನಾವೆ.

ಇದು ಕಪ್ಪು ಕಾಗೆ.
ನಮ್ಮ ಅಪ್ಪ ಆವೆ ತರುವನು
ಅದು ಆ ಮರದ ಕೆತ್ತೆ.
ನಿನ್ನ ನಾಮ ಪರಮ ಉತ್ತಮವು.
ಅದು ಮಾವನ ಗದ್ದೆ.
ನಿನ್ನ ತಮ್ಮನು ಉದ್ದವಾಗನು

ನಿನ್ನ ಮುತ್ತಪ್ಪನ ಆಕಳು ಉದ್ದವಾಗದು.
ಅಕ್ಕ, ಈ ಇಪ್ಪೆ ಮರವು ಮತ್ತು ಆಲದ ಮರವು ಅಪ್ಪನವು.
ನನ್ನ ಮಾವನ ಮಗನ ಎತ್ತು ಎತ್ತರವಾದದ್ದು.
ತಮ್ಮನು ಅಮ್ಮನ ಮಾತು ಮರೆತು ಕಳೆದನು.

೨೦. ಡ ಡಾ ಡು ಡಿ ಡೆ ಡ್ಡ 20

ತಡ. | ಮಾಡದೆ. | ಎರಡು. | ನಡು. | ದಡ್ಡ. | ಮಾಡು. | ನಡುವೆ.

ತಡ ಮಾಡದೆ ಇರು.
ಅವನು ಅರುವೆ ಕಳೆದನು.
ಎರಡು ಮಾಪು ನನ್ನದು.
ಅವನು ಮಾವನ ಮಗನು.
ಇವನು ಅವರ ನಡುವೆ ಇದ್ದನು.
ಅದು ಉತ್ತಮವಾದ ಆಕಳು.
ಅದು ನಮ್ಮ ದನದ ಕರು.

ಅವನು ಈಗ ಮಾತಾಡುತ್ತಾನೆ.
ಇವನು ಈ ಮರ ನಡುವನ್ನು
ಅವನ ತಮ್ಮ ದಡ್ಡನು.
ಆ ಮರ ನಡುವೆ ಇರುವದು.
ಇದು ಆಳವಾದ ಕೆರೆ.
ಅವರು ಕಳ್ಳರು.
ರಾಮನು ಮದ ಉಳ್ಳವನು

ತಮ್ಮಾ, ಅಕ್ಕನ ನತ್ತು ಮತ್ತು ನನ್ನ ಕಪ್ಪು ಅರುವೆ
ಮಕ್ಕಳು ದುರುಳತನ ಮಾಡುವದು ಆಗದು.
ಉತ್ತಮನಾದ ಮಗನು ಅಪ್ಪನ ಮಾತು ಮಾಡುವನು.

೨೧. ಂಕ ಂಗ ಂತ ಂದ ಂಪ ಂಮ 21.

ತಂದು.	ತಂದೆ.	ತೆಂಗು.	ದಂಡ.	ದುಂಡು.	ತಂಗಳ.	ತಂಪು.
ತಂದನು.	ತೆಂಕು.	ಆನಂದ.	ವಂದನ.	ಉಂಡು.	ಅಂಕೆ.	ಅಂತು.

ಅಂಕೆ ತಪ್ಪು ಇಡುತ್ತಾನೆ.	ನಿನ್ನ ತಂದೆಗೆ ವಂದನೆ ಮಾಡು.
ಆರು ಕುರುಡರು ಇದ್ದರು.	ಅದು ನಮ್ಮ ತೆಂಗು.
ಅವರು ದುಂಡ ತೆಗದರು.	ಆ ಮರ ದುಂಡಾದದ್ದು.
ರಾಮನು ತಂಗಳ ಅನ್ನ ತರುತ್ತಾನೆ.	ಆ ನೀರು ತಂಪಾದ ನೀರು.

ಅವನು ನಾನಾ ತರಹದ ಗಡಿಗೆಗಳನ್ನು ತಂದನು.
ನನ್ನ ಮಾವನು ಉಂಡು ಕೆಮ್ಮುತ್ತಾ ಇರುತ್ತಾನೆ.
ಅಪವಾದದ ಮಾತುಗಳನ್ನು ಆಡದೆ ಇರು.
ಅಮ್ಮ ಅನ್ನ ಮಾಡುತ್ತಾ ಇರುವಾಗ ಮಾವನು ಆಕಳ ತಂದನು.
ಅದಕ್ಕೆ ನನ್ನ ತಮ್ಮನು ಮತ್ತು ಅಕ್ಕನು ಆನಂದ ಪಡುತ್ತಾರೆ.
ನಿನ್ನೆ ಕಳ್ಳನು ಕಾದು ಇದ್ದು ಅಮ್ಮ ತಂದ ನಗಗಳನ್ನು ಕದ್ದನು.

೨೨. ಕಿ ಗಿ ತಿ ದಿ ನಿ ಪಿ ಮಿ ರಿ ವಿ ಳಿ 22.

ತ್ತು.	ಗಿಡ.	ದಿನ.	ತಿನ್ನು.	ಮಿತ.	ಪಿತ್ತ.	ಮರಿ.	ತಿಳಿ.	ದಿಕ್ಕು.
ನ.	ಗಿಡ್ಡ.	ಆಗಿ.	ತಿದ್ದ.	ವಿರಳ.	ತಿನ್ನಿರಿ.	ಮಂದಿ.	ಕಿರಿ.	ಆದದರಿಂದ.

ಗಿಡವನ್ನು ಕಿತ್ತು ತಾ.	ತಮ್ಮಕತ್ತನ್ನು ದಿನದಿನ ತಿನ್ನುತ್ತಾನೆ.
ನು ಅದನ್ನು ಮಿತವಾಗಿ ತಿನ್ನು.	ಅದರಿಂದ ಪಿತ್ತವಾಗುವದು.
ಅದು ಆಡಿನ ಮರಿ.	ಇವುಗಳನ್ನು ವಿರಳವಾಗಿ ಇಡು.
ದನ ಕಾಗದ ಕಿರಿದು.	ನನ್ನ ಮಾವನು ಗಿಡ್ಡನಾಗಿರುತ್ತಾನೆ.
ಪರ ತಪ್ಪುಗಳನ್ನು ನೀನು ತಿದ್ದು.	ತೆಂಕು ದಿಕ್ಕು ಇದು.

ರಾಮನಿಗೆ ಅವನ ಅಮ್ಮನು ಆರು ಮಾವು ತಂದಳು. ಅವನು
ದನ್ನು ಆಗ ಈಗ ಅನ್ನದೆ ತಿಂದು ನೀರು ಕುಡಿದನು. ಅದರಿಂದ ಅವ
ಕೆಡಕು ಆಗಿ ಇತ್ತು. ಆದದರಿಂದ ಮಕ್ಕಳಿರಾ, ನಿಮಗೆ ಅಪ್ಪನು
ದಾದರು ಮಾವು ತಂದರೆ, ರಾಮನಂತೆ ಮಾಡದೆ ಮಿತವಾಗಿ ತಿನ್ನಿರಿ.

23.

೨೩. ಲ ಲಾ ಲಿ ಲು ಲೆ ಲ್ಲ ಲ್ಲಾ ಲ್ಲಿ

ಲಡ್ಡು.|ಎಲ್ಲಾ.|ಇಲ್ಲಿ.|ಅಲ್ಲಿ.|ಅಲ್ಲಾಡು.|ಲದ್ದಿ.|ನಲಿ.|ಕಲ್ಲು|ನಾಲು

ಅಮ್ಮಾ, ನನಗೆ ತಿನ್ನಲಿಕ್ಕೆ ಆ ಲಡ್ಡು ಇತ್ತ ತಾ.

ನಾನು ಗಾಳವನ್ನು ತರುವಾಗ ಅವನು ಕಲ್ಲು ಆಡುತ್ತಿದ್ದನು.

ನಾವು ಅವಮಾನ ತರುವ ಮಾತನ್ನು ಆಡಲು ಆಗದು.

ವನದಲ್ಲಿ ಇರುವ ಎಲ್ಲಾ ಮರಗಳು ಗಾಳಿಗೆ ಅಲ್ಲಾಡುತ್ತವೆ.

ಎರಡು ಮತ್ತು ನಾಲ್ಕು ಆರು ಆಗುತ್ತವೆ.

ನಾವು ಅಲ್ಲಿ ಇಲ್ಲಿ ತಿರುಗುತ್ತಾ ಇರಲು ಆಗದು.

ತಮ್ಮಾ, ವನದಲ್ಲಿರುವ ನಮ್ಮ ಕುದುರೆ ತಾ; ಅದಕ್ಕೆ ಕುಡಿ ನೀರು ತಂದು ತಿನ್ನಲಿಕ್ಕೆ ಗರುಕೆ ಇಡು. ನಾತವು ಆಗದಂತೆ ಅದರ ಅಡಿಗೆ ಇದ್ದ ಲದ್ದಿ ತೆಗೆ. ಅದನ್ನು ತಿಕ್ಕು. ಇದೆಲ್ಲಾ ಮಾಡಿ, ಮೇಗಾ ತುರತವಾಗಿ ರಾಮನನ್ನು ಕರೆ. ಮತ್ತೆ ನಾವು ಅಮ್ಮ ತಂದ ಅನ್ನವನ್ನು ಉಂಡು ಆಡುವ. ನಡೆ.

24

೨೪. ಒ

ಒಬ್ಬ|ಒಂದು.|ಒಮ್ಮೆ|ಒದೆ.|ಬಲ.|ಬಳಲಿ.|ಬಂದು.|ಬರ.|ಬದ್ಧ

ದೇವರು ಒಬ್ಬನಾಗಿರುತ್ತಾನೆ. ಆತನು ನಮ್ಮನ್ನು ಬದುಕ ಮಾಡುತ್ತಾ

ದೇವರು ತನ್ನ ಮಾತಿನ ಬಲದಿಂದ ಎಲ್ಲಾವನ್ನು ಮಾಡಿದನು.

ಆದದರಿಂದ ನಾವು ದೇವರ ವಂದನೆ ಮಾಡ ಬೇಕು.

ಒಂದು ಬಲವಾದ ಕುದುರೆ ಒಮ್ಮೆ ರಾಮನನ್ನು ಕಾಲಿನಿಂದ ಒದೆ ಕೆಡವಿತು. ಅದರಿಂದ ಅವನು ತನ್ನ ಕಾಲು ಮುರಿದು ಬಳಲಿ ಬಿ ಬಂದು ಮಲಗಿದ್ದನು. ಆಗ ನನ್ನ ತಮ್ಮನು ಪಂಡಿತನಿಂದ ಮದ್ದು ಸಿಗಾಗಿ ತಂದನು. ರಾಮನು ಅದನ್ನು ತನ್ನ ಕಾಲಿಗೆ ಇಡಲು ಬ ಅದರಿಂದ ಅವನ ಕಾಲು ಮಾದು ಇತ್ತು. ಕಡೆಗೆ ಅವನು ನನ್ನ ನು ಮಾಡಿದ ಉಪಕಾರಕ್ಕೆ ವಂದನೆ ಮಾಡಿದನು.

೨೫. ಕೊ ಗೊ ತೊ ಮೊ ಲೊ ವೊ 25.

ಕೊಳ್ಳ.	ಕೊಂಡು.	ಕೊರಡು.	ಕೊಡದೆ.	ದೊರೆ.	ಒಡನೆ.	ಒಬ್ಬೊಬ್ಬ.
ತೊದಲು.	ಗೊತ್ತು.	ದೊಡ್ಡ	ದೊರಕು.	ಅದಂ.	ಕೊಡು.	ಕೊಡಲಿ.

ಅವನು ತೊದಲು ಮಾತು ಆಡುವದರಿಂದ ಗೊತ್ತಾಗುವದು ಇಲ್ಲಾ.
ಈ ಅಂಗಡಿಗಾರನಲ್ಲಿ ದೊಡ್ಡ ಅರುವೆಗಳು ದೊರಕಲಾರವು.
ಆ ದೊರೆ ನಮಗೆ ನಾಳೆ ಇನಾಮು ಕೊಡುತ್ತಾನೆ.

ಒಬ್ಬಾನೊಬ್ಬ ಕುರುಬರವನಿಗೆ ಒಂದು ಕೊಡಲಿ ದೊರಕಿತು. ಅವನು ಅದನ್ನು ತೆಗೆದು ಕೊಂಡು ಅಡವಿಗೆ ಬಂದನು. ಅಲ್ಲಿ ಒಂದು ಮರದ ಗೆಲ್ಲಿನ ತುದಿಗೆ ಕುಳಿತು ಕೊಂಡು ಕೊರಡಿನ ಕಡೆಗೆ ತುಂಡು ಮಾಡುತ್ತಿದ್ದನು. ಆಗ ಒಬ್ಬ ದಾರಿಗನು ಕಂಡು—ಅಪ್ಪಾ, ಅಲ್ಲಿ ಕಡಿದರೆ ನಿನ್ನನ್ನು ನೀನೇ ಕೆಡವಿ ಕೊಳ್ಳುವಿ, ಅಂದನು. ಅದಕ್ಕೆ ಅವನು—ನಡೆ, ನಡೆ, ಎಲ್ಲಾ ಬಲ್ಲೆ, ಅಂದನು. ಕಡೆಗೆ ಆ ಗೆಲ್ಲು ತುಂಡಾಗಿ ಅದರೊಡನೆ ಕೆಳಗೆ ಬಿದ್ದನು. ಆದದರಿಂದ ಪರರ ಉತ್ತಮವಾದ ಮಾತಿಗೆ ಕಿವಿ ಕೊಡದೆ ಇದ್ದರೆ, ಆ ಕುರುಬನ ಗತಿ ಬರುವದು.

೨೬ ೀ ತೀ ತೇ ತೋ ಏ . ಓ 26

ತೀ ತೇ ತೋ ಏ ಓ

ಏನು.	ಓದು.	ಬೇಕು.	ನೋವು.	ವೇಳೆ.	ಅಲ್ಲವೋ.
ಏಳು.	ತೀರ.	ನೇರಳೇ.	ದೇವ.	ತೇಲು.	ತೋರು.

ಬೆಳಗಾಗುತ್ತಲೇ ಏಳುತ್ತ ದೇವರು ನೆನದು ಬರು ಬೇಕು.
ಪ್ರಾಣ ಆಡದೆ ಏನಾದರು ಓದುತ್ತಾ ಇರ ಬೇಕು
ಮದ್ಯ ಪಾನಾದಿ ದುಷ್ಟ ಆಗಿ ಇರ ಬೇಕು.
ಎಲ್ಲಾ ರತ್ನಗಳಿಗಿಂತ ವಿದ್ಯಾರತ್ನವು ಮರವು ಮತ್ತು ದೇವನಾಳವು
ಹಿರಿಯರ ಒಳ್ಳೆ ಮಾತುಗಳನ್ನು ಕೇಳಿ ತಿಳಿಯ ಬೇಕು.

ಒಂದು ದಿನ ಒಂದು ನವಿಲು ಬೆಳ್ಳಕ್ಕಿಗೆ ನಗೆ ಗೇಡು ಮಾಡ ಬೇಕೆಂದು ತನ್ನ ರೆಗೆಗಳನ್ನು ಎತ್ತಿ, ಅದರ ಹೊಳವನ್ನು ತೋರಿಸ್ಸಿಮಾಡಿತು. ಆಗ ಬೆಳ್ಳಕ್ಕಿ ಅದರ ಇಳಿಯ ಮಾಡ ಬೇಕೆಂದು—ಎಲಾ ಈ ಮಹಿಮೆ ದಿಟವಾದರೆ ನಿನ್ನ ಕುಲ ದೊ ಆದರೆ ನನಗೆ ಬಾನಿನಲ್ಲಿ ಹಾರ್ಯಾಡುವ ಬಲವಿದ್ದರೆ ಅತ್ಯುತ್ತಮವೇ ಅಂದಿತು. ಇದರಿಂದ ಪರರ ಮಾನ ಕೇಡು ತನ್ನ ಮಾನ ಕೇಡು ಅಂದ ಹಾಗೆ ಆಯಿತು.

12 27.

೨೭. ಹ ಹಾ ಹಿ ಹೆ ಹೊ

ಹಂದಿ. ಹಾವು. ಹುತ್ತರ. ಹೇಳು. ಹೊಕ್ಕು. ಹೀಗೆ. ಹೊರಗೆ. ಹೋಗು.

ದೇವರ ಹೇಳಿಕೆಗೆ ಒಳಗಾದರೆ, ಅವನು ಕಾಪಾಡುವನು.

ಹಾವು ಹುತ್ತದಲ್ಲಿ ಹೊಕ್ಕಲಿ ಎಂಬ ಹೇಳಿಕೆ ನಂಬ ತಕ್ಕದ್ದು.

ಪರರ ಒಡವೆಗಳನ್ನು ಕದ್ದರೆ, ಪಾಪ ಹೊರಗೆ ಬರುವದು.

ಒಂದು ಮುಳ್ಳುಹಂದಿ ಒಂದು ಹಾವಿನ ಹತ್ತರ—ನನಗೆ ಈ ದಿನ ಇಲ್ಲಿ ಇರುವದಕ್ಕೆ ಎಡೆ ಇದ್ದರೆ ಆಗುತಿತ್ತು, ಅಂದಿತು. ಆಗ ಹಾವು—ಒಳ್ಳೇದು, ಇಲ್ಲಿ ಇರು, ಅಪ್ಪಾ ಎಂದು ಹೇಳಿತು. ಆಗ ಆ ಮುಳ್ಳುಹಂದಿ ಆ ಹುತ್ತದಲ್ಲಿ ಹೊಕ್ಕಿತು. ಹೀಗೆ ಇರುತ್ತಾ ಇರುವಲ್ಲಿ, ಆ ಹಾವಿನ ಮೆದುವಾದ ಒಡಲಿಗೆ ಅದರ ಮುಳ್ಳು ತಗಲಲಿಕ್ಕೆ ಇದು ಅದನ್ನು ಕರೆದು—ಅಪ್ಪಾ! ಇನ್ನಾದರು ನೀನು ಹೋಗು ಎಂದು ಹೇಳಿತು. ಆಗ ಆ ಹಂದಿ—ನಾನು ಹೋಗಲಿಕ್ಕೆ ಇಲ್ಲಾ, ನೀನು ಹೋಗು ಎಂದು ಆ ಹಾವನ್ನು ಹೊರಗೆ ಹಾಕಿತು. ಆದದರಿಂದ ಪಾಪ! ದುರುಳರಿಗೆ ಮಾಡಿದ ಉಪಕಾರವು ಅಪಕಾರ ತರುವದು.

೨೮. ಟ ಟಾ ಟು ಟೆ ಂಟ ಂಟು ಟ್ಟ ಟ್ಟು 28.

ಹಟ. ಆಟ. | ಕಟ್ಟಳೆ. ಗುಟ್ಟು. | ಲೊಟ್ಟೆ. ತುಂಟ. | ಕೆಟ್ಟು. ಕಟ್ಟು. | ತಟ್ಟು. ತಂಟೆ. | ಉಂಟು. ದಿಟ. | ಕುಟು. ಕಂಟ.

ಹಟಗಾರರು ತಮ್ಮ ಹಟದಿಂದಲೇ ಕೆಟ್ಟು ಹೋಗುತ್ತಾರೆ.

ಮಕ್ಕಳಿರಾ, ನೀವು ಹಟ ಮಾಡಲು, ಲೊಟ್ಟೆ ಆಡಲು

ನಮ್ಮನ್ನು ಉಂಟು ಮಾಡಿದವನ ಕಟ್ಟಳೆ ಮೀರದೆ ನಡ

ತುಂಟರ ತಳ್ಳಿಗೆ ಹೋದರೆ, ಕಂಟಕ ತಪ್ಪದೆ ತಟ್ಟುವದು.

ಒಂದು ದಿನ ಕುರುಬರ ಹುಡುಗನ

ಹುಲಿ ಬಂ

೨೯. ಬಾ ಬಿ ಬು ಬೆ ಬೊ ಂಬ 29.

ಬಾರದು.	ಬೀಳ.	ಬೋನು.	ಬೊಟ್ಟು.	ಬೊಗರಿ.	ಬೇಗನೆ.	ಬೀದಿ.
ಬಹುದು.	ಬೆಳೆ.	ಬೇಡ.	ಬಿಟ್ಟು.	ಬಿದ್ದಿತು.	ಬಂದನು.	ಬಿದುರು.

ಮಾತು ಮಾತಿಗೆ ದೇವರ ನಾಮ ಹೇಳ ಬಾರದು.
ಕೆಟ್ಟ ಹುಡುಗರೊಡನೆ ಗುಂಟು ಬೀಳ ಬಾರದು.
ಹೆಡ್ಡನಾಗಿ ಬೆಳದರೆ ಮುದುಕನಾದಾಗ ಅನ್ನ ದೊರೆಕದು.

ಒಬ್ಬ ಹುಡುಗನು ಬೀದಿಗೆ ಹೋಗಿ ಬೊಗರಿ ಆಡುತ್ತಿದ್ದನು. ಆಗ ಒಬ್ಬನು ಒಂದು ಬೋನಿನಲ್ಲಿ ಕೊಂಡು ಹೋಗುವ ಕಪ್ಪು ಬೊಟ್ಟುಳ್ಳ ಹಕ್ಕಿ ನೋಡಿ—ಎಲಾ ಮುದುಕನೇ, ಆ ಹಕ್ಕಿ ನನಗೆ ಕೊಡ ಬಹುದೇ? ಅಂದನು ಆಗ ಆ ಮುದುಕನು ಕೊಟ್ಟು ಬಿಟ್ಟು ಹೀಗಂದನು—ಅಪ್ಪಾ! ಹಾದೀಲಿ ಬೇಗನೇ ಹೋಗ ಬೇಡ, ಬೋನು ಕೆಳಗೆ ಬಿದ್ದು ಒಡದರೆ ಅದು ನಿನಗೆ ದಕ್ಕದು. ಹುಡುಗನು ಒಳ್ಳೇದೆಂದು ಮೆಲ್ಲಗೆ ಬರುವಾಗ್ಯ ಒಂದು ಮರದಲ್ಲಿ ಮತ್ತೊಂದು ಹಕ್ಕಿ ಇರಲು ಅದನ್ನೇ ನೋಡುತ್ತಾ ಬಂದನು. ಆಗ ಕಾಲಿಗೆ ಒಂದು ಬಿದುರು ತಾಗಿ ಬಿದ್ದನು, ಬೋನು ಬಿದ್ದು ಒಡೆದು ಹೋಗಿ ಅದರಲ್ಲಿ ಇದ್ದ ಹಕ್ಕಿ ಬೇಗನೆ ಹಾರಿ ಬಿಡಲು, ಹುಡುಗನು ಅಳುತ್ತಾ ಮನೆಗೆ ಬಂದನು.

೩೦. ಯ ಯಾ ಯಿ ಯೊ ಯೆ ಯ್ಯ 30.

ಮರ್ಯಾದೆ.	ಮರೆಯು.	ಮದ್ಯ.	ಯಾವಾಗ.	ಅತ್ಯುತ್ತಮ.
ಹಿರಿಯರು.	ಯಾವದು.	ವಿದ್ಯ.	ಆಯಿತು.	ಹಾರ್ಯಾಡು

ದೊಡ್ಡವರ ಹತ್ತರ ಮರ್ಯಾದೆಯಿಂದ ಇರುವದು ಉತ್ತಮ.
ಹಿರಿಯರು ಹೇಳಿದ ಒಳ್ಳೇ ಮಾತುಗಳನ್ನು ಮರೆಯಲಾಗದು.
ಪರರಿಗಿರುವ ಯಾವದೊಂದನ್ನಾದರು ಅಪಹಾರ ಮಾಡ ಬೇಡ.
ಮದ್ಯ ಪಾನ ಮಾಡುವವರು ಯಾವಾಗಲು ಬಡವರಾಗಿರುವರು.
ಎಲ್ಲಾ ರತ್ನಗಳಿಗಿಂತ ವಿದ್ಯಾರತ್ನವು ಅತ್ಯುತ್ತಮವಾದದ್ದು.
ಹಿರಿಯರ ಒಳ್ಳೆ ಮಾತುಗಳನ್ನು ಕೇಳಿ ತಿಳಿಯ ಬೇಕು.

ಒಂದು ದಿನ ಒಂದು ನವಿಲು ಬೆಳ್ಳಕ್ಕಿಗೆ ನಗೆ ಗೇಡು ಮಾಡ ಬೇಕೆಂದು ತನ್ನ ಗರಿಗಳನ್ನು ಎತ್ತಿ, ಅದರ ಹೊಳಪನ್ನು ತೋರ ಮಾಡಿತು. ಆಗ ಬೆಳ್ಳಕ್ಕಿ ಅದರ ಇಳಿಯ ಮಾಡ ಬೇಕೆಂದು—ಎಲಾ ಈ ಮಹಿಮೆ ದಿಟವಾದರೆ ನಿನ್ನ ಕುಲ ದೊ ಆದರೆ ನನಗೆ ಬಾನಿನಲ್ಲಿ ಹಾರ್ಯಾಡುವ ಬಲವಿದ್ದರೆ ಅತ್ಯುತ್ತಮವೇ ಅಂದಿತು. ಇದರಿಂದ ಪರರ ಮಾನ ಕೇಡು ತನ್ನ ಮಾನ ಕೇಡು ಅಂದ ಹಾಗೆ ಆಯಿತು.

೩೧. ಕೂ ಗೂ ಬೂ ಮೂ ರೂ ತೂ. ಊ

ಊಹನೆ.	ಕೂಗು.	ಮೂರು.	ದೂಟ್ಯಾಡು	ಮೂಡು.	ದೂರ.	ಊನ.
ಕೂದಲು	ಗೂಡು.	ಬೂರುಗ	ಮೂಗು.	ಮೂಗುತಿ	ಊರು.	ಲೂಟಿ.
ರೂಪ.	ತೂತು.	ದೂತ.	ದೂರು.	ನೂತನ.	ನೂರು	ನೂಲು.

ನಿನ್ನ ತಲೆಯ ಕೂದಲು ಬಹಳ ಉದ್ದವಾಗಿ ಇರುತ್ತದೆ.
ನೀನು ಹಕ್ಕಿಯ ಗೂಡುಗಳನ್ನು ತೆಗೆದು ಮರಿಗಳನ್ನು ಕೊಲ್ಲ ಬಾರದು.
ಬೂರುಗದ ಮರದ ಹತ್ತಿ ಬಹಳ ಉಪಯೋಗಕ್ಕೆ ಬರುತ್ತದೆ.
ನನ್ನ ಅಕ್ಕನ ಮೂಗಿನಲ್ಲಿ ನಿನ್ನೆ ತಂದ ಮೂಗುತ್ತಿ ಉಂಟು.
ಈ ಊರಲ್ಲಿ ಮೂರುವರೆ ರುಪಾಯಿಗೆ ಒಂದು ಮುಡಿ ಅಕ್ಕಿ ದೊರಕುತ್ತದೆ.
ಇದರ ರೂಪವು ಅದರ ರೂಪವು ಒಂದೇ ತರವಾಗಿರುತ್ತದೆ.
ಆ ತೂತಿನಲ್ಲಿ ಎರಡು ಇಲಿ ಮರಿಗಳು ಇವೆ, ನೋಡು.
ದೂತನು ನಮ್ಮನ್ನು ದೂರುತ್ತಾನೆ. ಅವನಿಂದ ನಾವು ದೂರವಾಗಬೇಕು.
ಅದು ನೂತನವಾದ ನೂಲು. ನನಗೆ ನೂರು ಮಾರು ತೆಗೆದುಕೋ.
ಲೂಟಿ ಮಾಡುವ ಹುಡುಗರು ಎಂದೂ ಒಳ್ಳೆಯವರಾಗುವದಿಲ್ಲ.
ಬೇಕಾದ ಉತ್ತರ ತಿಳಿಯದಿದ್ದರೆ ಊಹನೇ ಮೇಲೆ ಹೇಳ ಬೇಡ.
ಹೊತ್ತು ಮೂಡುವ ದಿಕ್ಕಿಗೆ ಮೂಡಲು ಎಂದು ಹೇಳುತ್ತಾರೆ.
ದೂರು ಹೇಳುತ್ತಾ ಬರುವವರಿಗೆ ಕಡೆಯಲ್ಲಿ ಗೆಳೆಯರು ಉಳಿಯುವದಿಲ್ಲ.

ಒಂದು ಎತ್ತು ತನ್ನ ಒಡೆಯನ ಮನೆಯಿಂದ ಹೊರಟು ಹೋಗಿ ಆ ಊರಿ ಕೂಗಳತೆ ದೂರದಲ್ಲಿ ಇರುವ ಒಂದು ವನದಲ್ಲಿ ನಿಂತಿತು. ಬಳಿಕ ಆ ಭೂಮಿಯ ಬೆಳದ ಎಳೇ ಹುಲ್ಲು ತಿಂದು ತಿಳಿ ನೀರು ಕುಡಿದು ಮಹಾ ರೂಪವಾಗಿ ಬೆ ಯಿತು. ಹೀಗಿರುವಲ್ಲಿ ಒಂದಾನೊಂದು ದಿನ, ದಿನದಂತೆ ತೀನಿ ತಿಂದು ಹೊ ತುಂಬಿ ಆನಂದ ಪಟ್ಟು ಬಹು ದೂರ ಪರ್ಯಂತ ತಿರುಗುತ್ತಾ ಇತ್ತು. ಆಗ ಬಲದ ಗರ್ವದಿಂದ ಹೆದರದೆ ದೂಟ್ಯಾಡುತ್ತಿರಲು, ಒಂದು ಗುಳಿಯಲ್ಲಿ ಬಿದ್ದು ಕಾ ಮುರಿದು ಕೊಂಡಿತು. ಆಗ ಅದು, ನನಗೆ ಯಾರೂ ಎದಿರು ಇಲ್ಲವೆಂತ ನೆನೆ ರಿಂದಲ್ಲವೇ ದೇವರು ನನಗೆ ಊನ ಬರುವ ಹಾಗೆ ದಂಡನೆ ಮಾಡಿದ್ದು ಎಂದು ಹೇರಳವಾಗಿ ಅತ್ತಿತು. ಆದದರಿಂದ ಮಕ್ಕಳಿರಾ, ನೀವು ಆ ಎತ್ತಿನ ಹಾಗೆ ಪಟ್ಟು ನಡದರೆ, ಅದೇ ಗತಿ ನಿಮಗೂ ತಪ್ಪದೆ ಬರುವದು. ಆದದರಿಂದ ಉ ನಾದ ದೇವರಿಗೆ ಒಳಗಾಗಿ ನಡದು ಆತನ ದಯ ಪಡ ಕೊಳ್ಳಿರಿ.

೨೨. ಸ ಸಾ ಸಿ ಸು ಸೂ ಸೆ ಸೊ ಸ್ಸ

ಸಮಸ್ತ.	ಸಕಲ.	ಸ್ತುತಿಸು	ಪುಸ್ತಕ.	ಸಡಿಲು.	ಸಂತೆ	ಸವಿ.	ಸೇವಕ.
ಸೋರು	ಸಲಿಕೆ.	ಸಾಲು.	ಸಿಡುಬು.	ಸಿಡಿಲು.	ಸೂಸು.	ಸೀಳು.	ಸುರಳಿ.
ವಸ್ತು.	ಕೆಲಸ.	ಸೀಸ.	ಹೆಸರು.	ಮತ್ಸರ.	ವ್ಯಸನ.	ಸೂರ್ಯ.	ಮನಸ್ಸು

ಸಮಸ್ತರೂ ಸಕಲ ಲೋಕವನ್ನು ಉಂಟು ಮಾಡಿದವನ ಸ್ತುತಿಸ ಬೇಕು.
ಆ ಪುಸ್ತಕದ ಕಟ್ಟು ಸಡಿಲಾಗಿ ಕಾಗದಗಳು ಬೀಳುತ್ತವೆ.
ನಾನು ನಿನ್ನೆ ಸಂತೆಗೆ ಹೋಗಿ ಸವಿ ಲಡ್ಡು ಕೊಂಡು ಕೊಂಡೆನು.
ಸಲಿಗೆ ಕೊಟ್ಟ ನಾಯಿ ಕಾಲು ಕಡಿಯಿತು ಎಂಬದು ಒಳ್ಳೇ ಗಾದೆ.
ಸೇವಕರನ್ನು ಬಹಳವಾಗಿ ಪೀಡಿಸುವದು ಉತ್ತಮವಲ್ಲಾ.
ಸಾಲ ಮಾಡುವವರ ಬದುಕು ಸೋರುವ ಮನೆಯ ಹಾಗೆ.
ಹುಡುಗನೇ, ಸಲಿಕೆಗಳನ್ನೆಲ್ಲಾ ಸಾಲು ಸಾಲಾಗಿ ಇಡು.
ದಾಕ್ಲು ಹಾಕಿದರೆ ಸಿಡುಬು ರೋಗ ಆಗುವದಿಲ್ಲಾ.
ನಿನ್ನೆ ಸಿಡಿಲು ಗಾಳಿ ಮಳೆ ಬಹಳವಾಗಿ ಸೂಸಿತು.
ಆ ಬಾಳೇ ಎಲೆಯ ಸೀಳು ನನಗೆ ತೆಗದು ಕೊಡು.
ಆ ಕಾಗದಗಳನ್ನು ಸಮನಾಗಿ ಸುರಳಿ ಮಾಡಿ ಕಳುಹಿಸು.
ಸುಳ್ಳು ಹೇಳುವದೂ ಪರರ ವಸ್ತು ಸುಲಿಯುವದೂ ಪಾಪವಾಗಿದೆ.
ಸೀಸ ಬಹಳ ತೂಕವಾಗಿದೆ. ಬೆಂಕಿಯಲ್ಲಿ ಬೇಗ ಕರಗಿಸ ಬಹುದು
ಸೂರ್ಯನು ಅಸ್ತಮಿಸುವ ದಿಕ್ಕಿಗೆ ಪಡುವಲು ಎಂದು ಹೆಸರುಂಟು.
ಮನಸ್ಸಿನಲ್ಲಿ ಮತ್ಸರವೂ ಕೆಟ್ಟ ವ್ಯಸನವೂ ಇರ ಕೂಡದು.

ಒಂದಾನೊಂದು ದಿನ ಎರಡು ಇಲಿಗಳು ತಾವು ವಾಸಿಸುತ್ತಿದ್ದ ಮಾಡಿನಿಂದ ರಸರನೆ ಇಳಿದು ಬಂದು, ಒಂದು ಸಮ ನೆಲದಲ್ಲಿ ಕುಳಿತು ಕೊಂಡು ಮಾತನಾಡು ಇತ್ತು. ಆಗ ಒಂದು ಮದ ಬಂದ ಆನೆಯು ಮಾವಟಿಗನಿಂದ ತಪ್ಪಿಸಿ ಕೊಂಡು ಗನೆ ಅವುಗಳ ಸಮೀಪ ಬಂತು. ಅವು ಅದನ್ನು ಕಂಡು ಹೆದರಿ ಅಲ್ಲಿ ಇದ್ದ ಒಂ ಸುರಂಗದ ಹತ್ತರ ಹೋಗಿ ಅದರಲ್ಲಿ ಸುಸುಳಿದವು. ಆಗ ಅದರಲ್ಲಿ ಬಹು ಕಾ ಂದ ನೆಲಸಿ ಇದ್ದ ಒಂದು ಮುದಿ ಹಾವು ಇವುಗಳನ್ನು ಕಂಡು ನಲವಿನಿಂದ ಹಿ ತಿಂದಿತು. ಆದದರಿಂದ ಯಾರಾದರೂ ಹೆದರಿಕೆ ಪಟ್ಟವರು ಒಂದು ಕಡೆಯಲ್ಲಿ ನೇ ಹೊಕ್ಕೊಳ್ಳುವ ಮೊದಲು ಅಲ್ಲಿ ಏನಾದರೂ ಹಾನಿ ಬರುವದೋ ಎಂತಾ ಸ್ಸಿನಲ್ಲಿ ನೆನಸಿ ಕೊಂಡ ವಿನಹ, ಆ ಕೆಲಸದಲ್ಲಿ ಮುಂದರಿಯುವದು ಸಮನಲ್ಲಾ.

೩೨. ಧ ಢ ಫ. ಭ ಧ ಢ. ಫ ಭ

ಭುಕ್ತಿ.	ಭೂಮಿ.	ಗೂಢ.	ಧಿಟ.	ವಿರೋಧ.	ಆರಾಧಿಸು	ಫಿರಂಗಿ.
ಫಲ.	ಭಿನ್ನ.	ಭಯ.	ಭಕ್ತಿ.	ಧನ.	ಧಿಕ್ಕರಿಸು.	ಭೂತ.
ಭೇದಾ.	ಧೊರೆ.	ಢೇರೆ.	ಧನುಸ್ಸು.	ವೇಧನೆ.	ಧಾರಾಳ.	ಫಟಿಂಗ.

ತಾಯಿ ತಂದೆಗಳ ಮಾತಿಗೆ ವಿರೋಧವಾಗಿ ಆಡ ಬಾರದು.
ಭಿನ್ನವಾದ ಗಡಿಗೆ ಹೊನ್ನಿತ್ತರೆ ಸಮವಾದೀತೇ?
ಭಯ ಭಕ್ತಿ ಇಲ್ಲದ ಹುಡುಗರನ್ನು ಯಾರೂ ಒಲಿಯರು.
ಫಲಕ್ಕೆ ತಕ್ಕ ಬಿತ್ತು; ನೆಲಕ್ಕೆ ತಕ್ಕ ನೀರು.
ಧನವಂತರು ಬಡವರನ್ನು ಧಿಕ್ಕರಿಸುವದು ಸಮವಲ್ಲಾ.
ಭೇದಾ ತಿಳಿಯದಿದ್ದರೂ ವಾದಾ ಬಿಡುವದಿಲ್ಲಾ. ಹಾಗೆ ಬಾರದು
ಧೊರೆಯವರು ಅಲ್ಲಿ ತಮ್ಮ ಢೇರೆ ಹೊಡದು ಇರುತ್ತಾರೆ.
ಫಟಿಂಗರ ಸಹವಾಸ ಮಾಡುವದು ಯಾರಿಗೂ ಸಲ್ಲದು.
ಭೂತಗಳನ್ನು ಆರಾಧಿಸುವದು ದೇವ ಭಕ್ತಿಗೆ ವಿರೋಧವೇ.
ಪಾಪದ ಫಲವು ಮನೋವೇಧನೆಯೇ; ಆ ವೇಧನೆ ಈಗ ತಿಳಿಯದು.
ಧೊರೆಗಳಿಗೆ ಲಡಾಯಿಯಲ್ಲಿ ಫಿರಂಗಿ ಬಹಳ ಬೇಕಾಗುತ್ತದೆ.

ಒಂದಾನೊಂದು ಸಮಯದಲ್ಲಿ ಭುಕ್ತಿಫಲನೆಂಬ ಒಬ್ಬ ವಿದ್ವಾಂಸನು ತನ್ನ
ಕ್ಕಳ ಸಂಗಡ ಆಡುತ್ತಿರಲಾಗಿ ಮತ್ತೊಬ್ಬ ವಿದ್ವಾಂಸನು ಅದನ್ನು ಕಂಡು ಅವನನ್ನ
ಹಾಸ್ಯ ಮಾಡುತ್ತಿದ್ದನು. ಭುಕ್ತಿಫಲನು ಅವನ ಅಹಂಕಾರ ಇಳಿಸ ಬೇಕಾ
ಅವನ ಮುಂದೆ ಬಂದು ಒಂದು ಧನುಸ್ಸು ತರಿಸಿ ಅದರ ಹೆದೆಯನ್ನು ಇಳಿಸಿ
ಮಾಡಿ ಭೂಮಿಯ ಮೇಲೆ ಇಟ್ಟು—ಈ ಗುಟ್ಟು ಹೇಳಿದರೆ ನೀನು ವಿದ್ವಾಂಸನೇ
ಅಂದನು. ಆ ಪಂಡಿತನು ಆ ಗುಟ್ಟು ಒಡೆಯಲೊಲ್ಲದೆ—ಸ್ವಾಮಿ, ಭುಕ್ತಿಫಲ
ಅದರ ಗೂಢ ನನಗೆ ಧಿಟವಾಗಿ ತಿಳಿಯದು; ನೀವೇ ಹೇಳ ಬೇಕು, ಅಂದನು
ಕ್ತಿಫಲನು—ಒಳ್ಳೇದು ಹೇಳುತ್ತೇನೆ, ಕೇಳು; ಈ ಧನುಸ್ಸು ಯಾವಾಗಲೂ
ಕೊಂಡಿದ್ದರೆ, ಬೇಗನೇ ಮುರಿದು ಹೋದೀತು; ಕೆಲಸ ಬಿದ್ದ ವೇಳ್ಯಕ್ಕೆ ತತ್ಸವ
ದಲ್ಲಿ ಬೊಗ್ಗಿಸಿ ಕೆಲಸವಿಲ್ಲದ ವೇಳ್ಯಕ್ಕೆ ಬಿಟ್ಟರೆ, ಧನುಸ್ಸು ಬಹಳ ದಿವಸ ಉಳಿ
ಮತ್ತು ಧಾರಾಳ ಕೆಲಸ ಮಾಡೀತು ತಿಳಕೋ ಎಂದು ಹೇಳಿದನು. ಆದ್ದರ
ಹುಡುಗರನ್ನ ತಕ್ಕ ಸಮಯದಲ್ಲಿ ಆಟಕ್ಕೆ ಬಿಡುವದು ತಪ್ಪಲ್ಲ, ಯೋಗ್ಯವೇ.

ಕ್ರ ತ್ರ ಪ್ರ ವ್ರ ಸ್ರ

ತೀವ್ರ.	ಗ್ರಾಮ.	ದರಿದ್ರ.	ಭದ್ರ.	ಸ್ತೋತ್ರ.	ಪಾತ್ರ.	ನಮ್ರ.
ಪ್ರಿಯ.	ವಕ್ರ.	ಪ್ರಾಯ.	ಧಾತ್ರಿ.	ಸುಗ್ರೀವ.	ಪ್ರೀತಿ.	ಕ್ರಮ.

ಹುಡುಗರು ತೀವ್ರವಾಗಿಯೂ ಒಳ್ಳೆದಾಗಿಯೂ ಬರೆಯ ಕಲಿಯ ಬೇಕು.
ಗ್ರಾಮ ಗ್ರಾಮಗಳಲ್ಲಿ ಸಾಲೆ ಇದ್ದರೆ, ಹುಡುಗರಿಗೆ ಬಹಳ ಉತ್ತಮ.
ಕೆಲಸ ಮಾಡದೆ ಮನಸ್ಸು ಬಂದ ಹಾಗೆ ತಿರುಗುವವರು ದರಿದ್ರರಾಗುತ್ತಾರೆ.
ನಿನ್ನ ಸಾಮಾನುಗಳನ್ನೆಲ್ಲಾ ಕಳೆಯದಂತೆ ಭದ್ರವಾಗಿ ಇಟ್ಟುಕೊ.
ಎಲ್ಲಾ ಸ್ತೋತ್ರಕ್ಕೆ ಪಾತ್ರನಾದ ದೇವರನ್ನು ಎಂದಿಗೂ ಮರತಿರಬಾರದು.
ನಮ್ಮನ್ನು ಕಾಪಾಡು ಎಂತಾ ನಾವು ಎಲ್ಲಾ ದಿನವೂ ದೇವರನ್ನು ನಮ್ರವಾಗಿ ಬೇಡಿ ಕೊಳ್ಳ ಬೇಕು.
ಪ್ರಿಯ ಮಾಡುವವರಲ್ಲಿ ಸಕಲರೂ ಮಿತವಾಗಿರ ತಕ್ಕದ್ದು.
ನೀನು ಹಾಕಿದ ಗೆರೆಗಳೆಲ್ಲಾ ಬಹಳ ವಕ್ರವಾಗಿ ತೋರುತ್ತವೆ. ಅದು ತಪ್ಪು.
ವಿದ್ಯೆವಿಲ್ಲದವರ ಹಾಗೆ ಗ್ರಾಮ್ಯ ಮಾತಾಡುವದು ಹಾಸ್ಯಕರವಾದದ್ದು.

ಒಂದಾನೊಂದು ಊರಲ್ಲಿ ಧಾತ್ರಿ ಎಂಬ ಒಬ್ಬ ಹೆಂಗಸು ಇದ್ದಳು. ಅವಳಿಗೆ ಸುಗ್ರೀವನೆಂಬ ಮಗನು. ಅವನು ಬಾಲ್ಯ ಕಳೆದು ಹತ್ತು ಸಂವತ್ಸರ ಪ್ರಾಯದವನಾದನು. ಆಗ ಒಂದು ದಿನ ಅವನ ಅಮ್ಮನು ಕೆಲವು ಸಾಮಾನುಗಳನ್ನು ತರುವದಕ್ಕಾಗಿ ಅವನನ್ನು ಪೇಟೆಗೆ ಕಳುಹಿಸಿದಳು. ಆ ಹುಡುಗನು ತೀವ್ರವಾಗಿ ಅಂಗಡಿಗೆ ಹೋಗಿ, ತಾಯಿ ಹೇಳಿದ ಹಾಗೆ ಪ್ರತ್ಯೇಕ ಪ್ರತ್ಯೇಕವಾಗಿ ಸಾಮಾನುಗಳನ್ನು ಕೊಂಡು ಕೊಂಡು, ಅಂಗಡಿಯವನಿಗೆ ತೋರದ ಹಾಗೆ ಒಂದು ಪಿತ್ತಾಳೆ ಬಟ್ಟಲು ಕದ್ದುಕೊಂಡು ಬಂದನು. ಬಳಿಕ ಅವನು ಮನೆಗೆ ಬಂದು ಅವುಗಳನ್ನೆಲ್ಲಾ ತನ್ನ ತಾಯಿಗೆ ಕೊಟ್ಟಾಗ, ಅವಳು ಆ ಕಳ್ಳತನಕ್ಕೆ ಅವನನ್ನು ದಂಡಿಸದೆ ಅಧಿಕ ಪ್ರೀತಿ ಮಾಡಿ ತಿನ್ನು ದಕ್ಕೆ ಕೊಟ್ಟಳು. ಅದಕ್ಕೆ ಅವನು ಆನಂದ ಪಟ್ಟು, ಅಂದಿನಿಂದ ಅಲ್ಪ ಕಳವುಗಳನ್ನು ಮಾಡ ತೊಡಗಿ, ಕಡೆಯಲ್ಲಿ ದೊಡ್ಡ ಕಳ್ಳನಾದನು. ಒಂದು ದಿನ ದೇವಾನುಗ್ರಹದಿಂದ ವನ ಕಳ್ಳತನ ಗೊತ್ತಾಗಿ ಕೊರಡೆಗಳಿಂದ ಹೊಡೆಯಲ್ಪಟ್ಟನು. ಆ ಪೆಟ್ಟಿನ ವೇಧ ಯಿಂದ ಆ ಹುಡುಗನಿಗೆ ಎದೆ ರೋಗ ಉಂಟಾಗಿ, ಅವನು ಕೆಲವು ದಿವಸಕ್ಕೆ ಸತ್ತು ದನು. ಆದ್ದರಿಂದ ತಾಯಿ ತಂದೆಗಳು ತಮ್ಮ ಮಕ್ಕಳ ಕೆಟ್ಟ ಬುದ್ಧಿ ನಿಲ್ಲಿಸದೆ ರೆ, ಕಾಲಕ್ರಮದಲ್ಲಿ ಅವರಿಗೆ ಬಹಳ ವ್ಯಸನವು ಉಂಟಾಗುವದು.

೩೫. ಣ ಣಾ ಣಿ ಣೀ ಣು ಣೂ

ನಾಣೇವಾರು | ಗಣನೆ ಕೋಣ | ಗೇಣಿ | ಮಾಣು | ಕರುಣ ಗೇಣು | ಆಣಿ
ಹಣ | ಋಣ | ಬಣ್ಣಿಸು | ಗುಣ | ಕಂಣು | ಪ್ರಾಣ ಗೋಣ ಅಣ್ಣ ಮಣಿ

ಕೋಣ ಬೆಳೆದರೆ ಆನೆ ಆದೀತೇ? ಗೇಣುಷ್ಟು ತಪ್ಪಿದರೆ ಮಾರುದ್ದ
ತಪ್ಪುವದು.
ಗೇಣಿ ಬಾಕಿ ಮಾಡಿ ಕೊಂಡವನ, ಹೊಲದ ಒಡೆಯನು ಬಿಡನು.
ಗುಣಾಕಾರವೆಂಬುದು ಒಂದು ತರದ ಸಂಕಲಿತವಾಗಿರುತ್ತದೆ.
ನೀನು ನನಗೆ ಕೊಟ್ಟ ಬಟ್ಟೇ ತುಂಡು ಒಂದು ಗೇಣೂ ಇಲ್ಲ.
ಹುಡುಗರೇ, ಮಾತು ಮಾತಿಗೆ ಆಣೆ ಇಡುವದು ಉತ್ತಮವಲ್ಲ.
ಅಲ್ಲಿರುವ ದೋನಣಿ, ಸೀಮಾಣಿ, ಪಾಷಾಣಗಳನ್ನೆಲ್ಲಾ
ನಾಣೇವಾರು ಮಾಡು.
ಹಣದಿಂದ ಋಣ ಆಗುವದು; ಗುಣದಿಂದ ಪರಲೋಕ ಆಗುವದು
ಪರವಸ್ತುವಾದ ಒಂದು ಅಣುವಾದರೂ ಅಪಹರಿಸ ಬೇಡ.
ರಹಸ್ಯದಲ್ಲ್ಯಾದರೂ ಕೆಟ್ಟ ಕೆಲಸ ಮಾಡ ಬಾರದು; ದೇವರ ಕಂಣು ಅಂ
ಧಕಾರದಲ್ಲೂ ನಮ್ಮನ್ನು ನೋಡುತ್ತದೆ; ಆದದರಿಂದ ಎಲ್ಲಾ
ಹೀನ ಕೆಲಸಗಳನ್ನು ಮಾಣು.

ಒಂದು ಮುಂಗಲಿಯು ದಿನಂಪ್ರತಿ ಒಬ್ಬ ವ್ಯಾಪಾರಿಯ ಮನೆಗೆ ಬಂದು, ಇ
ದ್ದ ರೊಟ್ಟಿ ಮಾಂಸ ಮೊದಲಾದವುಗಳನ್ನು ಕದ್ದು ತಿಂದು, ಆ ವ್ಯಾಪಾರಿಗೆ ಉಪದ
ಮಾಡುತ್ತಿತ್ತು. ಒಂದು ದಿವಸ ಅವನು ಅದನ್ನು ಹಿಡತಂದು ಅದರ ಗೋಣು ಮು
ರಿಯ ಬೇಕೆಂತ ಎಣಿಸಿದ. ಆ ಸಮಯದಲ್ಲಿ, ಆ ಮುಂಗಲಿಯು ಕರುಣ ಹು
ವಂತೆ ದೀನತೆಯಿಂದ—ಎಲೋ ಅಣ್ಣನೇ, ನೀನು ನನ್ನ ಪ್ರಾಣಹಾನಿ ಮಾಡ ಬೇ
ನಾನಾದರೆ ನಿನ್ನ ಮನೆಯಲ್ಲಿ ಬಹಳವಾಗಿ ತೊಂದರೆ ಕೊಡುವ ಇಲಿಗಳನ್ನು ಕೊ
ವದಲ್ಲದೆ ಆ ಇಲಿಗಳ ನಿಮಿತ್ತವಾಗಿ ಮಾಡಿಗೆ ಬಂದು ಹುಡುಗರನ್ನೂ ಮಕ್ಕಳ
ಬಹಳವಾಗಿ ಹೆದರಿಸುವ ಹಾವುಗಳನ್ನು ಹತ ಮಾಡುತ್ತಿದ್ದೆನು. ಗುಣನಿಧಿ
ಇವುಗಳ ವಿನಹಾ ಇನ್ನು ಮುಂದೆ ಗಣನೆ ಇಲ್ಲದ ಉಪಕಾರ ಮಾಡ್ಯೇನು;
ದಾನ ಕೊಡು ಎಂದು ಮಣಿದು ಬೇಡಿ ಕೊಂಡಿತು. ಅದಕ್ಕೆ ಅವನು—ಸ
ಇರು! ಗುಣಗುಟ್ಟ ಬೇಡ; ನಿನ್ನ ಉಪಕಾರವೆಲ್ಲಾ ಸಾಕು, ಒಲ್ಲೆ ಒಲ್ಲೆ ಎಂದ
ನ್ನು ಹತ ಮಾಡಿದನು. ಆದದರಿಂದ ತನ್ನ ಗುಣಕ್ಕೆ ಮಾಡಿದ ಕೆಲಸವನ್ನು
ಗುಣಕ್ಕೆ ಮಾಡಿರುತ್ತೇನೆ ಅಂದರೆ, ಯಾರೂ ಒಪ್ಪಲಾರರು.

೩೬. ಶ ಶಾ ಶಿ ಶು ಶೆ ಶೊ 36.

ಶಾಯಿ.	ಶೀಳು.	ಶಾನೆ.	ಶಕ್ಕರೆ.	ಶಂಕು.	ಶಿಪ್ಪೆ.	ಶಿಶು.	ನಾಶ.
ಶರೆ.	ಶಿಕೆ.	ಶಿಕ್ಕು.	ಸುಶೀಲ.	ಶಾಲೆ.	ಶೀರು.	ಶರೀರ.	ಶೀಲತನ.

ನನ್ನ ಶಾಯಿ ಬುರುಡೆ ಶೀಳು ಕಲ್ಲಿಗೆ ಬಿದ್ದು ಒಡೆಯಿತು.
ಶಿಕೆ ಕಾಲದಲ್ಲಿ ಗಾಳಿಯು ಬಹಳ ಹಿತಕರವಾಗಿರುತ್ತದೆ.
ಮೋಸಗಾರರ ಮಾತು ಶಕ್ಕರೆಯಂತೆ ಇದ್ದರೂ ನಂಬಲಾಗದು.
ಹೊಳೆ ಬದಿಗಳಲ್ಲಿ ಶಂಕು ಹುಳಗಳ ಶಿಪ್ಪೆ ಬಿದ್ದಿರುತ್ತವೆ.
ಕಳ್ಳತನ ಮಾಡುವವರಿಗೆ ಶರೆಮನೇ ಅನ್ನ ಶಿಕ್ಕುವದು.
ಶಬ್ದ ಮಾಡಿ ಆಗಲಿ ಗಂಟ್ಲಿನೊಳಗೆ ಆಗಲಿ ಓದದೆ ಸಮಸ್ವರದಿಂದ ಓದು.
ಹುಡುಗರು ವಿದ್ಯವನ್ನು ಕಲಿತು ಸುಶೀಲವಂತರಾಗಿರ ಬೇಕು.
ತಪ್ಪದೆ ಶಾಲೆಗೆ ಹೋಗುವವನು ವಿದ್ವಾಂಸನಾಗುತ್ತಾನೆ.
ಈ ಊರಲ್ಲಿ ಶಾನೆ ಮಂದಿ ವಿದ್ಯಕ್ಕೆ ಮನಸು ಕೊಡದೆ ಕೆಡುತ್ತಾರೆ.
ಕಲ್ಲುಶಕ್ಕರೆ ಮದ್ದು ಮಾಡಲಿಕ್ಕೆ ಬಹಳ ಉಪಯೋಗವಾಗಿರುತ್ತದೆ.
ಹಾಳು ವ್ಯಸನಗಳಲ್ಲಿ ಶಿಕ್ಕಿ ಬಿದ್ದವರು ಎಂದೂ ಉಳ್ಳೆದಾಗುವದಿಲ್ಲ.
ಈ ಶರೀರವು ಸಾಯುತ್ತದೆ, ಆದರೆ ಆತ್ಮವು ಎಂದೂ ಸಾಯದು.

ಒಂದು ದನ ತನ್ನ ಶಿಶುವಾದ ಎಳೆಗರುವನ್ನು ಬಿಟ್ಟು, ಹಟ್ಟಿಗೆ ಬಾಗಲು ಎಳದು, ಹುಲ್ಲುಗಾವಲಲ್ಲಿ ಶಾನೇ ಹುಲ್ಲು ತಿನ್ನುತ್ತಾ ಇತ್ತು. ಆಗ ಒಂದು ಹುಲಿ ಮೆಲ್ಲಗೆ ಹಟ್ಟಿ ಬದಿಗೆ ಶೀರಿ, ದನವಿನಂತೆ ಧ್ವನಿ ಮಾಡಿ—ಶಿಶುವೇ, ಶಿಶುವೇ! ಬಾಗಲು ತೆರೆ, ಅಂದಿತು. ಆ ಎಳೆಗರು ಒಂದು ಕಂಡಿ ಬಳಿಗೆ ಸಾರಿ ಬಂದು, ಅದರ ಶರೀರವನ್ನು ನೋಡಿ—ಕಳ್ಳನೇ, ನಾನು ಬಾಗಲ ತೆರೆಯುವದಿಲ್ಲಾ; ನೀನು ನಿನ್ನ ಹಾದಿ ಹಿಡಿದು ಹೋಗು ಎಂದು ಹೇಳಿ ನಾಶ ಪಡದೆ ಇತ್ತು. ಆದದರಿಂದ ಹುಡುಗರಿರಾ, ಟಕ್ಕರ ಹಾತಿನಲ್ಲಿ ಶಾನೆ ಬರವಸ ಇಡದೆ, ಆ ಎಳೆಗರುವಿನ ಹಾಗೆ ನಡ ಕೊಳ್ಳಿರಿ.

(ಬಾಯಿಪಾಠ.)

ಬಾಲಕರೆ ಹಾದಿಯೊಳು ನಿಲ್ಲದಾದದಲೇ,
ಶಾಲೆಯೊಳು ಶೀರುವದು ಹೊತ್ತು ಮಾಡದಲೇ, ॥ ೧ ॥
ಶೀಲತನದಿಂ ಒರದು ಓದಿ ಸುಗುಣದಲೀ,
ಬಾಲತನವೆಂಬುವದ ಹಾಕಿ ವಿದ್ಯದಲೀ. ॥ ೨ ॥

*

೩೭. ಷ ಷಾ ಷಿ ಷೊ ಷೆ ಷೌ ಕ್ಷ

ಇಷ್ಟ.	ವಿಶಿಷ್ಟ.	ಸಂತೋಷ.	ಅಷ್ಟು.	ಎಷ್ಟು.	ಕಷ್ಟ.	ಪರಿಕ್ಷೆ.
ಕ್ಷೇಮ.	ಮನುಷ್ಯ.	ನಿಮಿಷ.	ವಿಷ.	ಅಷ್ಟು.	ದುಷ್ಟ.	ಭಿಕ್ಷೆ.
ಕ್ಷಣ.	ವಿಷಯ.	ವರುಷ.	ತುಷ್ಟಿ.	ನಷ್ಟ.	ಭಾಷೆ.	ಶಿಕ್ಷೆ.

ಎಲ್ಲಾ ದ್ರವ್ಯಗಳಲ್ಲಿ ಉತ್ತಮವಾದ ದ್ರವ್ಯ ವಿದ್ಯವೇ ಸರಿ.
ಎಷ್ಟು ನಾಡಿ ಹೊಡಿಯುತ್ತದೋ ಅಷ್ಟು ಸಾರಿ ದೇವರನ್ನು ಸ್ಮರಿಸು.
ವಿದ್ಯೆ ವಿಶೇಷವಾಗಿ ಕಲಿತವನಿಗೆ ಪರಿಕ್ಷೆ ಕೊಡುವದು ಕಷ್ಟವಲ್ಲಾ.
ಬುದ್ಧಿಯಿಲ್ಲದ ಮನುಷ್ಯನು ಕೇವಲ ಪಶುವಾಗಿದ್ದಾನೆ.
ಆ ವಿಶಿಷ್ಟ ಸಾಮಾನುಗಳು ನೀರು ಬಿದ್ದು ನಷ್ಟವಾದವು. ಕಷ್ಟ!
ದುಷ್ಟರಾದವರು ಪಾಪಕ್ಕೆ ಪರಿಹಾಸ್ಯ ಮಾಡುತ್ತಾರೆ.
ದೇವರ ಕಟ್ಟಳೆ ನಡಿಸುತ್ತಾ ಬಂದರೆ, ಮನಸಿಗೆ ತುಷ್ಟಿ ಆಗುವದು.
ಬೋಧಕರ ಅಪ್ಪಣೆ ಮೀರಿದರೆ, ನನಗೆ ಶಿಕ್ಷೆ ಸಿಕ್ಕುವದು.
ಮೂಡು, ಪಡು, ಬಡಗು, ತೆಂಕು; ತೆಮ್ಮೂಡಲು, ತೆಂಪಡುವಲು,
ಬಡಗುಪಡುವಲು, ಬಡಗುಮೂಡಲು—ಇವು ಅಷ್ಟ ದಿಕ್ಕುಗಳು
ದುಷ್ಟ ಕೆಲಸದಿಂದ ಆಗುವ ಸಂತೋಷವೂ ಹುಲ್ಲಿನಿಂದ ಆಗುವ
ಬೆಂಕಿಯೂ ಒಂದು ನಿಮಿಷ ಮಾತ್ರ ಇರುವದು.

ವಿಶಾಲನಗರದಲ್ಲಿ ಒಬ್ಬ ಬ್ರಾಹ್ಮಣ ಇದ್ದನು. ಅವನು ವಿಶಿಷ್ಟ ಶಾಸ್ತ್ರಗಳನ್ನು ಕಲಿತು ಇರುವನು. ಅವನ ಮಗನು ಹದಿನಾರು ವರುಷ ಪ್ರಾಯದವನಾಗುವ ರಲ್ಲಿ ಎಲ್ಲಾ ಭಾಷೆಗಳನ್ನು ಕಲಿತು ನಿಪುಣನಾದನು. ಒಂದಾನೊಂದು ದಿನ ಅವ ತಂದೆಯು ಸಂತೋಷದಿಂದ ಮಗನನ್ನು ಕರದು—ಮಗನೇ, ಹೊಳೇ ಪಾಟಿ ಹೋ ಅತ್ತಕಡೇ ಊರಲ್ಲಿ ನಿನಗೆ ಇಷ್ಟವಾದ ಮನೆಗಳಿಗೆ ಹೋಗಿ ಭಿಕ್ಷಾಟನ ಮಾಡಿ ಕೆ ಡು ಬಾ ಎಂದು ಕಳುಹಿಸಿದನು. ಹುಡುಗನು ಸಂತೋಷದಿಂದ ಹೋಗಿ ದಾಟುವಾಗ ಮಳೇ ಕಾಲವಾದ್ದರಿಂದ ಮಳೇ ನೀರೆಲ್ಲಾ ಒಂದೇ ಸಾರಿ ಉಕ್ಕ ಬಂತು. ಆಗ ಅವನು ಭಯ ಪಟ್ಟು—ದೇವರೇ, ಭಕ್ತರಿಗೆ ಕ್ಷೇಮ ಕೊಡುವ ನನ್ನನ್ನು ಈ ಕಷ್ಟದಿಂದ ಬಿಡಿಸು ಎಂದು ದೇವರನ್ನು ಬೇಡಿ ಕೊಳ್ಳುತ್ತಿ ಆ ಕ್ಷಣವೇ ಒಂದು ಮರದ ಹಲಿಗೆ ತೇಲಿ ಕೊಂಡು ಅವನ ಸಮೀಪ ಬರಲು ನ್ನು ಹಿಡಿದು ಪಾರಾದನು. ಆದ್ದರಿಂದ ಮಕ್ಕಳೇ, ನೀವು ಸಹಾ ಕಷ್ಟ ಕ ನಷ್ಟ ಪಡದ ಹಾಗೆ ದೇವರನ್ನು ಧ್ಯಾನಿಸಿ ಕೊಂಡು ಅವನ ಸಹಾಯ ಪಡೆ

೩೮. ೱ ರ್ಷ ರ್ಮ ರ್ಗ ರ್ಧ ರ್ಪ ರ್ಯ 38.

ವರ್ಷ.	ದುರ್ಮಾರ್ಗ.	ಕಾರ್ತೀಕ.	ವರ್ಧನೆ.	ಅರ್ಧ.	ದುರ್ಗ.
ಕಾರ್ಯ.	ವಿಸ್ತೀರ್ಣ.	ದುರ್ಲಭ.	ದುಷ್ಕರ್ಮ.	ಸ್ವರ್ಗ.	ವರ್ತಿಸ.
ತರ್ಕ.	ದುರ್ಬುದ್ಧಿ.	ನಿರ್ಮಲ.	ಗರ್ವಿಷ್ಠ.	ವರ್ಣ.	ದರ್ಭೆ.

ವರ್ಷ ವರ್ಷಕ್ಕೆ ವಿದ್ಯಾಭ್ಯಾಸದಲ್ಲಿ ವರ್ಧನೆ ಮಾಡ ಬೇಕು.
ಕಾರ್ತೀಕ ತಿಂಗಳಲ್ಲಿ ವರ್ಷ ಬಹಳವಾಗಿ ಸುರಿಯುವದು.
ಹುಡುಗರು ದುರ್ಮಾರ್ಗವನ್ನು ಬಿಟ್ಟು ಸನ್ಮಾರ್ಗದಲ್ಲಿ ವರ್ತಿಸ ಬೇಕು.
ದೇವರನ್ನು ಸದಾ ಧ್ಯಾನ ಮಾಡುವವರು ಸ್ವರ್ಗಕ್ಕೆ ಹೋಗುವರು.
ಆ ವಿಸ್ತೀರ್ಣವಾದ ತೋಟದಲ್ಲಿ ನಾನಾ ವರ್ಣದ ಹೂವುಗಳವೆ.
ಈ ಬಡವನಿಗೆ ಅರ್ಧ ರೂಪಾಯಿ ಆದರೂ ಕೊಟ್ಟು ಬಿಡು.
ನಿಮ್ಮ ಶರೀರವನ್ನೂ ಬಟ್ಟೆಗಳನ್ನೂ ನಿರ್ಮಲವಾಗಿಟ್ಟರೆ ರೋಗವಿಲ್ಲಾ.
ಆ ಕಾರ್ಯವು ಸಫಲವಾಗುವದು ಬಹಳ ದುರ್ಲಭ.
ಆ ವಿದ್ವಾಂಸರು ತಮ್ಮೊಳಗೆ ತರ್ಕವಾಡುತ್ತಾ ಇದ್ದಾರೆ.
ದುಷ್ಕರ್ಮ ಮಾಡದೆ ಸತ್ಕರ್ಮ ಮಾಡಿದರೆ, ಮೋಕ್ಷ ಉಂಟಾಗುವದು.

ಹೊಸದುರ್ಗವೆಂಬ ಊರಲ್ಲಿ ಸುಬುದ್ಧಿ ದುರ್ಬುದ್ಧಿ ಎಂಬ ಇಬ್ಬರು ಹುಡುಗರು ಇದ್ದರು. ಅವರಲ್ಲಿ ಸುಬುದ್ಧಿಯು ತನ್ನ ಶರೀರವನ್ನು ನಿರ್ಮಲವಾಗಿ ಇಟ್ಟು ಕೊಂಡು, ಕರ್ತನನ್ನು ಧ್ಯಾನಿಸುತ್ತಾ ಸನ್ಮಾರ್ಗದಲ್ಲಿ ನಡೆಯುತ್ತಾ ಇದ್ದನು. ದುರ್ಬುದ್ಧಿ ಯು ಗರ್ವಿಷ್ಠನಾಗಿ ದುರ್ಬಲರನ್ನು ಪೀಡಿಸುತ್ತಾ ದುಷ್ಟ ಕರ್ಮಗಳನ್ನು ಮಾಡು ತ್ತಾ ಕೆಟ್ಟವನಾಗಿದ್ದನು. ಒಂದಾನೊಂದು ದಿವಸ ಇವರಿಬ್ಬರಿಗೂ ಗಂಟು ಬಿದ್ದಾಗ ದುರ್ಬುದ್ಧಿಯು ಸುಬುದ್ಧಿಯನ್ನು ಕಂಡು—ಸ್ನೇಹಿತನೇ, ಆ ದೊಡ್ಡ ತೋಟಕ್ಕೆ ಹೋ ಸಂಗಡ ಆಡುವಾ ಎಂದು ಹೇಳಿ ಕರ ಕೊಂಡು ಹೋದನು. ಬಳಿಕ ಅವರಿ ರು ಅಲ್ಲಿ ಆಡುತ್ತಾ ಇರುವಾಗ್ಯೆ ದುರ್ಬುದ್ಧಿಯು ಅಲ್ಲಿರುವ ಹೂವಿನ ಗಿಡಗಳ ಲ್ಲಾ ಕಿತ್ತು ಹಾಕಿ ತಂಟೆ ಮಾಡುತ್ತಿದ್ದನು. ಆಗ ತೋಟಗಾರನು ಬಂದು ಇವರ ಕಂಡು, ಶಾನೆ ಶಿಟ್ಟು ಮಾಡಿ, ಹತ್ತರ ಇದ್ದ ದರ್ಭೆ ಹುಲ್ಲು ತೆಗದು ಕೊಂಡು,— ಮಾರ್ಗಿಗಳಿಗೆ ಶಿಕ್ಷೆ ಇದೆ ಎಂತಾ ಬಹಳ ಹೊಡದು ತೋಟದ ಹೊರಗೆ ಹಾ ನು. ಆದದರಿಂದ ಹುಡುಗರಿರಾ, ನೀವು ದುರ್ಮಾರ್ಗರ ಸಹವಾಸ ಮಾಡಿ ಅವರೊಡನೆ ಕಾರ್ಯವಿಲ್ಲದೆ ಶಿಕ್ಷೆ ಪಡ ಕೊಳ್ಳುವ ದುರ್ಗತಿ ಬಂದೀತು.

ಛ ಜ ಚ್ಛ ಜ್ಜ

೨೯.

ಚರಿತ್ರ.	ಯಜಮಾನ.	ಜಡ.	ಜಲ್ಲೆ.	ಚಕ್ಕಂದ.	ನಿಜ.
ಜಗಳ.	ಚಲಾವಣಿ.	ಜನ.	ಜರೆ.	ಜನಿಸು.	ಚಮತ್ಕಾರ.
ಕಚ್ಚದೆ.	ಜಡಿಮಳೆ.	ಜಂಭ.	ಚಡಿ.	ಜತನ.	ಹಿತಾಲೋಚನೆ.

ನಾನಾ ದೇಶಗಳ ಚರಿತ್ರ ಓದುವದರಿಂದ ಅನುಭವ ಉಂಟಾಗುತ್ತದೆ.
ಮಿತಿ ಮೀರಿ ತಿಂದರೆ ಜಡ ಉಂಟಾಗುತ್ತದೆ.
ಅನೇಕ ಜನರು ವಿಶೇಷವಾಗಿ ಜಂಭಕ್ಕೆ ಒಳಗಾಗಿದ್ದಾರೆ.
ಬಹಳ ಕಡೆಗಳಲ್ಲಿ ಹಳೆ ದುಡ್ಡುಗಳು ಚಲಾವಣಿ ಆಗುವದಿಲ್ಲ.
ಒಳ್ಳೇಯವರು ಪರರ ಹತ್ತರ ಜಗಳವಾಡರು.
ಕಬ್ಬಿನ ಜಲ್ಲೆಯ ರಸ ತೆಗದು ಕಾಯಿಸಿದರೆ, ರವೆ ಆಗುತ್ತದೆ.
ಆತ್ಮಕ್ಕೆ ಜರೆಯೂ ಮರಣವೂ ಇಲ್ಲ. ಶರೀರವು ಸತ್ತು ಮಣ್ಣಾಗುವದು.
ಚೇಳಿಗೆ ಯಜಮಾನಿಕೆ ಕೊಟ್ಟರೆ, ಮನೆ ಜನಕ್ಕೆಲ್ಲಾ ಕಚ್ಚದೆ ಇರದು.
ಚಕ್ಕಂದಗಾರರ ಮಾತಿನಲ್ಲಿ ನಂಬಿಕೆ ಇಡ ಬೇಡಾ.
ಅವನು ತಪ್ಪು ಮಾಡಿದ್ದರಿಂದ ಬೋಧಕನು ಅವನಿಗೆ ಹತ್ತು ಚಡಿ ಕೊಟ್ಟನು
ಜನಿಸಿದಾಗಲೇ ಮರಣವೆಂಬುದು ನಿಜವಾದ ಗಾಧೆ.
ಜಡಿಮಳೆ ಕಾಲದಲ್ಲಿ ಬಹಳ ತಿರುಗದೆ ಜತನವಾಗಿರ ಬೇಕು.

1. ನೀನು ನಿನ್ನ ತಂದೆ ತಾಯಿಗಳಿಗೆ ಚನ್ನಾಗಿ ಮಾನ ಕೊಡು; ಅದರಿಂದ ನಿನಗೆ ಅವರ ಆಶೀರ್ವಾದವು ನಿಜವಾಗಿ ಉಂಟಾಗುವದು.

2. ತಾಯಿ, ತಂದೆ, ಗುರು, ಯಜಮಾನರು ಹೇಳಿದ ಕೆಲಸವನ್ನು ಆ ಕ್ಷಣವೆ ಚಮತ್ಕಾರವಾಗಿ ಮಾಡ ಬೇಕು. ಅವರಿಗೆ ಸುಳ್ಳು ನೆವನ ಹೇಳ ಬಾರದು.

3. ದುಷ್ಟರಾದ ಜಗಳಗಂಟ ಹುಡುಗರ ಸಂಗತಿಯನ್ನು ಹಿಡಿಯ ಬೇಡೆಂದು ತಾಯಿ ತಂದೆಗಳು ಹೇಳಿದರೆ, ಆ ಪ್ರಕಾರ ಕೇಳ ಬೇಕು. ಅದು ನಿನಗೆ ಬುದ್ಧಿ ಮಾತಾಗಿರುತ್ತದೆ.

4. ವಿದ್ಯೆವನ್ನು ಕಲಿಸುವವನು, ಅನ್ನವನ್ನು ಕೊಡುವವನು, ಭಯದೊಳ ರಕ್ಷಿಸುವವನು ಈ ಮೂರು ಜನರೂ ತನಗೆ ಹಿತಾಲೋಚನೆ ಮಾಡುವವರಾದ್ದ ಹೆತ್ತ ತಂದೆಯ ಸಮಾನರೆಂದು ತಿಳಿಯ ಬೇಕು.

5. ನೀನು ನಿನ್ನ ಹಿರಿಯರಿಗೆ ಮರ್ಯಾದೆ ಮಾಡಿದರೆ, ಮುಂದೆ ನಿನಗೆ ಕ್ಕಳು ನಿನಗೆ ಮರ್ಯಾದೆ ಮಾಡುವರು.

23

೪೦. ಚಾ ಚಿ ಚೀ ಚು ಚೊ ಚೋ ಜಾ ಜಿ ಜೀ ಜು ಜೊ ಜೋ ಜ್ಞ

40.

ಸೂಜಿ.	ಚೂರಿ.	ಚಾಪೆ.	ಮೇಜು.	ಕುರ್ಚಿ.	ಚಿಕ್ಕ.	ಜೇನು.
ಜಾಗ್ರತೆ	ಜ್ಞಾಪಕ	ಜ್ಞಾನಿ.	ತ್ಯಜಿಸು.	ಜುಗಾರು	ಚೋದ್ಯ	ಜೋಲು
ಚೇತನ.	ಜ್ಯೋತಿ	ದುರಾಚಾರ	ಚಾವಡಿ.	ಚಾಳಿ.	ಚಿಂತೆ.	ಚುರುಕು

ಚಂದ್ರನಿಗೆ ಸ್ವಂತ ಪ್ರಕಾಶವಿಲ್ಲಾ, ಅದರ ಪ್ರಕಾಶ ಸೂರ್ಯನಿಂದ ಉಂಟಾಗುತ್ತದೆ.

ಉಕ್ಕು ಬಹಳ ಗಟ್ಟಿ. ಇದರಿಂದ ಸೂಜಿ ಚೂರಿ ಮುಂತಾದ್ದು ಮಾಡುತ್ತಾರೆ.
ಭೂಚಕ್ರದಲ್ಲಿ ಮೂರು ಪಾಲು ನೀರೂ ಒಂದು ಪಾಲು ನೆಲವೂ ಉಂಟು.
ಚಾಪೇ ಮಾಡುವ ಹುಲ್ಲು ಈ ದೇಶದಲ್ಲಿ ಬಹಳ ಬೆಳೆಯುತ್ತದೆ.
ಮೇಜು ಕುರ್ಚಿ ಮಾಡುವದಕ್ಕೆ ಬೀಟಿ ಮರವು ಚಲುವಾದದ್ದು.
ಬುದ್ಧಿವಂತನು ಜೇನು ಹುಳದಂತೆ ಜಾಗ್ರತೆಯಿಂದ ಕೆಲಸ ಮಾಡುವನು.
ಮರೆತು ಹೋದದ್ದನ್ನು ತಿರಿಗಿ ಓದಿ ಜ್ಞಾಪಕ ಮಾಡಿ ಕೊಳ್ಳ ಬೇಕು.
ಜ್ಞಾನಿ ಬಂದರೆ ಮನ್ನಿಸು, ಅಜ್ಞಾನಿ ಬಂದರೆ ತ್ಯಜಿಸು ಎಂಬದು ಒಳ್ಳೇ ಗಾಥೆ.

ಉಜ್ಜಯನೀ ಪಟ್ಟದಲ್ಲಿ ವೀರರಾಜನೆಂಬ ಅರಸನು ಇದ್ದನು. ಅವನ ಮಗನು
ಅಜ್ಞಾನನಾಗಿ ಜುಗಾರಾಡುತ್ತಾ, ಕಂಡವರನ್ನು ಜರದು ಹಾಸ್ಯ ಮಾಡುತ್ತಾ, ಜಗ
ಳಾಡುತ್ತಾ, ದುರಾಚಾರದಿಂದಿದ್ದನು. ರಾಜನು ತನ್ನ ಮಗನ ಗುಣವನ್ನು ಕಂಡು,
ಜಡ ಮನಸ್ಸುಳ್ಳವನಾಗಿ ಒಂದು ದಿನ ಅವನನ್ನು ಕೋಣೇ ಚಾವಡಿಗೆ ಕರೆಯಲು,
ಹುಡುಗನು ಚೋದ್ಯ ಪಟ್ಟು ಬಂದನು. ಆಗ ಅವನನ್ನು ಹತ್ತರ ಇರಿಸಿ ಕೊಂಡು,—
ನ್ನ ಕುಲಚಂದ್ರನೇ, ವಿದ್ವಾಂಸ ಜನರನ್ನು ಅಪಮಾನ ಪಡಿಸುವದರಿಂದ ನಿನಗೆ
ಜವಾಗಿ ದೋಷ ಬರುತ್ತದೆ; ಅದರಿಂದ ಅವರಿಗೆ ಹಾನಿ ಇಲ್ಲಾ. ಹ್ಯಾಗಂದರೆ:
ಧ್ಯಾಹ್ನದಲ್ಲಿ ಪ್ರಕಾಶಿಸುವ ಸೂರ್ಯನಿಗೆ ಬಾಯಿ ತುಂಬಾ ನೀರು ಹಾಕಿ ಕೊಂ
ಚಮತ್ಕಾರವಾಗಿ ಉಗುಳಿದರೆ, ಆ ನೀರು ತನ್ನ ಮೋರೆಯಲ್ಲಿಯೇ ಬೀಳುವದು;
ರ್ಯನಿಗೆ ದೋಷವಿಲ್ಲಾ, ಅಂದನು. ಹುಡುಗನು ತಂದೆಯ ಚಿತ್ತಾನುಸಾರವಾಗಿ
ನದಿಂದ ನಡೆದು, ದುಷ್ಟರ ಜೋಲಿಗೆ ಹೋಗದೆ ಕರಿ ತೆಗೆದ ಜೋತಿಯಂತೆ
ಪ್ರಕಾಶ ಉಳ್ಳವನಾಗಿ, ಮೊದಲಿನ ಚಾಳಿಗಳಿಗೆ ಚಿಂತೆ ಪಡುತ್ತಾ, ತಂದೆಯು
ತನ್ನ ಸದಾ ಜ್ಞಾಪಕ ಮಾಡುತ್ತಾ ಚುರುಕಾಗಿ ಹೊಸ ಚೇತನ ಪಡ ಕೊಂಡ
ಪರ್ಗಸುತ್ತಾ ಇದ್ದನು.

೪೧.

ಐ ೖ ತ್ರೈ ಬ್ರೈ ಪ್ರೈ ಪ್ರೈ

ಕೈ	ವೈಲಿಗೆ.	ಅಂಗೈ	ರೈತ.	ಪೈರು.	ಪೈಮಾಶಿ.	ಗೈರ್ಹಾಜರ್ ಪೈನ.	
ವೈ	ಬೈದಾಡು	ಚೈತ್ರ.	ಐಗಳು.	ದೈವ.	ವೈದಾನು	ಬೈಲುಗಳು.	ಬೈಕೆ.
ಸೈ.	ನೈರುತಿ.	ಪೈಕಿ.	ಜೈಮಿನಿ	ಧೈರ್ಯ.	ದೈವೀಕ.	ಬೈನಿ ಮರ.	ಪೈಲ.

ನೀನು ನಿನ್ನ ಅರುವೆಯನ್ನು ವೈಲಿಗೆಯಾಗಿ ಇರಗೊಡ ಬಾರದು.
ಹುಡುಗರು ಒಬ್ಬರಿಗೊಬ್ಬರು ಬೈದಾಡ ಬಾರದು.
ಕೈಯ್ಯ ಒಳಗಣ ಭಾಗಕ್ಕೆ ಅಂಗೈಯೆಂದು ಜನರು ಹೇಳುತ್ತಾರೆ.
ಮೈಗಳ್ಳ ಜನಗಳು ಕಷ್ಟಕ್ಕೆ ಅಂಜಿ ಕಡೆಯಲ್ಲಿ ಹೆಚ್ಚು ಕಷ್ಟ ಪಡುತ್ತಾರೆ.
ಚೈತ್ರಮಾಸದಲ್ಲಿ ಸುಗ್ಗಿ ಮುಗಿಯಿತು; ಹೊಲ ಗದ್ದೆಗಳೆಲ್ಲಾ ಬೈಲಾಗಿತ್ತು.
ರೈತರು ಹೊಲಗಳನ್ನು ಪೈರು ಮಾಡದಿದ್ದರೆ, ನಮಗೆ ತಿನ್ನಲಿಕ್ಕೆ ಅನ್ನವಿಲ್ಲ.
ಐಗಳು ಜೈಮಿನಿ ಭಾರತಗಳನ್ನೆಲ್ಲಾ ಹೇಳ್ತಾನು. ಅವನು ಕನ್ನಡ ಭಾಷೆ
ಯಲ್ಲಿ ಪ್ರವೀಣನಾಗಿದ್ದಾನೆಂದು ಎಲ್ಲರು ಒಪ್ಪುತ್ತಾರೆ.
ಕೈಗೆ ಐದು ಬೆರಳು; ಹೆಬ್ಬೆಟ್ಟು, ಮುಂಬೆಟ್ಟು, ನಡುಬೆಟ್ಟು, ಉಂಗುರದ
ಬೆಟ್ಟು, ಕಿರಿಬೆಟ್ಟು.
ಐಗಳ ಅಪ್ಪಣೆ ಇಲ್ಲದೆ ಶಾಲೆಯಿಂದ ಗೈರ್ಹಾಜರ್ ಆಗ ಕೂಡದು.
ಪ್ರತಿ ರೈತರ ಮಕ್ಕಳು ಪೈಮಾಶಿ ಮಾಡಲಿಕ್ಕೆ ಕಲಿಯುವದು ಅವಶ್ಯವೆ
ದೈವಾನುಗ್ರಹವಿದ್ದವರು ಸರ್ವದಾ ಧೈರ್ಯ-ಪೂರ್ಣವಾಗಿರ ಬಹುದು

ಒಬ್ಬ ದನ ಕಾಯುವವನ ದನವು ತಾನು ಮೇಯಿಸುತ್ತಿದ್ದ ವೈದಾನಿನಲ್ಲಿ ಇಲ್ಲ
ಇರಲು, ಅನೇಕ ಬೈಲುಗಳನ್ನು ದಾಟಿ ಒಂದು ಅಡವಿಗೆ ಹೋಗುವಾಗ—ದೇವ
ನನ್ನ ದನ ಕದ್ದ ಕಳ್ಳನನ್ನು ಗೊತ್ತು ಮಾಡಿ ಕೊಟ್ಟರೆ, ನನ್ನ ಕುರಿಗಳ ಪೈಕಿ ಒಂದ
ನಿನಗೆ ಹರಿಕೆಯಾಗಿ ಕೊಡುತ್ತೇನೆ ಎಂದು ಹೇಳಿ ಕೊಂಡು ಕೈ ಮುಗಿದು,—ನೆ
ದಿಕ್ಕಿಗೆ ಹೋದನು. ಅಲ್ಲಿಯೇ ಸುಮಾರು ಐದು ಮಾರು ದೂರದಲ್ಲಿ ಒಂದು
ತನ್ನ ದನವನ್ನು ಒಂದು ಬೈನಿ ಮರದ ಕೆಳಗೆ ತಿನ್ನುವದನ್ನು ಕಂಡನು.
ಕಾಲು ನಡುಗಿ ಹೆದರಿ ಕೊಳ್ಳುತ್ತಾ ತನ್ನನ್ನು ತಾನು ಬೈದು ಕೊಂಡು,—ದ
ಮುಂದೇನು ವೈನ! ಅಕಟಾ! ನನ್ನ ಬೈಕೆ ತೀರಿಸಿದ ಸೈ; ಈಗ ನೀನು ನನ
ಹುಲಿ ಬಾಯಿಯಿಂದ ತಪ್ಪಿಸಿದರೆ, ನನ್ನ ಐದು ಕುರಿ ಕೊಡುತ್ತೇನೆ
ಹೇಳಿದನು. ಅಷ್ಟರಲ್ಲಿ ದೈವೀಕವಾಗಿ ಆ ಹುಲಿ ಅದನ್ನು ತಿಗದು ಕೊಂ
...ನು ಪೈಲಿದಿಂದ ಮನೆಗೆ ತಿರುಗಿ ಬಂದನು.

೪೨. ಋ ೃ ಕೃ ಧೃ ಮೃ ಹೃ ಘ ಘಾ 42.

ಸೃಷ್ಟಿಸು.	ಹೃದಯ.	ದೃಷ್ಟಿ.	ಕೃಪೆ.	ಘಡಿಯಾರವು.	ಮೇಘ.	ವೃಕ್ಷ.
ಕೃತ್ರಿಮ.	ಘಳಿಸು.	ಮೃಗ.	ಘಾತ.	ಘಡಘಡನೆ.	ಸೃಷ್ಟಿ.	ಘಾಳಿ

ದೇವರು ಎಲ್ಲಾನ್ನು ಸೃಷ್ಟಿಸಿದ್ದರಿಂದ ಆತ ಸೃಷ್ಟಿಕರ್ತ ಅನ್ನಿಸಿಕೊಳ್ಳುತ್ತಾನೆ.

ಕೃತ್ರಿಮ ಯೋಚನೆಗಳು ಹೃದಯದಲ್ಲಿ ಬಚ್ಚಿಟ್ಟರೂ, ದೇವರ ದೃಷ್ಟಿಗೆ ತಪ್ಪವು.

ನಾವು ಎಲ್ಲಾ ಮೃಗಗಳ ಮೇಲೆ ಕೃಪೆ ಉಳ್ಳವರಾಗಿ ಇರ ಬೇಕು.

ಘಡಿಯಾರವು ನಮಗೆ ತಕ್ಕವಾದ ಸಮಯ ತಿಳಿಸುತ್ತದೆ.

ಲೋಕವು, ಮೇಘಗಳು, ಮಳೆ ಬುಗ್ಗೆಗಳು, ನದಿಗಳು.

ದೇವರು ಸೃಷ್ಟಿಸಿದ ನಾನಾ ಲೋಕಗಳೊಳಗೆ ಈ ಭೂಮಿ ಒಂದು ಲೋಕವು. ಅದು ಒಂದು ಕಿತ್ತಳೆಯ ಹಣ್ಣಿನಂತೆ ಗುಂಡಾದ ಆಕಾರ ಉಳ್ಳದ್ದು. ಇರುವೆಗಳು ಒಂದು ಚೀನೀ ಕಾಯಿ ಸುತ್ತ ತಿರುಗುವ ವಿಧವಾಗಿ ಹಡಗಗಳು ಭೂಮಿಯ ಸುತ್ತಲು ತಿರುಗುತ್ತವೆ. ಭೂಲೋಕವು ಒಂದು ಪಾಲು ನೆಲವಾಗಿಯೂ ಮೂರು ಪಾಲು ಸಮುದ್ರವಾಗಿಯೂ ಇದೆ. ಸಮುದ್ರದಲ್ಲಿ ಮತ್ಸ್ಯಗಳು ಮೊದಲಾದ ಜಂತುಗಳು ಸಂಚರಿಸುತ್ತಾ ಇರುವವು. ನೆಲದ ಮೇಲೆ ಮೃಗಗಳೂ ಮನುಷ್ಯರೂ ವಾಸ ಮಾಡುವರು. ಗಿಡ ಬಳ್ಳಿ ಮೊದಲಾದವುಗಳು ಮೊಳೆಯುವವು. ಬೆಟ್ಟಗಳು ಗುಡ್ಡೆಗಳು ಏರ್ಪಡಿಸಿಯವೆ.

ಸಮುದ್ರದ ನೀರು ಹಬೆಯಾಗಿ ಏರುತ್ತದೆ. ಈ ಹಬೆ ಆಕಾಶದಲ್ಲಿ ಕೂಡಿ ಘಗಳಾಗುತ್ತವೆ. ಆ ಮೇಘಗಳಿಗೆ ತಂಪಾದ ಘಾಳಿ ತಾಗಿದರೆ, ಆ ಮೇಘಗಳು ರ್ಷರೂಪವಾಗಿ ಸುರಿಯುವವು. ಇದಕ್ಕೆ ಮಳೆ ಎಂದು ಹೇಳುತ್ತಾರೆ. ಒಂದು ಘ ಮತ್ತೊಂದು ಮೇಘಕ್ಕೆ ತಾಗುವದರಿಂದ ಅನೇಕ ಸರ್ತಿ ಗುಡುಗು ಮಿಂಚು ಗುವವು. ಗುಡುಗಿನ ಧ್ವನಿಯು ಘಡಘಡನೆ ಕೇಳ ಬರುತ್ತದೆ. ಮಿಂಚು ವೃಕ್ಷ ದಲಾದವುಗಳಿಗೆ ತಗಲಿ ಅವುಗಳನ್ನು ಹಾಳು ಮಾಡಿದರೆ, ಅದಕ್ಕೆ ಸಿಡಿಲು ಎಂದು ಳುತ್ತಾರೆ.

ಮಳೆ ತಗ್ಗುಗಳಲ್ಲಿ ಸುರಿಯುವಾಗ್ಯೆ ಅದರಿಂದ ಆಗುವ ನೀರು ಭೂಮಿಯಲ್ಲಿ ರಿ, ಅದರ ಕೆಳಗೆ ಬುಗ್ಗೆಗಳಾಗಿ ಇರುತ್ತದೆ. ನಾವು ಭಾವಿಗಳನ್ನು ಅಗಿದು ವ ನೀರು ಆ ನೀರೇ. ಮಳೆ ಎತ್ತರ ದೇಶಗಳಲ್ಲಿ ಸುರಿದರೆ, ನೀರು ಕಣಿವೆಗಳಲ್ಲಿ ಬುಗ್ಗೆಗಳಾಗಿ ಉಕ್ಕಿ ಹಳ್ಳಗಳಾಗಿ ಹರಿದು ತಗ್ಗು ಶೀಮೆಗಳಲ್ಲಿ ಕೂಡಿ ಬಂದು ನದಿಗಳಾಗಿ ಸಮುದ್ರಕ್ಕೆ ತಿರಿಗಿ ಶೇರುತ್ತವೆ.

೪೩. ಖ ಖಾ ಖಿ ಖು ಖೇ ಖೈ ಖೊ

ಖೊಬ್ಬರಿ|ಖಜ್ಜಿ|ಲೆಖ್ಖ|ಸಂಖ್ಯೆ|ಮೂರ್ಖ|ಸುಖ|ಮುಖ್ಯ|ಖಜೂರ|ಮುಖ

ಖೊಬ್ಬರಿಯನ್ನು ಗಾಣದಲ್ಲಿ ಹಾಕಿ ತಿರುಗಿಸಿ ಎಣ್ಣಿ ತೆಗೆಯುತ್ತಾರೆ. ಖಜ್ಜಿಗೆ ಗಂಧಕ ಹಚ್ಚಿ ಕೊಂಡರೆ, ಖಜ್ಜಿ ಬೇಗ ವಾಸಿ ಆಗುತ್ತದೆ. ಹತ್ತು ಅಂಕೆಗಳು ಮಾತ್ರ ಉಂಟು; ಸಂಖ್ಯೆಗಳು ಎಷ್ಟುಂಟೆಂದರೆ, ಲೆಖ್ಖವಿಲ್ಲ; ಹಾಗಾದರೆ, ಸಂಖ್ಯೆಗಳನ್ನೆಲ್ಲಾ ಆ ಹತ್ತೇ ಅಂಕೆಗಳಿಂದ ಹ್ಯಾಗೆ ಬರೆಯುವದು? ಹೇಳು!

ಮೃಗಗಳಿಂದಾಗುವ ಉಪಕಾರಗಳು.

ಅನೇಕ ಮೃಗಗಳು ಮನುಷ್ಯರಿಗೆ ಬಹಳ ಉಪಕಾರ ಉಳ್ಳದ್ದು. ಇವುಗಳಲ್ಲಿ ಮುಖ್ಯವಾಗಿ ಪ್ರಯೋಜನವುಳ್ಳದ್ದು ದನ. ಎತ್ತು ಕೋಣಗಳು ಬಂಡೀ ಎಳೆಯುತ್ತವೆ, ಹೊಲ ಉಳುತ್ತವೆ. ಪಶು ಹಾಲು ಕೊಡುತ್ತದೆ. ಇವುಗಳ ನಾಲ್ಕು ಕಾ ಖುರಗಳು ಎರಡು ಹೋಳಾಗಿ ಸೀಳಿ ಇವೆ. ಕುರಿಗಳಿಂದ ಗಡ್ಡಿಗೆ ಗೊಬ್ಬರವೂ ಆಡುಗಳಿಂದ ಹಾಲೂ ದೊರಕುತ್ತವೆ. ಈ ಎಲ್ಲಾ ಮೃಗಗಳು ಬೇಕಾದಷ್ಟು ಹುಲ್ಲು ತಿಂದ ಮೇಲೆ ಸುಮ್ಮನೆ ನಿಂತು ಕೊಂಡಾಗಲಿ ಮಲಗಿ ಕೊಂಡಾಗಲಿ ತಿಂದದ್ದನ್ನು ತಿರಿಗಿ ಬಾಯಿಗೆ ತಂದು ಜಗಿಯುತ್ತವೆ. ಇದಕ್ಕೆ ಮಲಕು ಹಾಕುವದೆಂದು ಹೇಳುತ್ತಾರೆ.

ಕುದುರೆಗಳು ಸವಾರಿಗೂ ಆನೆ ಒಂಟೆಗಳು ದೊಡ್ಡ ದೊಡ್ಡ ಭಾರವನ್ನು, ಕತ್ತೆ ಸಣ್ಣ ಭಾರವನ್ನು ಹೊರಲಿಕ್ಕೂ ಪ್ರಯೋಜನವಾಗಿವೆ. ನಾಯಿ ಮನೆ ಕಾಯುತ್ತದೆ ಬೆಕ್ಕು ಇಲಿ ಮುಂತಾದ ದುಷ್ಟ ಪ್ರಾಣಿಯನ್ನು ಹಿಡಿದು ತಿನ್ನುತ್ತದೆ. ಹುಂಜವು ಕೂಗಿ, ರಾತ್ರೇ ಕಾಲದ ಸಮಯ ತಿಳಿಸುತ್ತದೆ. ಹೇಟೆಯು ಮೊಟ್ಟೆಗಳನ್ನು ಇಡುತ್ತದೆ

ಅನೇಕ ಮೃಗಗಳು ಸತ್ತ ಮೇಲೂ ಪ್ರಯೋಜನಕ್ಕೆ ಬರುತ್ತವೆ. ಅವುಗ ಚರ್ಮ ಕೆರಗಳನ್ನು ಹೊಲಿಯುವದಕ್ಕೂ ಜೀನು ಪುಸ್ತಕಾದಿಗಳನ್ನು ಕಟ್ಟುವದಕ್ಕೂ ಉಪಯೋಗವಾಗಿದೆ. ಆನೆ, ಎಮ್ಮೆ, ಎತ್ತು ಇವು ಮೊದಲಾದವುಗಳ ಕೊಂಬ ಗಳಿಂದಲೂ ಎಲುಬುಗಳಿಂದಲೂ ವಿಚಿತ್ರವಾದ ಅನೇಕ ವಸ್ತುಗಳಾಗುತ್ತವೆ. ಕುರಿಗ ಬಂಡ ಅಥವಾ ಉಣ್ಣೆಯಿಂದ ವಸ್ತ್ರ ಮಾಡುತ್ತಾರೆ.

ನಾವು ಮನೆಯಲ್ಲಿ ಸಾಕುವ ಮೃಗಗಳಿಗೆ ಸಮಗ ಇರುವ ಹಾಗೆ ಬ ಇಲ್ಲಾ; ಅದು ಬೇಕು ಇದು ಬೇಕು ಎಂದು ಹೇಳಬಾರವು. ಇದನ್ನು ಜ್ಞಾಪಕ ಷ್ಟ ಸಮಯ ಸಮಯಕ್ಕೆ ಕುಡಿಯಲಿಕ್ಕೂ ತಿನ್ನಲಿಕ್ಕೂ ಹಾಕ ಬೇಕು. ಳು ನಮ್ಮ ಹಾಗೆ ಸುಖ ದುಃಖಗಳನ್ನು ಅನುಭವಿಸುತ್ತವೆ ಎಂದು ನೆನಸಿ ಗಳನ್ನು ಸುಮ್ಮನೆ ಬಾಧಿಸ ಬಾರದು.

೪೪. ಥ, ಥಾ ಥಿ ಥು ಥೆ ಥೊ 44.

ಗ್ರಂಥ,|ಅಂಥಾ|ಪ್ರಾರ್ಥಿಸು|ಸ್ಥಾವರ|ಪದಾರ್ಥ|ಸ್ಥಿರ|ಸಾಮರ್ಥ್ಯ|ವ್ಯರ್ಥ

ವೃಕ್ಷವು ಎಂಥಾದ್ದೋ ಬೀಜವು ಅಂಥಾದೆ. ಪಾಪ ಪುಣ್ಯಗಳು ಎಂಥಾವ್ರೋ ಅನುಭವ ಅಂಥಾವೆ.

ಮುಂಜಾನೆ ಎದ್ದು ದೇವರನ್ನು ಧ್ಯಾನಿಸಿ, ನಮ್ಮ ಕಾಪಾಡು ಎಂತ ಪ್ರಾರ್ಥಿಸ ಬೇಕು.

ಈ ಪುಸ್ತಕ ಕಾಗದದಿಂದ ಮಾಡಿಯದೆ. ಕಾಗದ ವಸ್ತ್ರದ ಚಿಂದಿಗಳಿಂದಾಗುತ್ತದೆ. ವಸ್ತ್ರ ಹತ್ತೀ ನೂಲಿನಿಂದ ಮಾಡೋಣಾಗುತ್ತದೆ. ಹತ್ತಿಗಿಡಗಳು ಇಂದ್ಯಾ ದೇಶದಲ್ಲಿ ಸಾಧಾರಣ. ಕಾಗದ ಪತ್ರಿಕೆ ಗ್ರಂಥ ಮೊದಲಾದ್ದನ್ನು ಬರೆಯಲಿಕ್ಕೆ ಉಪಯೋಗವು. ಪೂರ್ವ ಕಾಲದಲ್ಲಿ ಇದ್ದಂಥವರು ಅಂಥಾ ಕಾಗದ ಇಲ್ಲದೆ ಇರುವದರಿಂದ ಓಲೆಯ ಲ್ಲಿಯೂ ತಾಂಬ್ರದ ರೇಖುಗಳಲ್ಲಿಯೂ ಬರೆಯುತ್ತಾ ಇದ್ದರು.

೪೫. ಠ ಠಾ ಠಿ ಠು ಠೆ ಠೊ 45.

ಪಾಠ.|ಕಠಿಣ.|ಠಾವು.|ಠಾಣ್ಯ.|ಕಠೋರ.|ಶ್ರೇಷ್ಠ.|ಠಕ್ಕ.|ಠಿಕಾಣಿ.|ಪಠ

ಪೋಲಿಸ್ಸು ಪ್ಯಾದೆಗಳು ಕೂಡಿರುವ ಠಾವಿಗೆ ಠಾಣ್ಯವೆಂದು ಹೇಳುತ್ತಾರೆ. ಈ ಪಾಠವನ್ನು ನಿನ್ನ ಭಾಷೆಯಲ್ಲಿ ಟೀಕು ಮಾಡಿ ಹೇಳು. ಅಲ್ಪವಾದ ತಪ್ಪಿಗೆ ಕಠೋರ ಮಾತಾಡುವದು ಕಠಿಣ ಹೃದಯದವನ ಕೆಲಸವೇ.

ಅವನು ಠಕ್ಕನು; ಅವನ ಠಾವು ಠಿಕಾಣಿ ನನಗೆ ಗೊತ್ತು ಇಲ್ಲಾ ಒಂದೇ ಶಾಲೆಯಲ್ಲಿ ಸಂಗಡ ಕಲಿಯುವವರು ಸಹಪಾಠಿಗಳಾಗುತ್ತಾರೆ ರೂಗೋಳ ವಿದ್ಯೆ ಕಲಿಸಲಿಕ್ಕೆ ಪಠಗಳು ಅವಶ್ಯವಾಗಿ ಇರುತ್ತವೆ. ಆಕಾಶವು ದೇವರ ಸಿಂಹಾಸನವು; ಭೂಮಿಯು ಅವನ ಪಾದಪೀಠವೆ.

ಹುಡುಗರು ಮನೆಯಲ್ಲಿರುವಾಗ್ಯೆ ತಾಯಿ ತಂದೆಗಳಿಗೆ ವಿಧೇಯರಾಗಿರ ಬೇಕು; ಪಾಠಶಾಲೆಯಲ್ಲ ಅಯ್ಯನವರು ಹೇಳಿದಂತೆ ನಡದು ಕೊಳ್ಳ ಬೇಕು; ಶಾಲೆಗೆ ಹೋಗುವ ಸಮಯ ತಪ್ಪಿಸ ಬಾರದು. ಎಲ್ಲಾ ಹುಡುಗರಿಗಿಂತಲೂ ತಾನು ತನ್ನ ಪಾಠವನ್ನು ತೀವ್ರವಾಗಿ ಕಲಿಯ ಬೇಕೆಂಬ ಸಾಭಿಮಾನ ಹಿಡಿಯ ಬೇಕು; ಪಾಠ ಕ್ಕೆ ಕಠಿಣವಾದರೂ ಪ್ರಯತ್ನ ಮಾಡಿದರೆ. ಕಲಿಯ ಬಹುದು; ಶಾಲೆಗೆ ಹೋಗ... ಕ್ಕೆ ತುಂಟ ಹುಡುಗರು ಆಡಲಿಕ್ಕೆ ಕರದರೆ, ಅವರ ಸಂಗಡ ಆಡಲಿಕ್ಕೆ ಹೋ ದು.

೪೬. ಛ ಛಾ ಛಿ ಝ ಝಾ ಝಿ

ಝಗಝಗಿಸು|ಝಾಡಿಸು|ತುಛ|ಸ್ವೇಛೆ|ಝಗಳ|ಛಾಯೆ|ಛಳಿ|ಛಾವಣಿ

ಆಕಾಶದಲ್ಲಿ ಮಿಂಚು ಝಗಝಗಿಸಲು ಮಳೆ ಬರುವ ಕುರುಹು.
ಕಾಲಿನ ಧೂಳನ್ನು ಝಾಡಿಸದೆ ಇದ್ದರೆ, ಕಣ್ಣಿಗೆ ಬಾಧಕವು.
ಪರರನ್ನು ತುಛೀಕರಿಸುವದು ನೀಚರ ಲಕ್ಷಣವಾಗಿರುತ್ತದೆ.
ಘನವಂತರು ಸ್ವೇಛೆಯಿಂದ ಝಗಳಗಳನ್ನು ಹತ್ತಿಸುವದಿಲ್ಲ.
ಛಾಯಾಗಣಿತದಿಂದ ಎಷ್ಟು ಹೊತ್ತಾಯಿತೆಂತ ಶೀಘ್ರ ತಿಳಿಯ ಬಹುದು.
ಛಳಿಕಾಲದಲ್ಲಿ ಛಳಿ ಹೆಚ್ಚು. ಮನೆಗಳೆಲ್ಲಾ ಛಾವಣಿಯಾಗಿ ಸಿದ್ಧವಾಗಿರ ಬೇಕು.

ಕಾಲಭೇದಗಳು.

ಅರುವತ್ತು ವಿಘಳಿಗೆಗೆ ಒಂದು ಘಳಿಗೆ. ಅರುವತ್ತು ಘಳಿಗೆಗೆ ಒಂದು ದಿನ. ಏಳುವರೆ ಘಳಿಗೆಗೆ ಒಂದು ಝಾಮ. ಅಂಥಾ ಝಾಮಗಳು ಎಂಟು ಶೇರಿದರೆ, ಒಂದು ದಿನ. ಹಗಲು ನಾಲ್ಕು ಝಾಮಗಳು, ರಾತ್ರಿ ನಾಲ್ಕು ಝಾಮಗಳು. ಏಳು ದಿನಗಳು ಶೇರಿದರೆ, ಒಂದು ವಾರವು. ಒಂದು ತಿಂಗಳಿಗೆ ದಿನಗಳು ಸರಾಸರಿ ಮೂವತ್ತು ಆಗುತ್ತವೆ. ಎರಡು ತಿಂಗಳು ಶೇರಿ ಒಂದು ಋತು ಆಗುತ್ತದೆ. ಅಂಥಾ ಋತುಗಳು ಆರು ಶೇರಿದರೆ, ಒಂದು ಸಂವತ್ಸರವು.

ಚೈತ್ರವೈಶಾಖ ವಸಂತ ಋತು ಜ್ಯೇಷ್ಠ ಆಷಾಢ ಗ್ರೀಷ್ಮ ಋತು. ಶ್ರಾವಣ ಭಾದ್ರಪದ ವರ್ಷ ಋತು. ಆಶ್ವೀಜ ಕಾರ್ತಿಕ ಶರದೃತು. ಮಾರ್ಗಶಿರ ಪುಷ್ಯ ಹಿಮವಂತ ಋತು. ಮಾಘ ಫಾಲ್ಗುಣ ಶಶಿ ಋತು.

ಪುಷ್ಯ ಮಾಸದಲ್ಲಿ ಸುಗ್ಗಿ ಬೆಳೆಯನ್ನು ಕೊಯ್ಯುತ್ತಾರೆ. ಮಾಘ ಮಾಸದ ಕೊಳಕೆ ಬೆಳೆಯನ್ನು ಬಿತ್ತುತ್ತಾರೆ; ಮತ್ತು ಫಲವೃಕ್ಷಗಳಿಗೆ ಚನ್ನಾಗಿ ಹೂ ಬರುತ್ತದೆ. ಫಾಲ್ಗುಣ ಮಾಸದಲ್ಲಿ ಕೊಳಕೆ ಬೆಳೆ ಬೆಳೆಯುತ್ತದೆ. ಚೈತ್ರ ಮಾಸದ ಕೊಳಕೆ ಬೆಳೆಯನ್ನು ಕೊಯ್ಯುತ್ತಾರೆ. ವೈಶಾಖ ಮಾಸದಲ್ಲಿ ಫಲಗಳು ಹಂಣ ಗುತ್ತವೆ. ಜ್ಯೇಷ್ಠ ಮಾಸದಲ್ಲಿ ಪಣಿಲು ಬೆಳೆ ಬಿತ್ತುತ್ತಾರೆ; ನೇಜಿ ಹಾಕುತ್ತಾ ವ್ಯಾಪಾರಗಳು ಮುಗಿಯುವವು. ಆಷಾಢ ಮಾಸದಲ್ಲಿ ಪಣಿಲು ಬೆಳೆ ಬೆಳೆಯುತ್ತ ನೇಜಿಯನ್ನು ತೆಗದು ಮತ್ತೊಂದು ಗದ್ದೆಯಲ್ಲಿ ನಡುತ್ತಾರೆ. ಶ್ರಾವಣ ಮಾಸ ಪಲ್ಯಕಾಯಿ ಹೆಚ್ಚಾಗಿ ಆಗುತ್ತದೆ. ಭಾದ್ರಪದದಲ್ಲಿ ಬೆಳೆ ಪುಷ್ಟಿಯಾಗಿ ಫಲಿಸುತ್ತ ಆಶ್ವೀಜ ಕಾರ್ತೀಕ ಮಾಸಗಳಲ್ಲಿ ಪಣಿಲು ಬೆಳೆ ಕೊಯ್ಯಲಿಕ್ಕೆ ಸಿದ್ಧವಾಗು ಸುಗ್ಗಿ ಬೆಳೆ ಬಿತ್ತುತ್ತಾರೆ. ಮಾರ್ಗಶಿರದಲ್ಲಿ ಸುಗ್ಗಿ ಬೆಳೆ ಬೆಳಿಸುತ್ತಾರೆ. ಜ ಆಷಾಢ ತಿಂಗಳುಗಳಲ್ಲಿ ಮಳೆ ಬಹಳ ಹೆಚ್ಚು; ಶ್ರಾವಣದಲ್ಲಿ ಸ್ವಲ್ಪ ತಗ್ಗುತ್ತದೆ.

೪೭. ಔ ಪೌ ಕೌ ಗೌ ಘೌ ಅಃ ಃ ತ್ರಃ

ಔಷಧ.	ಪೌರ್ಣಿಮಿ	ಗೌಜಿ	ಔದಾರ್ಯ	ಯೌವನ	ಪೌನು	ಅಂತಃಕರಣ
ಔಸ್ಟ್ರೇಲ್ಯ	ಮೌನವು.	ಬೌದ್ಧ	ಔಚಿತ್ಯ.	ಮನಃಪೂರ್ವಕ		ಅಂತಃಕರಣಿ

47.

ಭೂಪಠದಲ್ಲಿ ಆಸ್ಯ, ಯೂರೋಪ್ಪು, ಅಫ್ರಿಕ, ಅಮೆರಿಕ, ಔಸ್ಟ್ರೇಲ್ಯ ಎಂಬ ಐದು ಭೂಖಂಡಗಳು ಕಾಣುತ್ತವೆ.

ಔಷಧ ಖೈ ಆಗಿದ್ದರೂ ರೋಗಸ್ಥರ ದೇಹಕ್ಕೆ ಆರೋಗ್ಯ ಕೊಡುತ್ತದೆ.

ಪೂರ್ಣ ಚಂದ್ರ ಇರುವ ದಿವಸಕ್ಕೆ ಪೌರ್ಣಿಮಿ ಇಲ್ಲವೆ ಹುಣ್ಣಿಮೆ ಅನ್ನುತ್ತಾರೆ.

ಮಠದಲ್ಲಿ ಗೌಜಿ ಮಾಡದೆ ಮೌನವಾಗಿ ಕೂತು ಕೊಂಡು ಪಾಠ ಕಲಿಯ ಬೇಕು.

ಔದಾರ್ಯ ಮನುಷ್ಯನು ಔಚಿತ್ಯ ಕೆಲಸಗಳಲ್ಲಿ ಖರ್ಚು ಮಾಡಲಿಕ್ಕೆ ಅಂಜನು.

ಲೋಹಗಳು.

ಈ ಲೋಕದಲ್ಲಿ ಲೋಹಗಳು ಅನೇಕ ಇರುತ್ತವೆ. ಅವುಗಳಲ್ಲಿ ಚಿನ್ನ, ಬೆಳ್ಳಿ, ತಾಂಬ್ರ, ಕಬ್ಬಿಣ, ಸೀಸ, ಇವು ಐದು ಪಂಚಲೋಹಗಳೆಂದು ಹೇಳಲ್ಪಡುತ್ತವೆ. ಈ ಐದು ಲೋಹಗಳೊಳಗೆ ಭಂಗಾರಕ್ಕೆ ಕ್ರಯ ವಿಶೇಷವಾಗಿದ್ದರೂ, ಕಬ್ಬಿಣ ಬಹಳ ಉಪಯೋಗವಾಗಿರುತ್ತದೆ. ನಾಣ್ಯಗಳು, ಹೆಚ್ಚು ಬೆಲೆಯುಳ್ಳ ಆಭರಣಗಳು, ಸೂಚಾಪಾತ್ರೆಗಳು, ಸಂಸ್ಥಾನಕ್ಕೆ ತಕ್ಕ ವಿಚಿತ್ರವಾದ ಪಾತ್ರೆಗಳು, ಘಡಿಯಾರಗಳು ಇವು ಮೊದಲಾದವು ಭಂಗಾರದಿಂದ ಮಾಡಲ್ಪಡುತ್ತವೆ. ನಾಣ್ಯಗಳೊಳಗೆ ಕೆಲವು, ಭೋಜನ ಪಾತ್ರೆಗಳೊಳಗೆ ಕೆಲವು, ತಟ್ಟೆಗಳು ಮೊದಲಾದವು ಕೆಲವು, ಆಭರಣಗಳು ಕೆಲವು, ಘಡಿಯಾರಗಳು ಕೆಲವು ಸಹಾ ಬೆಳ್ಳಿಯಿಂದ ಮಾಡುತ್ತಾರೆ. ಮತ್ತು ನಾಣ್ಯಗಳು ಕೆಲವು, ತ್ರಾಸುಗಳು, ಮನೆಯ ಪಾತ್ರಗಳು, ಶಾಸನಗಳು ಇವು ...ೂದಲಾದವು ತಾಂಬ್ರದಿಂದಲೂ, ನಾನಾ ವಿಧವಾದ ಆಯುಧಗಳು, ನಾನಾ ...ನವಾದ ಯಂತ್ರಗಳು ಇವು ಮೊದಲಾದ ಉಪಯೋಗ ಸಾಧನೆಗಳು ಕಬ್ಬಿಣ ...ದಲೂ ಮಾಡುತ್ತಾರೆ. ಚಿನ್ನದಿಂದ ಮೊಹೊರಿ, ಪೌನು, ಇಸ್ತಾಂಬೂಲು, ...ುಜಾತು ಮುಂತಾದ ನಾಣ್ಯಗಳನ್ನು ಮಾಡುತ್ತಾರೆ. ಬೆಳ್ಳಿಯಿಂದ ರೂಪಾಯಿ, ...ವಲಿ, ದೋನಾಣೆ ಮುಂತಾದ ನಾಣ್ಯಗಳಾಗುತ್ತವೆ. ತಾಂಬ್ರದಿಂದ ಅರ್ಧಾಣೆ, ...ಾಣೆ, ರುವಿ ಮುಂತಾದ ನಾಣ್ಯಗಳನ್ನು ಮಾಡುತ್ತಾರೆ. ತುಪಾಕಿ ಗುಂಡುಗಳೂ ...ಳೂ ಮುದ್ರಾಕ್ಷರಗಳೂ ಇವು ಮೊದಲಾದವು ಸೀಸದಿಂದ ಆಗುತ್ತ...

ಆತ್ಮ, ಮೋಕ್ಷ, ದೇವರು.

ನಾವು ಜೀವಿಸುವ ಕಾಲವು ಬಹಳ ಕೊಂಚವಾಗಿ ಇದೆ. ನಮಗೆ ಶರೀರವೂ ಆತ್ಮವೂ ಉಂಟು. ಆತ್ಮವು ಶರೀರಕ್ಕಿಂತ ಬೇರೆಯಾಗಿದೆ. ಈಗ ಈ ಎರಡು ಒಂದಾಗಿ ಕಾಣ ಬರುತ್ತಿದ್ದಾಗ್ಯೂ, ನಮ್ಮ ಜೀವಕಾಲ ತೀರಿದ ತರುವಾಯ ಅವು ಬೇರೆ ಬೇರೆ ಬಿದ್ದು ಹೋಗುವವು. ಕಡೆಗೆ ಈ ಶರೀರವು ಮಣ್ಣಿನ ಪಾಲಾಗುವದು. ಆತ್ಮವು ಹಾಗೆ ಅಲ್ಲ; ಅದು ಯಾವ ಕಾಲದಲ್ಲಿಯೂ ನಾಶವನ್ನು ಹೊಂದದು. ನಾವು ಸತ್ತ ತರುವಾಯ ನಮ್ಮ ಆತ್ಮವು ಪರಲೋಕವನ್ನು ಸೇರುವದು. ಭಕ್ತರು ದೇವರ ಸನ್ನಿಧಿಯಲ್ಲಿ ಬಂದು ನಿತ್ಯಸೌಖ್ಯವನ್ನು ಪಡೆದು ಕೊಳ್ಳುತ್ತಾರೆ. ಪಾಪಾತ್ಮರು ನರಕದಲ್ಲಿ ಬಿದ್ದು ಹೆಚ್ಚಾಗಿ ಯಾತನೆ ಪಡುತ್ತಾರೆ.

ನಾವು ದೇವರ ಕೈಯಿಂದಲೇ ಉಂಟು ಮಾಡಲ್ಪಟ್ಟವರು. ದೇವರು ಇತರರಿಂದ ಉಂಟಾದಂಥವನಲ್ಲ. ದೇವರು ರೂಪವಿಲ್ಲದಂಥವನಾಗಿದ್ದಾನೆ. ಆತನನ್ನು ನೋಡುವದು ಅಸಾಧ್ಯ. ಆತನು ಎಲ್ಲಿಯೂ ಇರುವವನಾಗಿ, ಸಮಸ್ತವನ್ನು ತಿಳಿ ಕೊಂಡಿದ್ದಾನೆ. ದೇವರು ಇಲ್ಲದ ಸ್ಥಳವೂ ತಿಳಿಯದ ವಸ್ತೂ ಇಲ್ಲ; ನನ್ನ ಮನಸ್ಸಿನಲ್ಲಿ ಇರುವದು ಸಹ ಆತನಿಗೆ ತಿಳಿಯುವದು. ದೇವರು ಸರ್ವಶಕ್ತನು; ಸಕಲ ಕೆಲಸವನ್ನು ಮಾಡುವದು ಆತನಿಗೆ ತೃಣ ಮಾತ್ರವಾಗಿರುವದು. ಆತನಿಗೆ ಆದಿಯೂ ಅಂತ್ಯವೂ ಇಲ್ಲ. ಲೋಕದಲ್ಲಿ ಇರುವ ವಸ್ತುಗಳೆಲ್ಲಾ ಮಾರ್ಪಟ್ಟು ಲಯವಾಗಿ ಹೋಗ ತಕ್ಕವು. ದೇವರು ತಾನು ಉಂಟು ಮಾಡಿದ ಎಲ್ಲವುಗಳನ್ನು ಕಾಪಾಡುತ್ತಾನೆ. ಆತನು ತಾನು ನಿರ್ಮಿಸಿದ ಲೋಕವನ್ನೆಲ್ಲಾ ಪಾಲಿಸುತ್ತಾ ಇದ್ದಾನೆ. ಆತನಿಗೆ ಯಾರೂ ಸಮಾನವಿಲ್ಲ. ದೇವರು ಕೇವಲ ಪರಿಶುದ್ಧನು. ಆತನ ಸಮೀಪದಲ್ಲಿ ಷ್ಟು ಮಾತ್ರವೂ ದೋಷವಿಲ್ಲ. ಆತನು ನೀತಿವಂತನಾದ್ದರಿಂದ ವಂಚನೆ ಮುಂತಾ ಪಾಪ ಮಾಡಿದವರನ್ನು ದಂಡಿಸುವನು. ಒಳ್ಳೆಯವರ ಮೇಲೆ ಆತನು ದಯೆ ಇಡುತ್ತಾನೆ

ಇಂಥಾ ಮಹಿಮೆಯುಳ್ಳ ದೇವರ ಆಶ್ರಯವನ್ನು ಹೊಂದಿದರೆ, ನಾವು ಬಹ ಧನ್ಯರಾಗದೆ ಹೋಗೆವು!

ಆದದರಿಂದ ಸುಳ್ಳು ಹೇಳ ಬಾರದು; ಕದಿಯ ಬಾರದು; ಮೋಸ ಮ ಬಾರದು; ಅಂಥಾ ಕೆಟ್ಟ ಕೆಲಸ ಮಾಡುವ ದುಷ್ಟ ಹುಡುಗರ ಸಹವಾಸ ಮಾ ಬಾರದು; ಕೆಟ್ಟ ಪದ್ಧತಿಗಳನ್ನು ಅನುಸರಿಸ ಬಾರದು; ಕೆಟ್ಟ ಮಾತುಗಳನ್ನು ಬಾರದು; ಕೇಡಿಗೆ ಕೇಡು ಮಾಡ ಬಾರದು.

೪೮. ಆತ್ಮ, ಮೋಕ್ಷ, ದೇವರು. 48.

ನಾವು ಜೀವಿಸುವ ಕಾಲವು ಬಹಳ ಕೊಂಚವಾಗಿ ಇದೆ. ನಮಗೆ ಶರೀರವೂ ಆತ್ಮವೂ ಉಂಟು. ಆತ್ಮವು ಶರೀರಕ್ಕಿಂತ ಬೇರೆಯಾಗಿದೆ. ಈಗ ಈ ಎರಡು ಒಂದಾಗಿ ಕಾಣ ಬರುತ್ತಿದ್ದಾಗ್ಯೂ, ನಮ್ಮ ಜೀವಕಾಲ ತೀರಿದ ತರುವಾಯ ಅವು ಬೇರೆ ಬೇರೆ ಬಿದ್ದು ಹೋಗುವವು. ಕಡೆಗೆ ಈ ಶರೀರವು ಮಣ್ಣಿನ ಪಾಲಾಗುವದು. ಆತ್ಮವು ಹಾಗೆ ಅಲ್ಲ; ಅದು ಯಾವ ಕಾಲದಲ್ಲಿಯೂ ನಾಶವನ್ನು ಹೊಂದದು. ನಾವು ಸತ್ತ ತರುವಾಯ ನಮ್ಮ ಆತ್ಮವು ಪರಲೋಕವನ್ನು ಸೇರುವದು. ಭಕ್ತರು ದೇವರ ಸನ್ನಿಧಿಯಲ್ಲಿ ಬಂದು ನಿತ್ಯಸೌಖ್ಯವನ್ನು ಪಡ ಕೊಳ್ಳುತ್ತಾರೆ. ಪಾಪಾತ್ಮರು ನರಕ ದಲ್ಲಿ ಬಿದ್ದು ಹೆಚ್ಚಾಗಿ ಯಾತನೆ ಪಡುತ್ತಾರೆ.

ನಾವು ದೇವರ ಕೈಯಿಂದಲೇ ಉಂಟು ಮಾಡಲ್ಪಟ್ಟವರು. ದೇವರು ಇತರರಿಂದ ಉಂಟಾದಂಥವನಲ್ಲ. ದೇವರು ರೂಪವಿಲ್ಲದಂಥವನಾಗಿದ್ದಾನೆ. ಆತನನ್ನು ನೋಡು ವದು ಅಸಾಧ್ಯ. ಆತನು ಎಲ್ಲಿಯೂ ಇರುವವನಾಗಿ, ಸಮಸ್ತವನ್ನು ತಿಳಕೊಂಡಿ ದ್ದಾನೆ. ದೇವರು ಇಲ್ಲದ ಸ್ಥಳವೂ ತಿಳಿಯದ ವಸ್ತುವೂ ಇಲ್ಲ; ನನ್ನ ಮನಸ್ಸಿನಲ್ಲಿ ಇರುವದು ಸಹ ಆತನಿಗೆ ತಿಳಿಯುವದು. ದೇವರು ಸರ್ವಶಕ್ತನು; ಸಕಲ ಕೆಲಸವ ನ್ನು ಮಾಡುವದು ಆತನಿಗೆ ತೃಣ ಮಾತ್ರವಾಗಿರುವದು. ಆತನಿಗೆ ಆದಿಯೂ ಅಂ ತ್ಯವೂ ಇಲ್ಲ. ಲೋಕದಲ್ಲಿ ಇರುವ ವಸ್ತುಗಳೆಲ್ಲಾ ಮಾರ್ಪಟ್ಟು ಲಯವಾಗಿ ಹೋ ಗ ತಕ್ಕವು. ದೇವರು ತಾನು ಉಂಟು ಮಾಡಿದ ಎಲ್ಲವುಗಳನ್ನು ಕಾಪಾಡುತ್ತಾನೆ. ಆತನು ತಾನು ನಿರ್ಮಿಸಿದ ಲೋಕವನ್ನೆಲ್ಲಾ ಪಾಲಿಸುತ್ತಾ ಇದ್ದಾನೆ. ಆತನಿಗೆ ಯಾರೂ ಸಮಾನವಿಲ್ಲ. ದೇವರು ಕೇವಲ ಪರಿಶುದ್ಧನು. ಆತನ ಸಮೀಪದಲ್ಲಿ ಎ ಷ್ಟು ಮಾತ್ರವೂ ದೋಷವಿಲ್ಲ. ಆತನು ನೀತಿವಂತನಾದ್ದರಿಂದ ವಂಚನೆ ಮುಂತಾದ ಪಾಪ ಮಾಡಿದವರನ್ನು ದಂಡಿಸುವನು. ಒಳ್ಳೆಯವರ ಮೇಲೆ ಆತನು ದಯ ಇಡುತ್ತಾನೆ

ಇಂಥಾ ಮಹಿಮೆಯುಳ್ಳ ದೇವರ ಆಶ್ರಯವನ್ನು ಹೊಂದಿದರೆ, ನಾವು ಬಹಳ ಧನ್ಯರಾಗದೆ ಹೋಗೆವು!

ಆದದರಿಂದ ಸುಳ್ಳು ಹೇಳ ಬಾರದು; ಕದಿಯ ಬಾರದು; ಮೋಸ ಮಾಡ ಬಾರದು; ಅಂಥಾ ಕೆಟ್ಟ ಕೆಲಸ ಮಾಡುವ ದುಷ್ಟ ಹುಡುಗರ ಸಹವಾಸ ಮಾಡ ಬಾರದು; ಕೆಟ್ಟ ಪದ್ಧತಿಗಳನ್ನು ಅನುಸರಿಸ ಬಾರದು; ಕೆಟ್ಟ ಮಾತುಗಳನ್ನು ಆಡ ಬಾರದು; ಕೇಡಿಗೆ ಕೇಡು ಮಾಡ ಬಾರದು.

THE MYSORE LOWER SECONDARY

EXAMINATION PAPERS.

Geography.

ಭೂಗೋಳಶಾಸ್ತ್ರ ಪ್ರಶ್ನೋತ್ತರ.

1907

---

೧ ನೆಯ ಭಾಗ.

I ಈ ಕೆಳಗೆ ಕೇಳಿರುವವುಗಳನ್ನು ತಿಳಿಸಿ:—

(೧) ಇಂಡಿಯಾದೇಶದಲ್ಲಿ ಅತ್ಯಂತ ದೊಡ್ಡದಾದ ಲಷ್ಕರು;

(೨) ಸಿಂಧುನದೀ ತೀರದಲ್ಲಿರುವ ನಾಲ್ಕು ಪಟ್ಟಣಗಳು;

(೩) ಮೈಸೂರುಸಂಸ್ಥಾನದ ದಕ್ಷಿಣೋತ್ತರ ಮೇರೆಗಳಾದ ಬ್ರಿಟಿಷ್ ಇಂಡಿಯಾ ಡಿಸ್ಟ್ರಿಕ್ಟುಗಳು.

(೪) ಮದರಾಸ್ ಅಧಿಪತ್ಯದ ದಕ್ಷಿಣ ಭಾಗದ ಜಿಲ್ಲೆಗಳು;

(೫) ವಾಯುವ್ಯಪ್ರಾಂತ, ಪಂಜಾಬು, ಮಧ್ಯಪ್ರಾಂತಗಳು, ಆಸ್ಸಾಂ ಇವುಗಳ ಪ್ರಧಾನ ಪಟ್ಟಣಗಳು;

(೬) ಬೊಂಬಾಯಿ ಅಧಿಪತ್ಯದ ನಾಲ್ಕು ರೇವೆಪಟ್ಟಣಗಳು

II (*a*) ಹಿಂದೂದೇಶದ ಯಾವ ಪ್ರದೇಶಗಳಲ್ಲಿ ಅರಳೆ, ಟೀ, ಅಫೀಮು, ಕಾಫೀ, ಇವು ಹೆಚ್ಚಾಗಿ ಆಗುವುವು?

(*b*) ಸಿಂಹಳದ್ವೀಪದ ಖನಿಜಗಳನ್ನೂ, ಬರ್ಮಾದೇಶದ ಉದ್ಭಿಜ್ಜಗಳನ್ನೂ ತಿಳಿಸಿ.

III ಅಮೃತಸರ, ಹರಿದ್ವಾರ, ಮಚಲಿಬಂದರ್, ಆಲಪ್ಪಿಳ, ಎಲ್ಲೂರು, ರಾಣಿಗಂಜ್, ಡಿಂಡಿಗಲ್ಲು, ತ್ರಿಂಕೋಮಾಲಿ ಇವು ಏತಕ್ಕೆ ಪ್ರಸಿದ್ಧಿ ಹೊಂದಿರುವುವು?

IV (*a*) ಮೈಸೂರು ಸಂಸ್ಥಾನದಲ್ಲಿ ರೈಲುಮಾರ್ಗದಲ್ಲಿಲ್ಲದ ಡಿಸ್ಟ್ರಿಕ್ಟ್ ಪಟ್ಟಣಗಳ ಹೆಸರನ್ನು ಬರೆಯಿರಿ.

(*b*) ಈ ಸಂಸ್ಥಾನದಲ್ಲಿ ಕಂಬಳಿಗಳು, ರೇಷ್ಮೆಯನೂಲು ಗಂಧದ ಸಾಮಾನುಗಳು ಲಾಕಿಬಣ್ಣದ ಸಾಮಾನುಗಳು, ರತ್ನಗಂಬಳಿಗಳು ಇವು ಎಲ್ಲಿ ಮುಖ್ಯವಾಗಿ ಆಗುವುವು?

೨ ನೆಯಭಾಗ.

I (೧) ವಲಯಗಳೆಂದರೇನು? (೨) ಪಂಚವಲಯಗಳ ಹೆಸರುಗಳನ್ನು ಉತ್ತರದಿಂದ ದಕ್ಷಿಣಕ್ಕೆ ಅಥವಾ ದಕ್ಷಿಣದಿಂದ ಉತ್ತರಕ್ಕೆ ಕ್ರಮವಾಗಿ ಬರೆಯಿರಿ. (೩) ಭೂಮಧ್ಯರೇಖೆಯು ಯಾವವಲಯದಲ್ಲಿ ಹಾದುಹೋಗುವುದು? (೪) ಭೂಮಿಯು ಗುಂಡಾಗಿದೆ ಎನ್ನುವುದಕ್ಕೆ ಯಾವುದಾದರೊಂದು ನಿದರ್ಶನವನ್ನು ಹೇಳಿ.

II (೧) ಸೈಬೀರಿಯದ ನದಿಗಳು ಹಡಗಿನ ವ್ಯಾಪಾರಕ್ಕೆ ಅನುಕೂಲವಾಗಿಲ್ಲದಿರುವುದಕ್ಕೆ ಕಾರಣವೇನು?

(೨) ನದಿಯಪಾತ್ರ, ಜಲಪಾತ್ರ, ಭೂಸಂಧಿ ಇವುಗಳನ್ನು ವಿವರಿಸಿರಿ.

III ಇವುಗಳ ಹೆಸರುಗಳನ್ನುಮಾತ್ರ ತಿಳಿಸಿರಿ.

(೧) [illegible]ತದ ದಕ್ಷಿಣದಕೊನೆ.

(೨) [illegible]ದಲ್ಲಿ ಯುದ್ಧದ ಹಡಗುಗಳು ನಿಲ್ಲುವ ಮು[illegible]ಣಗಳು.

(೩) [illegible] ರೈಲುಗಳ ಸಂಗಮದಲ್ಲಿರುವ ಪಟ್ಟಣ.

(೪) ಡೋವರ್ ಜಲಸಂಧಿಯಿಂದ ಕೂಡಿಸಲ್ಪಡುವ ಸಮುದ್ರಭಾಗಗಳು.

(೫) ಯುರೋಪ್‌ಖಂಡದ ಅತ್ಯಂತ ದೊಡ್ಡದಾದ ನದಿ.

(೬) ಆಸ್ಟ್ರೇಲಿಯದ ವಿಭಾಗಗಳು.

(೭) ಸಂಯುಕ್ತ ಸಂಸ್ಥಾನದ ಪಶ್ಚಿಮದಲ್ಲೊಂದು ರೇವೆಪಟ್ಟಣ.

IV ಸಿಂಧುದೇಶವನ್ನು ಕೆಲವುವೇಳೆ ಚಿಕ್ಕ ಈಜಿಪ್ಟ ಎಂದು ಕರೆಯುವುದುಂಟು ಈ ಸಾಮ್ಯಕ್ಕೆ ಕಾರಣಗಳನ್ನು ತಿಳಿಸಿ.

V ಇವು ಎಲ್ಲಿವೆ? ಇವುಗಳವಿಷಯವಾಗಿ ನಿಮಗೆ ತಿಳಿದ ವಿಶೇಷ ಸಂಗತಿಯೊಂದನ್ನು ಬರೆಯಿರಿ.

(೧) ರಿಮರಿಕ್, (೨) ನ್ಯೂ ಆರ್ಲಿಯನ್ಸ್, (೩) ಜಿನೀವ, (೪) ಬಿಹೇಗ್, (೫) ಫೆಜ್, (೬) ಗ್ಲಾಸ್ಗೊ.

ಉತ್ತರಗಳು.

1 ನೆಯ ಭಾಗ.

I (೧) ಸಿಕಂದರಾಬಾದು.

(೨) ಅಟಕ್, ಕಲಾಬಾಗ್, ಡೇರಾಇಸ್ಮಾಯಿಲ್‌ಖಾನ್, ಮಿಥುನಕೋಟ್

(೩) ಉತ್ತರಮೇರೆಗಳು ಧಾರವಾಡ, ಬಳ್ಳಾರಿ, ಅನಂತಪುರ; ದಕ್ಷಿಣಮೇರೆಗಳು ಕೊಯಮುತ್ತೂರು, ನೀಲಗಿರಿ, ವೈನಾಡು,

(೪) ದಕ್ಷಿಣಆರ್ಕಾಟು, ತಂಜಾವೂರು, ಮಧುರೆ, ತಿನ್ನವೆಲ್ಲಿ;

(೫)

ದೇಶಗಳು-	ಪ್ರಧಾನಪಟ್ಟಣಗಳು.
ವಾಯುವ್ಯಪ್ರಾಂತ	ಲಕ್ನೋ
ಪಂಜಾಬು	ಲಾಹೋರ್
ಮಧ್ಯಪ್ರಾಂತಗಳು	ನಾಗಪುರ
ಅಸ್ಸಾಂ	ಷಿಲ್ಲಾಂಗ್

(೬) ಕರಾಚಿ, ಭರೋಚ್, ಬೊಂಬಾಯಿ, ಮಂಗಳೂರು.

II (*a*) ಅರಳೆ—ಬೊಂಬಾಯಿಸುತ್ತಲೂ, ಮಧ್ಯಪ್ರಾಂತ್ಯಗಳು.

ಟೀ—ಅಸ್ಸಾಂ, ಹಿಮಾಲಯದ ಕೆಲವುಭಾಗ.

ಅಫೀಮು—ಮಾಳವ, ಬಿಹಾರ,

ಕಾಫಿ—ನೈರುತ್ಯಘಟ್ಟಗಳಲ್ಲಿ.

(*b*) ಸಿಂಹಳದ್ವೀಪದ ಖನಿಜಗಳು—

ಕೆಂಪು, ವೈಡೂರ್ಯ. ಪುಷ್ಯರಾಗ ಮೊದಲಾದ ರತ್ನಗಳು ಸಿಕ್ಕುವುವು. ಈಶಾನ್ಯ ಮತ್ತು ವಾಯುವ್ಯತೀರಗಳ ಹತ್ತಿರದಲ್ಲಿ ಮುತ್ತುಗಳು ದೊರೆಯುವುವು.

ಬರ್ಮಾದೇಶದ ಉದ್ಭಿಜ್ಜಗಳು—ಭತ್ತ, ಹತ್ತಿ, ಸೀಲಿ, ರೇಷ್ಮೆ,

III ಅಮೃತಸರ—ರಾವಿ ಬೀಯೂಸ್ ನದಿಗಳಮಧ್ಯದಲ್ಲಿ ಸಿಕ್ಕರ ಯಾತ್ರಾಸ್ಥಳ. ರೇಷ್ಮೆಬಟ್ಟೆಗಳೂ, ಶಾಲುಗಳೂ ತಯಾರಾಗುತ್ತವೆ.

ಹರಿದ್ವಾರ—ಮೀರಟ್ ಡಿವಿಜನ್ನಿನಲ್ಲಿ ಪ್ರಸಿದ್ಧವಾದ ಯಾತ್ರಾಸ್ಥಳ. ಇದಕ್ಕೆ ಸ್ವಲ್ಪದೂರದಲ್ಲಿ ಗಂಗಾನದಿಯ ಕಾಲುವೆ ಪ್ರಾರಂಭವಾಗುವುದು.

ಮಚಲಿಬಂದರ್—ಕೃಷ್ಣಾಡಿಸ್ಟ್ರಿಕ್ಟಿನ ಮುಖ್ಯಪಟ್ಟಣ. ಇಲ್ಲಿ ಚೀಟಿಯಬಟ್ಟೆಗಳು ತಯಾರಾಗುತ್ತವೆ. ೧೮೬೪ರಲ್ಲಿ ಸಮುದ್ರದಿಂದ ದೊಡ್ಡಅಲೆ ಎದ್ದು ಮಚಲಿಬಂದರಿನ ಮೇಲೆ ಉರುಳಿ ಅದರಿಂದ ಹಾಳಾದುದಲ್ಲದೆ ೩೦ ಸಾವಿರ ಜನರು ಸತ್ತರು.

ಆಲಪ್ಪುಳ—ತಿರುವಾಂಕೋಡಿಗೆ ಸೇರಿದ ಮುಖ್ಯ ಬಂದರು. ಈ ದೇಶದವರು ತಮ್ಮ ಶಕವನ್ನು ಕೊಲ್ಲವೆಂಬ ಊರುಸ್ಥಾಪಿತವಾದ ವರ್ಷ (ಕ್ರಿ. ಶ. ೮೨೪) ದಿಂದ ಎಣಿಸುತ್ತಿದ್ದಾರೆ. ಇಲ್ಲಿಯ ಪದ್ಧತಿಗಳೆಲ್ಲಾ ಮಲಯಾಳದ ಪದ್ಧತಿಗಳು.

ಎಲ್ಲೂರು—ಗೋದಾವರೀ ಡಿಸ್ಟ್ರಿಕ್ಟಿಗೆ ಸೇರಿದೆ. ಇಲ್ಲಿ ರತ್ನಗಂಬಳಿಗಳು ಆಗುವುವು.

ರಾಣಿಗಂಜ್—ಬಂಗಾಳದೇಶಕ್ಕೆ ಸೇರಿದ ಬರ್ದವಾನ್ ಡಿವಿಜನ್ನಿನಲ್ಲಿದೆ. ಇಲ್ಲಿ ವಿಶೇಷವಾಗಿ ಕಲ್ಲಿದ್ದಲು ಸಿಕ್ಕುತ್ತದೆ.

ಡಿಂಡಿಗಲ್ಲು—ಮಧುರೆ ಜಿಲ್ಲೆಯಲ್ಲಿ ದೊಡ್ಡಪಟ್ಟಣ. ಇಲ್ಲಿ ಸರ್ವೋತ್ಕೃಷ್ಟವಾದ ಹೊಗೆಯಸುತ್ತುಗಳು ತಯಾರಾಗುತ್ತವೆ.

ತ್ರಿಂಕೋಮಲಿ—ಸಿಂಹಳದ್ವೀಪದ ಪ್ರಸಿದ್ಧವಾದ ಬಂದರ್.

IV (*a*) ಕೋಲಾರ, ಹಾಸನ, ಶಿವಮೊಗ್ಗ, ಚಿತ್ರದುರ್ಗ,

(*b*) ಕಂಬಳಿಗಳು-ಚಿತ್ರದುರ್ಗ, ದಾವಣಗೆರೆ, ಮಂಡ್ಯ ಕೋಲಾರಗಳಲ್ಲಿ ರೇಷ್ಮೆಯನೂಲು (ರೇಷ್ಮೆಯದಾರ) ಚನ್ನಪಟ್ಟಣ, ಯಳಂದೂರುಗಳಲ್ಲಿ; ಗಂಧದ ಸಾಮಾನುಗಳು—ಸೊರಬ ಸಾಗರಗಳಲ್ಲಿ; ಲಾಕ್ಬಣ್ಣದ ಸಾಮಾನುಗಳು—ಚನ್ನಪಟ್ಟಣದಲ್ಲಿ; ರತ್ನಗಂಬಳಿಗಳು—ಬೆಂಗಳೂರಿನಲ್ಲಿ;

ಎರಡನೆಯ ಭಾಗ.

I (೧) ಭೂಪ್ರದೇಶದಮೇಲೆ ಈ ಈ ಸ್ಥಳಗಳಲ್ಲಿ ಚಳಿಹೆಚ್ಚೆಂದೂ, ಈ ಈ ಸ್ಥಳಗಳಲ್ಲಿ ಸೆಕೆಹೆಚ್ಚೆಂದೂ ಮತ್ತು ಈ ಈ ಸ್ಥಳಗಳಲ್ಲಿ ಸೆಕೆ ಚಳಿಗಳು ಸಮ ವೆಂದೂ ತೋರಿಸುವುದಕ್ಕಾಗಿ ಭೂಗೋಳವನ್ನು ಪಂಚವಲಯಗಳಾಗಿ ವಿಭಾಗಿ ಸಿರುತ್ತಾರೆ. ಇವುಗಳಿಗೆ ವಲಯಗಳೆಂದು ಹೆಸರು.

(೨) ಪಂಚವಲಯಗಳು—ಉತ್ತರ ಶೀತವಲಯ, ಉತ್ತರ ಸಮಶೀತೋಷ್ಣವಲಯ, ಉಷ್ಣವಲಯ, ದಕ್ಷಿಣಸಮಶೀತೋಷ್ಣವಲಯ, ದಕ್ಷಿಣವಲಯ;

(೩) ಭೂಮಧ್ಯರೇಖೆಯು ಉಷ್ಣವಲಯದಲ್ಲಿ ಹಾದುಹೋಗುವುದು.

(೪) ಭೂಮಿಯು ಗುಂಡಾಗಿರುವುದಕ್ಕೆ ಕಾರಣ.

ಭೂಪ್ರದಕ್ಷಿಣೆ—ಜನರು ಯಾವುದಾದರೊಂದು ದೇಶದಿಂದ ಒಂದುದಿಕ್ಕನ್ನು ಹಿಡಿದು ಹೊರಟು ಮತ್ತೆಹಿಂತಿರುಗದೆ ಅದೇ ದಿಕ್ಕಿನಲ್ಲಿಯೇ ಪ್ರಯಾಣ ಮಾಡುತ್ತಾ ಬಂದರೆ ಕೊನೆಗೆ ಬಿಟ್ಟದೇಶಕ್ಕೇನೇ ಬಂದು ಸೇರುವರು. ಭೂಮಿಯು ಗುಂಡಾಗಿಲ್ಲದೆ ಇದ್ದಲ್ಲಿ ಹೀಗೆ ಬಂದು ಸೇರುವುದು ಅಸಾಧ್ಯ

II (೧) ಸೈಬೀರಿಯ ದೇಶವು ಉತ್ತರಸೀತವಲಯದಲ್ಲಿದೆ. ವಿಪರೀತವಾದ ಶೈತ್ಯದ ದೆಸೆಯಿಂದ ನದಿಗಳಲ್ಲಿ ನೀರು ಗಡ್ಡೆಕಟ್ಟಿಕೊಳ್ಳುವುದು. ಇಲ್ಲಿಯ ವಿಪರೀತವಾದ ಶೈತ್ಯಕ್ಕೆ ಎರಡುಕಾರಣಗಳಿವೆ. (*i*) ಉತ್ತರದ ಮೇರುವಿನ ಕಡೆಯಿಂದ ಬೀಸುವ ಅತ್ಯಂತವಾದ ಶೀತಮಾರುತಗಳನ್ನು ತಡೆಯುವುದಕ್ಕೆ ಉತ್ತರಭಾಗದಲ್ಲಿ ಪರ್ವತಶ್ರೇಣಿಗಳು ಇಲ್ಲ. (*ii*) ಉಷ್ಣವಲಯದಕಡೆಯಿಂದ ಬೀಸುವ ಉಷ್ಣಮಾರುತವನ್ನು ತಡೆಯುವ ಉನ್ನತಪರ್ವತಗಳೂ ಪ್ರಸ್ಥಭೂಮಿಗಳೂ ದಕ್ಷಿಣದಲ್ಲಿ ಅಗಾಧವಾಗಿವೆ. ಅದರಲ್ಲಿಯೂ ವರ್ಖೋಯಾನ್ಸ್ಕ ಎಂಬ ಸ್ಥಳದಲ್ಲಿ ಪ್ರಪಂಚದಲ್ಲಿ ಇನ್ನೆಲ್ಲಿಯೂ ಇಲ್ಲದ ಅತ್ಯಂತ ಶೈತ್ಯವು

ಕಾಣಬರುವುದು. ಹೀಗೆ ಶೈತ್ಯಾಧಿಕ್ಯದ ದೆಸೆಯಿಂದ ನೀರು ಘನೀಭೂತವಾಗುವುದರಿಂದ ಸೈಬೀರಿಯದ ನದಿಗಳು ಹಡಗಿನ ಪ್ರಯಾಣಕ್ಕೆ ಅನುಕೂಲವಾದುವುಗಳಲ್ಲ.

(೨) ನದಿಯ ಪಾತ್ರ—ನದಿಯ ನೀರು ಹರಿಯುವ ಹಳ್ಳ.
ಜಲಪಾತ್ರ—ನದಿಯು ತನ್ನ ದಾರಿಯಲ್ಲಿ ತಗ್ಗಾಗಿರುವ ಸ್ಥಲಕ್ಕೆ ಧುಮುಕುವುದು.
ಭೂಸಂಧಿ—ಹೆಚ್ಚು ವಿಸ್ತೀರ್ಣವುಳ್ಳ ಎರಡು ಭೂಮಿಗಳನ್ನು ಕೂಡಿಸುವ ಇಕ್ಕಟ್ಟಾದ ಭೂಮಿ.

III (೧) ಗುಡ್‌ಹೋಪ್ ಭೂಶಿರ. (೨) ಟೌಲಾನ್, ಷೆರ್‌ಬರ್ಗ್, (೩) ಖಾರ್ಟೂಂ, (೪) ಜರ್ಮನ್ ಸಮುದ್ರ ಮತ್ತು ಅಟ್ಲಾಂಟಿಕ್ ಸಾಗರಗಳು, (೫) ಡ್ಯಾನ್ಯೂಬ್. (೬) ವಿಕ್ಟೋರಿಯ, ನ್ಯೂಸೌತ್‌ವೇಲ್ಸ್, ಕ್ವೀನ್ಸ್‌ಲೆಂಡ್, ದಕ್ಷಿಣ ಆಸ್ಟ್ರೇಲಿಯ ಮತ್ತು ಪಶ್ಚಿಮ ಆಸ್ಟ್ರೇಲಿಯ, (೭) ಸ್ಯಾನ್‌ಫ್ರಾನ್‌ಸಿಸ್ಕೋ.

IV ಈಜಿಪ್ಟ ಉಷ್ಣವಲಯದಲ್ಲಿರುವಂತೆ ಸಿಂಧುದೇಶವು ಉಷ್ಣವಲಯದಲ್ಲಿದೆ.

ಈಜಿಪ್ಟಿನಲ್ಲಿ ಲಿಬಿಯನ್ ಮೊದಲಾದ ಮರುಭೂಮಿಗಳಿರುವಂತೆ ಸಿಂಧುದೇಶದಲ್ಲಿಯೂ ಮರಳುಕಾಡುಗಳಿವೆ.

ಈಜಿಪ್ಟ್‌ದೇಶಕ್ಕೆ ನೈಲ್‌ನದಿ ಮುಖ್ಯಪ್ರಾಯವಾಗಿದೆ. ಸಿಂಧುದೇಶಕ್ಕೆ ಸಿಂಧುನದಿ ಮುಖ್ಯಪ್ರಾಯವಾಗಿದೆ.

ಈಜಿಪ್ಟ್‌ದೇಶವು ಮೇಲಣ ಈಜಿಪ್ಟ್, ಕೆಳಗಣ ಈಜಿಪ್ಟ್ ಎಂದು ಭಾಗವಾಗಿರುವುದು; ಸಿಂಧುದೇಶವು ಮೇಲಣ ಸಿಂಧುಪ್ರಾಂತ ಕೆಳಗಣ ಸಿಂಧುಪ್ರಾಂತ ಎಂದು ಎರಡು ಭಾಗವಾಗಿರುವುದು.

ಈಜಿಪ್ಟಿನಲ್ಲಿ ಮಳೆಹುಯ್ಯುವುದು ಅಪೂರ್ವ. ಸಿಂಧುದೇಶದಲ್ಲಿ ಮಳೆಹುಯ್ಯುವುದು ಅಪರೂಪ.

ಈ ಕಾರಣಗಳಿಂದ ಸಿಂಧುದೇಶವನ್ನು 'ಚಿಕ್ಕ ಈಜಿಪ್ಟ್' ಎಂದು ಕರೆಯಬಹುದು

V (೧) ಲಿಮರಿಕ್—ಷಾನನ್ ನದೀ ಮುಖದಲ್ಲಿದೆ. ಐರ್ಲೆಂಡಿನಲ್ಲಿ ರೇವುಪಟ್ಟಣ ಮತ್ತು ವ್ಯಾಪಾರಸ್ಥಳ. ಇಲ್ಲಿ ಸರಿಗೆ (ಕಲಾಪತ್ತು) ತಯಾರಾಗುತ್ತದೆ.

(೨) ನ್ಯೂಆರ್ಲಿಯನ್ಸ್—ಮಿಸಿಸಿಪ್ಪಿ ನದೀ ಮುಖಕ್ಕೆ ನೂರುಮೈಲಿ ದೂರದಲ್ಲಿದೆ. ಇಲ್ಲಿ ನಡೆಯುವಷ್ಟು ಹತ್ತಿಯ ವ್ಯಾಪಾರವು ಪ್ರಪಂಚದಲ್ಲಿ ಇನ್ನೆಲ್ಲಿಯೂ ನಡೆಯುವುದಿಲ್ಲ. ಸಕ್ಕರೆಯ ವ್ಯಾಪಾರವೂ ಹೆಚ್ಚು.

(೩) ಜಿನೀವ—ಸ್ವಿಟ್ಜರ್ಲೆಂಡಿನಲ್ಲಿದೆ; [illegible] ಗಡಿಯಾರಗಳು

ತೇಯೂರಾಗುವಸ್ಥಳ.

(೪) ವಿಹೇಗ್—ಹಾಲೆಂಡಿನಲ್ಲಿದೆ. ರಾಜನು ವಾಸವಾಗಿರುವ ಪಟ್ಟಣ. ಹೋಜಕ್ಕೆ ಪ್ರಸಿದ್ಧವಾಗಿದೆ.

(೫) ಫೆಜ್—ಮೊರಾಕೊದೇಶದಲ್ಲಿದೆ. ಬರ್ಬರ ಸಂಸ್ಥಾನದಲ್ಲಿ ಇದು ಬಹು ದೊಡ್ಡಪಟ್ಟಣವಾಗಿಯೂ, ಮಹಮ್ಮದೀಯರಿಗೆ ಯಾತ್ರಾಸ್ಥಳವಾಗಿಯೂ ಇದೆ. ಇಲ್ಲಿ ಹೆಚ್ಚು ವ್ಯಾಪಾರವು ನಡೆಯುವುದು. ತೊಗಲಿಗೆ ಬಹುಸೊಗಸಾಗಿ ಹದ ವನ್ನು ಕೊಟ್ಟು ಮೃದುವಾಗಿ ಮಾಡುವ ಕಾರ್ಖಾನೆಗಳು ಅನೇಕವಾಗಿವೆ.

(೬) ಗ್ಲ್ಯಾಸ್‌ಗೋ—ಸ್ಕಾಟ್ಲೆಂಡಿನಲ್ಲಿದೆ. ಇಲ್ಲಿ ಕಬ್ಬಿಣ, [illegible] ಗಾ

[illegible] ಮತ್ತು ಹ[illegible] ಗ

[illegible]

1903

೧ ನೆಯ ಭಾಗ.

I ಈ ಕೆಳಗೆ ಬರೆದಿರುವುಗಳನ್ನು ತಿಳಿಸಿರಿ.

(೧) ಇಂಡಿಯಾದೇಶದಲ್ಲಿ, ಅತ್ಯಧಿಕ ಮಳೆ ಬೀಳುವಸ್ಥಳ.

(೨) ಮೂರು ಆಧಿಪತ್ಯಗಳಲ್ಲಿಯೂ ಒಂದೊಂದು ಪ್ರಸಿದ್ಧವಾದ ಆರೋಗ್ಯಸ್ಥಳ.

(೩) ಬೊಂಬಾಯಿ ಆಧಿಪತ್ಯದಲ್ಲಿ ಗುಹಾಂತರ್ದೇವಾಲಯಗಳಿರುವ ಸ್ಥಳಗಳು.

(೪) ಪಶ್ಚಿಮೋಗ್ರ ಮತ್ತು ದಕ್ಷಿಣಾಗ್ರಭೂಶಿರಗಳು.

(೫) ,,ಯೂನಿವರ್ಸಿಟಿ,, ಎಂಬ ಸಕಲ ವಿದ್ಯಾಶಾಲೆಗಳಿರುವ ಪಟ್ಟಣಗಳು.

(೬) ಇಂಡಿಯಾಕ್ಕೂ ಸಿಂಹಳದ್ವೀಪಕ್ಕೂ ಮಧ್ಯೆ ಇರುವ ಜಲಸಂಧಿಗಳು.

II ನಂದೀದುರ್ಗ, ಆಸ್ಸಾಂ, ಢಾಕಾ, ರೂರ್ಕಿ, ಬಾಕರ್‌ಗಂಜ್ ನೆಲ್ಲೂರು, ಆಬು—ಇವು ಎಲ್ಲಿವೆ? ಏತಕ್ಕೆ ಪ್ರಸಿದ್ಧವಾಗಿವೆ?

III (*a*) ಮೈಸೂರು ಸಂಸ್ಥಾನದ ಮೇರೆಗಳನ್ನು ತಿಳಿಸಿರಿ.

(*b*) ಈ ಸಂಸ್ಥಾನದಲ್ಲಿ (೧) ದೊರೆಯುವ ಖನಿಜಗಳು; (೨) ಎರಡು ಪ್ರಸಿದ್ಧವಾದ ಜಲಪಾತಗಳು; (೩) ಬಹು ದೊಡ್ಡಕೆರೆ; (೪) ಜೈನರ ಯಾತ್ರಾಸ್ಥಳ; (೫) ಪಿತ್ತಾಳೆಯ ಪಾತ್ರೆಗಳು ತಯಾರಾಗುವಸ್ಥಳಗಳು ಯಾವುವು?

IV (೧) ಸಿಂಹಳದ್ವೀಪದಲ್ಲಿ ಪ್ರಸಿದ್ಧವಾದ ಬಂದರು ಯಾವುದು?

(೨) ಪಂಜಾಬಿನಲ್ಲಿ ಲಷ್ಕರ್‌ಸ್ಥಳಗಳು ಯಾವುವು?

(೩) ಬರ್ಮಾದೇಶದಲ್ಲಿ ವಿಶೇಷ ಭತ್ತ ಬೆಳೆಯುವ ಪ್ರದೇಶವು ಯಾವುದು?

(೪) ಇಂಡಿಯಾದೇಶದಲ್ಲಿ ರಾಣಿಯ ಆಳ್ವಿಕೆಯಲ್ಲಿರುವ ಆಶ್ರಿತ ಸಂಸ್ಥಾನವು ಯಾವುದು?

೨ ನೆಯ ಭಾಗ

I (*a*) ಚಂದ್ರಗ್ರಹಣದಿಂದ ಭೂಮಿಯಆಕಾರವು ಹೇಗಿರುವುದೆಂದು ನಿರ್ಧರಿಸಬಹುದು? ಸಕಾರಣವಾಗಿ ಬರೆಯಿರಿ.

(*b*) ಲಂಡನ್ಪಟ್ಟಣದಲ್ಲಿ ಮಧ್ಯಾಹ್ನವಾಗಿರುವಾಗ ಕಲ್ಕತ್ತಾಪಟ್ಟಣದಲ್ಲಿ ಸಾಯಂಕಾಲ ೬ ಘಂಟೆಯಾಗಿರುವುದು. ಈ ಕಾಲವ್ಯತ್ಯಾಸಕ್ಕೆ ಕಾರಣವೇನು?

II (*a*) ಪ್ರಸ್ಥಭೂಮಿ, ಭೂಕಂಠ, ರೇಖಾಂಶವೃತ್ತ ಇವುಗಳನ್ನು ವಿವರಿಸಿ.

(*b*) ಸಮಶೀತೋಷ್ಣವಲಯದ ಭೂಮ್ಯುತ್ಪನ್ನಗಳು ಯಾವುವು?

III ಇವುಗಳ ಹೆಸರುಗಳನ್ನು ಮಾತ್ರಬರೆಯಿರಿ:—

(೧) ಏಷ್ಯಾಮತ್ತು ಅಮೇರಿಕ ಖಂಡಗಳನ್ನು ಪ್ರತ್ಯೇಕಿಸತಕ್ಕ ಜಲಸಂಧಿ.

(೨) ಪೃಥ್ವಿಯಲ್ಲಿ ಅತ್ಯಂತ ಕ್ಷಾರವುಳ್ಳ ಸರೋವರ.

(೩) ಆಫ್ರಿಕಾಖಂಡದ ಅತ್ಯುನ್ನತ ಶಿಖರ.

(೪) ಆಸ್ಟ್ರೇಲಿಯಾಖಂಡದ ಕಾಲೋನಿ (ರಾಜಕೀಯ ವಿಭಾಗಗಳು.)

(೫) ಫ್ರಾಂಚದಲ್ಲೆಲ್ಲಾ ಅತ್ಯಂತ ವಿಸ್ತಾರವಾದ ಸರೋವರ

(೬) ಇಟಲಿಯಲ್ಲಿರುವ ಒಂದು ಅಗ್ನಿಪರ್ವತ.

IV ಜಪಾನ್ ದ್ವೀಪಸ್ತೋಮಕ್ಕೂ ಬ್ರಿಟಿಷ್ ದ್ವೀಪಸ್ತೋಮಕ್ಕೂ ಇರುವ ಸಾಮ್ಯವೇನು?

V (೧) ಮ್ಯಾಂಚೆಸ್ಟರ್ (೨) ನಿಜ್ನಿನೊವಗರಾಡ್ (೩) ಟ್ಯೂನಿಸ್ (೪) ಕಿಂಬರ್ಲಿ (೫) ಚಿಕಾಗೊ ಇವುಗಳು ಎಲ್ಲಿವೆ ಮತ್ತು ಏತಕ್ಕೆ ಪ್ರಸಿದ್ಧಿಗೊಂಡಿವೆ?

ಉತ್ತರಗಳು.

೧ ನೆಯ ಭಾಗ.

I (೧) ಚಿರಾಪುಂಜಿ,

(೨) ಮದರಾಸು ಆಧಿಪತ್ಯದಲ್ಲಿ ಉದಕಮಂಡಲ, ಬೊಂಬಾಯಿ ಆಧಿಪತ್ಯದಲ್ಲಿ ಮಹಾಬಲೇಶ್ವರ, ಬಂಗಾಳ ಆಧಿಪತ್ಯದಲ್ಲಿ ಡಾರ್ಜಿಲಿಂಗ್;

(೩) ಎಲ್ಲೋರ, ಅಜಂಟ;

(೪) ಪಶ್ಚಿಮಾಗ್ರಭೂಶಿರ, ಮಾನ್ಸ್; ದಕ್ಷಿಣಾಗ್ರಭೂಶಿರ ಕನ್ಯಾಕುಮಾರಿ;

(೫) ಮದರಾಸು, ಬೊಂಬಾಯಿ, ಕಲ್ಕತ್ತ, ಪಂಜಾಬು, ಅಲಹಾಬಾದ್;

(೬) ಮನ್ನಾರ್ ಜಲಸಂಧಿ, ಪಾಕ್ ಜಲಸಂಧಿ.

II ನಂದೀದುರ್ಗ—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಚಿಕ್ಕಬಳ್ಳಾಪುರದ ತಾಲ್ಲೂಕಿಗೆ ೫ ಮೈಲ್ ದೂರದಲ್ಲಿದೆ. ಇದರಲ್ಲಿನ ಅಮೃತಸರೋವರವೆಂಬ ಕೊಳದನೀರು ಆರೋಗ್ಯಕರವಾಗಿ ಇರುತ್ತದೆ. ಇದು ಹವಾಕ್ಕೆ ಯೋಗ್ಯವಾದ ಸ್ಥಳವಾದುದರಿಂದ ಬೇಸಗೆಯಲ್ಲಿ ಅನೇಕ ದೊಡ್ಡಮನುಷ್ಯರು ಬಂದು ವಾಸಿಸುತ್ತಾರೆ.

ಕುಣಿಗಲ್—ತುಮಕೂರು ಡಿಸ್ಟ್ರಿಕ್ಟ್‌ನಲ್ಲಿದೆ. ಕುದುರೆಗಳನ್ನು ಸಾಕುವ ಇಲಾಖೆ ಇದೆ.

ಅಸ್ಕ—ಮದರಾಸಾಧಿಪತ್ಯಕ್ಕೆ ಸೇರಿದ ಗಂಜಾಂಜಿಲ್ಲೆಯಲ್ಲಿದೆ. ಉತ್ತಮವಾದ ಸಕ್ಕರೆ ತಯಾರಾಗುತ್ತದೆ.

ಢಾಕಾ—ಬಂಗಾಳ ಅಧಿಪತ್ಯಕ್ಕೆ ಸೇರಿದೆ. ಇಲ್ಲಿ ಉತ್ಕೃಷ್ಟವಾದ ಮಜಲಿನ್ ಬಟ್ಟೆಗಳು ತಯಾರಾಗುತ್ತವೆ. ಇವುಗಳಿಗೆ "ನೆಯ್ದ ಗಾಳಿಯುಪರೆ," ಎಂಬ ಹೆಸರುಂಟಾಗಿದೆ.

ರೂರ್ಕಿ—ಮೀರಟ್ ಡಿವಿಜನ್ನಿನಲ್ಲಿದೆ. ಪ್ರಸಿದ್ಧವಾದ ಸಿವಿಲ್ ಇಂಜನಿಯರಿಂಗ್ ಕಾಲೇಜೊಂದಿದೆ.

ಬಾಕರ್‌ಗಂಜ್—ಢಾಕಾಡಿವಿಜನ್ನಿನಲ್ಲಿದೆ. ಈ ಡಿಸ್ಟ್ರಿಕ್ಟ್‌ನಲ್ಲಿ ಭತ್ತದ ವ್ಯಾಪಾರ ಹೆಚ್ಚು, "ಕಲ್ಕತ್ತೆಯ ಕಣಜ," ವೆಂಬ ಹೆಸರುಂಟಾಗಿದೆ.

ನೆಲ್ಲೂರು—ಮದರಾಸಾಧಿಪತ್ಯದಲ್ಲಿದೆ. ಇಲ್ಲಿಯ ದನಗಳು ಬಹಳ ಪ್ರಖ್ಯಾತವಾಗಿವೆ.

ಅಬು—ಅರಾವಳೀ ಪರ್ವತದಲ್ಲಿದೆ. ಅತ್ಯುನ್ನತ ಶಿಖರ.

III (*a*) ಉತ್ತರಕ್ಕೆ—ಧಾರ್ವಾಡ, ಬಳ್ಳಾರಿ, ಅನಂತಪುರ;

ಪೂರ್ವಕ್ಕೆ—ಕಡಪ, ಉತ್ತರಾರ್ಕಾಡು, ಮತ್ತು ಸೇಲಂ.

ದಕ್ಷಿಣಕ್ಕೆ—ಕೊಯಂಬತ್ತೂರು, ನೀಲಗಿರಿ, ಮತ್ತು ವೈನಾಡು;

ಪಶ್ಚಿಮಕ್ಕೆ—ಕೊಡಗು, ಕನ್ನಡರಾಜ್ಯಗಳು;

(*b*) (೧) ಕೋಲಾರ ಡಿಸ್ಟ್ರಿಕ್ಟಿನಲ್ಲಿ ಚಿನ್ನ; ಮಾಗಡಿ, ಮಳವಳ್ಳಿ, ಅರಸೀಕೆರೆ, ಹೆಗ್ಗಡದೇವನಕೋಟೆ, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಕಬ್ಬಿಣ; ಅತ್ತಿಕುಪ್ಪೆಯ ಸಮೀಪದಲ್ಲಿರುವ ಬೆಳ್ಳಿಯ ಬೆಟ್ಟದಲ್ಲಿ ಸ್ವಲ್ಪ ಬೆಳ್ಳಿ, ಕೆಲವು ಸ್ಥಳಗಳಲ್ಲಿ ಅಪೂರ್ವವಾಗಿ ಕೆಂಪುಗಳು ಸಿಕ್ಕುತ್ತವೆ. ಈ ದೇಶದಲ್ಲಿ ತಯಾರಾದ ಉಕ್ಕು ಸರ್ವೋತ್ಕೃಷ್ಟವಾದುದು.

(೨) ಗಂಗನಚುಕ್ಕಿ, ಬರಚುಕ್ಕಿ; (೩) ಸೂಳೆಯಕೆರೆ,

(೪) ಶ್ರವಣಬೆಳಗೊಳ.

(೫) ಬೇಲೂರು, ನಾಗಮಂಗಲ, ಶ್ರವಣಬೆಳಗೊಳ.

IV (೧) ಕೊಲಂಬೊ, (೨) ಮಿಯಾನ್‌ಮೀರ್, ಪೆಷಾವರ್, ಅಂಬಾಲಾ;

(೩) ಅರಕಾನ್ ಪ್ರಾಂತ್ಯ

(೪) ಮಧ್ಯದ ಇಂಡಿಯೊಳಗಿರುವ ಭೋಪಾಲ್ ಸಂಸ್ಥಾನ.

೨ ನೆಯ ಭಾಗ.

I (*a*) ಪೃಥ್ವಿಯ ನೆರಳು: ಪೃಥ್ವಿಯ ಛಾಯೆಯು ಚಂದ್ರಮಂಡಲದ ಮೇಲೆ ಬಿದ್ದಾಗ ಚಂದ್ರಗ್ರಹಣವಾಗುವುದು. ಹೀಗೆ ಬಿದ್ದ ನೆರಳಿನ ಅಂಚು ಗುಂಡಾಗಿರುವುದೆಂದು ತಿಳಿಯಬರುವುದು.

(*b*) ಮಧ್ಯಾಹ್ನರೇಖೆಯು ಪ್ರತಿಯೊಂದರ ಮೇಲೆಯೂ ಸೂರ್ಯನು ೨೪ ಗಂಟೆಗೊಂದಾವರ್ತಿ ಕಾಣಬರುವನಾದುದರಿಂದ ಭೂಗೋಳವು ೨೪ ಗಂಟೆಗಳಲ್ಲಿ ೩೬೦ ರೇಖಾಂಶಗಳಷ್ಟು ದೂರ ತಿರುಗುವುದು. ಆದುದರಿಂದ ಒಂದು ರೇಖಾಂಶದಷ್ಟು ದೂರ ತಿರುಗಬೇಕಾದರೆ ೪ ಮಿನಿಟು ಆಗುವುದು. ಭೂಗೋಳವು ಪಶ್ಚಿಮದಿಂದ ಪೂರ್ವಕ್ಕೆ ತಿರುಗುವುದರಿಂದ ಒಂದು ಸ್ಥಳದಲ್ಲಿ ಮಧ್ಯಾಹ್ನವಾಗಿರುವಾಗ ಅದರ ಪೂರ್ವರೇಖಾಂಶಗಳಲ್ಲಿ ಮಧ್ಯಾಹ್ನ ಕಳೆದುಹೋಗಿರುವುದು. ಪಶ್ಚಿಮರೇಖಾಂಶಗಳಲ್ಲಿ ಇನ್ನೂ ಮಧ್ಯಾಹ್ನವಾಗಿರುವುದಿಲ್ಲ. ಲಂಡನ್ನಿಗೆ ಕಲ್ಕತ್ತಾಪಟ್ಟಣವು ೯೦ ರೇಖಾಂಶಗಳಷ್ಟು ಪೂರ್ವದಲ್ಲಿದೆ. ೧ ರೇಖಾಂಶದಷ್ಟು ದೂರ ತಿರುಗಲು ೪ ಮಿನಿಟ್ ಆಗುವುದರಿಂದ ೩೬೦ ಮಿನಿಟ್ ಅಥವಾ ೬ ಗಂಟೆಗಳ ಕಾಲ ಹಿಡಿಯುವುದು. ಅಂದರೆ ಮಧ್ಯಾಹ್ನ ಕಳೆದು ೬ ಗಂಟೆ ಹೊತ್ತಾಗಿರುವುದು.

II. (*a*) ಪ್ರಸ್ಥಭೂಮಿ—ಸಮುದ್ರದ ಮಟ್ಟಕ್ಕೆ ಬಹಳ ಎತ್ತರವಾಗಿರುವ ಮೈದಾನಕ್ಕೆ ಹೆಸರು.

ಭೂಕಂಠ—ವಿಸ್ತಾರವಾದ ಎರಡು ಭೂಭಾಗಗಳನ್ನು ಕೂಡಿಸುವ ಇಕ್ಕಟ್ಟಾದ ಭೂಮಿ. ಇದಕ್ಕೆ ಭೂಸಂಧಿ ಎಂದು ಹೆಸರುಂಟು.

ರೇಖಾಂಶವೃತ್ತ—ದಕ್ಷಿಣೋತ್ತರ ಮೇರುಗಳ ಮೂಲಕವಾಗಿ ಭೂಗೋಳದ ಸುತ್ತಲೂ ಹೋಗುವ ವೃತ್ತಕ್ಕೆ ಹೆಸರು.

(*b*) ಗೋಧಿ, ಉರುಳುಗಡ್ಡೆ, ಜೋಳಗೋಧಿ, ಬೆಕ್ಕಗೋಧಿ, ಸೀಮೆಹಿಂಪ್ಪಿ, ಕಿತ್ತಳೆ, ದ್ರಾಕ್ಷೆ, ಭಾನವೃಕ್ಷ, ಪೀತದಾರು.

III (೧) ಬೇರಿಂಗ್ ಜಲಸಂಧಿ.

(೨) ಟಸ್ಕೋಲೀಲ್ ಸರೋವರ. (೩) ಕಿಲಿಮಾಂಜಾರೊ.

(೪) ವಿಕ್ಟೋರಿಯಾ, ನ್ಯೂಸೌತ್‌ವೇಲ್ಸ್, ಕ್ವೀನ್ಸ್‌ಲೆಂಡ್, ದಕ್ಷಿಣ

ಆಸ್ಟ್ರೇಲಿಯ, ಮತ್ತು ಪಶ್ಚಿಮ ಆಸ್ಟ್ರೇಲಿಯ.

(ಗ) ಸುಪೀರಿಯರ್ ಸರೋವರ. (ಘ) ವಿನಿಪೆಗ್.

IV ಜಪಾನ್‌ದ್ವೀಪಸಮೂಹವೂ, ಬ್ರಿಟಿಷ್‌ದ್ವೀಪಸಮೂಹವೂ, ಖಂಡಗಳೆರಡೂ ಸಾಗರಗಳ ಮಧ್ಯದಲ್ಲಿ ವ್ಯಾಪಾರಕ್ಕೆ ಬಹಳ ಅನುಕೂಲವಾದ ಸ್ಥಳಗಳಲ್ಲಿವೆ. ಇವೆರಡರಲ್ಲಿಯೂ ಲೋಹಸಮೃದ್ಧವಾದ ಮತ್ತು ಫಲವತ್ತಾದ ನೆಲವಿದೆ. ಇವೆರಡೂ ಸಾಹಸಿಗಳಾಗಿಯೂ, ಸುಗುಣಶಾಲಿಗಳಾಗಿಯೂ ಮಾಡಿ ನಾವಿಕರಾಗಿಯೂ ವಿದ್ಯಾಭಿವೃದ್ಧಿ ಬಯಸುವರಾಗಿಯೂ ಸ್ವಾತಂತ್ರ್ಯಪ್ರಿಯರಾಗಿಯೂ, ಇರುವ ಜನರಿಂದ ಕೂಡಿರುತ್ತವೆ. ಮತ್ತು ಅನೇಕ ತಗ್ಗುಳ್ಳ ತೀರಪಟ್ಟಣಗಳೂ, ಬಂದರುಗಳೂ ಇವೆ.

(ಅ) ಮ್ಯಾಂಚೆಸ್ಟರ್—ಇಂಗ್ಲೆಂಡಿನಲ್ಲಿ ಇರ್ವೆಲ್ ನದಿಯ ದಡದಲ್ಲಿದೆ. ಹತ್ತಿ ಗಿರಣಿಗಳ ವಿಷಯದಲ್ಲಿ ಇದಕ್ಕಿಂತ ವಿಶೇಷವಾದ ಪಟ್ಟಣ ಪೃಥ್ವಿಯಲ್ಲಿ ಇನ್ನೊಂದೂ ಇಲ್ಲ. ನೂಲಿನಬಟ್ಟೆಗಳು ವಿಶೇಷವಾಗಿ ತಯಾರಾಗುವುವು.

(ಆ) ನಿಜ್ನಿನಾಗರಾಡ್—ರಷ್ಯಾದಲ್ಲಿದೆ. ಇಲ್ಲಿ ಆಗುವಷ್ಟು ದೊಡ್ಡ ಸಂತೆ ಎಲ್ಲಿಯೂ ಆಗುವುದಿಲ್ಲ.

(ಇ) ಟ್ಯೂನಿಸ್—ಟ್ಯೂನಿಸ್ ದೇಶದ ರಾಜಧಾನಿ. ರೇಷ್ಮೆಯ ಮತ್ತು ಉಣ್ಣೆಯ ಬಟ್ಟೆಗಳು ತಯಾರಾಗುವ ಸ್ಥಳ. ಮಹಮ್ಮದೀಯರ ನಾಗರಿಕತೆಗೆ ಮುಖ್ಯವಾದ ಪಟ್ಟಣ. ಇದಕ್ಕೆ ಆಗ್ನೇಯದಲ್ಲಿ ಸುಮಾರು ೧೦ ಮೈಲಿಯ ದೂರದಲ್ಲಿ ಕ್ರಿ. ಶ. ಕ್ಕೆ ಮುಂಚೆ ಒಂಭತ್ತನೆಯ ಶತಮಾನದಲ್ಲಿ ಲೋಕಪ್ರಸಿದ್ಧವಾಗಿದ್ದ ಕಾರ್ಥೇಜ್ ಪಟ್ಟಣದ ಪಾಳುನೆಲವಿರುವುದು.

(ಈ) ಕಿಂಬರ್ಲಿ—ಪಶ್ಚಿಮಆಸ್ಟ್ರೇಲಿಯಾದಲ್ಲಿದೆ. ಮುಖ್ಯಪಟ್ಟಣ. ಸರ್ವೋತ್ಕೃಷ್ಟವಾದ ವಜ್ರಗಳು ಇಲ್ಲಿಂದ ರಫ್ತಾಗುವುವು.

(ಉ) ಚಿಕಾಗೋ—ಮಿಚಿಗನ್ ಸರೋವರದ ನೈರುತ್ಯ ತೀರದಲ್ಲಿದೆ. ಸಂಯುಕ್ತಸಂಸ್ಥಾನದಲ್ಲಿ ಜನಸಂಖ್ಯೆಯಲ್ಲಿ ಎರಡನೆಯ ಪಟ್ಟಣ. ಇದು ಬೆಳೆದಷ್ಟು ಜಾಗ್ರತೆಯಾಗಿ ಇನ್ನು ಯಾವಪಟ್ಟಣವೂ ಪೃಥ್ವಿಯಲ್ಲಿ ಬೆಳೆದಿಲ್ಲ. ಲಂಡನ್ನನ್ನು ಬಿಟ್ಟರೆ ಇಲ್ಲಿ ನಡೆಯುವಷ್ಟು ಧಾನ್ಯದ ವ್ಯಾಪಾರವು ಇನ್ನೆಲ್ಲಿ ನಡೆಯುವುದಿಲ್ಲ. ಇಲ್ಲಿಂದ ರೈಲ್ವೆಗಳೂ ಜಲಮಾರ್ಗಗಳೂ ಈ ಸಂಯುಕ್ತ ಸಂಸ್ಥಾನದ ಸಕಲ ಭಾಗಗಳಿಗೂ ಇವೆ. ಒಂದುಸಾವಿರ ರೈಲ್ವೆಟ್ರೇನುಗಳು ದಿನಂಪ್ರತಿಯೂ ಇಲ್ಲಿಗೆ ಬಂದುಹೋಗುವುವು.

1909

೧ ನೆಯ ಭಾಗ.

I (a) (೧) ಇಂಡಿಯಾದೇಶವು ಆಕಾರದಲ್ಲಿ ಹೇಗಿರುತ್ತೆ?

(೨) ಸಿಂಧು ಮತ್ತು ಗಂಗಾ ನದಿಗಳಲ್ಲಿ ಇತರ ಕಾಲಕ್ಕಿಂತ ಬೇಸಿಗೆಯಲ್ಲಿಯೇ ನೀರು ಹೆಚ್ಚಾಗಿ ಹರಿಯುವುದು. ಅದಕ್ಕೆ ಕಾರಣವೇನು?

(b) ಇವುಗಳನ್ನು ತಿಳಿಸಿರಿ

(೧) ಇಂಡಿಯಾದೇಶದ ಪ್ರಾಂತ್ಯದಲ್ಲ ನಾಲ್ಕು ಮುಖ್ಯ ರೇವು ಪಟ್ಟಣಗಳು.

(೨) ಈ ದೇಶದಲ್ಲಿ ಪಶ್ಚಿಮವಾಹಿನಿಯಾಗಿ ಹರಿಯುತಕ್ಕ ಎರಡು ನದಿಗಳು.

(೩) ಕಾವೇರಿನದಿಯತೀರದ ಐದುಪ್ರಸಿದ್ಧಪಟ್ಟಣಗಳು

(೪) ಇಂಡಿಯಾದೇಶದಲ್ಲಿ ಅಫೀಮು ಮತ್ತು ಅರಳೆ ವಿಶೇಷವಾಗಿ ಬೆಳೆಯುವ ಪ್ರದೇಶಗಳು.

II (a) (೧) ಮೈಸೂರು ದೇಶದಲ್ಲಿ ಅತ್ಯುನ್ನತವಾದ ಶಿಖರ ಯಾವುದು ಮತ್ತು ಅದರ ಎತ್ತರವೆಷ್ಟು?

(೨) ಈ ದೇಶದಿಂದ ರಫ್ತಾಗುವ ದಿನಸುಗಳನ್ನು ಹೇಳಿರಿ

(೩) ಈ ದೇಶದ ವ್ಯಾಪಾರವು ಹೆಚ್ಚದೆ ಇರಲು ಕಾರಣವೇನು?

(೪) ಚಿತ್ರದುರ್ಗ ಡಿಸ್ಟ್ರಿಕ್ಟಿನ ತಾಲ್ಲೂಕುಗಳನ್ನು ತಿಳಿಸಿ.

(೫) ಈ ದೇಶದಲ್ಲಿ ಗಂಧದ ಸಾಮಾನಿಗೂ ಕಂಬಳಿಗೂ ಪ್ರಸಿದ್ಧವಾದ ಸ್ಥಳಗಳು ಯಾವುವು

(೬) ಬೆಂಗಳೂರಿಂದ ಮೈಸೂರಿನವರಿಗೆ ಸಿಕ್ಕುವ ರೈಲ್ವೆಸ್ಟೇಷನ್ಗಳನ್ನು ತಿಳಿಸಿ.

(b) ಕೊಡಗು ದೇಶದ ಆಡಳಿತವು ಯಾವ ಅಧಿಕಾರಿಯ ವಿಚಾರಣೆಯಲ್ಲಿದೆ?

III (a) ಹೊನ್ನವಳ್ಳಿ, ಎಲಿಫೆಂಟ, ಅಹಮ್ಮದಾಬಾದ್, ನಾಗಲ್ ಮತ್ತು ಅಮರಾವತಿ ಇವು ಎಲ್ಲಿವೆ ಮತ್ತು ಏತಕ್ಕೆ ಪ್ರಸಿದ್ಧಗೊಂಡಿವೆ?

(b) ಅರಮನೆಗಳ ಊರು ಯಾವುದು? ಈ ಹೆಸರು ಹೇಗೆ ಬಂತು?

IV (a) ಮಧ್ಯಪ್ರಾಂತ್ಯಗಳು, ಒರಿಸ್ಸ, ಕೊಚ್ಚಿ, ಮತ್ತು ಕಾಶ್ಮೀರ ಇವುಗಳ ರಾಜಧಾನಿಗಳು ಯಾವುವು?

(b) (೧) ಸಿಂಹಳ ದ್ವೀಪದ ಖನಿಜಗಳು ಯಾವುವು?

(೨) ಮದರಾಸ್ ಆಧಿಪತ್ಯಕ್ಕೆ ಸೇರಿದ ಆಶ್ರಿತ ಸಂಸ್ಥಾನಗಳನ್ನು ತಿಳಿಸಿ.

(೩) ಮಳೆಯಾಳದಲ್ಲಿ ವಿಶೇಷವಾಗಿ ಆಗುವ ಬೆಳೆಗಳು ಯಾವುವು?

೨ನೆಯ ಭಾಗ.

I (a) ಭೂಗೋಳದ ಮುಖ್ಯ ಎರಡು ಚಲನೆಗಳಾವುವು? ನಿದರ್ಶನದೊಡನೆ ಬರೆಯಿರಿ.

(b) ಒಂದುದೇಶದ ವಾಯುಗುಣವನ್ನು ನಿರ್ಧರಿಸಲು ನೆನಪಿನಲ್ಲಿಡಬೇಕಾದ ಮುಖ್ಯಸಂಗತಿಗಳ್ಯಾವುವು?

(c) ಮೆಲ್‌ಬೋರ್ನ್ ಪಟ್ಟಣದಲ್ಲಿ ಸಾಯಂಕಾಲ ೫ ಘಂಟೆಗೆ ಪ್ರಕಟಿಸಿದ ಒಂದಾನೊಂದು ಕುದುರೆ ಜೂಜಿನ ಫಲಿತಾಂಶವು ತಂತಿಯಮೂಲಕ ಅದೇದಿನ ಮಧ್ಯಾಹ್ನ ೧ ಘಂಟೆಗೆ ಲಂಡನ್ ಪಟ್ಟಣಕ್ಕೆ ಮುಟ್ಟಿತು. ಇದುಹೇಗೆ?

II (a) ಅಟ್ಲಾಂಟಿಕ್ ಸಾಗರದ ಪೂರ್ವ ಪಶ್ಚಿಮ ತೀರಗ

ಳಲ್ಲಿರುವ ಭೂಭಾಗಗಳು ಮತ್ತು ಆ ಸಾಗರದಲ್ಲಿರುವ ಮುಖ್ಯ ದ್ವೀಪಗಳು ಯಾವುವು?

(b) ಅಳಿವೆ, ಜಲಾನಯನಭೂಮಿ, ನದೀಮುಖಜಭೂಮಿಗಳೆಂದರೇನು?

III ಇವುಗಳ ಹೆಸರುಗಳನ್ನು ಮಾತ್ರ ತಿಳಿಸಿರಿ:—

(೧) ಆಫ್ರಿಕ ಮತ್ತು ಯುರೋಪ್ ಖಂಡಗಳನ್ನು ಪ್ರತ್ಯೇಕಿಸುವ ಜಲಸಂಧಿ.

(೨) ಮಿಸೂರಿ ಮಿಸಿಸಿಪಿ ನದಿಗಳ ಸಂಗಮದಲ್ಲಿರುವ ಪಟ್ಟಣ.

(೩) ಕಪ್ಪುಸಮುದ್ರಕ್ಕೆ ಬೀಳುವ ನದಿಗಳು.

(೪) ಆಸ್ಟ್ರೇಲಿಯಾ ಖಂಡದಲ್ಲಿ ಚಿನ್ನದ ಗಣಿಗಳಿರುವ ಪಟ್ಟಣಗಳು.

(೫) ಇಂಗ್ಲಂಡಿನಲ್ಲಿಉಣ್ಣೆಬಟ್ಟೆಗಳು ತಯಾರಾಗುವಸ್ಥಳಗಳು

IV ಜರ್ಮನ್ ರಾಜ್ಯದಲ್ಲಿ ಕೆಳಗೆ ಕೇಳಿರುವ ಸಂಗತಿಗಳನ್ನು ಹೇಳಿರಿ:—

(೧) ವಿಭಾಗಗಳು, (೨) ವಾಯುಗುಣ, (೩) ಕೈಗಾರಿಕೆಗಳು, (೪) ರಾಜ್ಯಭಾರಕ್ರಮ, (೫) ಭೂಮ್ಯುತ್ಪನ್ನಗಳು, (೬) ರೈಲುಪಟ್ಟಣಗಳು.

ಇವು ಎಲ್ಲಿವೆ? ಏತಕ್ಕೆ ಪ್ರಸಿದ್ಧವಾಗಿವೆ?:—

(೧) ಲಿವರ್‌ಪೂಲ್, (೨) ಚಿಕಾಗೋ, (೩) ಕಿಂಬರ್ಲಿ (೪) ಜಿನೀವ, (೫) ಸಿಂಗಪುರ, (೬) ಹವನ್ನ.

ಉತ್ತರಗಳು.

೧ ನೆಯ ಭಾಗ,

I (a) (೧) ಆಕಾರದಲ್ಲಿ ಇಂಡಿಯಾದೇಶವು ದಕ್ಷಿಣಕ್ಕೆ ಶಿರಸ್ಸುಳ್ಳ ಒಂದು ತ್ರಿಕೋಣದಂತಿದೆ.

(೨, ಸಿಂಧೂ, ಗಂಗಾನದಿಗಳ ಉತ್ಪತ್ತಿಸ್ಥಾನವು ಮಂಜುಳ್ಳ ಹಿಮಾ

ಲಹುಪರ್ವತಗಳು ಇಲ್ಲಿ ಚಳಿಗಾಲದಲ್ಲಿ ಮಂಜುಗಡ್ಡೆಕಟ್ಟಿಕೊಂಡು ನದಿಗ ಳಲ್ಲಿ ನೀರು ಕಡಿಮೆ ಹರಿಯುತ್ತದೆ. ಬೇಸಿಗೆಯಲ್ಲಿ ಮಂಜಿನ ಗಡ್ಡೆಗಳೆಲ್ಲಾ ಶೀಘ್ರವಾಗಿ ಕರಗಿ ನೀರು ಹೆಚ್ಚಾಗಿ ಹರಿಯುವುದು.

(*b*) (೧) ಕಲ್ಕತ್ತಾ, ರಾಜಮಹೇಂದ್ರ, ಮಚ್ಚಲೀಬಂದರು, ಮದರಾಸು.

(೨) ನರ್ಮದಾ, ತಪತಿ.

(೩) ಶ್ರೀರಂಗಪಟ್ಟಣ, ಈರೋಡು, ತಿರುಚನಾಪಲ್ಲಿ, ಶಿವಸಮುದ್ರ, ಎಡತೊರೆ.

(೪) ಬೊಂಬಾಯಿನ ಸುತ್ತಲೂ, ಮಧ್ಯಪ್ರಾಂತ್ಯಗಳಲ್ಲಿಯೂ, ಒರಸ್ಸೆ ಮಾಳವ, ಬಿಹಾರಗಳಲ್ಲಿ ಅಫೀಮು ಬೆಳೆಯುವುದು ಹೆಚ್ಚು.

II (*a*) (೧) ಮುಳ್ಳಯ್ಯನಗಿರಿ. ೬೩೧೭ ಅಡಿ ಎತ್ತರ.

(೨) ಅಡಕೆ, ಕಾಫಿ, ರಾಗಿ, ಅಕ್ಕಿ, ಶ್ರೀಗಂಧ, ರೇಷ್ಮೆ, ಏಲಕ್ಕಿ, ಮೆಣಸು ಮತ್ತು ಚಿನ್ನ.

(೩) ಮೈಸೂರು ದೇಶದಲ್ಲಿ ಕೃಷಿಯೇ ಮುಖ್ಯವಾದ ಕಸಬಾಗಿರುವು ದರಿಂದಲೂ. ಈ ದೇಶಕ್ಕೆ ತೀರಪ್ರದೇಶವಿಲ್ಲದಿರುವುದರಿಂದಲೂ ಈ ದೇಶದ ವ್ಯಾ ಪಾರವು ಹೆಚ್ಚುವದಿಲ್ಲ.

(೪) ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆ, ದಾವಣ ಗೆರೆ, ಜಗಳೂರು, ಮೊಳಕಾಲ್ಮುರು, ಮತ್ತು ಹೊಸದುರ್ಗ, ಹರಿಹರ ಎಂಬು ವು ಸಬ್‌ತಾಲ್ಲೂಕುಗಳು.

(೫) ಗಂಧದಮರದವ್ಯಾಪಾರ—ಸೊರಬ, ಸಾಗರ.

ಕಂಬಳಿ—ದಾವಣಗೆರೆ, ಕೋಲಾರ, ಮಂಡ್ಯ, ಚಿತ್ರದುರ್ಗ.

(೬) ಬೆಂಗಳೂರು, ಕೆಂಗೇರಿ, ಬಿಡದಿ, ಕ್ಲೋಸ್‌ಪೇಟೆ, ಚನ್ನಪಟ್ಟ ಣ, ಸೆಟ್ಟಹಳ್ಳಿ, ಮದ್ದೂರು, ಮಂಡ್ಯ, ಎಲಿಯೂರು, ಫ್ರೆಂಚ್‌ರಾಕ್ಸ್, ಶ್ರೀರಂ ಗಪಟ್ಟಣ, ಪಶ್ಚಿಮವಾಹಿನಿ, ಮೈಸೂರು

(*b*) ಕೊಡಗ ದೇಶದ ಆಡಳಿತವು ಮೈಸೂರುದೇಶದಲ್ಲಿರುವ ರೆಸಿಡೆಂಟ ರವರ ವಶದಲ್ಲಿದೆ. ಇವರೇ ಈ ದೇಶಕ್ಕೆ ಚೀಫ್ ಕಮೀಷನರಾಗಿದಾರೆ.

III (*a*) ಹೊನ್ನವಳ್ಳಿ. ತಿಪಟೂರು, ತಾಲ್ಲೂಕಿನಲ್ಲಿದೆ. ಇಲ್ಲಿ ಆಗುವ ಗಂಗಾ ಪಾಣಿ ಎಂಬ ತೆಂಗಿನಕಾಯಿಗಳ ನೀರು ಬಹಳ ರುಚಿಕರವಾಗಿರುವುದು.

ಎಲಿಫಾಂಟ್ಸ್—ಬೊಂಬಾಯಿಹತ್ತಿರವಿದೆ. ಇಲ್ಲಿ ಬಹು ಪ್ರಸಿದ್ಧವಾದ ಗುಹಾಂತ ರ್ದೇವಾಲಯಗಳಿವೆ.

ಅಹಮ್ಮದಾಬಾದ್—ಬೊಂಬಾಯಿಯಾಧಿಪತ್ಯದ ಉತ್ತರಭಾಗದಲ್ಲಿದೆ. ಇದು ಪೂರ್ವ

ಕಾಲದಲ್ಲಿ ಗುಜರಾತಿನ ನವಾಬರ ರಾಜಧಾನಿಯಾಗಿತ್ತು.

ಗಿರ್ನಾರ್—ಇದು ಕಚ್ ಕಾಥ್ಯವಾಡಿ ದೇಶಗಳಲ್ಲಿದೆ. ಪ್ರಸಿದ್ಧವಾದ ಗುಡ್ಡ.

ಅಮರಾವತಿ—ಇಲ್ಲಿ ಬೀರಾರಿನಲ್ಲಿದೆ ಇದು ಹತ್ತಿಯ ವ್ಯಾಪಾರಕ್ಕೆ ಹೆಸರಾಗಿದೆ.

(*b*) ಕಲ್ಕತ್ತ—ಅರಮನೆಗಳಂತಿರುವ ಮನೆಗಳು ಈ ಪಟ್ಟಣದಲ್ಲಿ ಬಹು ವಿಶೇಷವಾಗಿರುವುದರಿಂದ ಅರಮನೆಗಳ ಊರು ಎಂಬ ಹೆಸರು ಬಂದಿದೆ.

IV (*a*) ಮಧ್ಯಪ್ರಾಂತ್ಯಗಳು—ರಾಜಧಾನಿ ನಾಗಪುರ.

ಒರಿಸ್ಸ— ಕಟಕ್.

ಕೊಚ್ಚಿ— ಎರ್ನಾಕುಲ.

ಕಾಶ್ಮೀರ— ಶ್ರೀನಗರ.

(*b*) (೧) ಕೆಂಪು, ವೈಡೂರ್ಯ, ಪುಷ್ಯರಾಗ ಮೊದಲಾದ ರತ್ನಗಳು ಮತ್ತು ಮುತ್ತುಗಳು.

(೨) ತಿರುವಾಂಕೋಡು, ಕೊಚ್ಚಿ. ಮತ್ತು ಪುದುಕೋಟೆ.

(೩) ಮೆಣಸು, ಶುಂಠಿ, ಏಲಕ್ಕಿ ಮತ್ತು ತೆಂಗಿನಕಾಯಿ.

೨ ನೆಯ ಭಾಗ.

I (*a*) ದೈನಂದಿನ ಚಲನೆ.—

ಹಗಲು ರಾತ್ರಿಗಳಾಗುವುದೇ ನಿದರ್ಶನ.

ವಾರ್ಷಿಕಚಲನೆ,—

ಸಂವತ್ಸರಗಳಾಗುವುದೇ ನಿದರ್ಶನ.

(*b*) ಅಕ್ಷಾಂಶದ ಸಂಖ್ಯೆ; ಸಮುದ್ರಮಟ್ಟಕ್ಕೆ ಎಷ್ಟು ಮೇಲಿದೆಯೋ ಆ ಎತ್ತರ; ಸಮುದ್ರಮಟ್ಟಕ್ಕೆ ಎಷ್ಟು ದೂರದಲ್ಲಿದೆಯೋ ಆದೂರ; ಸುತ್ತಮುತ್ತಲೂ ಇರುವ ದೇಶಗಳ ವಿವರ—ಎಂದರೆ ಅವುಗಳ ಎತ್ತರ ಅಲ್ಲಿನ ಮಳೆ ಮೊದಲಾದುವು; ಪ್ರದೇಶಕ್ಕೆ ಬೀಸುವ ಮಾರುತಗಳ ಅಥವಾ ಗಾಳಿಗಳ ವಿವರ; ಮರುಭೂಮಿಗಳು ನದಿಗಳು, ಪರ್ವತಗಳು, ಇದೆಯೋ ಇಲ್ಲವೇ; ಈ ಕಾರಣಗಳಿಂದ ವಾಯುಗುಣವನ್ನು ನಿರ್ಧರಿಸಬಹುದು.

(*c*) ೧೯೦೪- ನೇ ಇಸ್ವಿ ೨ ನೇಭಾಗ ೧ ನೇ ಪ್ರಶ್ನೆ (*b*) ಯಂತೆಯೇ—ಒಂದು ರೇಖಾಂಶದಷ್ಟು ದೂರ ತಿರುಗಬೇಕಾದರೆ ಭೂಗೋಳಕ್ಕೆ ೪ ಮಿನಿಟ್ ಬೇಕು. ಭೂಗೋಳವು ಪಶ್ಚಿಮದಿಂದ ಪೂರ್ವಕ್ಕೆ ತಿರುಗುವುದರಿಂದ ಒಂದು ಸ್ಥಳದಲ್ಲಿ ಮಧ್ಯಾಹ್ನ ೧ ಗಂಟೆಯಾಗಿರುವಾಗ ಅದರ ಪೂರ್ವರೇಖಾಂಶಗ

ಳಲ್ಲಿ ಮಧ್ಯಾಹ್ನ ೧ ಘಂಟೆ ಕಳೆದುಹೋಗಿರುವುದು. ಪಶ್ಚಿಮರೇಖಾಂಶಗಳಲ್ಲಿ ನಲ್ಲಿ ಮಧ್ಯಾಹ್ನ ೧ ಘಂಟೆಯಾಗಿರುವುದಿಲ್ಲ. ಲಂಡನ್‍ಗೆ ಮೆಲ್ಬೋರ್ನ್ ಪಟ್ಟಣವು ೬೦ ರೇಖಾಂಶಗಳಷ್ಟು ಪೂರ್ವದಲ್ಲಿದೆ. ೧ ರೇಖಾಂಶದಷ್ಟು ದೂರತಿರುಗಲು ೪ ಮಿನಿಟ್ ಆಗುವುದರಿಂದ ೨೪೦ ಮಿನಿಟ್ ಅಥವಾ ೪ ಘಂಟೆಗಳ ಕಾಲ ಹಿಡಿಯುವುದು. ಅಂದರೆ ಲಂಡನ್ ಪಟ್ಟಣದಲ್ಲಿ ಮಧ್ಯಾಹ್ನ ೧ ಘಂಟೆಯಾಗಿರುವಾಗ ಮೆಲ್ಬೋರ್ನ್ ಪಟ್ಟಣದಲ್ಲಿ ಸಾಯಂಕಾಲ (೧ + ೪) ೫ ಘಂಟೆಯಾಗಿರುತ್ತೆ.

II (*a*) ಅಟ್ಲಾಂಟಿಕ್ ಸಾಗರದ ಪೂರ್ವಭಾಗದ ಭೂಭಾಗಗಳು;—

ಯೂರೋಪ್ ಖಂಡದ ಪಶ್ಚಿಮಭಾಗದ ತೀರ.

ಆಫ್ರಿಕಾಖಂಡದ ಪಶ್ಚಿಮಭಾಗದ ತೀರ.

ಪಶ್ಚಿಮಭಾಗದ ಭೂಭಾಗಗಳು.

ಉತ್ತರ ಮತ್ತು ದಕ್ಷಿಣ ಅಮೆರಿಕಾಖಂಡಗಳ ಪೂರ್ವಭಾಗದತೀರ.

ಮುಖ್ಯದ್ವೀಪಗಳು;—

ಐಸ್ಲ್ಯಾಂಡ್, ಬ್ರಿಟಿಷ್‍ದ್ವೀಪಗಳು, ವೆಸ್ಟ್‍ಇಂಡಿಯಾದ್ವೀಪಗಳು, ಸೆಂಟ್‍ಹೆಲಿನಾ, ಅಸೆನ್‍ಷನ್, ಫಾಕ್ಲೆಂಡ್, ಮಡೀರ, ಕೆನೇರಿ, ವರ್ಡ್‍ದ್ವೀಪಸಮೂಹ, ನ್ಯೂಫೌಂಡ್ಲೆಂಡ್, ಆಂಟಿಕಾಸ್ಟಿ, ಪ್ರಿನ್ಸ್ ಎಡ್ವರ್ಡ್‍ದ್ವೀಪ.

(*b*) ಅಳಿವೆ—ನದಿಯ ಮುಖವು ಬಹಳ ಅಗಲವಾಗಿದ್ದರೆ ಆ ಪ್ರದೇಶಕ್ಕೆ ಕೆಲವು ವೇಳೆಗಳಲ್ಲಿ ಸಮುದ್ರದ ನೀರು ನುಗ್ಗಿಬರುವುದು. ಈ ಬಗೆಯ ಪ್ರದೇಶಗಳಿಗೆ ಹೆಸರು.

ಜಲಾನಯನಭೂಮಿ—ಯಾವ ಪ್ರದೇಶದ ಮೇಲೆ ಬಿದ್ದನೀರು ನದಿಗೆ ಬಂದು ಸೇರುತ್ತದೋ ಆ ಪ್ರದೇಶ.

ನದೀಮುಖಜಭೂಮಿ—ಕೆಲವು ದೊಡ್ಡನದಿಗಳು ತಮ್ಮ ಮುಖದ ಕಡೆಸಮುದ್ರದ ಆಳವನ್ನು ಮುಚ್ಚಿ ನೆಲವನ್ನು ಮಾಡಿಕೊಂಡು ಅದರ ಮೇಲೆಕೆಲವು ಶಾಖೆಗಳಾಗಿ ಹರಿದು ಹೋಗುತ್ತವೆ.

ಹೀಗೆ ಉಂಟಾದ ಭೂಮಿಗೆ ಹೆಸರು.

III (೧) ಜಿಬ್ರಾಲ್ಟರ್ ಜಲಸಂಧಿ.

(೨) ಸೆಂಟ್ ಲೂಯಿಸ್.

(೩) ಡ್ಯಾನ್ಯೂಬ್, ನೀಸ್ಟರ್, ನೀಪರ್.

(೪) ವಿಕ್ಟೋರಿಯ, ಬಲ್ಲಾರಾಟ್, ಓಟೀಗೋ, ಸಾಂಡ್‍ಹರ್ಸ್ಟ್

ಷೆಟ್ ಫೀಥರ್ಸ್ಟ.

(೫) ಲೀಡ್ಸ್, ಬ್ರಾಡ್‌ಫರ್ಡ್, ಹಡ್ಡರ್ಸ್‌ಫೀಲ್ಡ್, ಹಾಲಿಫಾಕ್ಸ್

(೬) ಕೊಡಿಂಬ್ರ.

(೧) ವಿಭಾಗಗಳು;—

IV ಜಪಾನ್ ಚಕ್ರಾಧಿಪತ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ. ಮಧ್ಯದಲ್ಲಿ ಜಪಾನ್ ದ್ವೀಪಸಮೂಹವು, ದಕ್ಷಿಣದಲ್ಲಿ ಲೂಚೂದ್ವೀಪಸಮೂಹವು, ಉತ್ತರದಲ್ಲಿ ಕ್ಯೂರೈಲ್ ದ್ವೀಪಸಮೂಹವು.

(೨) ವಾಯುಗುಣ;—

ಈ ದೇಶವು ಸಮಶೀತೋಷ್ಣವಲಯದಲ್ಲಿದೆ. ಕುರೋಸಿವೋ ಎಂಬ ಸಾಗರದ ಉಷ್ಣೋದಕ ಪ್ರವಾಹವು ಪೂರ್ವಭಾಗದ ಸಮುದ್ರದಲ್ಲಿ ಹರಿವುದು. ಇದರಿಂದ ಜಪಾನ್ ದೇಶದ ಚಳಿ ಹೆಚ್ಚದಂತೆ ಇರುತ್ತದೆ.

(೩) ಕೈಗಾರಿಕೆಗಳು;—

ಇವರು ಚಿತ್ರತರವಾದ ಮಣ್ಣಿನ ಪಾತ್ರೆಗಳನ್ನು ಮಾಡುವುದರಲ್ಲಿ ಬಹುನಿಪುಣರು. ಲಾಕರ್ ಕೆಲಸದಲ್ಲಿ ಇವರಿಗೆ ಸಮಾನರಿಲ್ಲ. ಕಾಗದವನ್ನು ಮಾಡುವುದರಲ್ಲಿಯೂ ದಂತದ ಕೆತ್ತನೆಯ ಕೆಲಸದಲ್ಲಿಯೂ ಇವರು ಅಗ್ರಗಣ್ಯರು. ಅಚ್ಚುಹಾಕುವುದಕ್ಕೆ ಕಾಗದವನ್ನು ಉಪಯೋಗಿಸುವುದಲ್ಲದೆ ಕರವಸ್ತ್ರಾದಿಗಳಿಗೂ ಕಿಟಕಿಯ ಕದಗಳಿಗೂ, ಮಳೆಗಾಲದಅಂಗಿಗಳಿಗೂ ಉಪಯೋಗಿಸುತ್ತಾರೆ.

(೪) ರಾಜ್ಯಭಾರಕ್ರಮವು;—

ಈಗ ನಿರಂಕುಶಪ್ರಭುತ್ವವು ಸ್ಥಾಪಿಸಲ್ಪಟ್ಟಿದೆ. ಪಾರ್ಲಿಮೆಂಟೆಂಬ ಪ್ರಜಾಪ್ರತಿನಿಧಿ ಸಭೆ ಇದೆ.

(೫) ಭೂಮ್ಯುತ್ಪನ್ನಗಳು;—

ಹಿಪ್ಪಲಿನೇರಿಲೆ, ಕಬ್ಬು, ಬಿದಿರು, ಭತ್ತ, ಹತ್ತಿ, ಹೊಗೆಯಸೊಪ್ಪು, ಟೀ, ಮೊದಲಾದುವು.

(೬) ರೈಲುಪಟ್ಟಣಗಳು;—

ಟೋಕಿಯೋ, ಯೋಕೊಹಾಮ, ಕಿಯೋಟ.

V (೧) ಲಿವರ್‌ಪೂಲ್—ಇಂಗ್ಲೆಂಡಿನಲ್ಲಿ ಎರಡನೆಯ ರೇವುಪಟ್ಟಣ. ಮರ್ಸೀ ನದಿಯ ಮುಖದ ಹತ್ತಿರ ಇದೆ. ಹತ್ತಿಯ ವ್ಯಾಪಾರವು ವಿಶೇಷವಾಗಿ ನಡೆಯುವಸ್ಥಳ.

(೨) ಚಿಕಾಗೋ (೩) ಕಿಂಬರ್ಲಿ.

[೧೯೦೮ ರಲ್ಲಿ V ನೇ ಪ್ರಶ್ನೆ ಉತ್ತರನೋಡಿ]

(೪) ಜಿನೀವ—ಸ್ವಿಡ್ಜರ್ಲೆಂಡಿನಲ್ಲಿದೆ. ವಿಶೇಷವಾಗಿ ಕೈಗಡಿಯಾರಗಳು ತಯಾರಾಗುವ ಸ್ಥಳ.

(೫) ಸಿಂಗಪುರ—ಸ್ಟ್ರೇಟ್‌ಸೆಟ್ಲ್‌ಮೆಂಟ್‌ಗಳಲ್ಲಿದೆ. ವ್ಯಾಪಾರಕ್ಕೆ ಬಹಳ ಅನುಕೂಲವಾದ ಸ್ಥಳದಲ್ಲಿದೆ. ಪ್ರಪಂಚದ ಸಕಲದೇಶದ ಹಡಗುಗಳೂ ಇಲ್ಲಿ ಬರುವುವು. ತವರ, ಟೀ, ಗೋಂದು, ಇಂಡಿಯಾ ರಬ್ಬರ್ ಮೊದಲಾದುವುಗಳ ವ್ಯಾಪಾರವು ಬಹಳವಾಗಿ ನಡೆಯುವುದು.

(೬) ಹವನ್ನ—ಕ್ಯೂಬಾದ್ವೀಪದಲ್ಲಿ ರಾಜಧಾನಿ.

1911

೧ ನೆಯ ಭಾಗ.

I ಇಂಡಿಯಾ ದೇಶವು ಬಹು ಸೆಕೆಯುಳ್ಳ ದೇಶವಾಗಿದೆ. ಇದಕ್ಕೆ ಕಾರಣವೇನು?

II (a) ಕಾಂಪ್ರಂಜಿ, ಜಯಪುರ, ಔರಂಗಬಾದ್, ಇವು ಎಲ್ಲಿವೆ? ಏತಕ್ಕೆ ಪ್ರಸಿದ್ಧಿಗೊಂಡಿವೆ?

(b) ಇಂಡಿಯಾದೇಶದಲ್ಲಿರುವ ಸ್ವತಂತ್ರ ಸ್ವದೇಶ ಸಂಸ್ಥಾನಗಳನ್ನೂ ಅವುಗಳ ರಾಜಧಾನಿಗಳನ್ನೂ ತಿಳಿಸಿರಿ.

III (a) (೧) ಮದರಾಸ್ ಅಧಿಪತ್ಯದಲ್ಲಿ ನಾಲ್ಕು ಜಂಕ್ಷನ್ ದಾರಿಗಳನ್ನೂ, (೨) ಬೊಂಬಾಯಿ ಅಧಿಪತ್ಯದಲ್ಲಿ ನಾಲ್ಕು ಮುಖ್ಯ ರೇವು ಪಟ್ಟಣಗಳನ್ನೂ ತಿಳಿಸಿರಿ.

(b) ಕೊಡಗುದೇಶದ ಮುಖ್ಯ ಬೆಳೆಗಳು ಯಾವವು?

IV (a) ಮೈಸೂರು ಸಂಸ್ಥಾನದಲ್ಲಿ,

(೧) ಎರಡು ದೊಡ್ಡಕೆರೆಗಳನ್ನೂ,

(೨) ಕಬ್ಬಿಣ ಸಿಕ್ಕುವ ಪ್ರದೇಶಗಳನ್ನೂ

(೩) ಹಿತ್ತಾಳೆ ಪಾತ್ರೆಗಳು ತಯಾರಾಗುವ ಸ್ಥಳಗಳನ್ನೂ ಬರೆಯಿರಿ.

(b) ಬೀರೂರು, ಮತ್ತು ತಿಬಟೂರು ಏತಕ್ಕೆ ಪ್ರಸಿದ್ಧಿಗೊಂಡಿವೆ?

೨ ನೆಯ ಭಾಗ.

I (a) "ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸೂರ್ಯನು ಯಾವಾಗಲೂ ಕಾಣಿಸುತ್ತಿರುವನು" ಇದಕ್ಕೆ ಕಾರಣವೇನು?

(b) ಸಮಭಾಜಕವೃತ್ತ, ಭೂಶಿರ, ಭೂಕಂಠ, "ಪ್ರೈರಿ" ಗಳೆಂದರೇನು?

II ಇವುಗಳ ಹೆಸರುಗಳನ್ನು ಮಾತ್ರ ತಿಳಿಸಿರಿ:—

(೧) ಏಷ್ಯಾಖಂಡದ ಪೂರ್ವದಲ್ಲಿರುವ ಪರ್ಯಾಯದ್ವೀಪಗಳು.

(೨) ಡೆನ್ಮಾರ್ಕ್ ದೇಶದ ಜನರ ಮುಖ್ಯೋದ್ಯೋಗ.

(೩) ನೈಲ್‌ನದಿಯ ಮುಖದಲ್ಲಿರುವ ಒಂದು ದೊಡ್ಡ ರೇವು ಪಟ್ಟಣ.

(೪) ವೆಸ್ಟ್ ಇಂಡಿಯಾ ದ್ವೀಪಸ್ತೋಮ ಸಮುದಾಯದಲ್ಲಿ ಬ್ರಿಟಿಷರಿಗೆ ಸೇರಿದ ಎರಡು ದ್ವೀಪಗಳು.

(೫) ಆಸ್ಟ್ರೇಲಿಯಾಖಂಡದ ಮುಖ್ಯವಾದ ನದಿಗಳು.

III ಒಂದು ಹಡಗು ಥೇಮ್ಸ್ ನದಿಯ ಮುಖದಿಂದ ಜಿಬ್ರಾಲ್ಟರ್ ಪಟ್ಟಣಕ್ಕೆ ಹೋಗುತ್ತದೆ. ಅದರ ಮಾರ್ಗದಲ್ಲಿರುವ ಜಲಭಾಗಗಳನ್ನು (ಅಂದರೆ ಸಮುದ್ರ, ಸಮುದ್ರಶಾಖೆ ಮೊದಲಾದವುಗಳನ್ನು) ಬರೆಯಿರಿ.

IV ಇವು ಎಲ್ಲಿವೆ? ಏತಕ್ಕೆ ಪ್ರಸಿದ್ಧವಾಗಿವೆ?;—(೧) ಬ್ರಿಸ್ಟಲ್, (೨) ಕ್ಯಾಂಟನ್, (೩) ಫೆಜ್, (೪) ಪೊಟೋಸಿ.

ಉತ್ತರಗಳು.

೧ ನೆಯ ಭಾಗ.

I ಇಂಡಿಯಾದೇಶದ ಸುಮಾರು ಅರ್ಧಭಾಗವು ಉಷ್ಣವಲಯದಲ್ಲಿರುವ

ದರಿಂದಲೂ, ಮತ್ತರ್ಧಭಾಗವು ಸಮಶೀತೋಷ್ಣವಲಯದಲ್ಲಿದ್ದಾಗ್ಯೂ ಪ್ರಾಂತೀಣ ಎತ್ತರವಾಗಿಲ್ಲದೇ ಇರೋಣದರಿಂದಲೂ, ಉತ್ತರದೇಶದಲ್ಲಿ ಬೇಸಿಗೆಯಲ್ಲಿ ಉಗ್ರೋಷ್ಣಮಾರುತಗಳು ಬೀಸುವುದರಿಂದಲೂ ಇಂಡಿಯಾದೇಶವು ಬಹಳ ಶಖೆಯುಳ್ಳ ದೇಶವಾಗಿದೆ.

II (a) ಚಿರಾಪುಂಜಿ—ಅಸ್ಸಾಂದೇಶದಲ್ಲಿದೆ ಪೃಥ್ವಿಯಲ್ಲಿ ಇನ್ನೆಲ್ಲಿಯೂ ಆಗದಷ್ಟು ಮಳೆಯಾಗುತ್ತದೆ.

ಜಯಪುರ—ಜಯಪುರಸಂಸ್ಥಾನದಲ್ಲಿದೆ

ಇದರಂತಿಹ ಸುಂದರವಾದ ಪಟ್ಟಣವು ಇಂಡಿಯಾದೇಶದಲ್ಲಿನ್ನೆಲ್ಲಿಯೂ ಇಲ್ಲ ಮನೆಗಳೆಲ್ಲವೂ ಕಲ್ಲಿನಿಂದ ಕಟ್ಟಿದಾಗಿ, ಮತ್ತು ಬೀದಿಗಳು ಅತಿವಿಸ್ತಾರವಾಗಿಯೂ ಸಮಕೋಣದಲ್ಲಿರುವುದಾಗಿಯೂ ಇವೆ.

ಔರಂಗಾಬಾದ್—ಹೈದರಾಬಾದ್‌ನಲ್ಲಿದೆ ಇಲ್ಲಿ ಔರಂಗಜೇಬನ ಅರಮನೆ ಇದೆ

(b) ಸ್ವತಂತ್ರಸಂಸ್ಥಾನಗಳು:-ನೇಪಾಳ, ರಾಜಧಾನಿ—ಖಟ್ಮಂಡ
ಭೂತಾನ. ರಾಜಧಾನಿ—ಪನಕ (ಟಾಶಿಸುಡಾಙ್)

III (a) (೧) ಮದರಾಸಾಧಿಪತ್ಯದ ಜಮೀನ್‌ದಾರಿಗಳು:—
ಆರಣಿ, ವಿಜಯನಗರ, ರಾಮನಾಥ, ಶಿವಗಂಗ.
ಬೊಂಬಾಯಿಯಾಧಿಪತ್ಯದ ರೇವುಪಟ್ಟಣಗಳು:—
ಕರಾಚಿ, ಭರೋಚ್, ಬೊಂಬಾಯಿ, ಮಂಗಳೂರು.

(b) ಕೊಡಗುದೇಶದ ಮುಖ್ಯ ಬೆಳೆಗಳು:—
ಏಲಕ್ಕಿ, ಕಾಫಿ, ಸಿಂಕೋನ, ಕಿತ್ತಲೆಯಹಣ್ಣು

IV (a) ಸೂಳೆಯಕೆರೆ, ಮೋತೀಕಣಿವೆಯಕೆರೆ.

(೨) ಹೆಗ್ಗಡದೇವನಕೋಟೆ, ಮಾಗಡಿ, ಮಳವಳ್ಳಿ, ಅರಸೀಕೆರೆ ಚಿಕ್ಕನಾಯಕನಹಳ್ಳಿ

(೩) ನಾಗಮಂಗಲ. ಶ್ರವಣಬೆಳ್ಗೊಳ.

(b) ಬೈರೂರು—ಇಲ್ಲಿ ಅಡಕೆ, ತೆಂಗಿನಕಾಯಿ, ವ್ಯಾಪಾರ ಸಂವತ್ಸರಕ್ಕೆ ೫೦ ಲಕ್ಷ ರೂಪಾಯಿವರೆಗೂ ನಡೆಯುತ್ತದೆ.

ತಿಪಟೂರು—ಇಲ್ಲಿ ಸ್ಥಿರವಾರದದಿವಸ ದೊಡ್ಡಸಂತೆಯಾಗುವುದು. ಬಹಳ ಚೆನ್ನಾಗಿ ವ್ಯಾಪಾರನಡೆಯುತ್ತದೆ.

೨ನೆಯ ಭಾಗ.

I (a) ಪೃಥ್ವಿಯ ಸಕಲ ಖಂಡಗಳಲ್ಲಿಯೂ ಬ್ರಿಟಿಷರಿಗೆ ಸೇರಿದ ರಾಜ್ಯಗಳಿರುವುದರಿಂದ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸೂರ್ಯನು ಯಾವಾಗಲೂ ಕಾ

ಕಿಗುತ್ತಿರುವನು. ಅಂದರೆ, ಒಂದುಖಂಡದಲ್ಲಿರುವ ಬ್ರಿಟಿಷ್‌ರಾಜ್ಯದಲ್ಲಿ ಸೂರ್ಯನು ಮುಳುಗಿದ್ದಾಗ್ಗೂ ಮತ್ತೊಂದುಖಂಡದಲ್ಲಿರುವ ಬ್ರಿಟಿಷ್‌ರಾಜ್ಯದಲ್ಲಿ ಸೂರ್ಯನು ಹುಟ್ಟಿರುವನು. ಆದುದರಿಂದ ಬ್ರಿಟಿಷ್‌ಚಕ್ರಾಧಿಪತ್ಯದಲ್ಲಿ ಸೂರ್ಯನು ಕಾಣಿಸದೆ ಹೋಗಿಲ್ಲ.

(೬) ಸಮಭಾಜಕವೃತ್ತ-ಮೇರುಗಳಿಗೆ ಸಮದೂರದಲ್ಲಿ ರೇಖಾಂಶವೃತ್ತಗಳನ್ನು ಕತ್ತರಿಸಿಕೊಂಡು ಬಂದು ಭೂಗೋಳವನ್ನು ಎರಡು ಭಾಗವಾಗಿ ಭಾಗಿಸುವ ವೃತ್ತಕ್ಕೆ ಸಮಭಾಜಕ ವೃತ್ತವೆಂದು ಹೆಸರು.

ಭೂಶಿರ-ಎಂದರೆ ಪಕ್ಕಗಳಲ್ಲಿರುವ ಪ್ರದೇಶಗಳಿಗಿಂತ ಹೆಚ್ಚಾಗಿ ಸಮುದ್ರದೊಳಕ್ಕೆ ಚಾಚಿಕೊಂಡಿರುವ ಚಿಕ್ಕದಾದಭೂಮಿ.

ಭೂಕಂಠ-ಎಂದರೆ ಹೆಚ್ಚು ವಿಸ್ತೀರ್ಣವುಳ್ಳ ಎರಡುಭೂಮಿಗಳನ್ನು ಕೂಡಿಸುವ ಇಕ್ಕಟ್ಟಾದ ಭೂಮಿ.

ಪ್ರೈರಿ-ಮೈದಾನದಲ್ಲಿರುವ ಅಗಾಧವಾದ ಹುಲ್ಲುಗಾವಲುಗಳಿಗೆ ಪ್ರೈರಿಗಳೆಂದು ಹೆಸರು.

II (೧) ಏಷ್ಯಾಖಂಡದ ಪೂರ್ವದಲ್ಲಿರುವ ಪರ್ಯಾಯದ್ವೀಪಗಳು ಕೋರಿಯಾ, ಕಾಂಚಾಟ್ಕ.

(೨) ಡೆನ್ಮಾರ್ಕ್‌ದೇಶದಜನರ ಮುಖ್ಯೋದ್ಯೋಗ- ಕೃಷಿ ಮತ್ತು ಪಶುಪಾಲನೆ.

(೩) ಅಲೆಗ್ಸಾಂಡ್ರಿಯಾ.

(೪) ಜಮೈಕ, ಬಹಾಮಾದ್ವೀಪ.

(೫) ಮರ್ರೇ, ಫಿಟ್‌ಸ್ರಾಯ್, ಮತ್ತು ಬರ್ಡಿಕಿನ್.

III ಇಂಗ್ಲಿಷ್ ಕಡಲ್‌ಕಾಲುವೆ, ಬಿಸ್ಕೇಕೊಲ್ಲಿ, ಅಟ್ಲಾಂಟಿಕ್‌ಸಾಗರ, ಮೆಡಿಟರೇನಿಯನ್‌ಸಮುದ್ರ.

IV (೧) ಬ್ರಿಸ್ಟಲ್-ಏವನ್‌ನದೀಮುಖದಲ್ಲಿದೆ. ಗಾಜಿನಸಾಮಾನಿನ ಮತ್ತು ಪಿಂಗಾಣಿಯ ಎರಕದ ಮತ್ತು ಸೋಪಿನ ಕಾರ್ಖಾನೆಗಳು ಹೆಚ್ಚಾಗಿರುವುವು.

(೨) ಕ್ಯಾಂಟನ್-ಚೀಣಾದಲ್ಲಿದೆ. ಅನೇಕ ಕೈಗಾರಿಕೆಗಳೂ ಕುಶಲವಿದ್ಯೆಗಳೂ ನೆಲೆಗೊಂಡಿರುವ ಸ್ಥಳ. ಈ ಪಟ್ಟಣದಲ್ಲಿ ತಯಾರಾದ ಕೆಲವು ಸಾಮಾನುಗಳು ಪ್ಯಾರೀಸ್‌ಪಟ್ಟಣದ ಸಾಮಾನುಗಳಿಗಿಂತ ಸೊಗಸಾಗಿರುವುವು. ಈ ಪಟ್ಟಣವನ್ನು ಕ್ಯಾಂಟನ್‌ನದಿಯಮೇಲಿರುವ "ದೋಣಿಗಳ ದೊಡ್ಡಪಟ್ಟಣ" ವೆಂದು ಹೇಳಬಹುದು. ಲಕ್ಷಾಂತರ ಜನರು ದೋಣಿಗಳಲ್ಲಿಯೇ ವಾಸಮಾಡುತ್ತಾರೆ.

(೩) ಫೆಸ್-ಮೊರಾಕೋದೇಶದಲ್ಲಿದೆ ಮಹಮ್ಮದೀಯರಿಗೆ ಯಾತ್ರಾಸ್ಥ

ಳೆ, ಇಲ್ಲಿ ಹೆಚ್ಚು ವ್ಯಾಪಾರವು ನಡೆವುದು. ತೊಗಲಿಗೆ ಬಹು ಸೊಗಸಾಗಿ ಹದವನ್ನು ಕೊಟ್ಟು ಮೃದುವಾಗಿ ಮಾಡುವ ಕಾರ್ಖಾನೆಗಳು ಅನೇಕ ವೆ.

(ಲ) ಪೋಟೋಸಿ-ಬೊಲಿವಿಯದಲ್ಲಿದೆ- ಪೂರ್ವಕಾಲದಲ್ಲಿ ಬೆಳ್ಳಿ ಬಹಳ ಹೆಚ್ಚಾಗಿ ಸಿಕ್ಕುತ್ತಿದ್ದಿತು.

1912

I (a) ಭೂಗೋಳದಲ್ಲಿ ಜಲಭಾಗ ಎಷ್ಟು? ದಕ್ಷಿಣಾರ್ಧಗೋಳದಲ್ಲಿರುವ ಮುಖ್ಯವಾದ ಭೂಭಾಗಗಳು ಯಾವುವು?

(b) ದ್ವೀಪಕಲ್ಪ, ಭೂಕಂಠ, ಭೂಶಿರ, ಅಳಿವೆ, ಜಲಸಂಧಿ, ಇವುಗಳ ವ್ಯಾಖ್ಯೆಯನ್ನೂ, ವಾಖ್ಯೆಯು ಸ್ಪಷ್ಟವಾಗುವಂತೆ ಅವುಗಳ ಚಿತ್ರವರವನ್ನೂ ಬರೆಯಿರಿ.

II (a) ಶೀತವಲಯದ ಮೃಗಗಳೂ, ಸಮಶೀತೋಷ್ಣವಲಯದ ಸಸ್ಯಗಳೂ ಯಾವುವು?

(b) ಕಾಂಗರು, ಜಿರಾಫ್, ಚಮರಿಮೃಗ ಇವು ವಿಶೇಷವಾಗಿರುವ ದೇಶಗಳಾವುವು?

III (a) ಯಾವ ಮಾರುತಗಳಿಗೆ ನಿರಂತರ, ಮಾರುತಗಳೆಂದು ಹೆಸರು? ಇವು ಎಲ್ಲಿ ಯಾವದಿಕ್ಕುಗಳಿಂದ ಬೀಸುವುವು?

b) ದಕ್ಷಿಣಹಿಂದೂಸ್ಥಾನದ ಪಶ್ಚಿಮ ಘಟ್ಟಗಳ ಪ್ರಾಂತ ವಿಶೇಷಮಳೆ ಬೀಳುವುದಕ್ಕೂ, ಶಿಂಡ್‌ದೇಶದ ಪೂರ್ವಪ್ರಾಂತ ಮಳೆಬೀಳದೆಇರುವುದಕ್ಕೂ ಕಾರಣವೇನು?

IV (a) ನದಿಗಳಿಂದಜನರಿಗೆಉಂಟಾಗುವ ಪ್ರಯೋಜನಗಳಾವುವು

(b) ಲೀನಾ ನದಿಯ ಪ್ರವಾಹಕ್ಕೂ ಕೋಣಾನದಿಯ ಪ್ರವಾಹಕ್ಕೂ ಇರುವ ವ್ಯತ್ಯಾಸವೇನು? ಈ ವ್ಯತ್ಯಾಸಕ್ಕೆ ಕಾರಣವೇನು?

V (a) ಹಿಂದೂಸ್ಥಾನದ ಯಾವ ಪ್ರಾಂತಗಳಲ್ಲಿ ಜನರು ಪ್ರ-ಷ್ಟು ಉರಿಯು, ಮಳೆಯುಳ್ಳ [illegible]ಸಗಳನ್ನು [illegible]ವರು?

(b) ಕಾಫಿ, ಶಣಬು, ಕಸಕಸೆ, ಸಿಂಕೋನಾ, ಇವು ಹಿಂದೂಸ್ಥಾನದಲ್ಲಿ ಬೆಳೆಯುವ ಪ್ರದೇಶಗಳಾವುವು? ಇವುಗಳಲ್ಲಿ ಯಾವಯಾವ ದೇಶಕ್ಕೆ ಯಾವಯಾವುವು ರಫ್ತಾಗುವುದು?

(c) ಇಂಗ್ಲೆಂಡ್ ಜರ್ಮಾನ್‌ದೇಶಗಳಿಂದ ಹಿಂದೂಸ್ಥಾನಕ್ಕೆ ಬರತಕ್ಕ ಸರಕುಗಳು ಯಾವುವು?

VI (a) ಬ್ರಿಟಿಷರಲ್ಲದ ಇತರ ಯಾವ ಯುರೋಪ್ಯರಿಗೆ ಹಿಂದೂಸ್ಥಾನದಲ್ಲಿ ರಾಜ್ಯಗಳಿರುವುವು? ಆ ಜನಾಂಗದ ಹೆಸರಿನೊಂದಿಗೆ ಇಲ್ಲಿ ಸೇರಿರುವ ಪ್ರದೇಶಗಳನ್ನು ಬರೆಯಿರಿ.

(b) ಹಿಂದೂಸ್ಥಾನವು ವಿಸ್ತಾರವಾದ ಮತ್ತು ಸಲವತ್ತಾದ ಭೂಭಾಗವಾಗಿದ್ದರೂ ಸಣ್ಣದಾಗಿರುವ ಇಂಗ್ಲೆಂಡನಲ್ಲಿರುವಷ್ಟು ದೊಡ್ಡದೊಡ್ಡ ಪಟ್ಟಣಗಳು ಹಿಂದೂಸ್ಥಾನದಲ್ಲಿ ಇಲ್ಲವು. ಹೀಗಿರಲು ಕಾರಣವೇನು?

VII (a) ಆಸ್ಟ್ರೇಲಿಯಾ ದ್ವೀಪದಲ್ಲೂ ಕೆನಡಾಡುಮಿನಿಯನ್ನಲ್ಲೂ ನೆಲಸಿರುವ ಯೂರೋಪ್ಯರ ಕಸುಬೇನು?

(b) ಈ ಕೆಳಗೆ ಬರೆದಿರುವ ಪಟ್ಟಣಗಳು ಎಲ್ಲವೂ ಏತಕ್ಕೆ ಪ್ರಸಿದ್ಧಗೊಂಡಿವೆ?

ಕರಾಚಿ, ಲಿವರ್ಪೂಲ್, ಮಾರ್ಸೆಲ್ಸ್, ಬ್ಯಾಲರಾಟ್, ಟೋಕಿಯೋ.

VIII ಆಸ್ಟ್ರೇಲಿಯಾ ದ್ವೀಪದ ಭೂಪಟವನ್ನು ಬರೆದು, ಅದರಲ್ಲಿ ಈ ಕೆಳಗೆ ಸೂಚಿಸಿರುವುದನ್ನು ಗುರುತುಮಾಡಿರಿ.

ಫ್ಲಿಂಡರ್ಸ್‌ರೇಂಜ್, ಮರ್ರೆನದಿ, ಸಿಡ್ನಿ, ಪರ್ತ್, ಯಾರ್ಕ್‌ಭೂಶಿರ.

ಉತ್ತರಗಳು.

a) ಮುಕ್ಕಾಲುಭಾಗ.

ದಕ್ಷಿಣಾರ್ಧಗೋಳದಲ್ಲಿರುವ ಮುಖ್ಯವಾದ ಭೂಭಾಗಗಳು:—

ಆಸ್ಟ್ರೇಲಿಯ, ಆಫ್ರಿಕಾಖಂಡದ ದಕ್ಷಿಣಾರ್ಧಭಾಗ, ದಕ್ಷಿಣ ಅಮೇರಿಕ.

(*b*) ದ್ವೀಪಕಲ್ಪ—ಸ್ವಲ್ಪಭಾಗವಿನಾ ಸುತ್ತಲೂ ನೀರಿನಿಂದ ಸುತ್ತಲ್ಪಟ್ಟಿರುವ ಭೂಮಿ.

ಭೂಕಂಠ—ವಿಸ್ತೀರ್ಣವುಳ್ಳ ಎರಡು ಭೂಮಿಗಳನ್ನು ಕೂಡಿಸುವ ಇಕ್ಕಟ್ಟಾದ ಭೂಮಿ.

ಭೂಶಿರ—ಪಕ್ಕಗಳಲ್ಲಿರುವ ಪ್ರದೇಶಗಳಿಗಿಂತ ಹೆಚ್ಚಾಗಿ ಸಮುದ್ರದೊಳಕ್ಕೆ ಚಾಚಿಕೊಂಡಿರುವ ಚಿಕ್ಕದಾದ ಭೂಮಿ.

ಅಳಿವೆ—ನದಿಯು ಮುಖದ ಬಳಿ ಅಗಲವಾಗಿದ್ದರೆ ಆ ಪ್ರದೇಶಕ್ಕೆ ಕೆಲವು ವೇಳೆಗಳಲ್ಲಿ ಸಮುದ್ರದ ನೀರು ನುಗ್ಗಿ ಬರುವುದು. ಈ ಬಗೆಯ ಪ್ರದೇಶಗಳಿಗೆ ಹೆಸರು.

ಜಲಸಂಧಿ—ಎರಡು ಸಮುದ್ರಗಳನ್ನು ಸಂಬಂಧಿಸುವ ನೀರು. ಇದಕ್ಕೆ ಜಲಕಂಠವೆಂದೂ ಹೆಸರುಂಟು.

II (*a*) ಶೀತವಲಯದ ಮೃಗಗಳು—

ಕೆಲವು ಜಾತಿನಾಯಿಗಳೂ, ಹಿಮಸಾರಂಗಗಳೂ,

ಸಮಶೀತೋಷ್ಣವಲಯದ ಸಸ್ಯಗಳು—

ಗೋಧಿ, ಉರುಳುಗಡ್ಡೆ, ತೋಕೆಗೋಧಿ, ಚಿಕ್ಕಗೋಧಿ, ಸೀಮೆಯುಪ್ಪಿ, ಕಿತ್ತಿಳೆ; ದ್ರಾಕ್ಷೆ, ಬಾತವೃಕ್ಷ; ಪೀತದಾರು.

(*b*) ಕಾಂಗರೂ—ಆಸ್ಟ್ರೇಲಿಯ

ಜಿರಾಫೆ—ಆಫ್ರಿಕಾ.

ಚಮರಿಮೃಗ—ಟಿಬೆಟ್.

III (*a*) ದಿಕ್ಕು ಬದಲಾಯಿಸದೆ ನಿರಂತರವಾಗಿ ಬೀಸುವ ಗಾಳಿಗಳಿಗೆ ನಿರಂತರ ಮಾರುತಗಳೆಂದು ಹೆಸರು. ಇವು ಉಷ್ಣವಲಯದಲ್ಲಿಯೂ, ಅದರಿಂದ ಸ್ವಲ್ಪ ಆಚೆಗೂ ಬೀಸುವುವು. ಸಮಭಾಜಕವೃತ್ತದ ಉತ್ತರಭಾಗದಲ್ಲಿ ಇವು ಈಶಾನ್ಯದಿಂದಲೂ ಆ ವೃತ್ತದ ದಕ್ಷಿಣಭಾಗದಲ್ಲಿ ಆಗ್ನೇಯದಿಂದಲೂ ಬೀಸುತ್ತವೆ.

(*b*) ಮುಂಗಾರು ಹಿಂಗಾರುಗಳಿಗೆ ಇಂಡಿಯವು ಒಳಪಟ್ಟಿದೆ. ಮೊ

ಬಗೆಯನ್ನು ವಿಪರೀತವಾಗಿ ತರುವ ಮುಂಗಾರುಗಾಳಿಯು ನೈರುತ್ಯದಿಂದ ಬೀಸುವುದು. ಆಗ ಪಶ್ಚಿಮ ತೀರದಲ್ಲಿರುವ ಪಶ್ಚಿಮಘಟ್ಟಗಳು ಎತ್ತರವಾಗಿರುವುದರಿಂದಲೂ ಕಡಿದಾಗಿರುವುದರಿಂದಲೂ ಸಮುದ್ರಕ್ಕೆ ಹತ್ತಿರವಾಗಿರುವುದರಿಂದಲೂ ಇದನ್ನು ತಡೆಯುವುವು. ಆದುದರಿಂದ ಆ ಪ್ರಾಂತ್ಯ ವಿಶೇಷವಾಗಿ ಮಳೆ ಬೀಳುತ್ತದೆ. ಸಿಂಧೂದೇಶದ ಪೂರ್ವಕಡೆ ದೊಡ್ಡ ಮರುಭೂಮಿ ಇರುತ್ತದೆ. ಅಲ್ಲಿ ಘಟ್ಟಗಳಿಲ್ಲದಿರುವುದು ಮತ್ತು ಬಿಸಿಲಬೇಗೆಯು ಹೆಚ್ಚಾಗಿರುವುದರಿಂದ ಸಮುದ್ರದ ಕಡೆಯಿಂದ ಬೀಸುವ ಮೋಡವಿರುವ ಗಾಳಿಯು ಇಲ್ಲಿ ಮಳೆಯನ್ನು ಕೊಡಲು ಅವಕಾಶವಿಲ್ಲ. ಈ ಕಾರಣಗಳಿಂದ ಇಲ್ಲಿ ಮಳೆಬೀಳುವುದಿಲ್ಲ.

IV (*a*) ಪ್ರಪಂಚದಲ್ಲಿ ಜನಗಳಿಗೆ ನೀರೊದಗಿಸುವ ಮುಖ್ಯ ಜಲಾಶಯಗಳಲ್ಲಿ ನದಿಗಳೊಂದಾಗಿರುತ್ತೆ. ಭೇಸಾಯಕ್ಕೆ ಇವುಗಳಿಂದಾಗುವ ಉಪಯೋಗವನ್ನು ಎಲ್ಲರೂ ಬಲ್ಲರು. ಭೂಮಿಯನ್ನು ಹುಲುಸಾಗಿ ಮಾಡುತ್ತವೆ. ಪೈರುಗಳನ್ನು ವೃದ್ಧಿಪಡಿಸುತ್ತವೆ. ಸಾಗುವಳಿಗೂ ದನಕರುಗಳು ಕುಡಿಯಲಿಕ್ಕೂ ಯಥೇಚ್ಛವಾಗಿ ನೀರನ್ನು ಒದಗಿಸಿಕೊಡುವವು. ಈಜಿಪ್ಟ್ ದೇಶಕ್ಕೆಲ್ಲ ಒಂದೇ ದೊಡ್ಡನದಿ ಆಧಾರವೆಂದು ಎಲ್ಲರೂ ಬಲ್ಲರು. ನದಿಗಳು ವ್ಯವಸಾಯಕ್ಕಲ್ಲದೆ ಇತರ ಕೆಲಸಗಳಿಗೂ ಉಪಯೋಗವಾಗುತ್ತವೆ. ನದೀ ಪ್ರವಾಹವನ್ನು ಒಂದುಕಡೆ ಕೂಡಿಸಿಟ್ಟು, ಹತ್ತಿಯನ್ನು ನೂಲುವ, ಮರವನ್ನು ಕೊಯ್ಯುವ, ಧಾನ್ಯವನ್ನು ಬೀಸುವ ಯಂತ್ರಗಳನ್ನು ನಡೆಯಿಸಲು ವಿದ್ಯುಚ್ಛಕ್ತಿಯನ್ನುಂಟುಮಾಡುವುದಕ್ಕೂ ಆ ಶಕ್ತಿಯನ್ನು ಬಳಸುವರು. ನದಿಗಳು ಸ್ನಾನಕ್ಕೂ ಪಾನಕ್ಕೂ ಬಟ್ಟೆಯೊಗೆಯುವುದಕ್ಕೂ ದನಕರುಗಳನ್ನು ತೊಳೆಯುವುದಕ್ಕೂ ಪಾತ್ರೆಗಳನ್ನು ಬೆಳಗುವುದಕ್ಕೂ ಅಡಿಗೆಯ ನೀರಿಗೂ ಏಕರೀತಿಯಾಗಿ ಉಪಯೋಗಿಸಲ್ಪಡುತ್ತವೆ. ಹಡಗುಗಳನ್ನೂ ದೋಣಿಗಳನ್ನೂ ನಡೆಸುವಷ್ಟು ಆಳವಾಗಿಯೂ ಅಗಲವಾಗಿಯೂ ಇರುವ ದೊಡ್ಡ ನದಿಗಳಿಂದ ವ್ಯಾಪಾರಕ್ಕೆ ವಿಶೇಷ ಸಹಾಯವುಂಟು.

(*b*) ಲೀನಾನದಿಯು ಅತ್ಯಂತ ನಿಧಾನವಾಗಿ ಹರಿಯುವುದು. ಶೋಣನದಿಯು ಬಹಳ ವೇಗವಾಗಿ ಹರಿಯುತ್ತವೆ.

ಕಾರಣ—ಲೀನಾನದಿ ಹರಿಯುವ ಪ್ರದೇಶವು ಸಮಭೂಮಿಯಾಗಿರುವುದರಿಂದಲೂ, ಶೀತವಲಯದಲ್ಲಿ ಹರಿಯುವ ಕಾರಣ ಅದರ ನೀರು ಯಾವಾಗಲೂ ಗಟ್ಟಿಕಟ್ಟಿರುವುದರಿಂದಲೂ ಅತ್ಯಂತ ನಿಧಾನವಾಗಿ ಹರಿಯುತ್ತೆ. ಶೋಣಾನದಿಯು ಎತ್ತರದಿಂದ ಬಹಳ ತಗ್ಗಿಗೆ ಹರಿಯುವುದರಿಂದಲೂ ಮತ್ತು ಉಷ್ಣವಲಯದಲ್ಲಿ ಹರಿಯುವದರಿಂದಲೂ ಇದರವೇಗವು ಜಾಗ್ರತೆಯಾಗಿರುತ್ತದೆ.

7 (a) ಪುಷ್ಟು—ಪಂಜಾಬಿನಲ್ಲಿ ಸಿಂಧೂನದಿಗೆ ಪಶ್ಚಿಮಕಡೆ ಇರುವ ಪ್ರಾಂತ್ಯ
ಉರಿಯು—ನಿಮ್ನ ಪ್ರಾಂತ್ಯಗಳ ಕೆಲವು ಪ್ರದೇಶಗಳಲ್ಲಿ (ಒರಿಸ್ಸ)
ತುಲಿಯೂಳ—ಮದರಾಸಾಧಿಪತ್ಯದ ನೈರುತ್ಯ ಪ್ರಾಂತ್ಯದಲ್ಲಿದೆ.

(b) ಕಾಫಿ—ನೈರುತ್ಯ ಘಟ್ಟಗಳಲ್ಲಿ,
ಸೆಣಬು—ಬಂಗಾಳದ ಪೂರ್ವಭಾಗ.
ಕೆಸಕೆಸೆ—ಹೊಳೆವ ಬೀಹಾರೆಗಳಲ್ಲಿ,
ಸಿಂಕೋನ—ಬೆಟ್ಟಗಳಲ್ಲಿ ಆಗುವ ಕಡಿಗಳಲ್ಲಿ.
ಸೆಣಬು—ಬಂಗಾಳದಿಂದ ಬ್ರಿಟನ್, ಅಮೇರಿಕಗಳಿಗೂ ಮತ್ತು
ಚೀನಾದೇಶಕ್ಕೂ,
ಕಾಫಿ—ಮದರಾಸಿನಿಂದ ಬ್ರಿಟನ್ (ಫ್ರಾನ್ಸ್, ಟರ್ಕಿ, ಪಾರ್ಷಿ
ಖಾರಿಗಳಿಗೂ ಚೀಣಾದೇಶಕ್ಕೂ,
ಕೆಸಕೆಸೆ, ಸಿಂಕೋನ—ಇಂಗ್ಲೆಂಡಿಗೆ ರಫ್ತಾಗುತ್ತವೆ.

(c) ಇಂಡಿಯಾಕ್ಕೆ ಬರತಕ್ಕ ಸರಕುಗಳು—

ಇಂಗ್ಲೆಂಡಿನಿಂದ—ಹತ್ತಿಯ ಮತ್ತು ತುಂಬಟದ ಬಟ್ಟೆಗಳು, ಕಬ್ಬಿಣದಸಾಮಾನುಗಳು, ನಾರಿನ ಬಟ್ಟೆ, ಕಲ್ಲಿದ್ದಲು, ತೊಲೆ, ಚರ್ಮದಸಾಮಾನು, ವಿವಿಧ ಯಂತ್ರಗಳು, ಪುಸ್ತಕಗಳು.

VI (a) ಜಪಾನಿನಿಂದ ರೇಷ್ಮೆ, ಕಲ್ಲಿದ್ದಲು,

ಫ್ರೆಂಚ್‌ಜನರಿಗೆ ದಕ್ಷಿಣದೇಶದ ತೀರದಲ್ಲಿ ಪುದುಚೇರಿ ಮತ್ತು ಕಾರೈಕಾಲ ಮಲೆಯಾಳದ ತೀರದಲ್ಲಿ ಮಾಹಿ, ಗೋದಾವರಿ ಡಿಸ್ಟ್ರಿಕ್ಟಿನಲ್ಲಿ ಯಾನಾಂ, ಹುಗ್ಲೀನದಿಯದಡದಲ್ಲಿ ಚಂದ್ರನಗರ.

ಪೋರ್ಚುಗೀಸ್ ಜನರಿಗೆ ಪಶ್ಚಿಮತೀರದಲ್ಲಿ ಗೋವೆ, ಬೊಂಬಾಯಿಗೆ ಉತ್ತರದಲ್ಲಿ ದಾಮನ್, ಕಾಥ್ಯವಾಡ ಹತ್ತಿರ ಇರುವ ದ್ಯೂ ಎಂಬದ್ವೀಪ.

(b) ಇಂಡಿಯಾದಲ್ಲಿ ಇಂಗ್ಲೆಂಡಿನಷ್ಟು ಕಲ್ಲಿದ್ದಲು ಕಬ್ಬಿಣವು ಹೆಚ್ಚಾಗಿ ಸಿಕ್ಕುವುದಿಲ್ಲವಾದ್ದರಿಂದ ಕೈಗಾರಿಕೆ ಕೆಲಸಗಳು ನಡೆಯಲು ಅವಕಾಶವಿಲ್ಲ. ಇಲ್ಲಿನ ಜನರು ವ್ಯವಸಾಯದಿಂದಾಗಲೀ, ದನಗಳನ್ನು ಮೇಯಿಸುವುದರಿಂದಾಗಲೀ ಅಡವಿಗಳಲ್ಲಿ ಕೆಲಸಮಾಡೋಣವರಿಂದಲಾಗಲೀ ಜೀವಿಸುತ್ತಾರೆ. ಆದುದರಿಂದ ಇವರು ಪಟ್ಟಣಗಳಲ್ಲಿ ವಾಸಮಾಡದೆ ತಮ್ಮ ಹೊಲಗಳಿಗೆ ಸಮೀಪವಾಗಿರುವ ಹಳ್ಳಿಗಳಲ್ಲಿ ವಾಸಮಾಡುವರು. ಆದಕಾರಣ ಇಂಡಿಯಾದಲ್ಲಿ ಅದರವಿಸ್ತಾರಕ್ಕೆ ಹಳ್ಳಿಗಳು ಹೆಚ್ಚಾಗಿವೆಯೇ ಹೊರತು ಪಟ್ಟಣಗಳು ಹೆಚ್ಚಾಗಿಲ್ಲ. ಇಂಗ್ಲೆಂಡಿನಲ್ಲಿ

ತ್ತವನರು ನಾನಾವಿಧವಾದ ಕೈಗಾರಿಕೆಗಳಿಂದಲೇ ಜೀವಿಸುವುದರಿಂದ ವ್ಯಾಪಾರಸ್ಥಳಗಳಾದ ಪಟ್ಟಣಗಳನ್ನು ಸೇರುವರು. ಆದುದರಿಂದ ಇಂಗ್ಲೆಂಡಿನಲ್ಲಿ ಪಟ್ಟಣಗಳು ಹೆಚ್ಚಾಗಿವೆ.

VII (a) ಆಸ್ಟ್ರೇಲಿಯ-ಗಣಿಗಳಲ್ಲಿ ಕೆಲಸಮಾಡುವುದು. ವ್ಯಾಪಾರ. ಕೃಷಿ. ಪಶುಪಾಲನೆ.

ಕೆನಡಾಡುಮಿನಿಯನ್ -ವ್ಯವಸಾಯ, ಮೀನುಹಿಡಿಯುವುದು, ಬೇಟೆಯಾಡುವುದು, ಗಣಿಗಳಲ್ಲಿ ಕೆಲಸಮಾಡುವುದು, ಹಡಗುಗಳನ್ನು ಕಟ್ಟುವುದು, ಚರ್ಮಗಳನ್ನು ಹದಮಾಡುವುದು.

(b) ಕರಾಚಿ- ಸಿಂಧೂದೇಶದಲ್ಲಿದೆ. ಮುಖ್ಯಪಟ್ಟಣ, ಇದು ಒಳ್ಳೆಯ ಬಂದರು, ವಿಶೇಷವಾಗಿವ್ಯಾಪಾರನಡೆಯುವಸ್ಥಳ. ಕರಾಚಿಯನ್ನು ಇಂಡಿಯಾ ದೇಶದ ಲಿವರ್ಪೂಲೆಂದು ಕರೆಯುವುದುಂಟು.

ಲಿವರ್ಪೂಲ್:— ಇಂಗ್ಲೆಂಡಿನಲ್ಲಿ ಎರಡನೆಯ ರೇವುಪಟ್ಟಣ. ಮರ್ಸಿನದಿಯ ಮುಖದ ಹತ್ತಿರ ಇದೆ. ಹತ್ತಿಯವ್ಯಾಪಾರವು ವಿಶೇಷವಾಗಿ ನಡೆಯುವಸ್ಥಳ.

ಮಾರ್ಸೇಲ್ಸ್:—ಮೆಡಿಟರೇನಿಯನ್ ತೀರದಲ್ಲಿದೆ. ಕೈಗಾರಿಕೆಯಸ್ಥಳ ಮತ್ತು ಅತ್ಯಂತ ದೊಡ್ಡದಾದ ರೇವುಪಟ್ಟಣ.

ಬ್ಯಾಲರಾಟ್ :—ವಿಕ್ಟೋರಿಯದಲ್ಲಿದೆ. ಇದರಲ್ಲಿ ಪ್ರಸಿದ್ಧವಾದ ಚಿನ್ನದ ಗಣಿಗಳಿವೆ.

ಟೋಕಿಯೊ:—ಜಪಾನ್ನಲ್ಲಿದೆ. ಇದಕ್ಕೆ ಯೆಡೋ ಎಂಬ ಹೆಸರಿತ್ತು. ಅನೇಕ ಕೈಗಾರಿಕೆ ಮುಂತಾದವು ನೆಲೆಗೊಂಡಿವೆ. ಭೂಕಂಪದ ಭಯದಿಂದ ಅನೇಕ ಮನೆಗಳನ್ನು ಬಿದಿರಿಂದಲೂ ಕಾಗದದ ರಟ್ಟಿನಿಂದಲೂ ಕಟ್ಟುವರು. ಬ್ರಾನ್ಸ್ ಮತ್ತು ಲಾಕರ್ ಕೆಲಸಗಳು ಬಹುಚೆನ್ನಾಗಿ ನಡೆಯುತ್ತವೆ

1913

I (a) ಪಂಚವಲಯಗಳು ಯಾವುವು? ಅವುಗಳ ಮುಖ್ಯಲಕ್ಷಣಗಳೇನು? ಭೂಗೋಳದ ಆಕೃತಿಯನ್ನು ಬರೆದು ಅದರ ಮೇಲೆ ಪಂಚವಲಯಗಳ ಮೇರೆಗಳನ್ನು ಗುರ್ತಿಸಿರಿ

(b) ಇಟಲಿ, ಮಡಗ್ಯಾಸ್ಕರ್, ಸಿಲೋನ್, ನ್ಯೂಗಿನಿ ಇವುಗಳಲ್ಲಿ ಸಮಭಾಜಕವೃತ್ತಕ್ಕೆ ಉತ್ತರದಲ್ಲಿ ಇರುವುವು ಯಾವುವು? ದಕ್ಷಿಣದಲ್ಲಿ ಇರುವುವು ಯಾವುವು?

(c) ಜಲಭಾಗದಲ್ಲಿ ಅತ್ಯಂತ ವಿಸ್ತಾರವಾದ ಸಾಗರವು ಯಾವುದು? ಅಮೆರಿಕಾ ಮತ್ತು ಯೂರೋಪ್ ಖಂಡಗಳಿಗೆ ಮಧ್ಯೆ ಯಾವ ಸಾಗರವು ಇರುವುದು?

II (a) ಒಂದು ದೇಶದ ವಾಯುಗುಣವನ್ನು ತಿಳಿಯಬೇಕಾದರೆ ವಿಚಾರ ಮಾಡತಕ್ಕ ಮುಖ್ಯ ಸಂಗತಿಗಳು ಯಾವುವು?

(b) ಕುರೋಸಿವ್ಹೊ ಎಂಬುದೇನು? ಇದರಿಂದ ಜಪಾನ್ ದೇಶದ ವಾಯುಗುಣವು ಹೇಗೆ ಬದಲಾಯಿಸಿರುವುದು?

(c) ಸೈಬೀರಿಯಾ ದೇಶದ ಚಳಿ, ಆಫ್ರಿಕಾದ ಸೆಕೆ, ಇಟಲಿ ದೇಶದ ಹವ — ಇವೆಲ್ಲವೂ ಬೇಕಾದರೆ ಭೂತಾನ್ ರಾಜ್ಯದಲ್ಲಿ ಅನುಭವಕ್ಕೆ ಬರುವುವು? ಇದು ಹೇಗೆ? ಸ್ಪಷ್ಟಗೊಳಿಸಿರಿ.

III (a) ಆಮದು, ರಫ್ತು, ಎಂದರೇನು? ಒಂದು ದೇಶಕ್ಕೆ ಸಾಮಾನ್ಯವಾಗಿ ಆಮದಾಗುವ ಪದಾರ್ಥಗಳು ಯಾವುವು? ದೇಶದಿಂದ ರಫ್ತಾಗುವುವು ಯಾವುವು?

(b) ಕಾಫಿ, ಕಬ್ಬಿಣ, ಹತ್ತಿ, ಗಾಜು, ಗೋದಿ, ತೊಗಲು, ಚಿನ್ನ, ಚಿನ್ನದನಾಣ್ಯ — ಇವುಗಳಲ್ಲಿ ಇಂಗ್ಲೆಂಡಿನಿಂದ ರಫ್ತಾಗುವುವು ಯಾವುವು? ಇಂಗ್ಲೆಂಡಿಗೆ ಆಮದಾಗುವುವು ಯಾವುವು?

IV (a) ಉತ್ತರ ಅಮೆರಿಕಾದಲ್ಲಿ ದೊಡ್ಡ ದೊಡ್ಡ ನದಿಗಳು ಇರಲು ಕಾರಣವೇನು?

(b) ಈಜಿಪ್ಟ್ ದೇಶವು ಫಲವತ್ತಾದ ಪ್ರದೇಶವಾಗಿರಲು ಕಾರಣವೇನು?

V (a) ಮೈಸೂರು ದೇಶದಲ್ಲಿ ಮಳೆಗಾಲವು ಯಾವಾಗ?

(b) ಮಳೆ ಇಷ್ಟು ಬಿತ್ತೆಂದು ಹೇಗೆ ಗೊತ್ತುಮಾಡುವರು?

(c) ದಾವಣಗೆರೆಯಲ್ಲಿ ಕಂಬಳಿ ನೇಯುವ ಕಸುಬು ವಿಶೇಷವಾಗಿರಲು ಕಾರಣವೇನು?

(d) ಬಾಬಾ ಬುಡನ್‌ಗಿರಿಯಲ್ಲಿ ಯಾವ ಪೈರನ್ನು ಬಹುವಾಗಿ ಬ

ಳೆಯುವರು?

(c) ಮೈಸೂರು ದೇಶದ ಯಾವ ಪ್ರಾಂತದಲ್ಲಿ ಕಬ್ಬಿನ ಸಾಗು ವಳಿಯು ಹೆಚ್ಚು?

(d) ಲಾಹೋರ್‌ನಿಂದ ಅಟಾಕ್‌ಗೆ ರೈಲ್ ಮಾರ್ಗದಲ್ಲಿ ಪ್ರಯಾಣಮಾಡುವಾಗ ಯಾವನದಿಗಳನ್ನು ದಾಟಬೇಕಾಗುವುದು?

(b) ಈ ಪಟ್ಟಣಗಳು ಎಲ್ಲಿರುವುವು? ಅವು ಇರುವ ಸ್ಥಳವು ಅವುಗಳ ಪ್ರಾಮುಖ್ಯತೆಗೆ ಹೇಗೆ ಸಹಕಾರಿಯು?—ಜೋಂಬಾಯಿ, ಸಾನ್ ಫ್ರಾನ್ಸಿಸ್ಕೊ, ನಾಗಸಾಕಿ, ಲಂಡನ್, ಕಾನ್‌ಸ್ಟಾಂಟನೋಪಲ್,

VII ಹಿಂದೂಸ್ಥಾನದ ಭೂಪಟವನ್ನು ಬರೆದು ಅದರಲ್ಲಿ

(1) ವಿಶೇಷ ಮಳೆ ಬೀಳುವ ಸ್ಥಳಗಳು.

(2) ಜನಭರಿತವಾದ ಪ್ರದೇಶ

(3) ಚಿನ್ನ, ಕಲ್ಲಿದ್ದಲು, ಸಿಕ್ಕುವ ಸ್ಥಳಗಳು

ಇವನ್ನುಗುರ್ತಿಸಿರಿ.

ಉತ್ತರಗಳು.

I (a) ಪಂಚವಲಯಗಳು:—

ಉತ್ತರ ಶೀತವಲಯ, ಉತ್ತರ ಸಮಶೀತೋಷ್ಣವಲಯ. ಉಷ್ಣವಲಯ, ದಕ್ಷಿಣ ಸಮಶೀತೋಷ್ಣವಲಯ, ದಕ್ಷಿಣಶೀತವಲಯ.

ಇವುಗಳ ಲಕ್ಷಣಗಳು:-

ಉಷ್ಣವಲಯ; — ಇಲ್ಲಿ ಸೂರ್ಯನು ನೆಟ್ಟಗೆ ತಲೆಯಮೇಲೆ ಕಾಣುವನು. ಹಗಲು ರಾತ್ರಿ ಪ್ರಮಾಣದಲ್ಲಿ ಹೆಚ್ಚು ಭೇದವಿಲ್ಲ. ಶಖೆ ಹೆಚ್ಚು.

ಸಮಶೀತೋಷ್ಣವಲಯಗಳು;—ಇವುಗಳಲ್ಲಿ ಸೂರ್ಯನು ಯಾವಾಗಲೂ ನೆತ್ತಿಯಮೇಲೆ ಕಾಣುವುದಿಲ್ಲ. ಅಹೋರಾತ್ರಿಗಳ ಪ್ರಮಾಣದಲ್ಲಿ ತುಂಬಾ ವ್ಯತ್ಯಾಸವುಂಟು. ಅಷ್ಟು ಛಳಿಯೂ ಇಲ್ಲ. ಅಷ್ಟು ಶಖೆಯೂ ಇಲ್ಲ. ಸಮವಾಗಿರುತ್ತೆ.

ಶೀತವಲಯಗಳು,—ಸೂರ್ಯ ಬಿಂಬವು ಅನೇಕ ದಿನಗಳವರೆಗೆ ಉದಯವಿಲ್ಲ. ಕೆಲವು ದಿನಗಳವರೆಗೆ ಆಕಾಶದಲ್ಲಿ ಚಕ್ರಾಕಾರವಾಗಿ ಸುತ್ತುವಂತೆ ಕಾಣುವುದು. ಛಳಿಹೆಚ್ಚು.

[ಆಕೃತಿಯನ್ನು ತೋರಿಸಲು ಭೂಪಟದ ಮೇರೆಗಳನ್ನು ಭೂಮಿವಿವರಣೆಯ ಮೊದಲನೇ ಭಾಗದ 17 ನೇ ಪೇಜಿನಲ್ಲಿ ನೋಡಿ.]

(*b*) ಸಮಭಾಜಕ ವೃತ್ತಕ್ಕೆ ಉತ್ತರದಲ್ಲಿರುವುವು

ಇಟಲಿ, ಸಿಲೋನ್.

ದಕ್ಷಿಣದಲ್ಲಿರುವುವು

ಮಡಗಾಸ್ಕರ್. ನ್ಯೂಗಿನಿ.

(*c*) ಜಲಭಾಗದಲ್ಲಿ ಅತ್ಯಂತ ವಿಸ್ತಾರವಾದ ಸಾಗರ-ಪೆಸಿಫಿಕ್ ಸಾಗರ, ಅಮೆರಿಕಾ ಯೂರೋಪ್ ಖಂಡಗಳ ಮಧ್ಯೆ ಇರುವ ಸಾಗರ, ಅಟ್ಲಾಂಟಿಕ್ ಸಾಗರ.

II (*a*) ಸಮಭಾಜಕ ವೃತ್ತದಿಂದ ಇರುವ ದೂರ; ಸಮುದ್ರಮಟ್ಟಕ್ಕೆ ಎಷ್ಟು ಮೇಲಿದೆಯೋ ಆ ಎತ್ತರ; ಸಮುದ್ರಕ್ಕೆ ಎಷ್ಟು ದೂರದಲ್ಲಿದೆಯೋ ಆ ದೂರ; ಸುತ್ತ ಮುತ್ತಲೂ ಇರುವ ದೇಶಗಳ ವಿವರ-ಎಂದರೆ ಅವುಗಳ ಎತ್ತರ, ಅಲ್ಲಿನ ಶಾಖ ಮೊದಲಾದುವು; ಆ ಕಡೆಗೆ ಬೀಸುವ ಮಾರುತಗಳ-ಅಥವಾ ಗಾಳಿಗಳ ವಿವರ; ಮರುಭೂಮಿಗಳು, ನದಿಗಳು, ಪರ್ವತಗಳು ಇದೆಯೋ ಇಲ್ಲವೋ? ಋತುಧರ್ಮ ಯಾವುದು; ಈ ಕಾರಣಗಳಿಂದ ವಾಯುಗುಣವನ್ನು ನಿರ್ಧರಿಸಬಹುದು.

(*b*) ಕುರೋಸಿವೋ— ಇದು ಪೆಸಿಫಿಕ್ ಸಾಗರದ ಉಷ್ಣೋದಕಪ್ರವಾಹ-ಜಪಾನ್ ದೇಶದ ಚಳಿ ಹೆಚ್ಚದಂತೆ ಮಾಡಿದೆ.

(*c*) ಭೂತಾನ್ ಹಿಮಾಲಯ ಪರ್ವತ ಪ್ರಾಂತವಾಗಿರುವುದರಿಂದ ಮೇಲ್ಭಾಗದಲ್ಲಿ ಛಳಿಯೂ. ತಪ್ಪಲ ಪ್ರದೇಶದಲ್ಲಿ ಸಮಶೀತೋಷ್ಣವೂ, ಬುಡದಲ್ಲಿ ಉಷ್ಣವೂ, ಆಗಿದೆ. ಮತ್ತು ಹಿಮದಿಂದಕೂಡಿದ ಹಿಮಾಲಯ ಪರ್ವತಗಳಲ್ಲಿರುವುದರಿಂದ ಸೈಬೀರಿಯದ ಚಳಿಯೂ, ಈಶಾನ್ಯದಿಂದ ಬೀಸುವ ಶೀತಮಾರುತವನ್ನು ಈಪರ್ವತವು ತಡೆಯುವುದರಿಂದ ಆಫ್ರಿಕಾದ ಕಾವೆಯೂ, ಹಿಂದೂಸಾಗರದಿಂದ ಬೀಸುವ ಗಾಳಿಗೆ ಒಳಪಡುವುದರಿಂದ ಇಟಲಿಯ ಹವವೂ ಭೂತಾನಿನಲ್ಲಿ ಅನುಭವಕ್ಕೆ ಬರುವುವು.

III (*a*) ಆಮದು ಎಂದರೆ—ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ತರಿಸತಕ್ಕ ಪದಾರ್ಥಗಳು. (ಆಮದು—ತರಿಸುವ)

ರಫ್ತು ಎಂದರೆ— ಬೇರೆ ದೇಶಗಳಿಗೆ ಇಲ್ಲಿಂದ ಕಳುಹಿಸತಕ್ಕ ಪದಾರ್ಥಗಳು (ರಫ್ತು—ಕಳುಹಿಸುವ)

ಆಮದು ಆಗುವ ಪದಾರ್ಥಗಳು—ಒಂದುಸ್ಥಳದಲ್ಲಿ ಅವಶ್ಯಕವಾಗಿದ್ದು ಅಲ್ಲಿ ಹೊಂದದೇ ಇರುವ ಪದಾರ್ಥಗಳು.

ರಫ್ತು ಆಗುವ ಪದಾರ್ಥಗಳು— ಒಂದು ಸ್ಥಳದಲ್ಲಿ ಹೆಚ್ಚಾಗಿ ದೊರೆಯುವ ಪದಾರ್ಥಗಳು.

(b) ಇಂಗ್ಲೆಂಡಿನಿಂದ ರಫ್ತು ಆಗುವ ಪದಾರ್ಥಗಳು:—

ಗೋಧಿ, ಗಾಜು, ಚಿನ್ನದನಾಣ್ಯ, ಕಬ್ಬಿಣ.

ಇಂಗ್ಲೆಂಡಿನಿಂದ ಆಮದಾಗುವ ಪದಾರ್ಥಗಳು:—

ಕಾಫಿ, ಹತ್ತಿ, ಬೆಣ್ಣೆ, ತೊಗಲು.

IV (a) ಉತ್ತರ ಅಮೇರಿಕಾ ಖಂಡದ ಅತ್ಯುನ್ನತ ಪ್ರದೇಶಗಳು ಪೆಸಿಫಿಕ್ ಸಾಗರದ ಹತ್ತಿರವಿರುವುದರಿಂದ ಬಹಳ ಉದ್ದವಾದ ನದಿಗಳು ಇರುವುದಕ್ಕೆ ಅಸ್ಪದವಾಗಿರುತ್ತೆ. ಪರ್ವತಶ್ರೇಣಿ ಸಮುದಾಯಗಳು ಪಶ್ಚಿಮ ಪೂರ್ವಭಾಗಗಳಲ್ಲಿರುವುದರಿಂದಲೂ, ಇವುಗಳ ನಡುವೆ ದೊಡ್ಡ ಮೈದಾನವಿರುವುದರಿಂದಲೂ ಈ ಉನ್ನತ ಪ್ರದೇಶಗಳ ನೀರು ತಗ್ಗಾದ ಮೈದಾನಕ್ಕೆ ಬರುತ್ತದೆ. ಮತ್ತು ಈ ಮೈದಾನದ ಜಲವಿಭಾಗ ಸ್ಥಾನವು ನಡುವೆ ಪೂರ್ವಪಶ್ಚಿಮವಾಗಿ ಪ್ರಸರಿಸಿರುವುದರಿಂದಲೂ ದೊಡ್ಡ ದೊಡ್ಡ ನದಿಗಳು ಇರಲು ಕಾರಣವಾಗಿರುತ್ತೆ.

(b) ಈಜಿಪ್ಟ್ ದೇಶದಲ್ಲಿ ಪ್ರಸಿದ್ಧವಾದ ನೈಲ್ ನದಿಯು ಇರುತ್ತೆ. ಇದು ಅನೇಕ ಕಾಲುವೆಗಳನ್ನು ಕೊಟ್ಟಿರುತ್ತೆ. ಮತ್ತು ಇದು ಹರಿಯುವಾಗ ಸಾರವತ್ತಾದ ಮೆಕ್ಕಲನ್ನು ತಂದು ನೀರಿನ ಮೂಲಕ ಮಣ್ಣಿಗೆ ಸೇರಿಸಿ ಫಲವತ್ತಾಗಿ ಮಾಡುತ್ತದೆ. ಈಜಿಪ್ಟ್ ದೇಶವೆಲ್ಲಾ ನೈಲ್ ನದಿಯ ಕಾಲುವೆಗಳಿಂದ ತುಂಬಿರುವುದರಿಂದ ಇದು ಫಲವತ್ತಾದ ಪ್ರದೇಶವಾಗಿರುತ್ತದೆ

V (a) ಮೈಸೂರುದೇಶದಲ್ಲಿ ಜೂನ್, ಜುಲೈ, ಆಗಸ್ಟ್, ಸೆಪ್ಟಂಬರ್, ಅಕ್ಟೋಬರ್, ನವಂಬರ್ ತಿಂಗಳುಗಳು ಮಳೆಗಾಲವಾಗಿರುತ್ತೆ.

(b) ಮಳೆಮಾಪಕಯಂತ್ರದ ಸಹಾಯದಿಂದ ಮಳೆ ಎಷ್ಟು ಬೀಳುತ್ತೆಂದು ಗೊತ್ತುಮಾಡುವರು.

(c) ದಾವಣಗೆರೆ; ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಸೇರಿದ್ದು. ಈ ಡಿಸ್ಟ್ರಿಕ್ಟಿನಲ್ಲಿರುವ ಗೌಡರುಗಳು ದೊಡ್ಡದೊಡ್ಡ ಕುರಿಮಂದೆಗಳನ್ನು ಇಟ್ಟಿರುವುದರಿಂದ ತುಪ್ಪಟವು ಹೆಚ್ಚಾಗಿ ದೊರೆಯುತ್ತೆ. ಆದುದರಿಂದ ಇಲ್ಲಿ ಕಂಬಳಿ ನೇಯುವ ಕಸಬು ವಿಶೇಷವಾಗಿರುತ್ತೆ

(d) ಕಾಶ್ಮೀರು.

(e) ಕೋಲಾರ ಮತ್ತು ಹಾಸನಡಿಸ್ಟ್ರಿಕ್ಟುಗಳಲ್ಲಿ ಕಬ್ಬುಹೆಚ್ಚು

VI (a) ಜೀಲಂ, ಚೀನಾಬ್. ರಾವಿ.

(b) ಬೊಂಬಾಯಿ—ಇಂಡಿಯಾದಲ್ಲಿ ಅರಬ್ಬೀ ಸಮುದ್ರದ ತೀರದಲ್ಲಿರುವ ಬಂದರು. ಪರದೇಶದ ವ್ಯಾಪಾರಕ್ಕೆ ಅನುಕೂಲವಾದ ರೇವುಪಟ್ಟಣವಾಗಿರುವುದು.

ಸಾನ್‌ಫ್ರಾನ್ಸಿಸ್ಕೊ—ಇದು ಸಂಯುಕ್ತಸಂಸ್ಥಾನದ [illegible]

ಸ್ಕೊ ಕೊಲ್ಲಿಯ ದಡದಲ್ಲಿ ರೇವುಪಟ್ಟಣ. ಇಲ್ಲಿಂದ ಹೊಗೆಯ ಹಡಗುಗಳು—ಚೀಣಾ, ಜಪಾನ್, ಆಸ್ಟ್ರೇಲಿಯಾ, ಸ್ಯಾಂಡ್‌ವಿಚ್ ದ್ವೀಪಗಳ ಕಡೆ ಹೋಗುತ್ತವೆ.

ನಾಗಸಾಕಿ—ಜಪಾನ್‌ನಲ್ಲಿ ಪೆಸಿಫಿಕ್ ಸಾಗರದ ತೀರದಲ್ಲಿದೆ. ಇದು ಟ್ರೀಟಿಪೋರ್ಟ್ ಎಂದರೆ ಅನ್ಯದೇಶೀಯರು ಬಂದು ವ್ಯಾಪಾರವ ಮಾಡಬಹುದಾದ ರೇವುಪಟ್ಟಣ.

ಲಂಡನ್—ಬ್ರಿಟಿಷ್ ಚಕ್ರಾಧಿಪತ್ಯದ ರಾಜಧಾನಿ. ಟೆಮ್ಸ್‌ನದಿಯ ದಡದಲ್ಲಿದೆ. ವ್ಯಾಪಾರಕ್ಕೆ ಬರುವ ಅನ್ಯದೇಶೀಯರಿಗೆ ಮೊದಲು ಸಿಕ್ಕುವ ರೇವುಪಟ್ಟಣ.

ಕಾನ್‌ಸ್ಟಾಂಟಿನೋಪಲ್—ಯೂರೋಪಿನ ತುರ್ಕಿಯಲ್ಲಿ ಬಾಸ್ಫೊರಸ್ ಜಲಸಂಧಿಯ ತೀರದಲ್ಲಿದೆ. ವ್ಯಾಪಾರಕ್ಕೆ ಅನುಕೂಲವಾದ ಪಟ್ಟಣ. ಈ ಪಟ್ಟಣಗಳು ರೇವುಪಟ್ಟಣಗಳಾಗಿರುವುದರಿಂದ ಸಕಲದೇಶದ ಜನಗಳೂ ಬಂದು ಹೋಗುವುದಕ್ಕೂ ವ್ಯಾಪಾರಾಭಿವೃದ್ಧಿಗಳಿಗೂ ಸಹಕಾರಿಯಾಗಿರುವವು.

1914

I. (a) ಖಂಡಗಳನ್ನು ಕೂಡಿಸುವ ಎರಡು ಭೂಸಂಧಿಗಳ ಮತ್ತು ಅವುಗಳನ್ನು ಪ್ರತ್ಯೇಕಿಸುವ ಎರಡು ಜಲಸಂಧಿಗಳ ಹೆಸರುಗಳನ್ನು ಬರೆಯಿರಿ.

(b) ಸ್ವಾಭಾವಿಕ ಲಕ್ಷಣದಲ್ಲಿ ಇಂಗ್ಲೆಂಡು ದೇಶದ ಸಮುದ್ರತೀರಕ್ಕೂ, ಹಿಂದೂಸ್ಥಾನದ ಸಮುದ್ರತೀರಕ್ಕೂ ಇರುವ ಮುಖ್ಯವ್ಯತ್ಯಾಸವೇನು? ಇದರಿಂದ ಈ ದೇಶಗಳ ವಾಯುಗುಣವು ಹೇಗೆ ಬದಲಾಯಿಸುವುದು?

(c) ಮದರಾಸಿನಿಂದ ಬೊಂಬಾಯಿಗೆ ಸಮುದ್ರದ ಅಂಚಿನಲ್ಲಿ ನೀವು ಜಹಜಿನಲ್ಲಿ ಪ್ರಯಾಣಮಾಡಿದರೆ, ನಿಮಗೆ ಕ್ರಮವಾಗಿ ಸಿಕ್ಕುವ ಮುಖ್ಯವಾದ ಆರು ರೇವುಪಟ್ಟಣಗಳ ಹೆಸರುಗಳನ್ನು ಬರೆಯಿರಿ.

II. (a) ಹಿಂದೂಸ್ಥಾನದಲ್ಲಿ ಬೀಸುವ ಗ್ರೀಷ್ಮಕಾಲ ಮಾರುತಗ

ಳು ಯಾವುವು? ಮೈಸೂರು ದೇಶದಲ್ಲಿ ಮಳೆಬೀಳುವುದಕ್ಕೆ ಇವುಗಳಿಂದ ಅನುಕೂಲಗಳೇನು?

(b) ಉತ್ತರ ಅಮೆರಿಕ ಖಂಡದ ಮಧ್ಯಭಾಗದ ಮೈದಾನದಲ್ಲಿ (1) ಬೇಸಗೆಯಲ್ಲಿ ಸೆಕೆ ಚಳಿಗಾಲದಲ್ಲಿ ಚಳಿ ಹೆಚ್ಚಾಗಿ ತೋರುವುದಕ್ಕೂ (2) ವಾಯುಗುಣ ಅನೇಕ ವೇಳೆಗಳಲ್ಲಿ ಥಟ್ಟನೆ ಬದಲಾಯಿಸುವುದಕ್ಕೂ ಕಾರಣಗಳೇನು?

(c) ದಕ್ಷಿಣ ಅಮೆರಿಕದ ಉತ್ತರ ಭಾಗದಲ್ಲಿ ಮಳೆಯು ಬಹು ವಿಶೇಷವಾಗಿ ಬೀಳುವುದಕ್ಕೆ ಕಾರಣಗಳೇನು?

III (a) ಹಿಂದೂಸ್ಥಾನದಲ್ಲಿ ದಕ್ಷಿಣ ಭಾಗದ ನದಿಗಳಿಗಿಂತ ಉತ್ತರ ಭಾಗದ ನದಿಗಳು ವ್ಯವಸಾಯಕ್ಕೆ ಹೆಚ್ಚು ಸಹಕಾರಿಗಳಾಗಿರಲು ಕಾರಣವೇನು?

(b) ಕಾವೇರಿನದಿಯು ಹರಿಯುವ ಮಾರ್ಗವು ಯಾವುದು? ಈ ನದಿಯಿಂದ ಮೈಸೂರು ದೇಶಕ್ಕೆ ಉಂಟಾಗುವ ಮುಖ್ಯವಾದ ಪ್ರಯೋಜನಗಳು ಯಾವುವು?

IV (a) ಟೀ, ಗೋಧಿ, ಹತ್ತಿ.— ಇವು ಹಿಂದೂಸ್ಥಾನದ ಯಾವ ಪ್ರದೇಶಗಳಲ್ಲಿ ಬೆಳೆಯುವುವು?

(b) ಚಮರಿಮೃಗ, ಲ್ಯಾಮ, ಹಿಮಸಾರಂಗ:— ಇವು ವಿಶೇಷವಾಗಿರುವ ಪ್ರದೇಶಗಳು ಯಾವುವು ಮತ್ತು ಇವುಗಳ ಉಪಯೋಗವೇನು?

(c) ಚಿನ್ನ, ಕಲ್ಲಿದ್ದಲು, ಸೀಮೆಎಣ್ಣೆ (ಕಾರೋಸಿನ್):— ಇವು ಭೂಮಿಯ ಯಾವ ಪ್ರದೇಶಗಳಲ್ಲಿ ವಿಶೇಷವಾಗಿ ಸಿಕ್ಕುತ್ತವೆ?

(a) ಲಂಡನ್ನಿಂದ ಬೊಂಬಾಯಿಗೆ ಪ್ರಯಾಣ ಮಾಡಬೇಕಾದರೆ ಅತ್ಯಂತ ಹತ್ತಿರವಾದ ಮಾರ್ಗವು ಯಾವುದು?

(b) ಮೆಲ್ಬೋರ್ನ್, ಷಾಂಗ್‌ಹೈ, ರಂಗೂನ್, ಮಾಂಟ್ರಿಯಲ್:— ಈ ಪಟ್ಟಣಗಳು ಎಲ್ಲಿ ಇರುವುವು? ಇವುಗಳ ಪ್ರಾಮುಖತೆಗೆ ಇವು ಇರುವ ಸ್ಥಳ ವಿಶೇಷವು ಹೇಗೆ ಸಹಕಾರಿಯಾಗಿರುವುದು?

ಉತ್ತರಗಳು.

(a) ಸೂಯೆಜ್ (ಇದು ಏಷ್ಯಾಖಂಡವನ್ನು ಆಫ್ರಿಕಾಖಂಡವನ್ನು ಕೂಡಿಸುತ್ತದೆ. ಪನಾಮ— (ಇದು ಉತ್ತರ ಅಮೇರಿಕಾವನ್ನು ದಕ್ಷಿಣಅಮೇರಿಕಾವನ್ನು ಕೂಡಿಸುತ್ತದೆ.) ಜಿಬ್ರಾಲ್ಟರ್— (ಆಫ್ರಿಕವನ್ನು ಏಷ್ಯವನ್ನು ಪ್ರತ್ಯೇಕಿಸುತ್ತವೆ.) ಬೆರಿಂಗ್— (ಏಷ್ಯಾ ಮತ್ತು ಉತ್ತರಅಮೇರಿಕಖಂಡಗಳನ್ನು ಪ್ರತ್ಯೇಕಿಸುತ್ತದೆ.)

(b) ಇಂಗ್ಲೆಂಡಿನ ಸಮುದ್ರತೀರ— ಇದು ಸಮಶೀತೋಷ್ಣವಲಯದಲ್ಲಿದ್ದಾಗ್ಯೂ ಶೀತವಲಯದ ಸಮುದ್ರಕ್ಕೆ ಸಂಬಂಧಪಟ್ಟಿದೆ. ಚಳಿಯು ವಿಪರೀತವಾಗಿದೆ. ಇಲ್ಲಿಬಂದರುಗಳು ಹೆಚ್ಚಾಗಿವೆ. ಅಟ್ಲಾಂಟಿಕ್ ಸಾಗರದ ಕಡೆಯಿಂದ ಬರುವ ಗಲ್ಫ್‌ಸ್ಟ್ರೀಂ ಎಂಬ ಉಷ್ಣೋದಕ ಪ್ರವಾಹದ ದೆಸೆಯಿಂದಲೂ ಸಮುದ್ರವು ಹತ್ತಿರದಲ್ಲಿರುವುದರಿಂದಲೂ ಹವವು ಹಿತಕರವಾಗಿದೆ.

ಇಂಡಿಯಾದೇಶದ ಸಮುದ್ರತೀರ— ಇದು ಉಷ್ಣವಲಯದಲ್ಲಿದೆ ಆದ್ದರಿಂದ ಇಲ್ಲಿ ಚಳಿಯೂ ಸೆಖೆಯೂ ಒಂದೇರೀತಿಯಾಗಿರುತ್ತದೆ. ಇಲ್ಲಿ ಬಂದರುಗಳು ವಿಶೇಷವಾಗಿಲ್ಲ ಇಂಡಿಯಾದೇಶದ ನಗರಗಳು ಸಮುದ್ರಕ್ಕೆ ಬಹುದೂರದಲ್ಲಿವೆ

(c) ಮುಖ್ಯವಾದ ಆರು ರೇವುಪಟ್ಟಣಗಳು.
ಪುದಿಚೇರಿ, ತುತ್ತುಕುಡಿ, ಕೊಚ್ಚಿ, ಕಾಲಿಕಟ್, ಮಂಗಳೂರು, ಗೋವ ಮೊದಲಾದುವು.

II (a) ಹಿಂಗಾರುಮತ್ತು ಮುಂಗಾರುಗಾಳಿಗಳು; ಮೈಸೂರು ದೇಶವು ಪೂರ್ವ ಮತ್ತು ಪಶ್ಚಿಮ ಘಟ್ಟಗಳ ನಡುವೆ ಇರುವುದರಿಂದ ಹಿಂಗಾರಿನ ಮುಂಗಾರು ಮಳೆಗಳೆರಡೂ ತಕ್ಕಷ್ಟುಗೆ ನಡೆಯುವುವು. ಪಶ್ಚಿಮ ಘಟ್ಟಗಳಕಡೆ ಮಳೆ ಬಹಳ ಹೆಚ್ಚು ಅಲ್ಲಿಂದ ಪೂರ್ವಕ್ಕೆ ಮಳೆ ಕಡಿಮೆಯಾಗುತ್ತಾ ಬರುವುದು.

(b) (1) ಪೆಸಿಫಿಕ್‌ಸಾಗರದಮೇಲೆ ಬೀಸಿಕೊಂಡುಬರುವ ಜಲಪೂರಿತವಾದ ಮಾರುತವು ಈಖಂಡದೊಳಕ್ಕೆ ಬಾರದಿರುವಂತೆ ಪಶ್ಚಿಮದಲ್ಲಿರುವ ಪರ್ವತಗಳು ತಡೆಯುವುವು ಆದ್ದರಿಂದ ಈಖಂಡದ ಒಳಭಾಗದಲ್ಲಿ ಬೇಸಿಗೆಯಲ್ಲಿ ಸೆಖೆ ಚಳಿಗಾಲದಲ್ಲಿ ಚಳಿ ಹೆಚ್ಚಾಗಿ ಕಾಣುತ್ತದೆ.

(2) ಈಖಂಡದ ಮಧ್ಯಭಾಗದಲ್ಲಿ ಮೈದಾನವು ದಕ್ಷಿಣೋತ್ತರವಾಗಿ

ಹಬ್ಬಿಕೊಂಡಿವೆ. ಉತ್ತರಶೀತವಲಯದಿಂದ ಬೀಸುವ ಶೀತಮಾರುತಗಳನ್ನು ತಡೆಯುವುದಕ್ಕೆ ಅಡ್ಡವಾದ ಉತ್ತರಭಾಗದಲ್ಲಿ ಪರ್ವತಗಳು ಯಾವುದೂ ಇಲ್ಲದೆ ಇರುವುದರಿಂದಲೂ ವಾಯುಗುಣವು ಥಟ್ಟನೆ ಬದಲಾಯಿಸುವದುಂಟು. ಗಿದ್ದ ವಾಯುಗುಣವು ಇನ್ನು ಸ್ವಲ್ಪಹೊತ್ತಿಗೆ ಇರುವದಿಲ್ಲ.

(c) ದಕ್ಷಿಣ ಅಮೇರಿಕದ ಉತ್ತರಭಾಗದಲ್ಲಿ ಬೀಸಿಕೊಂಡು ಬರುವ ಮಾರುತಗಳು ಉಷ್ಣವಲಯದಲ್ಲಿರುವ ವಿಶಾಲವಾದ ಸಾಗರಗಳಿಂದ ಬರುತ್ತವೆ. ಆದ್ದರಿಂದ ಮಳೆಯಮೋಡಗಳನ್ನು ತರುತ್ತವೆ.

III (a) ಉತ್ತರಭಾಗದ ನದಿಗಳು—ಮಳೆಗಾಲದಲ್ಲಿ ಮಳೆ ಚನ್ನಾಗಿ ಬೀಳುತ್ತದೆ. ಬೇಸಿಗೆಕಾಲದಲ್ಲಿ ಹಿಮಪರ್ವತದ ಮಂಜು ಕರಗಿ ನದಿಯಲ್ಲಿ ಪ್ರವಹಿಸುತ್ತದೆ. ಇವು ಜೀವನದಿಗಳು. ಮಳೆಗಾಲದಲ್ಲಿ ಪೂರ್ಣಪ್ರವಾಹವಾಗಿ ಹರಿಯುತ್ತವೆ. ಇವು ಹರಿಯುವಾಗ ಮೆಕ್ಕಲನ್ನು ತಂದು ದಡಗಳಮೇಲೆ ಹಾಕುತ್ತವೆ. ಈ ಮೆಕ್ಕಲುಮಣ್ಣು ವ್ಯವಸಾಯಕ್ಕೆ ಅನುಕೂಲವಾದದ್ದು.

ದಕ್ಷಿಣಭಾಗದ ನದಿಗಳು—ದಕ್ಷಿಣಭಾಗದಲ್ಲಿಯಾದರೋ ಮಳೆಕಡಿಮೆ. ನದಿಗಳು ಮಳೆಗಾಲದಲ್ಲಿಮಾತ್ರ ಪೂರ್ಣಪ್ರವಾಹವಾಗಿ ಹರಿಯುತ್ತವೆ. ಬೇಸಿಗೆಕಾಲದಲ್ಲಿ ಬತ್ತಿಹೋಗುತ್ತವೆ. ಕಾಲುವೆಗಳಿಂದ ನೀರನ್ನು ಒದಗಿಸುವುದಕ್ಕೆ ದಿಣ್ಣೆಹಳ್ಳಗಳಿಂದ ಕೂಡಿದೆ. ಆದ್ದರಿಂದ ದಕ್ಷಿಣಭಾಗದ ನದಿಗಿಂತಲೂ ಉತ್ತರಭಾಗದ ನದಿಗಳು ವ್ಯವಸಾಯಕ್ಕೆ ಅನುಕೂಲವಾಗಿವೆ.

(b) ಕಾವೇರಿನದಿಯು ಕೊಡಗಿನ ಸೀಮೆಯ ತಲಕಾವೇರಿಯೆಂಬ ಸ್ಥಳದಲ್ಲಿ ಹುಟ್ಟಿ ಸ್ವಲ್ಪದೂರ ಪೂರ್ವವಾಹಿನಿಯಾಗಿ ಹರಿದು ಅನಂತರ ಉತ್ತರವಾಹಿನಿಯಾಗಿ ಆಮೇಲೆ ಆಗ್ನೇಯಾಭಿಮುಖವಾಗಿ ಹರಿದು ಚುಂಚನಕಟ್ಟೆಯಲ್ಲಿ ಪ್ರವಹಿಸಿ ಎಡತೊರೆಮಾರ್ಗವಾಗಿ ಬಂದು ಎರಡುಭಾಗಗಳಾಗಿ ಒಡೆದು ಶ್ರೀರಂಗಪಟ್ಟಣವನ್ನು ಬಳಸಿಕೊಂಡು ಮರಳಿ ಒಂದಾಗಿಸೇರಿ ತಲಕಾಡಿನಮಾರ್ಗವಾಗಿ ಹರಿದು ಶಿವನಸಮುದ್ರವೆಂಬ ಸ್ಥಳದಲ್ಲಿ ೩೦೦ ಅಡಿಗಳಷ್ಟು ಕೆಳಕ್ಕೆ ಧುಮುಕಿ ಪೂರ್ವವಾಹಿನಿಯಾಗಿ ಹರಿಯುತ್ತ ತಿರುಚನಾಪಲ್ಲಿಯ ಸಮೀಪದಲ್ಲಿ ಕೊಲ್ಲಡಂ, ಕಾವೇರಿ ಎಂಬ ಎರಡು ಶಾಖೆಗಳಾಗಿ ಒಡೆದು ಕೊಲ್ಲಡಂ ದೇವೀಕೋಟೆ ಸಮೀಪದಲ್ಲಿಯೂ ಕಾವೇರಿಯು ನಾಗಪಟ್ಟಣದಸಮೀಪದಲ್ಲಿಯೂ ಬಂಗಾಳಕೊಲ್ಲಿಯನ್ನು ಸೇರುತ್ತೆ.

ಈ ನದಿಗೆ ಅಣೆಯನ್ನು ಕಟ್ಟಿ ಕಾಲುವೆಗಳ [illegible] ಅದರಿಂದ ವ್ಯವಸಾಯಕ್ಕೆ ಅನುಕೂಲಮಾಡುತ್ತಾರೆ. ಈ ನದಿಯು ಧುಮುಕುವ ಕಡೆಯಲ್ಲಿ ವಿದ್ಯುಚ್ಛಕ್ತಿಯೆಂಬ ಯಂತ್ರವನ್ನಿಟ್ಟು ಅದರಮೂಲಕ ಮೈಸೂರಿನಲ್ಲಿಯೂ ಬೆಂಗಳೂರಿನಲ್ಲಿಯೂ ದೀಪಗಳನ್ನು ಹಚ್ಚುವುದಕ್ಕೂ ಮತ್ತು ಕೋಲಾರದ ಚಿನ್ನದಗಣಿಗಳಲ್ಲಿ ಕೆಲಸನಡಿಸುವುದಕ್ಕೆ ಉಪಯೋಗಿಸುತ್ತಾರೆ ಮಳೆ ಕಡಿಮೆಯಾದಕಡೆ ಇದ

ರ ನೀರಿನಿಂದ ವ್ಯವಸಾಯವನ್ನು ನಡಿಸುತ್ತಾರೆ. ಮತ್ತು ಮೈಸೂರುದೇಶವನ್ನು ಬಹು ಫಲವತ್ತಾಗಿ ಮಾಡುತ್ತದೆ.

IV (*a*) ಟೀ—ತಿರುವಾಂಕೂರು, ನೀಲಗಿರಿ ಡಾರ್ಜಿಲಿಂಗ್, ಅಸ್ಸಾಂದೇಶಗಳಲ್ಲಿಯೂ ಬೆಳೆಯುತ್ತಾರೆ.

ಗೋಧಿ—ಉತ್ತರಇಂಡಿಯಾ ಗಂಗಾನದಿಗಳ ಕಣಿವೆಗಳಲ್ಲಿಯೂ ಬೆಳೆಯುತ್ತಾರೆ.

ಹತ್ತಿ—ಬೊಂಬಾಯಿ ಮಧ್ಯಪ್ರಾಂತ್ಯಗಳು ಗುಜರಾತ್ ದೇಶಗಳಲ್ಲಿ ಬೆಳೆಯುತ್ತಾರೆ.

(*b*) ಚಮರಿಮೃಗ—ಟಿಬೆಟ್‌ನಲ್ಲಿ ಹೆಚ್ಚಾಗಿ ದೊರೆಯುತ್ತದೆ ಪ್ರಯೋಜನ—ಇದರ ಕೂದಲಿನಿಂದ ಹೆಂಗಸರಿಗೆ ಅವಶ್ಯವಾದ ಚೌರಿಗಳೂ ದೇವರಿಗೆ ಬೀಸುವ ಚಾಮರಗಳನ್ನು ಮಾಡುತ್ತಾರೆ.

ಲ್ಯಾಮ—ದಕ್ಷಿಣಅಮೇರಿಕಾದಲ್ಲಿ ಸಿಕ್ಕುತ್ತದೆ. ಇದು ಒಂಟೆಜಾತಿಗೆ ಸೇರಿರುವ ಡುಬ್ಬಿಲ್ಲದಪ್ರಾಣಿ ಇದನ್ನು ದಕ್ಷಿಣಅಮೇರಿಕಾದಲ್ಲಿ ವಿಶೇಷವಾಗಿಸಾಕುತ್ತಾರೆ. ಇದು ಸವಾರಿಗೂ ಮೂಟೆಗಳನ್ನು ಹೊರುವುದಕ್ಕೂ ಉಪಯೋಗವಾಗುತ್ತದೆ.

ಹಿಮಸಾರಂಗ—ಇದು ಉತ್ತರಶೀತವಲಯದಲ್ಲಿ ವಾಸಮಾಡುವಪ್ರಾಣಿ, ಇದರಿಂದ ಪ್ರಯೋಜನ—ಇದನ್ನು ಮಂಜಿನಗಡ್ಡೆಗಳಲ್ಲಿ ಪ್ರಯಾಣಮಾಡುವದಕ್ಕೆ ಚಕ್ರವಿಲ್ಲದ ಗಾಡಿಗೆ ಕಟ್ಟುತ್ತಾರೆ.

(*c*) ಚಿನ್ನ—ಇಂಡಿಯಾ ಆಸ್ಟ್ರೇಲಿಯ ಸೈಬೀರಿಯಗಳಲ್ಲಿ ಸಿಕ್ಕುತ್ತದೆ.

ಕಲ್ಲಿದ್ದಲು—ಬಂಗಾಳ, ಸಂಯುಕ್ತಸಂಸ್ಥಾನ ಗ್ರೇಟ್‌ಬ್ರಿಟನ್ ಮತ್ತುಸ್ವಲ್ಪ ಸಾಮಾನ್ಯವಾಗಿಯೂ ಯೂರೋಪ್‌ಖಂಡದಲ್ಲೆಲ್ಲಾ ಸಿಕ್ಕುತ್ತದೆ.

ಸೀಮೆಎಣ್ಣೆ—ಬಾಕು ಸಂಯುಕ್ತಸಂಸ್ಥಾನ, ಬರ್ಮಾದೇಶಗಳಲ್ಲಿ ಸಿಕ್ಕುತ್ತ ತ್ತದೆ.

V (*a*) ಲಂಡನ್ನಿನಿಂದ ಹೊರಟು ರೈಲ್‌ಮಾರ್ಗವಾಗಿ ಡೋವರ್‌ಎಂಬರೇವುಪಟ್ಟಣಕ್ಕೆ ಬಂದು ಹೊಗೆಯುಜಹಜಿನಲ್ಲಿ ಇಂಗ್ಲೀಷ್ ಕಡಲ್ಗಾಲುವೆಯನ್ನು ದಾಟಿ ಪುನಃ ರೈಲ್ವೇಯಿಂದ ಇಟಲಿಯಲ್ಲಿರುವ ಬ್ರಿಂಡಿಜಿಯನ್ನುಸೇರಿ ಹೊಗೆಜಹಜಿನಲ್ಲಿ ಸೂಯಿಸ್‌ಕಾಲುವೆಮಾರ್ಗವಾಗಿ ಪ್ರಯಾಣಮಾಡಿ ಏಡನ್ ಎಂಬುದಕ್ಕೆ ಬಂದು ಬೊಂಬಾಯಿನಲ್ಲಿ ಇಳಿಯಬಹುದು. ಇದು ಹದಿನಾರುದಿವಸದ ಪ್ರಯಾಣ.

(*b*) ಮೆಲ್‌ಬೋರ್ನ್—ವಿಕ್ಟೋರಿಯಾಕಾಲೋನಿಗೆ ರಾಜಧಾನಿ ಸುಂದರವಾದ ಪಟ್ಟಣ ಸಕಲವಿದ್ಯಾನಿಲಯವೂ ಪುಸ್ತಕ ಭಂಡಾರವೂ ಇದೆ. ಇದು ಬಹಳ ದೊಡ್ಡಪಟ್ಟಣ.

ಷಾಂಗ್‌ಹೈ—ಯಾಂಗ್ಟ್ಸಿಕಿಯಾಂಗ್ ನದಿಯ ದಡದಲ್ಲಿದೆ. ವಿಶೇಷವ್ಯಾಪಾರ

ಸ್ಥಳ ಹಡಗು ಕಟ್ಟುವಸ್ಥಳ. ವಿದ್ಯಾಪರೀಕ್ಷೆಗೆ ಮುಖ್ಯಸ್ಥಳ.

ರೆಂಗೂನ್—ಕೆಳಗಿನಬರ್ಮದ ರಾಜಧಾನಿ ವ್ಯಾಪಾರಸ್ಥಳ ಇಲ್ಲಿಂದ ಅಕ್ಕಿ ರಫ್ತಾಗುತ್ತದೆ.

ಮಾಂಟ್ರಿಯಲ್—ಬ್ರಿಟಿಷ್ ಅಮೆರಿಕದಲ್ಲಿದೆ ಸುಂದರವಾದಪಟ್ಟಣ ವ್ಯಾಪಾರಸ್ಥಳ.

1915

I (1) ಅಹೋರಾತ್ರಿಗಳಾಗಲು ಕಾರಣವೇನು?

(2) ಸಮುದ್ರದಿಂದ ತೀರಪ್ರದೇಶದ ವಾಯುಗುಣವು ಹೇಗೆ ಬದಲಾಯಿಸುವುದು?

(3) ಸಮಭಾಜಕವೃತ್ತದಲ್ಲಿ ಮಳೆಯು ಹೆಚ್ಚಾಗಿ ಬೀಳಲು ಕಾರಣವೇನು?

II (1) ಬಾಲ್ಟಿಕ್ ಸಮುದ್ರದಿಂದ ದಕ್ಷಿಣಕ್ಕೆ ಹೊರಟು ಕಪ್ಪು ಕಡಲಿಗೆ ಹೋಗುವ ಜಲಮಾರ್ಗದಲ್ಲಿ ಕ್ರಮವಾಗಿಸಿಕ್ಕುವ ಜಲಸಂಧಿಗಳು ಯಾವುವು?

(2) ಇಂಗ್ಲಂಡಿನಲ್ಲಿ ಹತ್ತಿಯಬಟ್ಟೆ, ಉಣ್ಣೆಯಬಟ್ಟೆ ಕಬ್ಬಿಣದಸಾಮಾನುಗಳು—ಇವು ಯಾವಯಾವ ಪ್ರದೇಶಗಳಲ್ಲಿ ತಯಾರಾಗುತ್ತವೆ? ಹೀಗೆ ತಯಾರಾಗುವುದಕ್ಕೆ ಸ್ಥಳದಪ್ರಾಮುಖ್ಯತೆಯೇನಾದರೂ ಉಂಟೇ?

(3) ಆಲ್ಪ್ಸ್ ಪರ್ವತಗಳಲ್ಲಿ ಹುಟ್ಟುವ ಮುಖ್ಯವಾದ ಮೂರು ನದಿಗಳನ್ನೂ ಅವು ಹರಿದುಹೋಗುವ ದೇಶಗಳನ್ನೂ ತಿಳಿಸಿರಿ.

III (1) ದಕ್ಷಿಣ ಅಮೆರಿಕ ಮತ್ತು ಆಫ್ರಿಕ ಇವೆರಡನ್ನೂ ಒಂದಕ್ಕೊಂದಕ್ಕೆ ಹೋಲಿಸಿರಿ

(2) ನೈಲ್‌ನದಿಯಿಂದ ಈಜಿಪ್ಟ್ ದೇಶಕ್ಕಾಗುವ ಉಪಯೋಗವೇನು?

(3) ಉತ್ತರ ಅಮೆರಿಕದಲ್ಲಿನ ಮುಖ್ಯವಾದ ಸರೋವರಗಳ

ನ್ನು ತಿಳಿಸಿರಿ.

IV (1) ಇಂಡಿಯಾದೇಶದ ಪೂರ್ವಪಶ್ಚಿಮ ಘಟ್ಟಗಳನ್ನೊಂದ ಕ್ಕೊಂದಕ್ಕೆ ಹೋಲಿಸಿ ಪಶ್ಚಿಮ ಘಟ್ಟಗಳಿಂದಾಗುವ ಉಪಯೋಗವನ್ನೂ ತಿಳಿಸಿರಿ.

(2) ಇಂಡಿಯಾದ ಬೆಳೆಗಳಲ್ಲಿ ಮುಖ್ಯವಾದ ಮೂರು ಬೆಳೆ ಗಳನ್ನೂ ಅವು ವಿಶೇಷವಾಗಿ ಬೆಳೆಯುವ ಪ್ರಾಂತ್ಯ ಗಳನ್ನೂ ತಿಳಿಸಿರಿ.

V (1) ಕರಾಚಿ (2) ಗ್ಲಾಸ್ಗೋ (3) ಬೆಲ್‌ಫಾಸ್ಟ್ (4) ಟ್ರಿಂ ಕಾಮಲಿ (5) ಕೆಂಬರ್ಲಿ

ಇವು ಎಲ್ಲಿವೆ ಮತ್ತು ಏತಕ್ಕೆ ಪ್ರಸಿದ್ಧವಾಗಿವೆ?

VI (1) ಗಂಗಾನದಿಯ ಮೇಲಿನ ಮುಖ್ಯವಾದ ಎರಡು ಪಟ್ಟ ಣಗಳು.

(2) ಮೈಸೂರು ಪ್ರಾಂತದಲ್ಲಿ ಗಂಧದ ಮರದ ಸಾಮಾನುಗ ಳು ತಯಾರಾಗುವ ಸ್ಥಳಗಳು.

(3) ಇಂಡಿಯಾದಲ್ಲಿ ಫ್ರೆಂಚರಿಗೆ ಸೇರಿರುವಸ್ಥಳಗಳು.

(4) ಲೋಕಪ್ರಸಿದ್ಧವಾದ ಜಲಪಾತ.

(5) ಪ್ರಪಂಚದಲ್ಲಿ ಅತ್ಯಂತ ದೊಡ್ಡದಾದ ನದಿ.

ಇವುಗಳನ್ನು ಬರೆಯಿರಿ.

VII ಆಸ್ಟ್ರೇಲಿಯ ಖಂಡದ ನಕ್ಷೆಯನ್ನು ಬರೆದು ಅದ ರಲ್ಲಿ ದೇಶವಿಭಾಗಗಳನ್ನೂ, ಅವುಗಳ ಮುಖ್ಯಪಟ್ಟ ಣಗಳನ್ನೂ, ಮತ್ತು ಪರ್ವತಶ್ರೇಣಿಗಳನ್ನೂ ಗುರು ತುಮಾಡಿರಿ.

ಉತ್ತರಗಳು

(1) ಭೂಗೋಳವು ತನ್ನ ಅಕ್ಷದಮೇಲೆ ೨೪ ಘಂಟೆಗೆ ಒಂದಾವೃತ್ತಿ ಪಶ್ಚಿಮದಿಂದ ಕ್ರಮವಾಗಿ ಸೂರ್ಯಾಭಿಮುಖವಾಗಿ ಬಂದು ಕೊನೆಗೆ ಪೂರ್ವ

ಗಳಾಗುವುವು. ಈ ಪರಿಭ್ರಮಣಗತಿಯಿಂದ ಅಹೋರಾತ್ರಗಳು ಬದಲಾಗುತ್ತಾ ಬಂದು ತಪ್ಪದೆ ಬರುತ್ತಿವೆ. ಇದಕ್ಕೆ ನಿದರ್ಶನವೇನೆಂದರೆ:—ಕೃತಕ ಭೂಗೋಳವನ್ನು ಸಮನಾದ ನೆಲದಮೇಲೆ ಯಿಟ್ಟು ಅದರ ಎದುರಿಗೆ ಪ್ರಕಾಶಮಾನವಾದ ದೀಪವನ್ನು ಇಟ್ಟರೆ ಗೋಳದಲ್ಲಿ ಅರ್ಧಭಾಗವು ಬೆಳಕಿನಲ್ಲಿರುವಿಕೆಯೂ ಉಳಿದರ್ಧಭಾಗವು ಕತ್ತಲೆಯಲ್ಲಿರುವಿಕೆಯೂ ಸಂಭವಿಸುವುದು. ಹೀಗಿರುವಾಗ ಆ ಗೋಳವನ್ನು ಗುಂಡಗೆ ತಿರುಗಿಸಿದರೆ ಕತ್ತಲಲ್ಲಿರುವ ಭಾಗವು ಬೆಳಕಿಗೆ ಬರುವುದು. ಬೆಳಕಿನಲ್ಲಿದ್ದ ಭಾಗವು ಕತ್ತಲಿನಕಡೆಗೆ ಹೋಗುವುದು. ಆದುದರಿಂದ ಆ ದೀಪವನ್ನು ಸೂರ್ಯನೆಂತಲೂ ಗೋಳವನ್ನೂ ಭೂಮಿಯೆಂತಲೂ ಭಾವಿಸಿದರೆ ಅಹೋರಾತ್ರಗಳು ಹೇಗಾಗುವುವೋ ಸ್ಪಷ್ಟವಾಗಿ ತಿಳಿವುದು.

(2) ತೀರಪ್ರದೇಶಗಲ್ಲಿ ಸರ್ವದಾ ಶೀತೋಷ್ಣಾಧಿಕ್ಯಗಳು ಸಮವಾಗಿರಲು ಜಲಪವನಗಳೇ ಕಾರಣ. ಸಮುದ್ರ ಸಮೀಪವಾಗಿರೋಣದರಿಂದ ವಾಯುವಿನಲ್ಲಿ ಹೆಚ್ಚು ಆವಿ ಇರುವುದು, ಈ ಆವಿ ನೀರಾಗುವಾಗ ಅದರಲ್ಲಿ ಅಡಕವಾಗಿದ್ದ ಉಷ್ಣವು ಹೊರಬಿದ್ದು ಶೈತ್ಯವನ್ನೂ ಕಡಿಮೆ ಮಾಡುವುದು. ಬೇಸಗೆಯಲ್ಲಿ ನೀರು ಆವಿಯಾಗುವುದರಲ್ಲಿ ವಿಶೇಷ ತಾಪವನ್ನು ಗ್ರಹಿಸುವುದು. ಈ ಕಾರಣದಿಂದ ಸಮುದ್ರ ಸಾಮೀಪ್ಯವು ಆವಾಗ ಶೀತೋಷ್ಣಸ್ಥಿತಿಯನ್ನು ಸಮತ್ವವಾಗಿರಿಸುತ್ತದೆ.

(3) ನಿರಂತರೀಶಾನ್ಯ ಮಾರುತಗಳೂ ನಿರಂತರಾಗ್ನೇಯ ಮಾರುತಗಳೂ ಸಮಭಾಜಕ ವೃತ್ತಕ್ಕೆ ಸ್ವಲ್ಪ ಉತ್ತರದಲ್ಲಿ ಸಂಧಿಸುವುವು. ಇವು ಹೀಗೆ ಸೇರುವಾಗ ಗಾಳಿಯು ಮೇಲಕ್ಕೆ ಹೋಗಿ ಅಲ್ಲಿನ ಶೈತ್ಯದಿಂದ ಅದರಲ್ಲಿದ್ದ ಆವಿಯು ಜಲರೂಪವನ್ನು ಹೊಂದಿ ಮಳೆಯಾಗಿ ಕೆಳಕ್ಕೆ ಬೀಳುವುದು. ಈ ಕಲಸವು ನಿರಂತರವೂ ನಡೆಯುತ್ತಿರುವುದು. ಆದುದರಿಂದ ಮಳೆ ಹೆಚ್ಚು.

II (1) ಬಾಲ್ಟಿಕ್‌ಸಮುದ್ರದಿಂದ ಹೊರಡುತ್ತಲೇ ಸೌಂಡ್, ಕ್ಯಾಟಿಗಾಟ್, ಸ್ಕ್ಯಾಗರ್ರಾಕ್, ಡೋವರ್, ಜಿಬ್ರಾಲ್ಟರ್, ಡಾರ್ಡನಲ್ಸ್, ಬಾಸ್ಪೋರಸ್ ಅಥವಾ ಕಾನ್ಸ್ಟಂಟಿನೋಪಲ್ ಜಲಸಂಧಿಗಳು.

(2) ಹತ್ತಿಯಬಟ್ಟೆ ಕೈಗಾರಿಕೆ- ಲಾಂಕಾಷೈರಿನ ದಕ್ಷಿಣಭಾಗದಲ್ಲಿ ಅಂದರೆ ಮ್ಯಾಂಚೆಸ್ಟರ್, ಪ್ರೆಸ್ಟನ್, ಒಲ್ಡ್ಹಾಂ, ಬೋಲ್ಟನ್, ಬ್ಲಾಕ್ಬರ್ನ್ ಮೊದಲಾದ ಸ್ಥಳಗಳಲ್ಲಿ ನಡೆವುದು — ಕಾರಣ — ಕಲ್ಲಿದ್ದಲು ದೊರೆಯುವುದು. ಬೇಕಾದ ಯಂತ್ರಸಾಮಗ್ರಿಗಳು ಇಲ್ಲಿಯೇ ತಯಾರಾಗುವುವು. ಅಮೆರಿಕಾದೇಶದಲ್ಲಿ ಬೆಳೆವ ಹತ್ತಿಯು ಸುಲಭವಾಗಿ ಇಲ್ಲಿಗೆ ಬಂದುಸೇರುವುದಕ್ಕೆ ಅನುಕೂಲವಿರುವುದು. ಇಲ್ಲಿನ ಗಾಳಿಯಲ್ಲಿ ತೇವವಿರುವುದರಿಂದ ನೂಲಿನ ತಂತುಗಳು ಹರಿದುಹೋಗದಿರುವುದು

ಉಣ್ಣೆ ಸುಬಟ್ಟೆ ಕೈಗಾರಿಕೆ– ಯಾರ್ಕ್‌ಷೈರಿನ ಪಶ್ಚಿಮಭಾಗದಲ್ಲಿ ಅಂದರೆ ಲೀಡ್ಸ್, ಹಾಲಿಫಾಕ್ಸ್, ಹಡ್ಡರ್‌ಫೀಲ್ಡ್ಸ್, ಬ್ರಾಡ್‌ಫರ್ಡ್, ಮೊದಲಾದ ಸ್ಥಳಗಳಲ್ಲಿ ನಡೆಯುತ್ತದೆ

ಕಾರಣ— ಪೆನ್ನೈನ್‌ಪರ್ವತ ಪಙ್ಕ್ತಿಗಳ ಮೇಲೆ ಆಡು ಕುರಿ ಚೆನ್ನಾಗಿ ಅಭಿವೃದ್ಧಿಹೊಂದಿ ಬೇಕಾದಷ್ಟು ತುಪ್ಪಟವನ್ನು ಒದಗಿಸುತ್ತವೆ. ಈ ಉಣ್ಣೆಯನ್ನು ತೊಳೆವುದಕ್ಕೆ ಬೇಕಾದಷ್ಟು ಶುಭ್ರವಾದ ನೀರು ಬೆಟ್ಟಗಳಿಂದ ದೊರೆಯುತ್ತದೆ.

ಕಬ್ಬಿಣದ ಸಾಮಾನುಗಳ ಕೈಗಾರಿಕೆಯು ಯಾರ್ಕ್‌ಷೈರಿನ ದಕ್ಷಿಣ ಭಾಗದಲ್ಲಿ ಅಂದರೆ ಷೆಫೀಲ್ಡ್, ವುಲ್ವರ್‌ಹಾಂಪ್ಟನ್, ವೆಡ್ನಸ್‌ಬರಿ, ಡಡ್ಲಿ ಮೊದಲಾದ ಸ್ಥಳಗಳಲ್ಲಿ ನಡೆಯುತ್ತದೆ. ಕಾರಣ— ಈ ಸ್ಥಳಗಳಲ್ಲಿ ಕಬ್ಬಿಣವೂ, ಕಲ್ಲಿದ್ದಲು ಹೆಚ್ಚಾಗಿ ದೊರೆಯುತ್ತದೆ.

(3) ರ್ಹೈನ್, ರ್ಹೋನ್, ಡ್ಯಾನ್ಯೂಬ್.

ರ್ಹೈನ್‌ನದಿ—ಫ್ರಾನ್ಸ್

ರ್ಹೋನ್‌ನದಿ—ಜರ್ಮನಿ, ಹಾಲೆಂಡ್

ಡ್ಯಾನ್ಯೂಬ್—ಆಸ್ಟ್ರಿಯಾ, ತುರ್ಕಿ

III (1) ದಕ್ಷಿಣ ಅಮೇರಿಕೆ ಮತ್ತು ಆಫ್ರಿಕೆ

ದಕ್ಷಿಣ ಅಮೇರಿಕೆ	ಆಫ್ರಿಕೆ
(1) ದಕ್ಷಿಣ ಅಮೇರಿಕವು ಯಾವ ಅಕ್ಷಾಂಶಗಳಲ್ಲಿ ಬಹಳ ಅಗಲವಾಗಿರುವುದೋ	(1) ಆ ಅಕ್ಷಾಂಶಗಳಲ್ಲಿ ಆಫ್ರಿಕವು ಅಗಲದಲ್ಲಿ ಕಡಮೆಯಾಗಿದೆ.
(2) ಮಳೆಯ ಮೋಡಗಳನ್ನು ವಿಪರೀತವಾಗಿ ತರುವ ಸಾಗರವಾರುತಗಳು ಖಂಡದೊಳಕ್ಕೆ ಬಹುದೂರ ಬೀಸಿಕೊಂಡು ಹೋಗುವುವು.	(2) ಆಫ್ರಿಕಾ ಖಂಡದಲ್ಲಿ ಹೀಗಿಲ್ಲ. ತೀರಕ್ಕಿದಿರಾಗಿ ಪರ್ವತ ಶ್ರೇಣಿಗಳು ಸಾಗರ ಮಾರುತಗಳನ್ನು ತಡೆವುವು. ಎಲ್ಲಿ ಹೀಗಿಲ್ಲವೋ ಆ ಕಡೆಗೆ ಬೀಸುವ ಮಾರುತಗಳಲ್ಲಿ ಮಳೆಯ ಮೋಡಗಳಿಲ್ಲ.
(3) ಅಲ್ಪವಾದ ಮರುಭೂಮಿಗಳಿವೆ.	(3) ಅತಿ ವಿಶಾಲವಾದ ಮರುಭೂಮಿಗಳಿವೆ
(4) ನಿರಂತರೇಶಾನ್ಯ ಮಾರುತಗಳು ಮಳೆಯ ಮೋಡಗಳನ್ನು ವಿಪರೀತವಾಗಿ ತರುವವು.	(4) ನಿರಂತರೇಶಾನ್ಯ ಮಾರುತಗಳು ಮಳೆಯ ಮೋಡಗಳನ್ನು ತರುವುದಿಲ್ಲ.
(5) ಸಮಭೂಮಿಯ ಖಂಡ.	(5) ಪ್ರಸ್ಥಭೂಮಿಯ ಖಂಡ.

(6) ದಕ್ಷಿಣ ಅಮೇರಿಕದಲ್ಲಿ ಸೆಕೆಯೂ ಹೆಚ್ಚು, ಮಳೆಯೂ ಹೆಚ್ಚು.	(6) ಆಫ್ರಿಕದಲ್ಲಿ ಸೆಕೆ ಹೆಚ್ಚು. ಮಳೆ ಕಡಿಮೆ.
(7) ಮರ ಗಿಡಗಳ ಬೆಳವಳಿಗೆ ಅಪರಿಮಿತವಾಗಿದೆ.	(7) ದೊಡ್ಡ ಪ್ರಾಣಿಗಳ ಬೆಳವಳಿಗೆ ಹೆಚ್ಚಾಗಿದೆ.

(2) ನೈಲ್‌ನದಿ ಅಬಿಸೀನಿಯ ಮುಂತಾದ ಭಾಗಗಳಿಂದ ಫಲವತ್ತಾದ ಕೆಸರು ಮಣ್ಣನ್ನೂ, ಮೆಕ್ಕಲನ್ನೂ ತಂದುಹಾಕಿ ಈ ದೇಶವನ್ನು ಫಲವತ್ತಾಗಿ ಮಾಡಿದೆ. ಈಜಿಪ್ಟಿನಲ್ಲಿ ಮಳೆ ಹೊಯ್ಯುವುದು ಬಹಳ ಅಪೂರ್ವವಾದುದರಿಂದ ಈ ನದಿಯ ನೀರಿನಿಂದಲೇ ಅನೇಕ ಕೆಲಸಗಳು ಆಗಬೇಕಾಗಿವೆ.

(3) ಗ್ರೇಟ್‌ಬೇರ್, ಗ್ರೇಟ್‌ಸ್ಲೇವ್, ಅತಬಾಸ್ಕ, ವಿನಿಪೆಗ್, ಸುಪೀರಿಯರ್, ಮಿಚಿಗನ್, ಹ್ಯೂರನ್, ಈರಿ, ಆಂಟೋರಿಯೋ, ಗ್ರೇಟ್‌ಸಾಲ್ಟ್ ಮೊದಲಾದುವು.

IV (1) ಪಶ್ಚಿಮಘಟ್ಟವು— ಕನ್ಯಾಕುಮಾರಿಯವರೆಗೂ ಹೋಗುತ್ತದೆ. ಇದಕ್ಕೆ ಸಹ್ಯಾದ್ರಿ ಎಂಬ ಹೆಸರುಂಟು. ಇದು ಅರಬ್ಬಿಸಮುದ್ರದ ತೀರಕ್ಕೆ ಮೂವತ್ತು ನಲವತ್ತು ಮೈಲಿಗಳ ದೂರದಲ್ಲಿದೆ. ಇದರ ಸ್ಥೂಲಸರಾಸರಿ ಎತ್ತರ ೩೦೦೦ ಅಡಿ.

ಪೂರ್ವ ಘಟ್ಟಗಳು— ಪೂರ್ವತೀರದ ಮಾರ್ಗವನ್ನು ಅನುಸರಿಸಿ ನೈರುತ್ಯದಿಂದ ಈಶಾನ್ಯಕ್ಕೆ ಹೋಗಿವೆ. ಇವು ಪಶ್ಚಿಮಘಟ್ಟಗಳಂತೆ ಅಖಂಡವಾಗಿ ಉನ್ನತವಾಗಿ ಸಮುದ್ರಕ್ಕೆ ಸಮೀಪವಾಗಿ ಇಲ್ಲ.

ಪಶ್ಚಿಮ ಘಟ್ಟಗಳು ಮುಂಗಾರು ಮಳೆಗಳನ್ನು ತಡೆದು ಮಳೆ ಹೆಚ್ಚು ಬೀಳುವಂತೆ ಮಾಡಿವೆ. ಸಮುದ್ರಕ್ಕೆ ಸಮೀಪವಾಗಿರುವುದರಿಂದಲೂ ಎತ್ತರವಾಗಿರುವುದರಿಂದಲೂ ಹವಾ ಬಹಳ ಚೆನ್ನಾಗಿದೆ. ಎತ್ತರವಾಗಿರುವುದರಿಂದ ನದಿಗಳ ಉದ್ಭವ ಸ್ಥಾನವಾಗಿದೆ.

(2) ಅರಳೆ— ಬೊಂಬಾಯಿಯ ಸುತ್ತಲೂ, ಮತ್ತು ಮಧ್ಯಪ್ರಾಂತ್ಯಗಳಲ್ಲಿಯೂ ಬೆಳೆಯುತ್ತಾರೆ.

ಅಫೀಮು— ಮಾಳವ ಬಿಹಾರುಗಳಲ್ಲಿಯೂ

ಸಣಬು— ಬಂಗಾಳದ ಪೂರ್ವಭಾಗದಲ್ಲಿಯೂ ಹೆಚ್ಚು ಬೆಳೆಯುತ್ತಾರೆ.

V ಕರಾಚಿ— ಸಿಂಧೂದೇಶದಲ್ಲಿದೆ, ಇದು ಒಳ್ಳೆಯ ಬಂದರು. ವಿಶೇಷವಾಗಿ ವ್ಯಾಪಾರ ನಡೆಯುವ ಸ್ಥಳ. ಇದಕ್ಕೆ ಇಂಡಿಯಾದೇಶದ ಲಿವರ್ಪೂಲೆಂದು ಹೆಸರು.

ಗ್ಲಾಸ್ಗೊ— ಸ್ಕಾಟ್ಲೆಂಡಿನಲ್ಲಿದೆ. ಇಲ್ಲಿ ದೊಡ್ಡ ಹಡಗುಗಳನ್ನೂ ಹೊಗೆಯ ಹಡಗುಗಳನ್ನೂ ತಯಾರುಮಾಡುತ್ತಾರೆ. ವಿಶೇಷ ವ್ಯಾಪಾರಸ್ಥಳ. ಇಲ್ಲಿಯೂ ಒಂದು ಸಕಲ ವಿದ್ಯಾನಿಲಯವಿದೆ.

ಟೆಲ್‌ಛೆರಿನ್ಸ್ — ಆಂಗ್ಲೇಂಡಿನ ಕಟನಲ್ಲಿದೆ. ಇಲ್ಲಿ ನಾರಿನ ವಸ್ತ್ರಗಳೂ, ಸತ್ತು ಯಬಟ್ಟೆಗಳೂ ತಯಾರಾಗುತ್ತವೆ.

ಟ್ರಿಂಕೊಮಲಿ—ಸಿಂಹಳದಲ್ಲಿದೆ. ಈ ಬಂದರ್ ಪ್ರಸಿದ್ಧವಾಗಿದೆ.

ಕಿಂಬರ್ಲಿ—ಪಶ್ಚಿಮ ಗ್ರಿಕ್ವಾಲಾಂಡಿನಲ್ಲಿದೆ. ವಜ್ರಗಳು ಸಿಕ್ಕುವಸ್ಥಳ.

VI (1) ಕಲ್ಕತ್ತ, ಬೆನಾರಸ್.

(2) ಸೂರತ, ಬೆಂಗರ.

(3) ಪುದುಚೇರಿ, ಕಾರಿಕಲ್, ಮಾಹಿ, ಯಾನಾಂ, ಚಂದ್ರನಗರ.

(4) ನಯಾಗರ.

(5) ಅಮಸ್ಟರ್ಡ್ಯಾ.

1916

I (1) ಅಗ್ನಿಪರ್ವತ, ಜಲಾನಯನಭೂಮಿ, ಕೊಲ್ಲಿ, ಅಳಿವೆ ಈ ಭೂನಿವರಣೆಯ ಸಂಕೇತಪದಗಳ ಅರ್ಥವನ್ನು ವಿವರಿಸಿ. ಪ್ರತಿಯೊಂದಕ್ಕೂ ಒಂದು ಉದಾಹರಣೆಯನ್ನು ಕೊಡಿ.

(2) ಲಿವರ್ಪೂಲಿನಿಂದ ಲಂಡನ್‌ಗೆ ಇಂಗ್ಲಿಷ್ ಕಡಲುಗಾಲುವೆಯ ಮಾರ್ಗವಾಗಿ ಸಮುದ್ರದ ಅಂಚಿನಲ್ಲಿ ನಾವು ಹಡಗಿನ ಮೇಲೆ ಪ್ರಯಾಣಮಾಡಿದರೆ ನಮಗೆ ದಾರಿಯಲ್ಲಿ ಸಿಕ್ಕುವ (1) ಎರಡು ದ್ವೀಪಗಳ (2) ಇಂಗ್ಲೆಂಡಿನ ನೈರುತ್ಯ ಮೂಲೆಯಲ್ಲಿರುವ ಎರಡು ಭೂಶಿರಗಳ ಮತ್ತು (3) ಮುಖ್ಯವಾದ ನಾಲ್ಕು ರೇವುಪಟ್ಟಣಗಳ ಹೆಸರುಗಳನ್ನು ಬರೆಯಿರಿ

II (1) ಆಫ್ರಿಕ ಖಂಡದ ಮರಳು ಕಾಡುಗಳಲ್ಲಿರುವ ಎರಡು ಸರೋವರಗಳು ಮತ್ತು ಅಮೆರಿಕ ಖಂಡದ ಪ್ರಸ್ಥಭೂಮಿಗಳಲ್ಲಿರುವ ಎರಡು ಸರೋವರಗಳ ಹೆಸರುಗಳನ್ನು ಬರೆಯಿರಿ.

(2) ಟೆಮ್ಸ್ನದಿಯು ಗಂಗಾನದಿಗಿಂತ ತುಂಬಾ ಚಿಕ್ಕದಾಗಿದ್ದರೂ ಹಡಗಿನ ವ್ಯಾಪಾರಕ್ಕೆ ಅದಕ್ಕಿಂತ ಹೆಚ್ಚು ಸಹಕಾರಿಯಾಗಿರುವುದಕ್ಕೆ ಕಾರಣವೇನು?

(3) (1) ಮಿಸಿಸಿಪ್ಪಿಯೊಡನೆ ಮಿಸ್ಸೋರಿಯೂ (2) ಗಂಗೆಯೊಡನೆ ಯಮುನೆಯೂ (3) ಸಿಂಧುವಿನೊಡನೆ ಪಂಚನದಿಯೂ ಸಂಗಮವಾಗುವ ಸ್ಥಳಗಳಲ್ಲಿ ಇರುವ ಪಟ್ಟಣಗಳು ಯಾವುವು?

III (1) ಒಂದು ದೇಶದ ವಾಯುಮಾನವನ್ನು ತಿಳಿಯಬೇಕಾದರೆ ನಾವು ವಿಚಾರಿಸಬೇಕಾದ ಮುಖ್ಯವಿಷಯಗಳು ಯಾವುವು?

(2) ಮಾಸ್ಕೊ ಮತ್ತು ಎಡಿನ್‌ಬರ್ಗ್ ಪಟ್ಟಣಗಳು ಒಂದೇ ಅಕ್ಷಾಂಶದಲ್ಲಿದ್ದಾಗ್ಯೂ ಎಡಿನ್‌ಬರ್ಗಿಗಿಂತ ಮಾಸ್ಕೊವಿನಲ್ಲಿ ಚಳಿಗಾಲದಲ್ಲಿ ಚಳಿಯೂ ಬೇಸಗೆಯಲ್ಲಿ ಸೆಕೆಯೂ ವಿಶೇಷ ಹೆಚ್ಚಾಗಿರುವುದಕ್ಕೆ ಕಾರಣವನ್ನು ವಿವರಿಸಿ.

(3) ಸಿಂಧೂದೇಶದಲ್ಲಿ ಅತ್ಯಲ್ಪವಾಗಿಯೂ ಅಸ್ಸಾಮಿನಲ್ಲಿ ಬಹು ಹೇರಳವಾಗಿಯೂ ಮಳೆಯು ಬೀಳಲು ಕಾರಣವೇನು?

IV (1) ಹತ್ತಿ, (2) ಭತ್ತ, (3) ಅಫೀಮು—ಇವುಗಳನ್ನು ಇಂಡಿಯಾದೇಶದ ಯಾವ ಭಾಗಗಳಲ್ಲಿ ಮುಖ್ಯವಾಗಿ ಬೆಳೆಯುತ್ತಾರೆ?

(2) (1) ಹತ್ತಿಯ ಬಟ್ಟೆಗಳನ್ನು ನೆಯ್ಯುವುದು, (2) ಜೂಟೆಂಬ ಸಣಬಿನ ನಾರಿನಿಂದ ಗೋಣಿಯನ್ನು ನೆಯ್ಯುವುದು,

(3) ಲೋಹದ ಪಾತ್ರೆಗಳನ್ನು ಮಾಡುವುದು—ಇಂಡಿಯಾದೇಶದಲ್ಲಿ ಈ ಕೈಗಾರಿಕೆಗಳಿಗೆ ಪ್ರಸಿದ್ಧವಾದ ಮುಖ್ಯ ಪಟ್ಟಣಗಳ್ಯಾವುವು?

(3) (1) ಇಂಗ್ಲೆಂಡಿನಿಂದ ರಫ್ತಾಗುವ ಮುಖ್ಯವಾದ ಸರಕುಗಳ್ಯಾವುವು? (2) ಇಂಗ್ಲೆಂಡಿಗೆ ಯಾವ ದೇಶಗಳಿಂದ ಟೀಯು ಮತ್ತು ಸಕ್ಕರೆ ಆಮದಾಗುವುವು?

V (1) ಮೈಸೂರು ಸಂಸ್ಥಾನದಲ್ಲಿ ಬೆಂಗಳೂರಿನಿಂದ ರೈಲು ದಾರಿಗಳು ಯಾವ ಯಾವ ಕಡೆಗೆ ಹೋಗುವುವು?

(2) ಈ ಕೆಳಗಣವುಗಳ ಹೆಸರುಗಳನ್ನು ಬರೆಯಿರಿ:—

(1) ಮೈಸೂರು ಸಂಸ್ಥಾನದಲ್ಲಿರುವ ಅತ್ಯುನ್ನತವಾದ ಪರ್ವತ ಶಿಖರ;

(2) ಈ ಸಂಸ್ಥಾನದಲ್ಲಿರುವ ಪ್ರಸಿದ್ಧವಾದ ಎರಡು ಜಲಪಾತಗಳು;

(3) ಈ ಸಂಸ್ಥಾನದಲ್ಲಿ ಕಂಬಳಿ ಮತ್ತು ಆಟದಸಾಮಾ

ಬೆಲ್‌ಫಾಸ್ಟ್ ಅಲ್‌ಸ್ಟರ್ ಕೌಂಟಿನಲ್ಲಿದೆ. ಇಲ್ಲಿ ನಾರಿನ ವಸ್ತ್ರಗಳೂ, ಯುಬಟ್ಟೆಗಳೂ ತಯಾರಾಗುತ್ತವೆ.

ಟ್ರಿಂಕಾಮಲೆ—ಸಿಂಹಳದಲ್ಲಿದೆ. ಈ ಬಂದರ್ ಪ್ರಸಿದ್ಧವಾಗಿದೆ

ಕಿಂಬರ್ಲಿ— ಪಶ್ಚಿಮ ಗ್ರೀಕ್ವಾನಾಡಿನಲ್ಲಿದೆ. ವಜ್ರಗಳು ಸಿಕ್ಕುವಸ್ಥಳ.

VI (1) ಕಲ್ಕತ್ತಾ, ಬೆನಾರಸ್.

(2) ಸೂರತು, ಸಾಗರ.

(3) ಪುದುಚೇರಿ, ಕಾರಿಕಲ್, ಮಾಹೆ, ಯಾನಾಂ, ಚಂದ್ರನಗರ.

(4) ನಮೊಗಡ

(5) ಅಮುರ್

1916

I (1) ಅಗ್ನಿಪರ್ವತ, ಜಲಾನಯನಭೂಮಿ, ಕೊಲ್ಲಿ, ಅಳಿವೆ ಈ ಭೂನಿವರಣೆಯ ಸಂಕೇತಪದಗಳ ಅರ್ಥವನ್ನು ವಿವರಿಸಿ. ಪ್ರತಿಯೊಂದಕ್ಕೂ ಒಂದು ಉದಾಹರಣೆಯನ್ನು ಕೊಡಿ.

(2) ಲಿವರ್‌ಪೂಲಿನಿಂದ ಲಂಡನ್‌ಗೆ ಇಂಗ್ಲಿಷ್ ಕಾಲುವೆಯ ಮಾರ್ಗವಾಗಿ ಸಮುದ್ರದ ಅಂಚಿನಲ್ಲಿ ನಾವು ಹಡಗಿನ ಮೇಲೆ ಪ್ರಯಾಣಮಾಡಿದರೆ ನಮಗೆ ದಾರಿಯಲ್ಲಿ ಸಿಕ್ಕುವ (1) ಎರಡು ದ್ವೀಪಗಳ (2) ಇಂಗ್ಲೆಂಡಿನ ನೈರುತ್ಯ ಮೂಲೆಯಲ್ಲಿರುವ ಎರಡು ಭೂಶಿರಗಳ ಮತ್ತು (3) ಮುಖ್ಯವಾದ ನಾಲ್ಕು ರೇವುಪಟ್ಟಣಗಳ ಹೆಸರುಗಳನ್ನು ಬರೆಯಿರಿ

II (1) ಆಫ್ರಿಕ ಖಂಡದ ಮರಳು ಕಾಡುಗಳಲ್ಲಿರುವ ಎರಡು ಸರೋವರಗಳು ಮತ್ತು ಅಮೆರಿಕ ಖಂಡದ ಪ್ರಸ್ಥಭೂಮಿಗಳಲ್ಲಿರುವ ಎರಡು ಸರೋವರಗಳ ಹೆಸರುಗಳನು ಬರೆಯಿರಿ.

(2) ಟೆಮ್ಸ್ ನದಿಯು ಗಂಗಾನದಿಗಿಂತ ತುಂಬಾ ಚಿಕ್ಕದಾಗಿದ್ದರೂ ಹಡಗಿನ ವ್ಯಾಪಾರಕ್ಕೆ ಅದಕ್ಕಿಂತ ಹೆಚ್ಚು ಸಹಕಾರಿಯಾಗಿರುವುದಕ್ಕೆ ಕಾರಣವೇನು?

(3) (1) ಮಿಸಿಸಿಪ್ಪಿಯೊಡನೆ ಮಿಸ್ಸೋರಿಯೂ (2) ಗಂಗೆಯೊಡನೆ ಯಮುನೆಯೂ (3) ಸಿಂಧುವಿನೊಡನೆ ಪಂಚನದಿಯೂ ಸಂಗಮವಾಗುವ ಸ್ಥಳಗಳಲ್ಲಿ ಇರುವ ಪಟ್ಟಣಗಳು ಯಾವುವು?

III (1) ಒಂದು ದೇಶದ ವಾಯುಗುಣವನ್ನು ತಿಳಿಯಬೇಕಾದರೆ ನಾವು ವಿಚಾರಿಸಬೇಕಾದ ಮುಖ್ಯವಿಷಯಗಳು ಯಾವುವು?

(2) ಮಾಸ್ಕೊ ಮತ್ತು ಎಡಿನ್‌ಬರ್ಗ್ ಪಟ್ಟಣಗಳು ಒಂದೇ ಅಕ್ಷಾಂಶದಲ್ಲಿದ್ದಾಗ್ಯೂ ಎಡಿನ್‌ಬರ್ಗಿಗಿಂತ ಮಾಸ್ಕೊವಿನಲ್ಲಿ ಚಳಿಗಾಲದಲ್ಲಿ ಚಳಿಯೂ ಬೇಸಗೆಯಲ್ಲಿ ಸೆಕೆಯೂ ವಿಶೇಷ ಹೆಚ್ಚಾಗಿರುವುದಕ್ಕೆ ಕಾರಣವನ್ನು ವಿವರಿಸಿ.

(3) ಸಿಂಧೂದೇಶದಲ್ಲಿ ಅತ್ಯಲ್ಪವಾಗಿಯೂ ಅಸ್ಸಾಮಿನಲ್ಲಿ ಬಹು ಹೇರಳವಾಗಿಯೂ ಮಳೆಯು ಬೀಳಲು ಕಾರಣವೇನು?

IV (1) ಹತ್ತಿ, (2) ಭತ್ತ, (3) ಅಫೀಮು—ಇವುಗಳನ್ನು ಇಂಡಿಯಾದೇಶದ ಯಾವ ಭಾಗಗಳಲ್ಲಿ ಮುಖ್ಯವಾಗಿ ಬೆಳೆಯುತ್ತಾರೆ?

(2) (1) ಹತ್ತಿಯ ಬಟ್ಟೆಗಳನ್ನು ನೆಯ್ಯುವುದು, (2) ಜೂಟೆಂಬ ಸಣಬಿನ ನಾರಿನಿಂದ ಗೋಣಿಯನ್ನು ನೆಯ್ಯುವುದು;

(3) ಲೋಹದ ಪಾತ್ರೆಗಳನ್ನು ಮಾಡುವುದು—ಇಂಡಿಯಾದೇಶದಲ್ಲಿ ಈ ಕೈಗಾರಿಕೆಗಳಿಗೆ ಪ್ರಸಿದ್ಧವಾದ ಮುಖ್ಯ ಪಟ್ಟಣಗಳ್ಯಾವುವು?

(3) (1) ಇಂಗ್ಲೆಂಡಿನಿಂದ ರಫ್ತಾಗುವ ಮುಖ್ಯವಾದ ಸರಕುಗಳ್ಯಾವುವು? (2) ಇಂಗ್ಲೆಂಡಿಗೆ ಯಾವ ದೇಶಗಳಿಂದ ಟೀಯೂ ಮತ್ತು ಸಕ್ಕರೆ ಆಮದಾಗುವುವು

V (1) ಮೈಸೂರು ಸಂಸ್ಥಾನದಲ್ಲಿ ಬೆಂಗಳೂರಿನಿಂದ ರೈಲು ದಾರಿಗಳು ಯಾವ ಯಾವ ಕಡೆಗೆ ಹೋಗುವುವು?

(2) ಈ ಕೆಳಗಣವುಗಳ ಹೆಸರುಗಳನ್ನು ಬರೆಯಿರಿ:—

(1) ಮೈಸೂರು ಸಂಸ್ಥಾನದಲ್ಲಿರುವ ಅತ್ಯುನ್ನತವಾದ ಪರ್ವತ ಶಿಖರ;

(2) ಈ ಸಂಸ್ಥಾನದಲ್ಲಿರುವ ಪ್ರಸಿದ್ಧವಾದ ಎರಡು ಜಲಪಾತಗಳು;

(3) ಈ ಸಂಸ್ಥಾನದಲ್ಲಿ ಕಂಬಳಿ ಮತ್ತು ಆಟದಸಾಮಾನು

ನುಗಳ ತಯಾರಿಗೆ ಪ್ರಸಿದ್ಧವಾದ ಪಟ್ಟಣಗಳು;

(4) ಕಾವೇರಿನದಿಯಿಂದಾದ ದ್ವೀಪಗಳಲ್ಲಿರುವ ಮೂರು ಪಟ್ಟಣಗಳು;

(5) ಇಂಡಿಯಾದೇಶದ ಸಾಮ್ರಾಜ್ಯ ರಾಜಧಾನಿ ಮತ್ತು ಬೇಸಗೆಯಕಾಲದ ರಾಜಧಾನಿ.

VI ಚಿಕಾಗೋ, ಪನಾಮಾ, ಚಾಟ್ಗ್ರಾಂ, ಸಿಡ್ನಿ, ಸಿಂಗಪ್ಪೂರ್, ಈ ಪಟ್ಟಣಗಳು ಎಲ್ಲಿವೆ?

ಇವುಗಳ ಪ್ರಾಮುಖ್ಯತೆಗೆ ಕಾರಣಗಳೇನು?

VII ಇಂಡಿಯಾ ಚಕ್ರಾಧಿಪತ್ಯದ ಆಕಾರವನ್ನು ತೋರಿಸುವ ನಕ್ಷೆಯನ್ನು ಬರೆದು, ಅದರಲ್ಲಿ—ಅರಾವಳಿ ಮತ್ತು ನೀಲಗಿರಿ ಬೆಟ್ಟಗಳು; ಇರಾವಾಡಿ ಮತ್ತು ಗೋದಾವರಿ ನದಿಗಳು; ನೊಂತರೆ, ಪಿಶಾವರ್, ನಾಗಪುರ, ಮತ್ತು ಬೊಂಬಾಯಿ ಪಟ್ಟಣಗಳು—ಇವುಗಳನ್ನು ಗುರುತು ಮಾಡಿರಿ.

ಉತ್ತರಗಳು.

I (1) ಅಗ್ನಿಪರ್ವತ—ಸದಾ ಅಥವಾ ಆಗಾಗ ಹೊಗೆಯಾಡುವ ಮತ್ತು ಕೆಂಪಗೆ ಕಾದ ಕಲ್ಲು ಮಣ್ಣುಗಳನ್ನು ಮೇಲಕ್ಕೆ ಎಸೆಯುವ ಪರ್ವತ, ಉದಾ:—ಹೆಕ್ಲ, ಎಟ್ನ,

ಜಲಾನಯನ ಭೂಮಿ—ಯಾವ ಪ್ರದೇಶದ ಮೇಲೆ ಬಿದ್ದ ನೀರು ನದಿಗೆ ಬಂದು ಸೇರುತ್ತದೋ ಆ ಪ್ರದೇಶ.

ಉದಾ—ಗಂಗಾ ಮತ್ತು ನೈಲ್ ನದಿಗಳ ಜಲಾನಯನ ಭೂಮಿ.

ಕೊಲ್ಲಿ—ದೇಶದೊಳಕ್ಕೆ ಸ್ವಲ್ಪದೂರದ ವರೆಗೆ ನುಗ್ಗಿರುವ ಮತ್ತು ಸಮುದ್ರದ ಕಡೆಗೆ ವಿಶಾಲವಾದ ದಾರಿಯುಳ್ಳ ಸಮುದ್ರಭಾಗ. ಬಂಗಾಳಕೊಲ್ಲಿ, ಬಿಸ್ಕೆಕೊಲ್ಲಿ,

ಅಳವೆ—ನದಿಯ ಮುಖವು ಬಹಳ ಅಗಲವಾಗಿದ್ದರೆ ಆ ಪ್ರ

ದೇಶಕ್ಕೆ ಸಮುದ್ರದನೀರು ಕೆಲವು ವೇಳೆಗಳಲ್ಲಿ ನುಗ್ಗಿಬರುವುದು; ಈ ಬಗೆಯ ಸ್ಥಳಗಳಿಗೆ ಹೆಸರು

ಟೆಮ್ಸ್‌ನದಿಯ ಅಳಿವೆ.

(2) ಎರಡು ದ್ವೀಪಗಳು—ಆಂಗ್ಲಿಸಿ, ವೈಟ್, ದ್ವೀಪಗಳು; ಎರಡು ಭೂಶಿರಗಳು—ಲ್ಯಾಂಡ್ಸ್‌ಎಂಡ್, ಸೆಂಟ್‌ಡೇವಿಡ್ಸ್, ನಾಲ್ಕು ರೇವೆ ಪಟ್ಟಣಗಳು—ಸ್ವಾನ್ಸಿ, ಕಾರ್ಡಿಫ್, ಸೌಥಾಂಪ್ಟನ್, ಡೋವರ್.

II. (1) ಆಫ್ರಿಕಾಖಂಡದ ಮರಳುಕಾಡುಗಳಲ್ಲಿರುವ ಎರಡು ಸರೋವರಗಳು—ಚಾಡ್, ನಾಮಿ.

ಅಮೇರಿಕಾಖಂಡದ ಪ್ರಸ್ಥಭೂಮಿಗಳಲ್ಲಿರುವ ಸರೋವರಗಳು—ಗ್ರೇಟ್‌ಸಾಲ್ಟ್, ಟಿಟಿಕಾಕ.

(2) ಟಿಮ್ಸ್‌ನದಿಯು ಸಮಾನವಾಗಿ ಹರಿಯುವದರಿಂದಲೂ ಆಳವಾಗಿರುವುದರಿಂದಲೂ ಮತ್ತು ಸಮುದ್ರದ ಉಬ್ಬರವಿಳಿತಗಳಿಗೆ ಒಳಪಟ್ಟು ನದಿಯಮುಖವು ಮೆಕ್ಕಲಿನಿಂದ ಮುಚ್ಚದಿರುವುದರಿಂದಲೂ ಹಡಗಿನ ಪ್ರಯಾಣಕ್ಕೆ ಅನುಕೂಲ—ಗಂಗಾನದಿಯು ನೀರು ಹೆಚ್ಚಾಗಿದ್ದರೂ ಟಿಮ್ಸ್‌ನದಿಯಲ್ಲಿರುವ ಇತರ ಅನುಕೂಲಗಳಿಲ್ಲ.

(3) 1 ಮಿಸಿಸಿಪ್ಪಿ—ಮಿಸೂರಿ—ಸೆಂಟ್‌ಲೂಯಿಸ್ ಪಟ್ಟಣ.

2 ಗಂಗೆ—ಯಮುನಾ—ಅಲಹಾಬಾದ್

3 ಸಿಂಧು—ಪಂಚನದಿ—ಮಿಥುನಕೋಟ

III (1) 1 ಅಕ್ಷಾಂಶ (ಲ್ಯಾಟಿಟ್ಯೂಡ್) ಸಮಭಾಜಕವೃತ್ತದಿಂದ ಉತ್ತರ, ದಕ್ಷಿಣಗಳಿಗೆ ಹೋದಹಾಗೆಲ್ಲಾ ಸೂರ್ಯಕಿರಣಗಳು ಓರೆಯಾಗಿ ತಗಲುವದರಿಂದ ತಾಪವನ್ನು ಕೊಡುವ ಶಕ್ತಿಯು ಕಡಿಮೆಯಾಗಿ ಆಗುವದು. ಆದ್ದರಿಂದ ಒಂದು ಸ್ಥಳದ ಉಷ್ಣೋಗ್ರತೆಯು ಅಕ್ಷಾಂಶವನ್ನು ಅನುಸರಿಸುವದು. ಆದರೆ ಇದೊಂದು ಕಾರಣವೇ ಮುಖ್ಯವಲ್ಲ.

2 ಎತ್ತರ (ಆಲ್ಟಿಟ್ಯೂಡ್) ಔನ್ನತ್ಯವು ಹೆಚ್ಚಿದಂತೆಲ್ಲಾ ಉಷ್ಣೋಗ್ರತೆಯು ತಗ್ಗುವದು. ಏಕೆಂದರೆ ವಾಯುವಿಗೆ ಸೂರ್ಯನ ತಾಪವನ್ನು ಸ್ವತಃ ಗ್ರಹಿಸುವ ಶಕ್ತಿಯಿಲ್ಲ. ಸೂರ್ಯನ ಕಿರಣಗಳು ಭೂಮಿಗೆ ತಗಲಿ ಭೂಮಿಯು ಕಾದು ಅದರಿಂದ ಭೂಮಿಯನ್ನು ಹತ್ತಿರುವ ವಾಯು ಕಾಯ್ದು ವಿರಳವಾಗಿ ಮೇಲಕ್ಕೇರುವುದು. ಹೀಗೆ ಮೇಲಕ್ಕೆ ಹೋದಂತೆಲ್ಲಾ ಉಷ್ಣವು ತಗ್ಗುವುದು. ವಾ

ಯು ಮೇಲೆ ವಿರಳವಾಗಿರುವುದರಿಂದ ಉಷ್ಣವನ್ನು ಗ್ರಹಿಸುವ ಶಕ್ತಿ ಕಡಮೆಯಾ ಗಿದೆ. ವಾಯುಮಂಡಲದಲ್ಲಿ ಪ್ರತಿ 300 ಅಡಿ ಎತ್ತರಕ್ಕೆ ಒಂದೊಂದು ಡಿಗ್ರಿ ಉಷ್ಣ ಕಡಮೆಯಾಗುವುದು. ಈ ಅಂಶವನ್ನು ಗ್ರಹಿಸಿ ಅನೇಕರು ಬೇಸಿಗೆಯಲ್ಲಿ ನಂದಿದುರ್ಗ, ನೀಲಗಿರಿ, ಡಾರ್ಜಿಲಿಂಗ್ ಮೊದಲಾದ ಉನ್ನತ ಪ್ರದೇಶಗಳಲ್ಲಿ ವಾಸ ಮಾಡುವರು.

3 ಸಮುದ್ರಸಾಮೀಪ್ಯ:—ಇಲ್ಲಿ ಸರ್ವದಾ ಶೀತೋಷ್ಣಾಧಿಕ್ಯಗಳು ಸಮವಾಗಿರಲು ಸ್ಥಲಜಲಪವನಗಳೇ ಕಾರಣ ಸಮುದ್ರ ಸಾಮೀಪ್ಯದಿಂದ ವಾಯುವಿನಲ್ಲಿ ಹೆಚ್ಚು ಆವಿ ಇರುವುದು. ಈ ಆವಿ ನೀರಾಗುವಾಗ ಅದರಲ್ಲಿ ಅಡಕವಾಗಿದ್ದ ಉಷ್ಣವು ಹೊರಬಿದ್ದು ಶೈತ್ಯವನ್ನು ಕಡಿಮೆಮಾಡುವುದು ಬೇಸಗೆಯಲ್ಲಿ ನೀರು ಆವಿಯಾಗುವುದರಲ್ಲಿ ವಿಶೇಷ ತಾಪವನ್ನು ಗ್ರಹಿಸುವುದು. ಈ ಕಾರಣದಿಂದ ಸಮುದ್ರದ ಸಾಮೀಪ್ಯವು ಆವಾಗಲೂ ಶೀತೋಷ್ಣಸ್ಥಿತಿಯನ್ನು ಸಮತ್ವವಾಗಿರಿಸುವುದು.

4 ಅಲ್ಲಬೀಸುವ ಗಾಳಿಗಳು ಉಷ್ಣದೇಶಗಳಿಂದ ಬೀಸುವ ಮುಂಗಾರು ಹಿಂಗಾರು ಗಾಳಿಗಳು (ಮಾನ್‌ಸೂನ್) ನೀರನ್ನೂ ಉಷ್ಣವನ್ನೂ ತೆಗೆದುಕೊಂಡು ಹೋಗುವುದು. ಧ್ರುವ ಮಂಡಲದಿಂದ ಬೀಸುವ ತಂಗಾಳಿಗಳು ಉಷ್ಣೋಗ್ರತೆಯನ್ನು ತಗ್ಗಿಸುವುವು. ಕೆಲವು ಉಗ್ರೋಷ್ಣ ಮಾರುತಗಳು ಮರುಭೂಮಿಗಳಿಂದ ಬೀಸುವಾಗ ಉಷ್ಣವನ್ನು ಹೆಚ್ಚಿಸುವದು. ಸಹರ ಮರುಭೂಮಿಯಲ್ಲಿ ಹಗಲು ದುಸ್ಸಹವಾದ ಉಷ್ಣವೂ ರಾತ್ರಿ ನೀರು ಗಡ್ಡೆ ಕಟ್ಟುವಷ್ಟು ಶೈತ್ಯವೂ ಇರುವುದು. ಸಮಭಾಜಕವೃತ್ತಕ್ಕೆ ಬಹುದೂರದಲ್ಲಿ ಇಂಗ್ಲೆಂಡಿನಲ್ಲಿ ಆವಿಯಿಂದ ತುಂಬಿರುವ ಗಾಳಿಗಳು ಬೀಸುತ್ತಿದ್ದರಿಂದ ಬೆಚ್ಚಗಿರುವುದು. ಈ ಕಾರಣದಿಂದಲೇ ಬೊಂಬಾಯಿ ಮೊದಲಾದ ಪಶ್ಚಿಮತೀರದ ಪಟ್ಟಣಗಳು ಬೇಸಗೆಯಲ್ಲಿ ಸಾಮಾನ್ಯೋಷ್ಣವುಳ್ಳವುಗಳಾಗಿವೆ.

5 ಭೂಸ್ವಭಾವ—ಭೂಸ್ವಭಾವದಿಂದಲೂ ಶೀತೋಷ್ಣಗಳು ಹೆಚ್ಚು ಕಡಿಮೆಯಾಗುತ್ತವೆ. ನೆಲವು ಮರಳ್ಗಾಡಾಗಿದ್ದರೆ ಉಷ್ಣವು ಹೆಚ್ಚು. ಜೌಗುಭೂಮಿಯಾಗಿದ್ದರೆ ಅಷ್ಟು ಉಷ್ಣವಿರದು

6 ಪರ್ವತಪ್ರಸರಣ—ಗಾಳಿಗಳಿಗೆ ಅಡ್ಡವಾಗಿ ಉನ್ನತ ಪರ್ವತಗಳಿದ್ದರೆ ಆ ತಡೆಯನ್ನು ಹೊಂದಿರುವ ಪ್ರದೇಶಗಳಿಗೆ ಆ ಗಾಳಿಯಿಂದ ಬಿಸಿಯಾಗಲೀ ಚಳಿಯಾಗಲೀ ತಗುಲದು. ಟಿಬೆಟ್ಟಿನಲ್ಲಿ ಬೀಸುವ ಶೀತ ಮಾರುತಗಳು ನಮ್ಮ ಇಂಡಿಯಾದೇಶಕ್ಕೆ ತಗುಲದಂತೆಯೂ, ಇಂಡಿಯಾದಲ್ಲಿ ಬೀಸುವ ಮಾನ್‌ಸೂನ್‌ಗಳು ಟಿಬೆಟ್ಟಿಗೆ ಹೋಗದಂತೆಯೂ ಹಿಮಾಲಯ ಪರ್ವತಗಳು ತಡೆಮಾಡಿವೆ. ಉತ್ತರ ಅಮೆರಿಕದ ಮಧ್ಯಭಾಗಕ್ಕೆ ಉತ್ತರದ ಶೀತಮಾರುತಗಳೂ ಬೇಸಗೆಯಲ್ಲಿ ದಕ್ಷಿಣದ ಉಷ್ಣಮಾರುತವೂ ಬೀಸುತ್ತಿರುವುದರಿಂದ ಇಲ್ಲಿ ಉಷ್ಣೋಗ್ರತೆಯು ವಿ

ವಿಪರೀತವಾಗಿ ಬದಲಾಗುತ್ತಿರುವುದು ಪಶ್ಚಿಮ ಘಟ್ಟಗಳಲ್ಲಿ ವಿಶೇಷವಾಗಿ ಮಳೆ ಬೀಳುವುದು. ಸಿಂಧೂದೇಶದಲ್ಲಿ ಬೆಟ್ಟಗಳಿಲ್ಲದುದರಿಂದ ಮಳೆ ಬಹು ಕಡಮೆ. ಉಷ್ಣವು ಹೆಚ್ಚು.

7 ದೇಶದ ಇಳಿಜಾರು—ಉತ್ತರಾರ್ಧಗೋಳದಲ್ಲಿರುವ ಪರ್ವತಗಳ ದಕ್ಷಿಣದ ಇಳಿಜಾರುಗಳಿಗೂ ದಕ್ಷಿಣಾರ್ಧಗೋಳದಲ್ಲಿರುವ ಉತ್ತರದ ಇಳಿಜಾರುಗಳಿಗೂ ಸೂರ್ಯಕಿರಣಗಳು ಸ್ವಲ್ಪ ಲಂಬವಾಗಿ ಬೀಳುವುದರಿಂದ ಇವು ಹೆಚ್ಚು ಉಷ್ಣವಾಗಿರುವುವು.

8 ಸಾಗರ ಪ್ರವಾಹಗಳು—ಇದರಿಂದಲೂ ವಾಯುಗುಣವು ಹೆಚ್ಚು ಕಡಿಮೆಯಾಗುವುದು. ಗಲ್ಫ್‌ಸ್ಟ್ರೀಂ ಪ್ರವಾಹದಿಂದ ಅಮೆರಿಕದ ಪೂರ್ವತೀರವೂ ಇಂಗ್ಲೆಂಡಿನ ಪಶ್ಚಿಮತೀರವೂ ಬೆಚ್ಚಗಿವೆ. ಲಬ್ರಡಾರ್ ಎಂಬ ಶೀತಪ್ರವಾಹದಿಂದ ಲಬ್ರಡಾರಿನ ತೀರವು ಬಹು ಚಳಿಯಾಗಿದೆ. ಕ್ಯುರೋಶಿವೋ ಎಂಬ ಉಷ್ಣೋದಕ ಪ್ರವಾಹದಿಂದ ಜಪಾನ್ ದೇಶದ ಶೀತೋಷ್ಣಗಳು ಹದವಾಗಿವೆ.

9 ಕಾಡುಗಳು—ಉಷ್ಣಪ್ರದೇಶದಲ್ಲಿ ಕಾಡುಗಳು ಹೆಚ್ಚಾಗಿರುವುದರಿಂದ ಅಲ್ಲಿ ಮಳೆಯು ಬಹಳವಾಗಿ ಸುರಿಯುವುದರಿಂದ ಉಷ್ಣವು ಅಷ್ಟು ಹೆಚ್ಚಾಗಿರದು.

(1) ಮಾಸ್ಕೋ ಪಟ್ಟಣವು ರಷ್ಯಾದೇಶದ ಮೈದಾನದಲ್ಲಿದೆ. ಈ ದೇಶದಲ್ಲಿ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಉನ್ನತ ಪರ್ವತಗಳಾವವೂ ಇಲ್ಲದಿರುವುದರಿಂದ ಉತ್ತರಶೀತವಲಯದಿಂದ ಬೀಸುವ ಶೀತಮಾರುತಗಳೂ ದಕ್ಷಿಣದಿಂದ ಬೀಸುವ ಉಷ್ಣಮಾರುತಗಳೂ ತಡೆಯಿಲ್ಲದೆ ದೇಶದೊಳಕ್ಕೆ ಬಂದುಬಿಡುವುದರಿಂದ ಶೀತೋಷ್ಣಗಳ ವೈಪರೀತ್ಯವು ಹೆಚ್ಚು. ಎಡಿಂಬರೋ ಪಟ್ಟಣವು ಸಮುದ್ರಮಾರುತಗಳಿಗೆ ಒಳಪಟ್ಟಿರುವುದರಿಂದಲೂ ಗಲ್ಫ್‌ಸ್ಟ್ರೀಂ ಎಂಬ ಉಷ್ಣೋದಕ ಪ್ರವಾಹದ ದೆಸೆಯಿಂದಲೂ ವಾಯುಗುಣವು ಹಿತಕರವಾಗಿದೆ.

(2) ಅರಬ್ಬಿಸಮುದ್ರದಿಂದ ಬೀಸುವ ಜಲಾಂಶಪೂರಿತವಾದ ಮುಂಗಾರು ಗಾಳಿಗಳನ್ನು ತಡೆಯುವದಕ್ಕೆ ಸಿಂಧೂದೇಶದಲ್ಲಿ ಯಾವ ಪರ್ವತಗಳೂ ಇಲ್ಲ. ಥಾರ್ ಮರುಭೂಮಿಯು ಉಷ್ಣದಿಂದ ಅಲ್ಲಿ ಬಂದ ಮೋಡಗಳು ಚದರಿ ಹೋಗುತ್ತವೆ. ಇದರಿಂದ ಮಳೆ ಇಲ್ಲ. ಹಿಂದೂಸಾಗರದಿಂದ ಬಂಗಾಳಕೊಲ್ಲಿ ಮೇಲೆ ಬೀಸಿಗೊಂಡು ಬರುತ್ತ ಜಲಾಂಶಪೂರಿತವಾದ ಮುಂಗಾರುಗಾಳಿಯಲ್ಲಿ ಒಂದು ಶಾಖೆಯು ಬಂಗಾಳದೇಶದಮೇಲೆ ಹಾದು ಅಸ್ಸಾಮ್ ದೇಶದಕಡೆ ಹೋಗುವುದು. ಮತ್ತೊಂದು ಶಾಖೆಯು ಬರ್ಮಾದೇಶದಲ್ಲಿ ಬೀಸಿ ಇರಾವತಿ ನದಿಮೇಲೆ ಹಾದು ಅಸ್ಸಾಂದೇಶದಕಡೆ ಹೋಗುವದು, ಈ ದೇಶದಲ್ಲಿ ಖಾಸಿ, ಗಾರೋ, ನಾಗ, ಜಯಂ

ಯು ಮೇಲೆ ವಿರಳವಾಗಿರುವುದರಿಂದ ಉಷ್ಣವನ್ನು ಗ್ರಹಿಸುವ ಶಕ್ತಿ ಕಡಮೆಯಾಗುಗಿದೆ. ವಾಯುಮಂಡಲದಲ್ಲಿ ಪ್ರತಿ 300 ಅಡಿ ಎತ್ತರಕ್ಕೆ ಒಂದೊಂದು ಡಿಗ್ರಿ ಉಷ್ಣ ಕಡಮೆಯಾಗುವುದು. ಈ ಅಂಶವನ್ನು ಗ್ರಹಿಸಿ ಅನೇಕರು ಬೇಸಿಗೆಯಲ್ಲಿ ನಂದಿದುರ್ಗ, ನೀಲಗಿರಿ, ಡಾರ್ಜಿಲಿಂಗ್ ಮೊದಲಾದ ಔನ್ನತ ಪ್ರದೇಶಗಳಲ್ಲಿ ವಾಸ ಮಾಡುವರು.

3 ಸಮುದ್ರಸಾಮೀಪ್ಯ:—ಇಲ್ಲಿ ಸರ್ವದಾ ಶೀತೋಷ್ಣಾಧಿಕ್ಯಗಳು ಸಮವಾಗಿರಲು ಸ್ಥಲಜಲಪವನಗಳೇ ಕಾರಣ ಸಮುದ್ರ ಸಾಮೀಪ್ಯದಿಂದ ವಾಯುವಿನಲ್ಲಿ ಹೆಚ್ಚು ಆವಿ ಇರುವುದು. ಈ ಆವಿ ನೀರಾಗುವಾಗ ಅದರಲ್ಲಿ ಅಡಕವಾಗಿದ್ದ ಉಷ್ಣವು ಹೊರಬಿದ್ದು ಶೈತ್ಯವನ್ನು ಕಡಿಮೆಮಾಡುವುದು ಬೇಸಗೆಯಲ್ಲಿ ನೀರು ಆವಿಯಾಗುವುದರಲ್ಲಿ ವಿಶೇಷ ತಾಪವನ್ನು ಗ್ರಹಿಸುವುದು. ಈ ಕಾರಣದಿಂದ ಸಮುದ್ರ ಸಾಮೀಪ್ಯವು ಆವಾಗಲೂ ಶೀತೋಷ್ಣಸ್ಥಿತಿಯನ್ನು ಸಮತ್ವವಾಗಿರಿಸುವುದು.

4 ಅಲ್ಲಿಬೀಸುವ ಗಾಳಿಗಳು ಉಷ್ಣದೇಶಗಳಿಂದ ಬೀಸುವ ಮುಂಗಾರು ಹಿಂಗಾರು ಗಾಳಿಗಳು (ಮಾನ್‌ಸೂನ್) ನೀರನ್ನೂ ಉಷ್ಣವನ್ನೂ ತೆಗೆದುಕೊಂಡು ಹೋಗುವುದು. ಧ್ರುವ ಮಂಡಲದಿಂದ ಬೀಸುವ ತಂಗಾಳಿಗಳು ಉಷ್ಣೋಗ್ರತೆಯನ್ನು ತಗ್ಗಿಸುವುವು. ಕೆಲವು ಉಗ್ರೋಷ್ಣ ಮಾರುತಗಳು ಮರುಭೂಮಿಗಳಿಂದ ಬೀಸುವಾಗ ಉಷ್ಣವನ್ನು ಹೆಚ್ಚಿಸುವವು. ಸಹರ ಮರುಭೂಮಿಯಲ್ಲಿ ಹಗಲು ದುಸ್ಸಹವಾದ ಉಷ್ಣವೂ ರಾತ್ರಿ ನೀರು ಗಡ್ಡೆ ಕಟ್ಟುವಷ್ಟು ಶೈತ್ಯವೂ ಇರುವುದು. ಸಮಭಾಜಕವೃತ್ತಕ್ಕೆ ಬಹುದೂರದಲ್ಲಿ ಇಂಗ್ಲೆಂಡಿನಲ್ಲಿ ಆವಿಯಿಂದ ತುಂಬಿರುವ ಗಾಳಿಗಳು ಬೀಸುವುದರಿಂದ ಬೆಚ್ಚಗಿರುವುದು. ಈ ಕಾರಣದಿಂದಲೇ ಬೊಂಬಾಯಿ ಮೊದಲಾದ ಪಶ್ಚಿಮತೀರದ ಪಟ್ಟಣಗಳು ಬೇಸಗೆಯಲ್ಲಿ ಸಾಮಾನ್ಯೋಷ್ಣವುಳ್ಳವುಗಳಾಗಿವೆ.

5 ಭೂಸ್ವಭಾವ—ಭೂಸ್ವಭಾವದಿಂದಲೂ ಶೀತೋಷ್ಣಗಳು ಹೆಚ್ಚು ಕಡಿಮೆಯಾಗುತ್ತಿವೆ. ನೆಲವು ಮರಳ್ನಾಡಾಗಿದ್ದರೆ ಉಷ್ಣವು ಹೆಚ್ಚು. ಜೇಡುಭೂಮಿಯಾಗಿದ್ದರೆ ಅಷ್ಟು ಉಷ್ಣವಿರದು.

6 ಪರ್ವತಪ್ರಸರಣೆ—ಗಾಳಿಗಳಿಗೆ ಅಡ್ಡವಾಗಿ ಉನ್ನತ ಪರ್ವತಗಳಿದ್ದರೆ ಆ ತಡೆಯನ್ನು ಹೊಂದಿರುವ ಪ್ರದೇಶಗಳಿಗೆ ಆ ಗಾಳಿಯಿಂದ ಬಿಸಿಯಾಗಲೀ ಚಳಿಯಾಗಲೀ ತಗುಲದು. ಟಿಬೆಟ್ಟಿನಲ್ಲಿ ಬೀಸುವ ಶೀತ ಮಾರುತಗಳು ನಮ್ಮ ಇಂಡಿಯಾದೇಶಕ್ಕೆ ತಗುಲದಂತೆಯೂ ಇಂಡಿಯಾದಲ್ಲಿ ಬೀಸುವ ಮಾನ್‌ಸೂನ್‌ಗಳು ಟಿಬೆಟ್ಟಿಗೆ ಹೋಗದಂತೆಯೂ ಹಿಮಾಲಯ ಪರ್ವತಗಳು ತಡೆಮಾಡಿವೆ. ಉತ್ತರ ಅಮೆರಿಕದ ಮಧ್ಯಭಾಗಕ್ಕೆ ಉತ್ತರದ ಶೀತಮಾರುತಗಳೂ ಬೇಸಗೆಯಲ್ಲಿ ದಕ್ಷಿಣದ ಉಷ್ಣಮಾರುತವೂ ಬೀಸುತ್ತಿರುವುದರಿಂದ ಇಲ್ಲಿನ ಉಷ್ಣೋಗ್ರತೆಯು ವಿ

ವಿಪರೀತವಾಗಿ ಬದಲಾಗುತ್ತಿರುವುದು. ಪಶ್ಚಿಮ ಘಟ್ಟಗಳಲ್ಲಿ ವಿಶೇಷವಾಗಿ ಮಳೆ ಬೀಳುವುದು. ಸಿಂಧೂದೇಶದಲಿ ಬೆಟ್ಟಗಳಿಲ್ಲದುದರಿಂದ ಮಳೆ ಬಹು ಕಡಮೆ; ಉಷ್ಣವು ಹೆಚ್ಚು.

7 ದೇಶದ ಇಳಿಜಾರು—ಉತ್ತರಾರ್ಧಗೋಳದಲ್ಲಿರುವ ಪರ್ವತಗಳ ದಕ್ಷಿಣದ ಇಳಿಜಾರುಗಳಿಗೂ ದಕ್ಷಿಣಾರ್ಧಗೋಳದಲ್ಲಿರುವ ಉತ್ತರದ ಇಳಿಜಾರುಗಳಿಗೂ ಸೂರ್ಯಕಿರಣಗಳು ಸ್ವಲ್ಪ ಲಂಬವಾಗಿ ಬೀಳುವುದರಿಂದ ಇವು ಹೆಚ್ಚು ಉಷ್ಣವಾಗಿರುವುವು.

8 ಸಾಗರ ಪ್ರವಾಹಗಳು—ಇದರಿಂದಲೂ ವಾಯುಗುಣವು ಹೆಚ್ಚು ಕಡಿಮೆಯಾಗುವುದು. ಗಲ್ಫ್‌ಸ್ಟ್ರೀಂ ಪ್ರವಾಹದಿಂದ ಅಮೆರಿಕದ ಪೂರ್ವತೀರವೂ ಇಂಗ್ಲೆಂಡಿನ ಪಶ್ಚಿಮತೀರವೂ ಬೆಚ್ಚಗಿವೆ. ಲ್ಯಾಬ್ರಡಾರ್ ಎಂಬ ಶೀತಪ್ರವಾಹದಿಂದ ಲ್ಯಾಬ್ರಡಾರಿನ ತೀರವು ಬಹು ಚಳಿಯಾಗಿದೆ. ಕ್ಯೂರೋ ಸ್ವೋ ಎಂಬ ಉಷ್ಣೋದಕ ಪ್ರವಾಹದಿಂದ ಜಪಾನ್‌ದೇಶದ ಶೀತೋಷ್ಣಗಳು ಹೆಚ್ಚಾದ ಇವೆ.

9 ಕಾಡುಗಳು—ಯಾವ ಪ್ರದೇಶದಲ್ಲಿ ಕಾಡುಗಳು ಹೆಚ್ಚಾಗಿವೆಯೋ ಅಲ್ಲಿ ಮಳೆಯು ಬಹಳವಾಗಿ ಸುರಿಯುವುದರಿಂದ ಉಷ್ಣವು ಅಷ್ಟು ಹೆಚ್ಚಾಗಿರದು.

(1) ಮಾಸ್ಕೋ ಪಟ್ಟಣವು ರಷ್ಯಾದೇಶದ ಮಧ್ಯದಲ್ಲಿದೆ. ಈ ದೇಶದಲ್ಲಿ ಪೂರ್ವ ಪಶ್ಚಿಮವಾಗಿ ಹಬ್ಬಿರುವ ಉನ್ನತ ಪರ್ವತಗಳಾವುವೂ ಇಲ್ಲದಿರುವುದರಿಂದ ಉತ್ತರಶೀತವಲಯದಿಂದ ಬೀಸುವ ಶೀತಮಾರುತಗಳೂ ದಕ್ಷಿಣದಿಂದ ಬೀಸುವ ಉಷ್ಣಮಾರುತಗಳೂ ತಡೆಯಿಲ್ಲದೆ ದೇಶದೊಳಕ್ಕೆ ಬಂದುಬಿಡುವುದರಿಂದ ಶೀತೋಷ್ಣಗಳ ವೈಪರೀತ್ಯವು ಹೆಚ್ಚು. ಎಡಿಂಬರೋ ಪಟ್ಟಣವು ಸಮುದ್ರಮಾರುತಗಳಿಗೆ ಒಳಪಟ್ಟಿರುವುದರಿಂದಲೂ 'ಗಲ್ಫ್‌ಸ್ಟ್ರೀಂ' ಎಂಬ ಉಷ್ಣೋದಕ ಪ್ರವಾಹದ ದೆಸೆಯಿಂದಲೂ ವಾಯುಗುಣವು ಹಿತಕರವಾಗಿದೆ.

(2) ಅರಬ್ಬಿಸಮುದ್ರದಿಂದ ಬೀಸುವ ಜಲಾಂಶಪೂರಿತವಾದ ಮುಂಗಾರು ಗಾಳಿಗಳನ್ನು ತಡೆಯುವುದಕ್ಕೆ ಸಿಂಧೂದೇಶದಲ್ಲಿ ಯಾವ ಪರ್ವತಗಳೂ ಇಲ್ಲ. ಥಾರ್ ಮರುಭೂಮಿಯ ಉಷ್ಣದಿಂದ ಅಲ್ಲಿ ಬಂದ ಮೋಡಗಳು ಚದರಿ ಹೋಗುತ್ತವೆ. ಇದರಿಂದ ಮಳೆ ಇಲ್ಲ. ಹಿಂದೂಸಾಗರದಿಂದ ಬಂಗಾಳಕೊಲ್ಲಿ ಮೇಲೆ ಬೀಸಿಕೊಂಡು ಬರುತ್ತ ಜಲಾಂಶಪೂರಿತವಾದ ಮುಂಗಾರುಗಾಳಿಯಲ್ಲಿ ಒಂದು ಶಾಖೆಯು ಬಂಗಾಳದೇಶದಮೇಲೆ ಹಾದು ಅಸ್ಸಾಮ್ ದೇಶದಕಡೆ ಹೋಗುವುದು. ಮತ್ತೊಂದು ಶಾಖೆಯು ಬರ್ಮಾದೇಶದಲ್ಲಿ ಬೀಸಿ ಇರಾವತಿ ನದಿಮೇಲೆ ಹಾದು ಅಸ್ಸಾಂದೇಶದಕಡೆ ಹೋಗುವುದು, ಈ ದೇಶದಲ್ಲಿ ಖಾಸಿ, ಗಾರೋ, ನಾಗ, ಜಯಂ

ತಿಯ ಪರ್ವತಶ್ರೇಣಿಗಳ ಸ್ಥಾಲುಗಳಿರುವದರಿಂದ ಇವುಗಳಿಂದ ತಡೆಯಲ್ಪಟ್ಟು ಅಲ್ಲಿ ಹೆಚ್ಚಾಗಿ ಮಳೆ ಸುರಿಯುವುದು.

IV (1) 1 ಹತ್ತಿ—ಸಿಂಧಪ್ರದೇಶ, ಬೊಂಬಾಯಿ ಅಧಿಪತ್ಯದ ಕೆಲವು ಜಿಲ್ಲೆಗಳು, ಮದರಾಸ್ ಅಧಿಪತ್ಯದ ಕೆಲವು ಡಿಸ್ಟ್ರಿಕ್ಟುಗಳು

2 ಛತ್ತ್ರ—ಬಂಗಾಳ ಬಿಹಾರ್, ಪಶ್ಚಿಮಘಟ್ಟಗಳು

3 ಅಫೀಮು—ಮಾಳವ, ಬಿಹಾರ್,

(2) 1 ಬೊಂಬಾಯಿ, ಮದರಾಸ್,

2 ಕಲ್ಕತ್ತಾ

3 ಪೂನೆ, ಕುಂಭಕೋಣ,

(3) 1 ಹತ್ತಿಯ ನೂಲು ಮತ್ತು ಬಟ್ಟೆಗಳು ಲೋಹದ ಸಾಮಾನುಗಳು, ಉಣ್ಣೆಯ ಬಟ್ಟೆಗಳು, ಕಲ್ಲಿದ್ದಲು,

2 ತೇಯಲೆ, ಮತ್ತು ಸಕ್ಕರೆ, ಇಂಡಿಯಾ, ಚೈನಾ,

V (1) ಮದರಾಸಿನ ಕಡೆ ಒಂದು,
ಮೈಸೂರಿನ ಕಡೆ ಒಂದು,
ತುಮಕೂರಿನ ಕಡೆ ಒಂದು,
ಬಳ್ಳಾರಿ ಕಡೆ ಒಂದು,

(2) 1 ಮುಳ್ಳೈನಗಿರಿ,

2 ಗಂಗನಚುಕ್ಕಿ, ಗೇರುಸೊಪ್ಪೆ,

3 ಕಂಬಳಿಗಳು—ಚಿತ್ರದುರ್ಗ, ದಾವಣಗೆರೆ, ಮಂಡ್ಯ, ಕೋಲಾರ
ಆಟದ ಸಾಮಾನುಗಳು—ಚನ್ನಪಟ್ಟಣ,

4 ಶ್ರೀರಂಗಪಟ್ಟಣ, ಶಿವನಸಮುದ್ರ, ಶ್ರೀರಂಗ,

5 ಕಲ್ಕತ್ತಾ, ಬೇಸಗೆಯ ರಾಜಧಾನಿ—ಸಿಮ್ಲಾ,

VI ಚಿಕಾಗೋ—ಅಮೇರಿಕಾದ ಸಂಯುಕ್ತ ಸಂಸ್ಥಾನದಲ್ಲಿದೆ. ಇಲ್ಲಿ ಧಾನ್ಯದ ವ್ಯಾಪಾರ ಹೆಚ್ಚಾಗಿರುವದರಿಂದ ಪ್ರಸಿದ್ಧಿಗೆ ಬಂದಿದೆ.

ಪನಾಮ—ಪನಾಮ ಜಲಸಂಧಿಯ ದಡದಲ್ಲಿರುವ ಪಟ್ಟಣ ಉತ್ತರ ಅಮೇರಿಕದ ಪೂರ್ವತೀರದಿಂದದ ಪಶ್ಚಿಮತೀರಕ್ಕೆ ಹೋಗುವ ಹಡಗುಗಳು ಇಲ್ಲಿ ನಿಂತು ಮುಂದಕ್ಕೆ ಹೋಗುವದರಿಂದ ವ್ಯಾಪಾರ ಸೌಕರ್ಯಕ್ಕೆ ಅನುಕೂಲವಾಗಿದೆ.

ಖಾರ್ಟೂಮ್—ನ್ಯೂಬಿಯಾದಲ್ಲಿ ಬಿಳಿನೈಲ್, ನೀಲನೈಲ್ ಸಂಗಮವಾಗಿದೆ, ನೈಲ್‌ನದಿಯ ಮೆಕ್ಕಲಿನಿಂದ ಉತ್ಕೃಷ್ಟವಾದ ಭೂಮಿಯುನ್ನುಂಟಾಗಿದೆ.

ಸಿಡ್ನಿ — ನ್ಯೂಸೌತ್‌ವೇಲ್ಸ್‌ನಲ್ಲಿದ್ದ ಸುಂದರವಾದ ಪಟ್ಟಣ.

ಸಿಂಗಪೂರ್ — ಇದು ಸ್ಟ್ರೇಟ್ ಸೆಟಲ್‌ಮೆಂಟಿನಲ್ಲಿದೆ. ಇಲ್ಲಿಂದ ಹೊರಡುವ ಜಹಜುಗಳು ನಾನಾಕಡೆಗೆ ಹೋಗುತ್ತವೆ. ಬಹಳ ವ್ಯಾಪಾರ ನಡೆಯುತ್ತದೆ.

1917

I ಭೂಮಿಯು ದುಂಡಾಗಿದೆ ಎಂಬುದನ್ನು ತಿಳಿಯುವ ಬಗೆ ಹೇಗೆ?

II (1) ಸಮಶೀತೋಷ್ಣವಲಯದಲ್ಲಿ ಜನರು ಬೆಳೆಯುವ ಫಲ, ಪುಷ್ಪಗಳಲ್ಲಿ ಮುಖ್ಯವಾದವು ಯಾವುವು?

(2) ಹೈದರಾಬಾದ್, ಮಡಗಾಸ್ಕರ್, ಮೆಕ್ಸಿಕೊ, ಗ್ರೀನ್‌ಲೆಂಡ್ ಇವು ಯಾವ ವಲಯಗಳಲ್ಲಿವೆ?

III (1) ಹಿಮಾಲಯ ಪರ್ವತ ಶ್ರೇಣಿಯಿಂದ ಉತ್ತರ ಹಿಂದೂಸ್ಥಾನಕ್ಕೆ ಆಗುವ ಪ್ರಯೋಜನಗಳು ಯಾವುವು ಐದು ಪ್ರಯೋಜನಗಳನ್ನಾದರೂ ತಿಳಿಸಿರಿ

(2) ಸೆಲ್ವಾಸ್, ಲಾನಾಸ್, ಪಂಪಾಸ್, ಇವು ಎಲ್ಲಿವೆ? ಇವುಗಳ ಲಕ್ಷಣಗಳೇನು?

IV ಕಲ್ಕತ್ತಾ, ಸಿಂಗಪೂರ್, ಸ್ಯಾನ್ ಫ್ರಾನ್ಸಿಸ್ಕೊ, ಮೆಲ್ಬೋರ್ನ್, ಮೆಕ್ಕಾ, ಈ ಪಟ್ಟಣಗಳ ಏಳಿಗೆಗೆ ಮುಖ್ಯ ಕಾರಣಗಳು ಯಾವುವು?

V ಸಿಲೋನ್ ದ್ವೀಪವು ಇರುವ ಸ್ಥಳ, ಅದರ ಮೇಲ್ಮೈಯ ಲಕ್ಷಣ, ಅಲ್ಲಿಯ ಮುಖ್ಯಬೆಳೆ, ರಫ್ತಾಗುವ ಸರಕು, ರಾಜ್ಯಭಾರದಕ್ರಮ,—ಇವುಗಳನ್ನು ತಿಳಿಸಿರಿ.

VI ಪಂಜಾಬ್ ದೇಶದಲ್ಲಿ ವಿಶೇಷವಾಗಿ ನೀರಾವರಿ ಕೆಲಸಗಳು ಜರಗಲು ಇರುವ ಅನುಕೂಲ್ಯಗಳು ಯಾವುವು?—

VII ಇವು ಯಾವುವು?

(1) ಮೈಸೂರುದೇಶದ ಮುಖ್ಯ ಬೆಳೆಗಳು.

(2) ಜಪಾನ್‌ದೇಶದ ಮುಖ್ಯ ಕೈಗಾರಿಕೆಗಳು.

(3) ಸಂಯುಕ್ತ ಸಂಸ್ಥಾನದ ಹಿಂದೂಸ್ಥಾನಕ್ಕೆ ರಫ್ತಾಗಿ ಬರತಕ್ಕ ಸರಕುಗಳು.

(4) ಇಂಗ್ಲೆಂಡಿನ ಮುಖ್ಯ ವಿಶ್ವವಿದ್ಯಾನಿಲಯಗಳು.

VIII ದಕ್ಷಿಣ ಹಿಂದೂಸ್ಥಾನದ ಭೂಪಟವನ್ನು ಬರೆದು ಅದರಲ್ಲಿ ಇವುಗಳನ್ನು ಗುರ್ತಿಸಿರಿ,—

(1) ನರ್ಮದಾನದಿ.

(2) ಪೂರ್ವ ಪಶ್ಚಿಮ ಘಟ್ಟಗಳ ಶ್ರೇಣಿ.

(3) ಪಾಲಘಾಟ್ ಕಣಿವೆ.

(4) ಮದ್ರಾಸ್, ಮಂಗಳೂರು, ಬೆಂಗಳೂರು, ಕಾಲಿನಿಯರ್

ಉತ್ತರಗಳು.

ಭೂಮಿಯು ಗುಂಡಾಗಿದೆ ಎಂಬುದನ್ನು
ತಿಳಿಯುವ ಕಾರಣಗಳು —

(1) ನಾವು ದಿಗಂತವನ್ನು ಎಲ್ಲಿನೋಡಿದರೂ ವೃತ್ತಾಕಾರವಾಗಿ ಕಾಣುವುದು (2) ಸಮುದ್ರದಡದಲ್ಲಿ ನಿಂತುನೋಡಿದರೆ ಹೋಗುತ್ತಿರುವ ಹಡಗಿನ ಕೆಳಭಾಗವು ಮೊದಲು ಮರೆಯಾಗುವದು ದಡಕ್ಕೆ ಬರುತ್ತಿರುವ ಹಡಗಿನ ತುದಿಯು ಮೊದಲು ಕಾಣುವುದು. (3) ಚಂದ್ರಗ್ರಹಣದಲ್ಲಿ ಚಂದ್ರನಮೇಲೆ ಬೀಳುವ ಭೂಮಿಯನೆರಳು (ನೆಳಲು) ವೃತ್ತಾಕಾರವಾಗಿರುವುದು. (4) ಭೂಮಿಯಲ್ಲಿ ಒಂದು ಗೊತ್ತಾದ ಸ್ಥಳದಿಂದ ಹೊರಟು ಒಂದೇ ದಿಕ್ಕಿಗೆ ಪ್ರಯಾಣ ಮಾಡುತ್ತಿದ್ದರೆ ಪುನಃ ಅದೇಸ್ಥಳಕ್ಕೆ ಅಭಿಮುಖದಿಕ್ಕಿನಿಂದ ಬರುವುದು. (5) ನಮಗೆ ಪೂರ್ವಕ್ಕೆ ಇರುವದೇಶಗಳಲ್ಲಿ ಮೊದಲು ಸೂರ್ಯೋದಯವಾಗುವುದು. ಪಶ್ಚಿಮಕ್ಕೆ ಇರುವ ದೇಶಗಳಲ್ಲಿ ಆಲಸ್ಯವಾಗಿ ಆಗುವುದು. ಭೂಮಿಯು ತಟ್ಟೆಯಾಗಿದ್ದರೆ ಸೂರ್ಯೋದಯ ಸೂರ್ಯಾಸ್ತಮಾನಗಳು ಎಲ್ಲೆಡೆಯಲ್ಲಿಯೂ ಒಂದೇಕಾಲದಲ್ಲಿ ಆಗುತ್ತಿದ್ದವು. ಹಾಗಾಗದಿರುವುದರಿಂದ ಭೂಮಿಯು ಗುಂಡಾಗಿದೆ ಎಂದು ತಿಳಿಯಬರುವುದು.

II (1) ಗೋದುಮೆ, ಓಟ್ಸ್, ಉರ್ಲಗಡ್ಡೆ, (ಆಲೂಗಡ್ಡೆ) ಶೀಮೆಮಾಪಿಪ್ಪೆ, ಕಿತ್ತಿಳೆ, ದ್ರಾಕ್ಷಿ, ಪೀತ್ರದಾರು ಮುಂತಾದವು.

(2) ಹೈದರಾಬಾದ್—ಉಷ್ಣವಲಯದಲ್ಲಿ

ಮೆಡಗಾಸ್ಕರ್—ಮುಕ್ಕಾಲುಭಾಗ ಉಷ್ಣವಲಯದಲ್ಲಿ ಕಾಲುಭಾಗ ಸಮಶೀತೋಷ್ಣವಲಯದಲ್ಲಿ

ಮೆಕ್ಸಿಕೊ—ಕಾಲುಭಾಗ ಉಷ್ಣವಲಯದಲ್ಲಿಯೂ ಮುಕ್ಕಾಲುಭಾಗ ಸಮಶೀತೋಷ್ಣವಲಯದಲ್ಲಿಯೂ ಇದೆ,

ಗ್ರೀನ್‌ಲೆಂಡ್—ಶೀತವಲಯದಲ್ಲಿ

III (1) 1 ಹಿಂದೂಸಾಗರದಮೇಲೆ ಬೀಸಿಕೊಂಡು ಬರುವ ಜಲಾಂಶಪೂರ್ಣವಾದ ಮಾರುತಗಳು ಇಂಡಿಯಾದೇಶದಿಂದ ಹೊರಗೆ ಹೋಗದಂತೆ ಅಡ್ಡಿಮಾಡಿ ಅದರಲ್ಲಿರುವ ಜಲಾಂಶವನ್ನೆಲ್ಲಾ ಮಂಜು ಮತ್ತು ಮಳೆಯರೂಪದಲ್ಲಿ ಸುರಿಸಿಕೊಳ್ಳುತ್ತದೆ: (2) ಉತ್ತರದಿಂದಬರುವ ಶೀತಮಾರುತಗಳನ್ನು ತಡದು ಇಂಡಿಯಾಕ್ಕೆ ಚಳಿಯಕಾಟವನ್ನು ತಪ್ಪಿಸುತ್ತದೆ (3) ಉತ್ತರದೇಶದಿಂದ ಶತ್ರುಗಳು ಇಂಡಿಯಾದೊಳಕ್ಕೆ ಬಾರದಂತೆ ಅಡ್ಡಿಮಾಡುತ್ತದೆ (4) ಸಿಂಧೂ ಗಂಗಾ ನದಿಗಳನ್ನು ಹಿಮಜಲ ಪೋಷಿತಗಳನ್ನಾಗಿಮಾಡಿ ಬೇಸಗೆಯಲ್ಲಿಯೂ ತುಂಬಿ ಹರಿಯುವಂತೆ ಮಾಡುತ್ತದೆ.

(2) ಸೆಲ್ವಾಸ್—ಇದು ದಕ್ಷಿಣಅಮೆರಿಕಾದಲ್ಲಿರುವ ಅಮೆಜಾನ್ ನದಿಯ ಮೈದಾನ ಇದೊಂದು ದೊಡ್ಡಕಾಡು. 1200 ಮೈಲಿ ಉದ್ದ 800 ಮೈಲಿ ಅಗಲವಾಗಿದೆ. ಇಲ್ಲಿ ಲತೆಗಳು ಕೊಂಬೆಗಳಿಂದ ಕೊಂಬೆಗಳಿಗೆ ವಿಚಿತ್ರವಾಗಿ ಹಬ್ಬಿವೆ. ಕೆಲವು ಹಗ್ಗಗಳಂತೆ, ಕೆಲವು ಏಣಿಗಳಂತೆ ನಾನಾವಿಧವಾಗಿ ಹಬ್ಬಿವೆ. ಇದೇ ಪ್ರಪಂಚದಲ್ಲಿ ದೊಡ್ಡ ಕಾಡು.

ಲಾನೋಸ್—ಕೊಲಂಬಿಯಾದಲ್ಲಿಯೂ ವೆನಿಜ್ಯುಲದಲ್ಲಿಯೂ ಹಬ್ಬಿರುವ ಮೈದಾನ. ಈ ಮೈದಾನದಲ್ಲಿ ಹಳ್ಳದಿಣ್ಣೆಗಳಿಲ್ಲ. ಬೇಸಗೆಯಲ್ಲಿ ಬೆಂಗಾಡಾಗಿದ್ದು ಮಳೆಗಾಲದಲ್ಲಿ ಅತಿ ರಮಣೀಯವಾಗಿ ಕಾಣುತ್ತದೆ. ಇಲ್ಲಿ ದನಗಳೂ ಕುದುರೆಗಳೂ ಅಸಂಖ್ಯಾತವಾಗಿವೆ

ಪಾಂಪಾಸ್—ಇದು ಅರ್ಜೆಂಟೈನಾದಲ್ಲಿ ಒಂದು ಮೈದಾನ. ಇದಕ್ಕೆ ಲಾಪ್ಲಾಟಾ ಮೈದಾನವೆಂದೂ ಹೆಸರಿದೆ. ಇಲ್ಲಿ ಮರಗಳಿಲ್ಲ ಹುಲ್ಲುಗಾವಲುಗಳು ವಿಪರೀತವಾಗಿವೆ. ಕಾಡುದನಗಳೂ ಕುದುರೆಗಳೂ ಅಸಂಖ್ಯಾತವಾಗಿವೆ.

IV ಕಲ್ಕತ್ತಾ—ಇದು ಇಂಡಿಯಾದೇಶಕ್ಕೆ ರಾಜಧಾನಿ. ಅರಮನೆಗಳಂತಿರುವ ಮನೆಗಳು ಈ ಪಟ್ಟಣದಲ್ಲಿ ಬಹು ವಿಶೇಷವಾಗಿರುವುದರಿಂದ "ಅರಮನೆಗಳಊರು" ಎಂಬ ಹೆಸರು ಬಂದಿದೆ. ಈ ಪಟ್ಟಣದಲ್ಲಿ ವ್ಯಾಪಾರವು ಬಹಳ ಜೋರಾಗಿ ನಡೆಯುತ್ತದೆ. ಈ ಪಟ್ಟಣದಿಂದ ಬಂಗಾಳದೇಶದ ಇತರ ಪಟ್ಟಣಗಳಿಗೆ ರೈಲ್ವೆಯೂ, ಇಂಡಿಯಾದೇಶದ ಮುಖ್ಯಭಾಗಗಳಿಗೆ ತಂತಿಯ ಟಪಾಲೂ ಇವೆ. ಇಲ್ಲಿಂದ ಏಷ್ಯಾಖಂಡದಲ್ಲಿರುವ ಮುಖ್ಯ ಮುಖ್ಯಗಳಾದ ರೇವುಪಟ್ಟಣಗಳಿಗೆ ಹೊಗೆ

ಯುದ್ಧಹಡಗುಗಳು ಪೃಥ್ವಿಯ ಸಕಲಭಾಗಗಳಿಗೂ ಹಡಗುಗಳು ಹೋಗಿಬರುತ್ತವೆ.

ಸಿಂಗಪೂರ್—ಸ್ಟ್ರೈಟ್ಸ್‌ಸೆಟ್ಲ್‌ಮೆಂಟುಗಳಲ್ಲಿದೆ. ವ್ಯಾಪಾರಕ್ಕೆ ಬಹಳ ಅನುಕೂಲವಾದ ಸ್ಥಳದಲ್ಲಿದೆ ಪೃಥ್ವಿಯ ಸಕಲದೇಶದ ಹಡಗುಗಳೂ ಇಲ್ಲಿಗೆ ಬರುವವು. ತವರ, ಟೀ, ಗೋಂದು, ಇಂಡಿಯಾರಬ್ಬರು ಮೊದಲಾದ ಪದಾರ್ಥಗಳಲ್ಲಿ ವ್ಯಾಪಾರವು ಬಹಳವಾಗಿ ನಡೆಯುತ್ತದೆ.

ಸ್ಯಾನ್‌ಫ್ರಾನ್ಸಿಸ್ಕೋ—ಸಾನ್‌ಫ್ರಾನ್ಸಿಸ್ಕೋ ಕೊಲ್ಲಿಯ ದಡದಲ್ಲಿದೆ. ಇಲ್ಲಿಂದ ಹೊರಡುವ ಹಡಗುಗಳು ಚೀಣ, ಜಪಾನ್, ಆಸ್ಟ್ರೇಲಿಯಾ, ಸ್ಯಾಂಡಿಚ್‌ದ್ವೀಪಗಳಕಡೆಗೆ ಹೊರಡುವುವು. ಮತ್ತು ಇಲ್ಲಿಂದ ರೈಲ್ವೆಗಳೆರಡು ಹೊರಟು ಅಟ್ಲಾಂಟಿಕ್ ಸಾಗರದತೀರಕ್ಕೆ ಹೋಗುವವು.

ಮೆಲ್ಬೋರ್ನ್—ವಿಕ್ಟೋರಿಯಾಕಾಲೋನಿಯ ರಾಜಧಾನಿ, ಸುಂದರವಾದ ಪಟ್ಟಣ. ಇಲ್ಲಿ ಒಂದು ಸಕಲವಿದ್ಯಾನಿಲಯವೂ ಧರ್ಮಾರ್ಥವಾಗಿಟ್ಟಿರುವ ಪುಸ್ತಕ ಭಂಡಾರ ಒಂದೂ ಇವೆ.

ಮೆಕ್ಕಾ—ಅರಾಬಿಯಾದಲ್ಲಿ ಮಹಮ್ಮದ್ ಹುಟ್ಟಿದಸ್ಥಳ. ಈ ಪಟ್ಟಣದಲ್ಲಿ ಕಾಬ ಎಂಬ ಒಂದು ಮಸೀದಿಯುಂಟು. ಇದು 40 ಅಡಿಯಷ್ಟು ಎತ್ತರವಾಗಿದೆ. ಇದಕ್ಕೆ ಬೆಳ್ಳಿಯಕದವನ್ನು ಮಾಡಿದಾರೆ. ಇದರಲ್ಲಿ ಪೂಜ್ಯವಸ್ತುವಾದ ಕರಿಯಕಲ್ಲಿರುತ್ತೆ. ಮಕ್ಕದ ಯಾತ್ರೆ ಮಾಡಿದವರಿಗೆ ಹಾಜಿ ಎಂಬ ಹೆಸರು ಬರುವದು. ಮಹಮ್ಮದೀಯರ ಯಾತ್ರಾಸ್ಥಳ.

V ಸಿಲೋನ್—ಪಾ[illegible] ಜಲಸಂಧಿಯನ್ನು ದಾಟಿದರೆ ಪರ್ಯಾಯದ್ವೀಪದ ಆಗ್ನೇಯದಲ್ಲಿರುವ ಸಿಹ್ಮಳ[illegible] ಸಿಕ್ಕುವುದು, ಅದರ ನೆಲವೂ, ವೃಕ್ಷಗಳೂ ಮೃಗಗಳೂ, ಇಂಡಿಯಾ [illegible]ಳಂತೆಯೇ ಇರುವುದರಿಂದ ಬಹುಕಾಲದಹಿಂದೆ ಈ ದ್ವೀಪವು ಇಂಡಿಯಾದ ಒಂದು[illegible]ವಾಗಿದ್ದಿತೆಂದು ಊಹಿಸುತ್ತಾರೆ.

ಇದು ಆಕಾರದಲ್ಲಿ [illegible] ಹಣ್ಣಿನಂತಿರುವುದು. ಒಳ್ಳೆಯದಾದ ಪ್ರಾಕೃತಿಕ ಭೂಪಟವಿದ್ದಲ್ಲಿ ಇದರ [illegible]ಯುಕಟ್ಟನ್ನು ಸುಲಭವಾಗಿ ಜ್ಞಾಪಕದಲ್ಲಿಡಬಹುದೆಂದೂ ತಿಳಿದು ಬರುತ್ತದು. ನಟ್ಟನಡುವಿನಲ್ಲಿಲ್ಲದಿದ್ದರೂ, ಅದಕ್ಕೆ ಸ್ವಲ್ಪ ದಕ್ಷಿಣದಲ್ಲಿ ಆರೇಳು ಸಾವಿರ ಅಡಿ ಎತ್ತರವಿರುವ ಒಂದು ಪರ್ವತರಾಶಿಯು ಕಾಣಬರುವುದು. ಈ ಪರ್ವತರಾಶಿಯಿಂದ ಎಲ್ಲಾ ದಿಕ್ಕುಗಳಲ್ಲಿಯೂ ಸಮುದ್ರದಕಡೆ ಭೂಮಿಯು ತಗ್ಗಾ[illegible]ಂದು ಕಡೆಗೆ ತೀರಪ್ರದೇಶದಲ್ಲಿ ಮಟ್ಟಸವಾಗುವುದು. ಈ ಪರ್ವತರಾಶಿಯು ನಟ್ಟನಡುವಿನಲ್ಲಿರದೆ ಸ್ವಲ್ಪ ದಕ್ಷಿಣದಲ್ಲಿರುವದರಿಂದ ಉತ್ತರಭಾಗಕ್ಕಿಂತಲೂ, ದಕ್ಷಿಣದಲ್ಲಿ ಹೆಚ್ಚಾಗಿ ಇಳಿಜಾರಾಗಿರುವದೆಂದು ತಿಳಿದು ಬರುವುದು. ಉ

ತ್ತರಕ್ಕೆ ಹೋಗ ಹೋಗುತ್ತ ಒಡೆದು ಚಿಕ್ಕದಾದ ಪೆರ್ಶ್ಯಯದ್ವೀಪವಾಗಿಯೂ ತೀರಪ್ರದೇಶಕ್ಕೆ ಸ್ವಲ್ಪ ದೂರದಲ್ಲಿ ಹುಟ್ಟಿದವಾದ ಕೆಲವು ದ್ವೀಪಗಳಾಗಿಯೂ ಪರಿಣಮಿಸುವುದು. ಮೌಂಟ್ ಪೆಡ್ರೊ ಮತ್ತು ಆಡಮ್ಸ್ ಪೀಕ್ ಇವುಗಳೇ ಮಧ್ಯಭಾಗದ ಮುಖ್ಯವಾದ ಪರ್ವತಗಳು ಆದುದರಿಂದ ಸಿಂಹಳದ್ವೀಪವನ್ನು ಮಧ್ಯದಲ್ಲಿ ಎತ್ತರವಾದ ನೂಪಿನ ಹಣ್ಣಿನ ಆಕಾರವುಳ್ಳ ಮೈದಾನವೆಂದು ಹೇಳಬಹುದು.

ಬೆಳೆ —ಇಲ್ಲಿ ಭೂಮಿಯು ಅಷ್ಟು ಸಾರವತ್ತಾದದ್ದಲ್ಲ. ಆದುದರಿಂದ ಈ ದ್ವೀಪದ ಮುಕ್ಕಾಲುಭಾಗದಲ್ಲಿ ವ್ಯವಸಾಯವೇ ನಡೆಯುವದಿಲ್ಲ. ತೆಂಗು, ಭತ್ತ, ಟೀ, ಈ ಮೂರುಬೆಳೆಗಳೇ ಸಿಂಹಳದ್ವೀಪಕ್ಕೆ ಆಧಾರ. ದಾಲ್ಚಿನ್ನಿ, ಜಾಯಿಕಾಯಿ, ಲವಂಗ, ಮೆಣಸು, ಏಲಕ್ಕಿ, ಮುಂತಾದ ಸಂಬಾರದ ಪದಾರ್ಥಗಳಿಗೆ ಬಹುಕಾಲದಿಂದಲೂ ಪ್ರಸಿದ್ಧವಾಗಿರುವದು.

ರಫ್ತಾಗುವ ಸರಕು.—ಟೀ. ಕಾಫಿ. ಕೊಬರಿಯೆಣ್ಣೆ, ಮತ್ತು ದಾಲ್ಚಿನ್ನಿ ಇಂಗ್ಲಂಡಿಗೆ ಅಡಿಕೆ, ಚೌಬೀನಮರ, ಉಪ್ಪು ಹಗ್ಗಗಳು ಇಂಡಿಯಕ್ಕೆ ಕಳುಹಿಸಲ್ಪಡುವವು.

ರಾಜ್ಯಭಾರಕ್ರಮ.—ಈ ದ್ವೀಪವು ಇಂಡಿಯಾ ಸರಕಾರಕ್ಕೆ ಒಳಪಟ್ಟಿಲ್ಲ. ಗ್ರೇಟ್‌ಬ್ರಿಟನ್ನಿನ ದೊರೆಗಳಪರವಾಗಿ ಇಲ್ಲಿ ಒಬ್ಬ ಗೌರ್ನರನಿರುವನು ಇವನ ಸಹಾಯಕ್ಕಾಗಿ ಬಂದು ಮಂತ್ರಾಲೋಚನ ಸಭೆಯಿರುವದು. ರಾಜ್ಯಾಡಳಿತದ ಸೌಕರ್ಯಕ್ಕಾಗಿ ಈ ದ್ವೀಪವನ್ನು ಒಂಭತ್ತು ಭಾಗಗಳಾಗಿ ಮಾಡಿರುವರು.

VI (1) ಮೆಕ್ಕಲು ಮಣ್ಣಿನಿಂದ ಕೂಡಿರುವುದರಿಂದ ಭೂಮಿಯು ಫಲವತ್ತಾಗಿರುವದು. ಆದುದರಿಂದ ಈ ಭೂಮಿಗೆ ನೀರನ್ನು ಹಾಯಿಸಿದರೆ ಕಾಲುವೆಗಳನ್ನು ತೆಗೆಯುವದಕ್ಕೆ ಖರ್ಚಾದ ಲಾಗಪಡು ಸರಕಾರಕ್ಕೆ ಏಳುವದು. (2) ಭೂಮಿಯು ತಟ್ಟೆಯಂತೆ ಸಪಾಟವಾಗಿರುವದರಿಂದ ಕಾಲುವೆಗಳನ್ನು ಸುಲಭವಾಗಿಯೂ ವಿಶೇಷ ಖರ್ಚಿಲ್ಲದೆಯೂ ತೆಗೆಯಬಹುದು. ದೇಶವು ಇಳಿಜಾರವಾಗಿ ಕಲ್ಲುಬಂಡೆಗಳು ಬಹಳವಾಗಿದ್ದಲ್ಲಿ ಕಾಲುವೆಗಳನ್ನು ತೆಗೆಯುವುದಕ್ಕಾಗುವುದಿಲ್ಲ. (3) ನೀರಿಗೆ ಆಶ್ರಯವಾದ ಈ ನದಿಗಳು ನೀಡಿದ ಬೆರಳುಗಳಂತೆ ದೇಶದ ಎಲ್ಲಾಭಾಗಗಳಮೇಲೂ ಪ್ರಸರಿಸಿರುವುವು. (4) ಇಷ್ಟೇ ಅಲ್ಲ. ಈ ನದಿಗಳಲ್ಲಿ ನೀ[illegible] ಸಮೃದ್ಧಿಯೂಗಿರುವದು. ನೀರಿಗೆ ಆಶ್ರಯವಾದ ಹಿಮಾಲಯಪರ್ವತದಿಂದ ಪಂಚನದಿಗಳೂ ಸಿಂಧುವೂ ಹರಿದುಬರುವವು.

VII (1) ಮೈಸೂರುದೇಶದ ಮುಖ್ಯವಾದಬೆಳೆ ರಾಗಿ, ಗೋಧಿ, ಹರಳು, ಎಳ್ಳು, ತೆಂಗಿನಕಾಯಿ, ಹೊಗೆಸೊಪ್ಪು, ಸೆಣಬು, ಮೆಣಸು, ಅವರೆ

೭. ಉದ್ದು, ಹೆಸರು, ಹುರಳಿ ಮುಂತಾದವುಗಳನ್ನು ಬೆಳೆಯುತ್ತಾರೆ.

(2) ಜರ್ಮನ್ ದೇಶದವರು ಚೇತೋಹರವಾದ ಮಣ್ಣಿನ ಪಾತ್ರೆಗಳನ್ನು ಮಾಡುವುದರಲ್ಲಿ ಬಹುನಿಪುಣರು. ಲೋಹದ ಕೈಕೆಲಸದಲ್ಲಿ ಇವರಿಗೆ ಸಮನಾರಿಲ್ಲ. ಕಾಗದವನ್ನು ಮಾಡುವುದರಲ್ಲಿಯೂ ದಂತದ ಕೆತ್ತನೆಯ ಕೆಲಸದಲ್ಲಿಯೂ ಇವರು ಅಗ್ರಗಣ್ಯರು

ಕಾಗದವನ್ನು ವಿಧವಿಧವಾಗಿ ಉಪಯೋಗಿಸುವದರಿಂದ ಜನರ ನಾಗರಿಕತೆಯನ್ನು ನಿರ್ಣಯಿಸುವುದಾದರೆ ಜಪಾನರು ಅಗ್ರಸ್ಥಾನಾರ್ಹರಾಗಿರುವರು. ಅಚ್ಚುಹಾಕುವುದಕ್ಕೆ ಕಾಗದವನ್ನು ಉಪಯೋಗಿಸುವುದಲ್ಲದೆ, ಕರವಸ್ತ್ರಗಳಿಗೂ ತಲೆದಿಂಬಿನ ಗವಸುಗಳಿಗೂ, ಕಿಟಕಿಯ ಕದಗಳಿಗೂ, ಮಳೆಗಾಲದ ಅಂಗಿಗಳಿಗೂ ಉಪಯೋಗಿಸುತ್ತಾರೆ.

(3) ಮಟ್ಟಿತೈಲ, ಚಿನ್ನ, ಬೆಳ್ಳಿ,

(4) ಲಂಡನ್, ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಡರ್ಹಾಂ

1918

I. ಇವುಗಳ ಅರ್ಥವನ್ನು ವಿವರಿಸಿರಿ:—

(1) ಜಲವಿಭಾಗಸ್ಥಳ (2) ಜ್ವಾಲಾಮುಖಿ (3) ಆರ್ಟೀಸಿಯನ್ ಭಾವಿ (4) ಜಲಪಾತ (5) ಭೂಶಿರ (6) ಪ್ರೈರಿ.

II (1) ಹಗಲು ಮತ್ತು ರಾತ್ರಿಗಳಾಗಲು ಕಾರಣವೇನು?

(2) ಒಂದು ಸ್ಥಳದ ಅಕ್ಷಾಂಶಕ್ಕೂ ಮತ್ತು ಆ ಸ್ಥಳದ ಉಷ್ಣಕ್ಕೂ ಇರುವ ಪರಸ್ಪರ ಸಂಬಂಧವೇನು?

(3) ಸಮುದ್ರಗಳಿಂದ ಉಂಟಾಗುವ ಪ್ರಯೋಜನಗಳೇನು?

III (1) ಇಂಗ್ಲಂಡಿನಿಂದ ಇಂಡಿಯಕ್ಕೆ ಇರುವ ಕೇವಲ ಸಮೀಪವಾದ ಮಾರ್ಗವನ್ನು ವಿವರಿಸಿರಿ.

(2) ಉತ್ಪತ್ತಿಸ್ಥಾನದಿಂದ ಸಮುದ್ರವನ್ನು ಸೇರುವವರೆಗೂ ಕಾವೇರಿನದಿಯ ಮಾರ್ಗವನ್ನು ವಿವರಿಸಿರಿ.

IV (1) ಇಂಡಿಯಾ ದೇಶದ [illegible]ದಲ್ಲಿರುವ ನಾಲ್ಕು ದೊಡ್ಡ ಪಟ್ಟಣಗಳು;

(2) ಫ್ರಾನ್ಸ್‌ದೇಶದಲ್ಲಿ ಯುದ್ಧದ ಹಡಗುಗಳಿರುವ ಮೂರು ಪಟ್ಟಣಗಳು;

(3) ಇಂಗ್ಲೆಂಡಿನಲ್ಲಿ ಹತ್ತಿಬಟ್ಟೆಗಳ ಕೈಗಾರಿಕೆಗೆ ಪ್ರಸಿದ್ಧವಾದ ನಾಲ್ಕುಪಟ್ಟಣಗಳು;

(4) ಇಂಡಿಯಾದೇಶದಲ್ಲಿ ಫ್ರೆಂಚರಿಗೆ ಸೇರಿದ ಮೂರುಭಾಗಗಳು

(5) ಸಿಂಹಳದ್ವೀಪದ ಖನಿಜಗಳು; ಇವುಗಳನ್ನು ಬರೆಯಿರಿ

V (1) ಶಿವನಸಮುದ್ರ, ದೆಹಲಿ, ಕರಾಚಿ. ಷಾಂಗ್‌ಹೈ, ಕಿಂಬರ್ಲಿ, ನ್ಯೂರಂಬರ್ಗ್, ಸಿಂಗಪುರ, ನೇಪಲ್ಸ, ಲಿವರ್ಪೂಲ್, ನ್ಯೂಆರ್ಲಿಯನ್ಸ್, ಸಾಗರ ಮತ್ತು ದಾವಣಗೆರೆ. ಇವುಗಳು ಪ್ರಸಿದ್ಧಿಹೊಂದುವದಕ್ಕೆ ಕಾರಣವೇನು?

VI ಆಫ್ರಿಕಾದೇಶದ ಭೂಪಟವನ್ನು ಬರೆದು ಅದರಲ್ಲಿ ಇವುಗಳನ್ನು ಗುರ್ತಿಸಿರಿ:—

(1) ಅಟ್ಲಾಸ್ ಪರ್ವತಶ್ರೇಣಿ,

(2) ನೈಲ್ ಮತ್ತು ಕಾಂಗೊ ನದಿಗಳು,

(3) ಕೈರೊ, ಮೊರಾಕೊ, ಕಿಂಬರ್ಲಿ, ಟ್ರಿಪೊಲಿ, ಜಾಂಜಿಬಾರ್ ಮತ್ತು ಜೋಹನ್ಸ್‌ಬರ್ಗ್

ಉತ್ತರಗಳು.

I (1) ಜಲವಿಭಾಗಸ್ಥಳ—ಜಲಾನಯನಭೂಮಿಯೊಂದನ್ನು ಮತ್ತೊಂದರಿಂದ ಬೇರೆ ಮಾಡುವ ಎತ್ತರವಾದ ಭೂಮಿ.

(2) ಜ್ವಾಲಾಮುಖಿ—ಸದಾ ಅಥವಾ ಆಗಾಗ ಹೊಗೆಯಾಡುವ ಮತ್ತು ಕೆಂಪಗೆ ಕಾದ ಕಲ್ಲುಮಣ್ಣುಗಳನ್ನು ಮೇಲಕ್ಕೆ ಎಸೆಯುವ ಪರ್ವತ.

(3) ಆರ್ಟಿಸಿಯನ್ ಭಾವಿ—ಇದು ಅನುಕೂಲವಾಗಿರುವ ಸ್ಥಳಗಳಲ್ಲಿ ನೆಲದಲ್ಲಿ ಕೊರೆದ ರಂಧ್ರವಾಗಿದೆ. ಇದರಿಂದ ನೀರು ತನ್ನಷ್ಟಕ್ಕೆ ತಾನೇ ಮೇಲಕ್ಕೆ ಉಕ್ಕಿಬರುವದು.

(4) ಜಲಪಾತ—ನದಿ ತನ್ನ ದಾರಿಯಲ್ಲಿ ಬಹಳ ತಗ್ಗಾಗಿರುವ ಸ್ಥಳಕ್ಕೆ ಧುಮುಕಿದರೆ ಜಲಪಾತವೆನ್ನಿಸಿಕೊಳ್ಳುವದು.

(5) ಭೂಶಿರ—ಪಕ್ಕಗಳಲ್ಲಿರುವ ಪ್ರದೇಶಗಳಿಗಿಂತ ಹೆಚ್ಚಾಗಿ ಸಮುದ್ರದೊಳಕ್ಕೆ ಚಾಚಿಕೊಂಡು ಹೋಗಿರುವ ಚಿಕ್ಕದಾದ ಭೂಮಿ.

(6) ಪ್ರೈರಿ—ರಾಕೀಪರ್ವತಶ್ರೇಣಿಗೆ ಪೂರ್ವದಲ್ಲಿರುವ ಮೈದಾನದಲ್ಲಿ ಅಗಾಧವಾದ ಹುಲ್ಲುಗಾವಲಿದೆ. ಇದಕ್ಕೆ ಪ್ರೈರಿ ಎಂದು ಹೆಸರು.

II (1) ಹಗಲು ಮತ್ತು ರಾತ್ರಿಗಳಾಗಲು ಕಾರಣ—ಭೂಗೋಳವು ತನ್ನ ಅಕ್ಷದಮೇಲೆ 24 ಘಂಟೆಗೆ ಒಂದಾವರ್ತಿ ಪಶ್ಚಿಮದಿಂದ ಪೂರ್ವಕ್ಕೆ ತಿರುಗುವುದರಿಂದ ಭೂಭಾಗಗಳು ಕ್ರಮವಾಗಿ ಪಶ್ಚಿಮದಿಂದ ಸೂರ್ಯಾಭಿಮುಖವಾಗಿ ಬಂದು ಕೊನೆಗೆ ವಿಮುಖಗಳಾಗುವುವು. ಈ ಚಲನೆಯಿಂದ ಹಗಲುರಾತ್ರಿಗಳು ತಪ್ಪದೆ ಆಗುತ್ತಿವೆ.

(2) ಒಂದು ಸ್ಥಳದ ಅಕ್ಷಾಂಶವು ಉಷ್ಣವಲಯದಲ್ಲಿದ್ದರೆ ಆ ಸ್ಥಳದ ಹವವು ಉಷ್ಣವಾಗಿರುತ್ತದೆ. ಸಮಶೀತೋಷ್ಣವಲಯದಲ್ಲಿದ್ದರೆ ಸಮಶೀತೋಷ್ಣವಾಗಿರುತ್ತೆ. ಶೀತವಲಯದಲ್ಲಿದ್ದರೆ ಶೀತಳವಾಗಿರುತ್ತೆ.

(3) ಸಮುದ್ರಗಳಿಂದಾಗುವ ಪ್ರಯೋಜನಗಳು.

(1) ಸಮುದ್ರವು ತೀರಪ್ರದೇಶಗಳಲ್ಲಿ ಶೀತೋಷ್ಣಗಳು ಬಹಳವಾಗಿ ಹೆಚ್ಚು ಕಡಮೆಯಾಗದಂತೆ ಮಾಡುತ್ತದೆ. (2) ಸಮುದ್ರದಲ್ಲಿ ನಾನಾವಿಧವಾದ ಮೀನುಗಳು ಇತರ ಪ್ರಾಣಿಗಳು ಇರುವುದರಿಂದ ಇವುಗಳನ್ನು ಜನಗಳು ಹಿಡಿದು ಆಹಾರಕ್ಕೂ ಬೇರೆ ಕೆಲಸಗಳಿಗೂ ಉಪಯೋಗಿಸುತ್ತಾರೆ. (3) ಸಮುದ್ರದಲ್ಲಿ ಸಿಕ್ಕುವ, ಮುತ್ತು ಹವಳಗಳಿಂದ ಜನಗಳು ಅಲಂಕಾರ ಮಾಡಿಕೊಳ್ಳುತ್ತಾರೆ. (4) ಉಪ್ಪನ್ನು ತಯಾರುಮಾಡುತ್ತಾರೆ. (5) ಮಳೆಗೆ ಸಮುದ್ರದ ನೀರೇ ಮುಖ್ಯಾಧಾರ. (6) ಈಗಿನಕಾಲದಲ್ಲಿ ಭೂಮಿಯಮೇಲೆ ಪ್ರಯಾಣಮಾಡುವುದಕ್ಕಿಂತಲೂ ಸಮುದ್ರಗಳ ಪ್ರಯಾಣವು ಬಹು ಸೌಕರ್ಯವಾಗಿದೆ.

III (1) ಲಂಡನ್ನಿನಿಂದ ಹೊರಟು ರೈಲುಮಾರ್ಗವಾಗಿ ಡೋವರ್ ಎಂಬ ರೇವುಪಟ್ಟಣಕ್ಕೆ ಬಂದು, ಹೊಗೆಯ ಹಡಗಿನಲ್ಲಿ ಇಂಗ್ಲಿಷ್ ಕಡಲ್ಗಾಲುವೆಯನ್ನು ದಾಟಿ, ಪುನಃ ರೈಲ್ವೆಯಿಂದ ಇಟಲಿಯಲ್ಲಿರುವ ಬ್ರಿಂಡಿಸಿಯನ್ನು ಸೇರಿ ಹೊಗೆಯಹಡಗಿನಲ್ಲಿ ಸುಯೆಸ್ ಕಾಲುವೆಯಮಾರ್ಗವಾಗಿ ಪ್ರಯಾಣಮಾಡಿ ಏಡನ್ ಎಂಬುದಕ್ಕೆಬಂದು ಬೊಂಬಾಯಿನಲ್ಲಿ ಇಳಿಯಬಹುದು. ಇದು 16 ದಿವಸದಪ್ರಯಾಣ.

(1) ಈ ನದಿ ಕೊಡಗುಸೀಮೆಯಲ್ಲಿ ತಲಕಾವೇರಿ ಎಂಬ ಸ್ಥಳದಲ್ಲಿ ಹುಟ್ಟಿ, ಸ್ವಲ್ಪದೂರ ಪೂರ್ವವಾಹಿನಿಯಾಗಿ, ಅನಂತರ ಉತ್ತರವಾಹಿನಿಯಾಗಿ, ಆ

...ಲಿ ಆಗ್ನೇಯಾಭಿಮುಖವಾಗಿ ಹರಿದು, ಚುಂಚನಕಟ್ಟೆಯಲ್ಲಿ ವೇಗವಾಗಿ ಇಳಿದು ಎತ್ತರಿಸುವ ಮಾರ್ಗವಾಗಿ ಬಂದು, ಎರಡು ಭಾಗವಾಗಿ ಶ್ರೀರಂಗಪಟ್ಟಣವನ್ನು ಬಳಸಿಕೊಂಡು, ಮರಳಿ ಒಂದಾಗಿ ಸೇರಿ ತಲಕಾಡಿನ ಮಾರ್ಗವಾಗಿ ಹರಿದು ಶಿವನಸಮುದ್ರ ಎಂಬ ಸ್ಥಳದಲ್ಲಿ 300 ಅಡಿಯಷ್ಟು ಕೆಳಕ್ಕೆ ಧುಮುಕಿ, ಪೂರ್ವಾಭಿಮುಖವಾಗಿ ಪ್ರವಹಿಸುತ್ತ ತಿರುಚನಾಪಲ್ಲಿಯ ಸಮೀಪದಲ್ಲಿ ಕೊಲ್ಲಡಂ, ಕಾವೇರಿ ಎಂಬ ಎರಡು ಶಾಖೆಗಳಾಗುತ್ತದೆ. ಕೊಲ್ಲಡವು ದೇವೀಕೋಟೆಯ ಸಮೀಪದಲ್ಲಿಯೂ ಕಾವೇರಿ ನಾಗಪಟ್ಟಣದ ಸಮೀಪದಲ್ಲಿ, ಸಮುದ್ರವನ್ನು ಸೇರುವುದು. ಕಾವೇರಿಯ ನೀರಿನಿಂದ ಬಹಳವಾಗಿ ವ್ಯವಸಾಯವು ನಡೆಯುತ್ತಿದೆ.

IV (1) ನಾಗಪಟ್ಟಣ, ಪುದುಚೇರಿ, ಮದರಾಸು, ಕಲ್ಕತ್ತಾ.

(2) ಟೊಲರ್, ಬ್ರೆಸ್ಟ್, ಷರ್ಬರ್ಗ್.

(3) ಮೊಂಚೆಸ್ಟರ್, ಪ್ರೆಸ್ಟನ್, ಓಲ್ಡ್ಹಾಂ, ಬೋಲ್ಟನ್.

(4) ದಕ್ಷಿಣದೇಶದ ತೀರದಲ್ಲಿ ಪುದುಚೇರಿ ಮತ್ತು ಕಾರೆಕಲ್, ಮಲೆಯಾಳದ ತೀರದಲ್ಲಿ ಮಾಹಿ (ಮಾಹೆ) ಗೋದಾವರಿ ಡಿಸ್ಟ್ರಿಕ್ಟ್‌ನಲ್ಲಿ ಯಾನಾಂ. ಹುಗ್ಲಿ ನದಿಯ ದಡದಲ್ಲಿ ಚಂದ್ರನಗರ.

(5) ಕೆಂಪು, ವೈಡೂರ್ಯ, ಪುಷ್ಯರಾಗ, ಮುತ್ತು.

V (1) ಶಿವನಸಮುದ್ರ ಇದು ಬ್ರಿಟಿಷರ ರಾಜ್ಯಕ್ಕೆ ಸೇರಿದೆ. ಇಲ್ಲಿ ಕಾವೇರಿ ನದಿಯು 300 ಅಡಿಯಷ್ಟು ಕೆಳಕ್ಕೆ ಧುಮುಕುತ್ತದೆ. ಹೀಗೆ ಧುಮುಕುವಾಗ್ಗೆ ಉಂಟಾಗುವ ಜಲಪಾತದಿಂದ ವಿದ್ಯುಚ್ಛಕ್ತಿಯನ್ನುಂಟುಮಾಡಿ ಅದರ ಮೂಲಕ ಕೋಲಾರದ ಚಿನ್ನದ ಗಣಿಗಳ ಯಂತ್ರಗಳನ್ನು ನಡೆಯಿಸುತ್ತಾರೆ.

(2) ದೆಹಲಿ—ಪೂರ್ವಕಾಲದಲ್ಲಿ ಇಂದ್ರಪ್ರಸ್ಥಪಟ್ಟಣ. ಆಮೇಲೆ ಮೊಗಲಾಯಿ ಚಕ್ರವರ್ತಿಗಳ ರಾಜಧಾನಿಯಾಗಿತ್ತು; ಅಮೃತಶಿಲೆಯಿಂದಲೂ ಕೆಂಗಲ್ಲಿಂದಲೂ ಕಟ್ಟಿರುವ ಜುಮ್ಮಾಮಸೀದಿ ಎಂಬ ಸುಂದರವಾದ ಕಟ್ಟಡವು ಇಲ್ಲಿದೆ.

(3) ಕರಾಚಿ—ಒಳ್ಳೆಯ ಬಂದರು. ವಿಶೇಷವಾಗಿ ವ್ಯಾಪಾರ ನಡೆಯುವ ಸ್ಥಳ. ಕರಾಚಿಯನ್ನು ಇಂಡಿಯಾದೇಶದ ಲಿವರ್ಪೂಲೆಂದು ಕರೆಯುವುದುಂಟು.

(4) ಷಾಂಗ್ಹೈ—ಯಾಂಗ್ಟಿಸಿಕಿಯಾಂಗಿನ ಮುಖದ ಹತ್ತಿರದಲ್ಲಿದೆ. ವಿಶೇಷವಾಗಿ ವ್ಯಾಪಾರ ನಡೆಯುವಸ್ಥಳ. ಇಲ್ಲಿ ಯೂರೋಪಿಯನ್ ಇಂಜನಿಯರುಗಳ ಮೇಲುವಿಚಾರಣೆಯಲ್ಲಿ ಹಡಗುಗಳು ತಯಾರಾಗುತ್ತವೆ.

(5) ಕಿಂಬರ್ಲಿ—ಸರ್ವೋತ್ಕೃಷ್ಟವಾದ ವಜ್ರಗಳು ಇಲ್ಲಿಂದ ರಫ್ತಾಗುವುವು.

(6) ನ್ಯೂರೆಂಬರ್ಗ್—ವಿಶೇಷವಾಗಿ ಕೈಗಾರಿಕೆ ನಡೆಯುವ...

ಗಡಿಯಾರಗಳನ್ನು ಇಲ್ಲಿ ಮೊದಲು ನಿರ್ಮಿಸಿದರು. ಇವುಗಳಿಗೆ ನ್ಯೂರೆಂಬರ್ಗ್
ಮೊಟ್ಟೆಗಳೆಂದು ಚೋದ್ಯವಾದ ಹೆಸರಿದ್ದಿತು.

(7) ಸಿಂಗಪುರ—ಸ್ಟ್ರೈಟ್‌ಸೆಂಟ್ಲಮೆಂಟ್‌ಗಳಲ್ಲಿದೆ. ವ್ಯಾಪಾರಕ್ಕೆ ಬಹಳ ಅನುಕೂಲವಾದ ಸ್ಥಳದಲ್ಲಿದೆ. ಪೃಥ್ವಿಯ ಸಕಲದೇಶದ ಹಡಗುಗಳು ಇಲ್ಲಿಗೆ ಬಂದು ಹೋಗುವುವು. ತವರ, ಟೀ, ಗೋಂದು, ಇಂಡಿಯರಬ್ಬರ್, ಮೊದಲಾದ ಪದಾರ್ಥಗಳಲ್ಲಿ ವ್ಯಾಪಾರವು ಬಹಳವಾಗಿ ನಡೆಯುತ್ತದೆ.

(8) ನೇಪಲ್ಸ್—ಇಟಲಿಯಲ್ಲಿ ದೊಡ್ಡಪಟ್ಟಣ. ಇದರ ಸ್ಥಾನವು ಪೃಥ್ವಿಯೊಳಗೆಲ್ಲಾ ಸುಂದರತಮವೆಂದೆನಿಸಿಕೊಂಡಿದೆ "ನೇಪಲ್ಸ್ ಪಟ್ಟಣವನ್ನು ನೋಡಿ ಸಾಯಿ" ಎಂದು ಇಟಾಲಿಯನ್ ಗಾಧೆಯಿದೆ.

(9) ಲಿವರ್‌ಪೂಲ್—ಮರ್ಸೀ ನದಿಯ ಮುಖದ ಹತ್ತಿರವಿದೆ. ಹತ್ತಿಯ ವ್ಯಾಪಾರವು ವಿಪರೀತವಾಗಿ ನಡೆವಸ್ಥಳ.

(10) ನ್ಯೂಆರ್ಲಿಯನ್ಸ್—ಮಿಸಿಸಿಪ್ಪೀ ನದಿಗೆ 100 ಮೈಲಿ ದೂರದಲ್ಲಿದೆ. ಇಲ್ಲಿ ನಡೆಯುವಷ್ಟು ಹತ್ತಿಯ ವ್ಯಾಪಾರವು ಪೃಥ್ವಿಯಲ್ಲಿ ಇನ್ನೆಲ್ಲಿಯೂ ನಡೆವುದಿಲ್ಲ. ಸಕ್ಕರೆಯ ವ್ಯಾಪಾರವೂ ಹೆಚ್ಚಾಗಿ ನಡೆಯುತ್ತಿದೆ.

(11) ಸಾಗರ—ಇಲ್ಲಿ ಅಡಿಕೆಯ ವ್ಯಾಪಾರ ಬಹಳಹೆಚ್ಚಾಗಿ ನಡೆಯುತ್ತದೆ. ಮೆಣಸು ಮತ್ತು ಗಂಧದ ಮರದ ವ್ಯಾಪಾರವೂ ಉಂಟು.

(12) ದಾವಣಗೆರೆ—ವ್ಯಾಪಾರಸ್ಥಳ. ಇಲ್ಲಿಯ ಕಂಬಳಿಗಳು ಬಹಳ ಪ್ರಸಿದ್ಧಿಯನ್ನು ಪಡೆದಿವೆ ಸರ್ವೋತ್ಕೃಷ್ಟವಾದವುಗಳಿಗೆ 200-300 ರೂ ಬೆಲೆಯಾಗುವುದುಂಟು.

A P.S. NOTES

ON

LOWER SECONDARY

Kannada Text

1922

WITH

IMPORTANT QUESTIONS & ANSWERS

BY

N. R. YENKATASUBBACHARYA,

Subodhagranthalaya, Myso

೧೯೨೨ ನೆಯ ಇಸವಿಯ

ಲೋಯರ್ ಸೆಕೆಂಡರಿ

ಕನ್ನಡ ಟೆಕ್ಸ್ಟಿನ ನೋಟ್ಸು

ಪ್ರಶ್ನೋತ್ತರಗಳೊಡನೆ

ಮೈಸೂರು ಸುಬೋಧಗ್ರಂಥಾಲಯದ

ಎನ್. ಆರ್. ವೆಂಕಟಸುಬ್ಬಾಚಾರ್ಯರಿಂದ

ರಚಿಸಲ್ಪಟ್ಟವು.

ಬೆಂಗಳೂರು.

ಶ್ರೀ [illegible] ಪ್ರೆಸ್ಸಿನಲ್ಲಿಯೂ, ಐಡಿಯಲ್ ಪ್ರೆಸ್ಸಿನಲ್ಲಿಯೂ

ಮುದ್ರಿಸಲ್ಪಟ್ಟಿತು.

1921

Copy Right Registered

Price 1 As. [ಕ್ರಯ ೧೨ ಆಣೆ

Foot Balls

BEST QUALITY | MODERATE PRICE

SIZE No.	1.	2.	3.	4.	5.
Balls	2 8 0	2 12 0	4 0 0	5 4 0	6 0 0
Bladders	1 4 0	1 4 0	1 10 0	1 14 0	2 4 0
Covers	1 8 0	1 12 0	2 6 0	3 8 0	4 0 0
Inflaters	1 12 0	2 0 0	3 8 0	4 8 0	
whistles	0 12 0	0 14 0	1 0 0		
solution	0 4 0	0 8 0	0 12 0		

Shilcocks special bladder No. 5. 3 0 0

Foot-ball rules book. 0 4 0 each

Superior and special Foot-ball covers are also stocked. Advance is necessary.

Scout Belts. each 1-4-0 1-8-0

Pen Knife 2-0-0 each

PRICES ARE SUBJECT TO MARKET FLUCTUATION

ನಮ್ಮಲ್ಲಿ ಸ್ಕೂಲ್ ಕನ್ನಡ ಇಂಗ್ಲೀಷ್ ಪುಸ್ತಕಗಳೂ ಮತ್ತು ಲೈಬ್ರರಿಗೆ ಬೇಕಾದ ಕನ್ನಡ ಪುಸ್ತಕಗಳೂ ದೊರೆಯುತ್ತವೆ

ಅಡ್ವಾನ್ಸು ಅವಶ್ಯಕ.,

ಹೆಚ್. ಎನ್. ರಾವ್ ಅಂಡ್ ಬ್ರದರ್ಸ್.

ಚಿಕ್ಕಪೇಟೆ ಬೆಂಗಳೂರು ಸಿಟಿ

APPLY TO:-

H. N. Rao & Bros.
Utharajimutt Buildings.
Chickpet, Bangalore City

ಮದನ ವಿಕ್ರಮ ಮಾತ್ರೆ.- ಧಾತುಪುಷ್ಟಿಕರ, ಉಷ್ಣಹರ. ಅಗ್ನಿಮಾಂದ್ಯ, ಇವುಗಳಿಗೆಲ್ಲಾ ಬೆಳಿಗ್ಗೆ ೧, ಸಾಯಂಕಾಲ ೧ ಮಾತ್ರೆ ಉಪಯೋಗಿಸಿ ಹಾಲನ್ನು ಕುಡಿಯಬೇಕು. ೪೦ ಮಾತ್ರೆಗಳುಳ್ಳ ಡಬ್ಬಿ ೧ ಕ್ಕೆ ೧-೦-೦

ಪಂಡಿತ ಮುದ್ಗಲ್ ರಾಮಾಚಂದ್ರಾಚಾರ್, ಚಿಕ್ಕಪೇಟೆ, ಬೆಂಗಳೂರು ಸಿಟಿ

ತೊರವೆಯ ರಾಮಾಯಣ.

ಸುಂದರ ಕಾಂಡ.

೧. ರಾಮಾಯಣ=ರಾಮ-ರಾಮನ, ಅಯನ-ಚರಿತ್ರೆಯು ರೂಪವಾದುದು. ಆದುದರಿಂದ 'ರಾಮಾಯಣ' ವೆಂಬ ಹೆಸರು ಬಂದಿದೆ.

೨. ತೊರವೆಯ ರಾಮಾಯಣ ತೊರವೆಯೆಂಬ ಊರಿನ ಕವಿಯು ರಚಿಸಿದ ರಾಮಾಯಣವಾದುದರಿಂದ 'ತೊರವೆಯರಾಮಾಯಣ' ವೆಂಬ ಹೆಸರು ಬಂದಿತು

೩ ಕಾಂಡ-ರಾಮಾಯಣಗ್ರಂಥವು ಏಳು ಭಾಗಗಳಾಗಿ ಮಾಡಲ್ಪಟ್ಟು ಒಂದೊಂದು ಭಾಗಕ್ಕೂ 'ಕಾಂಡ' (ವರ್ಗ) ವೆಂಬ ಹೆಸರು ಕೊಡಲ್ಪಟ್ಟಿವೆ. ಕಾಂಡಗಳು ಏಳು,— ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಯುದ್ಧಕಾಂಡ, ಉತ್ತರಕಾಂಡ.

೪. ಸುಂದರಕಾಂಡ=ಸುಂದರ-ಅರ್ಥಸೌಂದರ್ಯ, ಚರಿತ್ರಸೌಂದರ್ಯ, ಗುಣಸೌಂದರ್ಯ ಮೊದಲಾದ ಸಪ್ತ ಸೌಂದರ್ಯಗಳ ಸಂಬಂಧವುಳ್ಳ, ಕಾಂಡ-ರಾಮಾಯಣ ಭಾಗವು. ಆದುದರಿಂದ 'ಸುಂದರಕಾಂಡ' ವೆಂಬ ಹೆಸರಾಗಿದೆ.

— ಆರನೆಯ ಸಂಧಿಯ ಹಿಂದಣ ಕಥಾ ಸಂದರ್ಭ. —

ಅಯೋಧ್ಯಾ ರಾಜ್ಯಾಧಿಪತಿಯಾದ ಸೂರ್ಯವಂಶದ ದಶರಥ ಮಹಾರಾಜನಿಗೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ನಾಲ್ವರು ಪುತ್ರರು ಹುಟ್ಟಿ ಬೆಳೆಯುತ್ತಿದ್ದರು. ಹೀಗಿರಲು ವಿಶ್ವಾಮಿತ್ರ ಋಷಿಯು ತನ್ನ ಯಾಗದ ರಕ್ಷಣೆಗೋಸ್ಕರ ಪ್ರಾರ್ಥಿತನಾದ ದಶರಥರಾಜನಿಂದ ತನ್ನ ಆಶ್ರಮಕ್ಕೆ ಕಳುಹಿಸಲ್ಪಟ್ಟ ರಾಮಲಕ್ಷ್ಮಣರನ್ನು ಕರೆದುಕೊಂಡು ಸೀತಾಸ್ವಯಂವರವು ನಡೆಯುವ ಜನಕರಾಜನ ಮಿಥಿಲಾಪುರಕ್ಕೆ ಬಂದನು.

ರಾಮನು ಈಶ್ವರನ ಧನುಸ್ಸಿಗೆ ಸಿಕ್ಕಿ ನೊಂದುದು:—ಮಿಥಿಲಾ

[illegible] ತನ್ನಲ್ಲಿದ್ದ ಈಶ್ವರ ಧನುಸ್ಸನ್ನು ಯಾರು ಬ

ಗ್ಗಿಸಿ ಹಗ್ಗ ಕಟ್ಟುವರೋ! ಅವರಿಗೆ ತನ್ನ ಮಗಳಾದ ಸೀತೆಯನ್ನು ಕೊಟ್ಟು ವಿವಾಹ ಮಾಡುವೆನು; ಎಂದು ತನ್ನ ಪಟ್ಟಣದಲ್ಲಿ ಬಂದು ನೆರೆದಿದ್ದ ರಾಜರ ಅರಮನೆಗಳ ಬಳಿಯಲ್ಲಿ ಸಾರಿಸಿದನು. ಆ ಸೀತಾ ಸ್ವಯಂವರ ಮಂಟಪಕ್ಕೆ ದೊರೆಗಳು ಬಂದು ಸೇರಲು ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆ ಅಲ್ಲಿಗೆ ಬಂದನು. ಬಳಿಕ ಆ ರಾಜಸಭೆಯಲ್ಲಿದ್ದ ಅನೇಕ ರಾಜರು ಈಶ್ವರ ಧನುಸ್ಸನ್ನು ಎತ್ತಿ ಹಗ್ಗ ಕಟ್ಟಲಾರದೆ ಬಳಲಿ ಹಿಂಸರಿದರು. ಲಂಕಾರಾಜನಾದ ರಾವಣಾಸುರನು ಅಲ್ಲಿಗೆ ಬಂದು ಆ ಈಶ್ವರ ಧನುಸ್ಸನ್ನು ಎತ್ತಿ ಅದಕ್ಕೆ ಹಗ್ಗವನ್ನು ತೊಡಿಸಲು ಸಾಹಸಮಾಡುವಾಗ, ಒಂದು ಬತ್ತದ ಕಾಳಿನಷ್ಟು ದೂರಕ್ಕೆ ಆ ಧನುಸ್ಸು ಬಗ್ಗದೆ ಹೋಗಿ, ಆ ರಾವಣನು ಧನುಸ್ಸನ್ನು ಮೇಲೆ ಕೆಡಹಿಕೊಂಡು ಬಿದ್ದನು. ರಾವಣನು ಈಶ್ವರ ಧನುಸ್ಸಿನ ಕೆಳಗೆ ಸಿಕ್ಕಿ ಮೂರ್ಛೆಹೋಗಿ ರಕ್ತವನ್ನು ಕಕ್ಕುತ್ತಿರಲು, ಅವನ ಪರಿವಾರ ರಾಕ್ಷಸರು ಓಡಿಬಂದು ಬಿಲ್ಲೆತ್ತಿ ರಾವಣನನ್ನು ಎತ್ತಿಕೊಂಡು ಹೋಗಿ ಉಪಚರಿಸಿದರು. ಆಗ ರಾವಣನು ತನಗೆ ಮಾನಭಂಗವಾದುದರಿಂದ ಇನ್ನು ಸಾಯುವುದೇ ಲೇಸೆಂದು ಚಿಂತಿಸಿ ಬಳಿಕ ಸೀತೆಯನ್ನು ಕಳವಿನಿಂದಾದರೂ ಅಪಹರಿಸುವೆನು ಎಂದುಕೊಂಡು ನಾಚಿಕೆಯಿಂದ ಲಂಕೆಗೆ ಓಡಿದನು.

ಒಡನೆಯೇ ಶ್ರೀರಾಮನು ಎದ್ದುಬಂದು ಈಶ್ವರಧನುಸ್ಸನ್ನು ಬಗ್ಗಿಸಿ ಮುರಿದುಹಾಕಿ ಸೀತೆಯನ್ನು ವರಿಸಿದನು. ಅಲ್ಲಿಗೆ ದಶರಥರಾಜನು ಬರಲು ರಾಮ ಲಕ್ಷ್ಮಣ ಭರತ ಶತ್ರುಘ್ನರಿಗೆ ಸೀತಾದಿ ರಾಜಪುತ್ರಿಯರನ್ನು ಜನಕರಾಜನು ವಿವಾಹಮಾಡಿ ಕಳುಹಿಸಿದನು. ಬಳಿಕ ಶ್ರೀರಾಮನು ತನಗೆ ರಾಜ್ಯಪಟ್ಟಾಭಿಷೇಕಮಾಡಲು ಪ್ರಯತ್ನಪಟ್ಟ ದಶರಥರಾಜನು, ಹಿಂದೆ ತನ್ನ ಕಿರಿಯ ಹೆಂಡತಿಯಾದ ಕೈಕೆಗೆ ಕೊಟ್ಟ ವರದ ವಾಕ್ಯವನ್ನು ನಡಿಸುವದಕ್ಕೋಸ್ಕರ, ಹೆಂಡತಿಯಾದ ಸೀತೆಯೊಡನೆಯೂ ತಮ್ಮನಾದ ಲಕ್ಷ್ಮಣನೊಡನೆಯೂ ಕೂಡಿ ಹದಿನಾಲ್ಕು ವರ್ಷಗಳು ವನವಾಸವನ್ನು ಮಾಡುವುದಕ್ಕೋಸ್ಕರ ಅರಣ್ಯಕ್ಕೆ ಬಂದನು.

ಶೂರ್ಪಣಖಿಯ ಅಭಿಮಾನ ಭಂಗ:---ವನವಾಸವನ್ನು ಮಾಡುತ್ತಿದ್ದ ಶ್ರೀರಾಮನು ಗೋದಾವರೀ ತೀರಕ್ಕೆ ಬಂದು ಪಂಚವಟಿಯೆಂಬ ಸ್ಥಳದಲ್ಲಿರುವಾಗ, ರಾವಣನ ತಂಗಿಯಾದ 'ಶೂರ್ಪಣಖಿ' ಯೆಂಬ ರಾಕ್ಷಸಿಯು ಅಲ್ಲಿಗೆ ಬಂದು, ರಾಮ ಲಕ್ಷ್ಮಣರ ರೂಪಕ್ಕೆ ಮೋಹಿಸಿ ನನ್ನನ್ನು ಮದುವೆಮಾಡಿಕೊಳ್ಳಬೇಕೆಂದು ಅವರನ್ನು ಪೀಡಿಸಿ, ಅವರು ಅದಕ್ಕೆ ಸಮ್ಮತಿಸದೆ ಇದ್ದುದರಿಂದ ಅವರನ್ನು ನುಂಗುವೆನೆಂದು ಬಂದಳು. ಆಗ

ರಾಮನು ಲಕ್ಷ್ಮಣನಿಗೆ ಸೂಚನೆ ಕೊಟ್ಟು ಆ ಲಕ್ಷ್ಮಣನಿಂದ ಶೂರ್ಪಣಖಿಯ ಕಿವಿಮೂಗುಗಳನ್ನು ಕೊಯಿಸಿಬಿಟ್ಟು ಮಾನಭಂಗವನ್ನು ಮಾಡಿದನು.

ರಾಮನು ಖರಾದಿ ಮಹಾಬಲ ರಾಕ್ಷಸರನ್ನು ಕೊಂದುದು;—ಶೂರ್ಪಣಖಿಯು ಕಿವಿ ಮೂಗುಗಳನ್ನು ಕೊಯಿಸಿಕೊಂಡು ರಾಮನಿಂದ ಮಾನಭಂಗಹೊಂದಿ ಅಣ್ಣನಾದ ಖರಾಸುರನೊಡನೆ ದೂರು ಹೇಳಿಕೊಳ್ಳಲು, ಆ ಖರಾಸುರನು ದೂಷಣಾದಿ ರಾಕ್ಷಸರೊಡನೆ ಯುದ್ಧಕ್ಕೆ ಬಂದನು. ಆಗ ರಾಮನು ಖರ ದೂಷಣ ಮೊದಲಾದ ರಾಕ್ಷಸರನ್ನು ಸಂಹರಿಸಿದನು.

ಶೂರ್ಪಣಖಿಯು ರಾವಣನಿಗೆ ದೂರು ಹೇಳಿದುದು;—ಶೂರ್ಪಣಖಿಯು ಸಭೆಯಲ್ಲಿದ್ದ ಅಣ್ಣನಾದ ರಾವಣಾಸುರನ ಬಳಿಗೆ ಬಂದು ಇಂತೆಂದಳು. ಅಣ್ಣನೇ! ನಾನು ಅರಣ್ಯದಲ್ಲಿ ಪಂಚವಟೀ ಪ್ರದೇಶಕ್ಕೆ ಹೋದೆನು. ಅಲ್ಲಿ ರಾಮನ ಹೆಂಡತಿಯಾದ ಸೀತೆಯನ್ನು ಕಂಡೆನು. ನಿನ್ನ ರಾಣಿಯರೊಳಗೆ ಯಾರಿಗೂ ಆ ಸೀತೆಯಂತಹ ಸೌಂದರ್ಯವಿಲ್ಲದಿರುವುದನ್ನು ನೋಡಿ ಅವಳನ್ನು ನಿನಗೆ ಕಾಣಿಕೆಯಾಗಿ ಕೊಡಬೇಕೆಂದು ಕೈಯಿಕ್ಕಿದೆನು. ಆಗ ರಾಮನು ತಮ್ಮನು ಕಂಡು ನನ್ನ ಕಿವಿ ಮೂಗುಗಳನ್ನು ಕೊಯ್ದುಬಿಟ್ಟನು ನನ್ನ ಮಾನಭಂಗವನ್ನು ನೋಡಿ ನಮ್ಮ ಖರದೂಷಣಾದಿಗಳು ಯುದ್ಧಕ್ಕೆ ಬರಲು ರಾಮನು ಅವರನ್ನು ಕೊಂದನು; ಎಂದು ಶೂರ್ಪಣಖಿಯು ಹೇಳಲು ರಾವಣನು ತಮ್ಮನ ವಿನಾಶಕ್ಕೂ ತಂಗಿಯ ಮಾನಭಂಗಕ್ಕೂ ಬಲುಮರುಗಿ ಸೀತೆಯ ರೂಪವನ್ನು ನೆನೆದು ಮೋಹವಶನಾದನು.

ಮಾಯೆಯಿಂದ ಸುಳಿದ ಮಾರೀಚ ರಾಕ್ಷಸನ ಸಂಹಾರ;—ರಾವಣನು ತಂಗಿಯಾದ ಶೂರ್ಪಣಖಿಯ ಬೋಧನೆಯಿಂದ ಸೀತೆಯನ್ನಪಹರಿಸುವ ಉಪಾಯವನ್ನು ಯೋಚಿಸಿ, ಮಾಯೆಯಿಂದ ಚಿನ್ನದ ಜಿಂಕೆಯ ಆಕಾರವನ್ನು ತಾಳಿ ವಂಚಿಸುವಂತೆ ತನ್ನ ಸೋದರಮಾವನಾದ ಮಾರೀಚನಿಗೆ ಸೂಚಿಸಲು. ಮಾರೀಚ ರಾಕ್ಷಸನು ಮಾಯೆಯಿಂದ ಚಿನ್ನದ ಜಿಂಕೆಯಾಗಿ ರಾಮಾಶ್ರಮದ ಮುಂದೆ ಸುಳಿದನು. ಸೀತೆಯು ಆ ಮೃಗವನ್ನು ನೋಡಿ ಆಶ್ಚರ್ಯಪಟ್ಟು ಅದನ್ನು ತಂದುಕೊಡೆಂದು ರಾಮನನ್ನು ಪ್ರಾರ್ಥಿಸಿದಳು. ರಾಮನು ಆಶ್ರಮದಲ್ಲಿ ಲಕ್ಷ್ಮಣನನ್ನು ಸೀತೆಗೆ ಕಾವಲಿಟ್ಟು ಆ ಮಾಯಾಮೃಗ ರೂಪನಾದ ಮಾರೀಚ ರಾಕ್ಷಸನನ್ನು ಬಾಣದಿಂದ ಹೊಡೆದನು ಆ ಪೆಟ್ಟಿನಿಂದ ಮಾರೀಚನು ಮೃಗದ ರೂಪವನ್ನು ಬಿಟ್ಟು ಹಾ ಸೀತೆ! ಹಾ ಲಕ್ಷ್ಮಣಾ! ಎಂದು ಕೂಗಿ ಸತ್ತನು

Foot Balls

BEST QUALITY. MODERATE PRICE

Size No.	1.	2.	3.	4.	5.
Balls	2 8 0	2 12 0	4 0 0	5 4 0	6 0 0
Bladders	1 4 0	1 4 0	1 10 0	1 14 0	2 4 0
Covers	1 8 0	1 12 0	2 6 0	3 8 0	4 0 0
Inflaters	1 12 0	2-0 0	3 8 0	4 8 0	
Whistles	0 12 0	0 14 0	1 0 0		
Solution	0 4 0	0 8 0	0 12 0		

Shilcocks special bladder No. 5. 3 0 0

Foot-Ball rules book 0 4 0 each

Superior and special Foot-ball covers are also stocked. Advance is necessary.

Scout Belts. each 1-4-0 , 1-8-0

Pen Knife 2-0-0 each

PRICES ARE SUBJECT TO MARKET FLUCTUATION

ನಮ್ಮಲ್ಲಿ ಸ್ಕೂಲ್ ಕನ್ನಡ ಇಂಗ್ಲೀಷ್ ಪುಸ್ತಕಗಳೂ ಮತ್ತು ಲೈಬ್ರರಿಗೆ ಬೇಕಾದ ಕನ್ನಡ ಪುಸ್ತಕಗಳೂ ದೊರೆಯುತ್ತವೆ

ಅಡ್ವಾನ್ಸು ಅವಶ್ಯಕ.,

ಹೆಚ್. ಎನ್. ರಾವ್ ಅಂಡ್ ಬ್ರದರ್ಸ್.

ಚಿಕ್ಕಪೇಟೆ ಬೆಂಗಳೂರು ಸಿಟಿ.

APPLY TO:-

H. N. RAO & BROS.
Utharajimutt Buildings.
Chickpet, Bangalore City

ಮದನ ವಿಕ್ರಮ ಮಾತ್ರೆ.- ಧಾತುಪುಷ್ಟಿಕರ, ಉಷ್ಣಹರ. ಅಗ್ನಿಮಾಂದ್ಯ, ಇವುಗಳಿಗೆಲ್ಲಾ ಬೆಳಿಗ್ಗೆ ೧, ಸಾಯಂಕಾಲ ೧ ಮಾತ್ರೆ ಉಪಯೋಗಿಸಿರಿ. ಹಾಲನ್ನು ಕುಡಿಯಬೇಕು. ೪೦ ಮಾತ್ರೆಗಳುಳ್ಳ ಡಬ್ಬಿ ೧ ಕ್ಕೆ ೧-೦-೦.

ಪಂಡಿತ ಮುದ್ದಿಲ್ ರಾಮಚಂದ್ರ ರಾವ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ತೊರವೆಯ ರಾಮಾಯಣ.

ಸುಂದರ ಕಾಂಡ.

೧. ರಾಮಾಯಣ=ರಾಮ-ರಾಮನ, ಅಯನ-ಚರಿತ್ರೆಯ ರೂಪವಾದುದು. ಆದುದರಿಂದ 'ರಾಮಾಯಣ' ವೆಂಬ ಹೆಸರು ಬಂದಿದೆ.

೨. ತೊರವೆಯ ರಾಮಾಯಣ ತೊರವೆಯೆಂಬ ಊರಿನ ಕವಿಯು ರಚಿಸಿದ ರಾಮಾಯಣವಾದುದರಿಂದ 'ತೊರವೆಯರಾಮಾಯಣ' ವೆಂಬ ಹೆಸರು ಬಂದಿತು

೩ ಕಾಂಡ-ರಾಮಾಯಣಗ್ರಂಥವು ಏಳು ಭಾಗಗಳಾಗಿ ಮಾಡಲ್ಪಟ್ಟು ಒಂದೊಂದು ಭಾಗಕ್ಕೂ 'ಕಾಂಡ' (ವರ್ಗ) ವೆಂಬ ಹೆಸರು ಕೊಡಲ್ಪಟ್ಟಿದೆ. ಕಾಂಡಗಳು ಏಳು,— ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಯುದ್ಧಕಾಂಡ, ಉತ್ತರಕಾಂಡ.

೪. ಸುಂದರಕಾಂಡ=ಸುಂದರ-ಅರ್ಥಸೌಂದರ್ಯ, ಚರಿತ್ರಸೌಂದರ್ಯ, ಗುಣಸೌಂದರ್ಯ ಮೊದಲಾದ ಸಪ್ತ ಸೌಂದರ್ಯಗಳ ಸಂಬಂಧವುಳ್ಳ, ಕಾಂಡ-ರಾಮಾಯಣ ಭಾಗವು. ಆದುದರಿಂದ 'ಸುಂದರಕಾಂಡ' ವೆಂಬ ಹೆಸರಾಗಿದೆ.

— ಆರನೆಯ ಸಂಧಿಯ ಹಿಂದಣ ಕಥಾ ಸಂದರ್ಭ. —

ಅಯೋಧ್ಯಾ ರಾಜ್ಯಾಧಿಪತಿಯಾದ ಸೂರ್ಯವಂಶದ ದಶರಥ ಮಹಾರಾಜನಿಗೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ನಾಲ್ವರು ಪುತ್ರರು ಹುಟ್ಟಿ ಬೆಳೆಯುತ್ತಿದ್ದರು. ಹೀಗಿರಲು ವಿಶ್ವಾಮಿತ್ರ ಋಷಿಯು ತನ್ನ ಯಾಗದ ರಕ್ಷಣೆಗೋಸ್ಕರ ಪ್ರಾರ್ಥಿತನಾದ ದಶರಥರಾಜನಿಂದ ತನ್ನ ಆಶ್ರಮಕ್ಕೆ ಕಳುಹಿಸಲ್ಪಟ್ಟ ರಾಮಲಕ್ಷ್ಮಣರನ್ನು ಕರೆದುಕೊಂಡು ಸೀತಾಸ್ವಯಂವರವು ನಡೆಯುವ ಜನಕರಾಜನ ಮಿಥಿಲಾಪುರಕ್ಕೆ ಬಂದನು.

ರಾವಣನು ಈಶ್ವರನ ಧನುಸ್ಸಿಗೆ ಸಿಕ್ಕಿ ನೊಂದುದು:—ಮಿಥಿಲಾ

ರಾಜನಾದ ಜನಕರಾಜನು ತನ್ನಲ್ಲಿದ್ದ ಈಶ್ವರ ಧನುಸ್ಸನ್ನು ಯಾರು ಬ

ಗ್ಗಿಸಿ ಹಗ್ಗ ಕಟ್ಟುವರೋ ! ಅವರಿಗೆ ತನ್ನ ಮಗಳಾದ ಸೀತೆಯನ್ನು ಕೊಟ್ಟು ವಿವಾಹ ಮಾಡುವೆನು; ಎಂದು ತನ್ನ ಪಟ್ಟಣದಲ್ಲಿ ಬಂದು ನೆರೆದಿದ್ದ ರಾಜರ ಅರಮನೆಗಳ ಬಳಿಯಲ್ಲಿ ಸಾರಿಸಿದನು. ಆ ಸೀತಾ ಸ್ವಯಂವರ ಮಂಟಪಕ್ಕೆ ದೊರೆಗಳು ಬಂದು ಸೇರಲು ವಿಶ್ವಾಮಿತ್ರನು ರಾಮ ಲಕ್ಷ್ಮಣರೊಡನೆ ಅಲ್ಲಿಗೆ ಬಂದನು. ಬಳಿಕ ಆ ರಾಜಸಭೆಯಲ್ಲಿದ್ದ ಅನೇಕ ರಾಜರು ಈಶ್ವರ ಧನುಸ್ಸನ್ನು ಎತ್ತಿ ಹಗ್ಗ ಕಟ್ಟಲಾರದೆ ಬಳಲಿ ಹಿಂದೆಗೆದರು. ಲಂಕಾರಾಜನಾದ ರಾವಣಾಸುರನು ಅಲ್ಲಿಗೆ ಬಂದು ಆ ಈಶ್ವರ ಧನುಸ್ಸನ್ನು ಎತ್ತಿ ಅದಕ್ಕೆ ಹಗ್ಗವನ್ನು ತೊಡಿಸಲು ಸಾಹಸಮಾಡುವಾಗ, ಒಂದು ಬತ್ತದ ಕಾಳಿನಷ್ಟು ದೂರಕ್ಕೆ ಆ ಧನುಸ್ಸು ಬಗ್ಗದೆ ಹೋಗಿ, ಆ ರಾವಣನು ಧನುಸ್ಸನ್ನು ಮೇಲೆ ಕೆಡಹಿಕೊಂಡು ಬಿದ್ದನು. ರಾವಣನು ಈಶ್ವರ ಧನುಸ್ಸಿನ ಕೆಳಗೆ ಸಿಕ್ಕಿ ಮೂರ್ಛೆಹೋಗಿ ರಕ್ತವನ್ನು ಕಕ್ಕುತ್ತಿರಲು, ಅವನ ಪರಿವಾರ ರಾಕ್ಷಸರು ಓಡಿಬಂದು ಬಿಲ್ಲೆತ್ತಿ ರಾವಣನನ್ನು ಎತ್ತಿಕೊಂಡು ಹೋಗಿ ಉಪಚರಿಸಿದರು. ಆಗ ರಾವಣನು ತನಗೆ ಮಾನಭಂಗವಾದುದರಿಂದ ಇನ್ನು ಸಾಯುವುದೇ ಲೇಸೆಂದು ಚಿಂತಿಸಿ ಬಳಿಕ ಸೀತೆಯನ್ನು ಕಳವಿನಿಂದಾದರೂ ಅಪಹರಿಸುವೆನು ಎಂದುಕೊಂಡು ನಾಚಿಕೆಯಿಂದ ಲಂಕೆಗೆ ಓಡಿದನು.

ಒಡನೆಯೇ ಶ್ರೀರಾಮನು ಎದ್ದುಬಂದು ಈಶ್ವರಧನುಸ್ಸನ್ನು ಬಗ್ಗಿಸಿ ಮುರಿದುಹಾಕಿ ಸೀತೆಯನ್ನು ವರಿಸಿದನು. ಅಲ್ಲಿಗೆ ದಶರಥರಾಜನು ಬರಲು ರಾಮ ಲಕ್ಷ್ಮಣ ಭರತ ಶತ್ರುಘ್ನರಿಗೆ ಸೀತಾದಿ ರಾಜಪುತ್ರಿಯರನ್ನು ಜನಕರಾಜನು ವಿವಾಹಮಾಡಿ ಕಳುಹಿಸಿದನು. ಬಳಿಕ ಶ್ರೀರಾಮನು ತನಗೆ ರಾಜ್ಯಪಟ್ಟಾಭಿಷೇಕಮಾಡಲು ಪ್ರಯತ್ನಪಟ್ಟ ದಶರಥರಾಜನು, ಹಿಂದೆ ತನ್ನ ಕಿರಿಯ ಹೆಂಡತಿಯಾದ ಕೈಕೆಗೆ ಕೊಟ್ಟ ವರದ ವಾಕ್ಯವನ್ನು ನಡಿಸುವದಕ್ಕೋಸ್ಕರ, ಹೆಂಡತಿಯಾದ ಸೀತೆಯೊಡನೆಯೂ ತಮ್ಮನಾದ ಲಕ್ಷ್ಮಣನೊಡನೆಯೂ ಕೂಡಿ ಹದಿನಾಲ್ಕು ವರ್ಷಗಳು ವನವಾಸವನ್ನು ಮಾಡುವುದಕ್ಕೋಸ್ಕರ ಅರಣ್ಯಕ್ಕೆ ಬಂದನು.

ಶೂರ್ಪಣಖಿಯ ಅಭಿಮಾನ ಭಂಗ:—ವನವಾಸವನ್ನು ಮಾಡುತ್ತಿದ್ದ ಶ್ರೀರಾಮನು ಗೋದಾವರೀ ತೀರಕ್ಕೆ ಬಂದು ಪಂಚವಟಿಯೆಂಬ ಸ್ಥಳದಲ್ಲಿರುವಾಗ, ರಾವಣನ ತಂಗಿಯಾದ 'ಶೂರ್ಪಣಖಿ' ಯೆಂಬ ರಾಕ್ಷಸಿಯು ಅಲ್ಲಿಗೆ ಬಂದು, ರಾಮ ಲಕ್ಷ್ಮಣರ ರೂಪಕ್ಕೆ ಮೋಹಿಸಿ ನನ್ನನ್ನು ಮದುವೆಮಾಡಿಕೊಳ್ಳಬೇಕೆಂದು ಅವರನ್ನು ಪೀಡಿಸಿ, ಅವರು ಅದಕ್ಕೆ ಸಮ್ಮತಿಸದೆ ಇದ್ದುದರಿಂದ ಅವರನ್ನು ನುಂಗುವೆನೆಂದು ಬಂದಳು. ಆಗ

ರಾಮನು ಲಕ್ಷ್ಮಣನಿಗೆ ಸೂಚನೆ ಕೊಟ್ಟು ಆ ಲಕ್ಷ್ಮಣನಿಂದ ಶೂರ್ಪಣಖಿಯ ಕಿವಿಮೂಗುಗಳನ್ನು ಕೊಯಿಸಿಬಿಟ್ಟು ಮಾನಭಂಗವನ್ನು ಮಾಡಿದನು.

ರಾಮನು ಖರಾದಿ ಮಹಾಬಲ ರಾಕ್ಷಸರನ್ನು ಕೊಂದುದು:--ಶೂರ್ಪಣಖಿಯು ಕಿವಿ ಮೂಗುಗಳನ್ನು ಕೊಯಿಸಿಕೊಂಡು ರಾಮನಿಂದ ಮಾನಭಂಗಹೊಂದಿ ಅಣ್ಣನಾದ ಖರಾಸುರನೊಡನೆ ದೂರು ಹೇಳಿಕೊಳ್ಳಲು ಆ ಖರಾಸುರನು ದೂಷಣಾದಿ ರಾಕ್ಷಸರೊಡನೆ ಯುದ್ಧಕ್ಕೆ ಬಂದನು ಆಗ ರಾಮನು ಖರ ದೂಷಣ ಮೊದಲಾದ ರಾಕ್ಷಸರನ್ನು ಸಂಹರಿಸಿದನು

ಶೂರ್ಪಣಖಿಯು ರಾವಣನಿಗೆ ದೂರು ಹೇಳಿದುದು:—ಶೂರ್ಪಣಖಿಯು ಸಭೆಯಲ್ಲಿದ್ದ ಅಣ್ಣನಾದ ರಾವಣಾಸುರನ ಬಳಿಗೆ ಬಂದು ಇಂತೆಂದಳು. ಅಣ್ಣನೇ! ನಾನು ಅರಣ್ಯದಲ್ಲಿ ಪಂಚವಟೀ ಪ್ರದೇಶಕ್ಕೆ ಹೋದೆನು. ಅಲ್ಲಿ ರಾಮನ ಹೆಂಡತಿಯಾದ ಸೀತೆಯನ್ನು ಕಂಡೆನು ನಿನ್ನ ರಾಣಿಯರೊಳಗೆ ಯಾರಿಗೂ ಆ ಸೀತೆಯಂತಹ ಸೌಂದರ್ಯವಿಲ್ಲದಿರುವುದನ್ನು ನೋಡಿ ಅವಳನ್ನು ನಿನಗೆ ಕಾಣಿಕೆಯಾಗಿ ಕೊಡಬೇಕೆಂದು ಕೈಯಿಕ್ಕಿದೆನು. ಆಗ ರಾಮನು ತಮ್ಮನು ಕಂಡು ನನ್ನ ಕಿವಿ ಮೂಗುಗಳನ್ನು ಕೊಯ್ದುಬಿಟ್ಟನು ನನ್ನ ಮಾನಭಂಗವನ್ನು ನೋಡಿ ನಮ್ಮ ಖರದೂಷಣಾದಿಗಳು ಯುದ್ಧಕ್ಕೆ ಬರಲು ರಾಮನು ಅವರನ್ನು ಕೊಂದನು; ಎಂದು ಶೂರ್ಪಣಖಿಯು ಹೇಳಲು ರಾವಣನು ತಮ್ಮನ ವಿನಾಶಕ್ಕೂ ತಂಗಿಯ ಮಾನಭಂಗಕ್ಕೂ ಬಲುಮರುಗಿ ಸೀತೆಯ ರೂಪವನ್ನು ನೆನೆದು ಮೋಹವಶನಾದನು.

ಮಾಯೆಯಿಂದ ಸುಳಿದ ಮಾರೀಚ ರಾಕ್ಷಸನ ಸಂಹಾರ:—ರಾವಣನು ತಂಗಿಯಾದ ಶೂರ್ಪಣಖಿಯ ಬೋಧನೆಯಿಂದ ಸೀತೆಯನ್ನಪಹರಿಸುವ ಉಪಾಯವನ್ನು ಯೋಚಿಸಿ, ಮಾಯೆಯಿಂದ ಚಿನ್ನದ ಜಿಂಕೆಯ ಆಕಾರವನ್ನು ತಾಳಿ ವಂಚಿಸುವಂತೆ ತನ್ನ ಸೋದರಮಾವನಾದ ಮಾರೀಚನಿಗೆ ಸೂಚಿಸಲು. ಮಾರೀಚ ರಾಕ್ಷಸನು ಮಾಯೆಯಿಂದ ಚಿನ್ನದ ಜಿಂಕೆಯಾಗಿ ರಾಮಾಶ್ರಮದ ಮುಂದೆ ಸುಳಿದನು. ಸೀತೆಯು ಆ ಮೃಗವನ್ನು ನೋಡಿ ಆಶ್ಚರ್ಯಪಟ್ಟು ಅದನ್ನು ತಂದುಕೊಡೆಂದು ರಾಮನನ್ನು ಪ್ರಾರ್ಥಿಸಿದಳು. ರಾಮನು ಆಶ್ರಮದಲ್ಲಿ ಲಕ್ಷ್ಮಣನನ್ನು ಸೀತೆಗೆ ಕಾವಲಿಟ್ಟು ಆ ಮಾಯಾಮೃಗ ರೂಪನಾದ ಮಾರೀಚ ರಾಕ್ಷಸನನ್ನು ಬಾಣದಿಂದ ಹೊಡೆದನು ಆ ಪೆಟ್ಟಿನಿಂದ ಮಾರೀಚನು ಮೃಗದ ರೂಪವನ್ನು ಬಿಟ್ಟು ಹಾ ಸೀತೆ! ಹಾ ಲಕ್ಷ್ಮಣಾ! ಎಂದು ಕೂಗಿ ಸತ್ತನು.

ರಾವಣನು ಕಳವಿನಿಂದ ಸೀತೆಯನ್ನು ಒಯ್ದುದು, ಮತ್ತು ವನದಲ್ಲಿ ಸೆರೆಯಿಟ್ಟುದು:—ಮಾರೀಚ ರಾಕ್ಷಸನು ರಾಮಬಾಣದಿಂದ ಸಾಯುವಾಗ ಕೂಗಿದ ಧ್ವನಿಯನ್ನು ಕೇಳಿ ಆಶ್ರಮದಲ್ಲಿದ್ದ ಸೀತೆಯು ಭಯದಿಂದ ಲಕ್ಷ್ಮಣನನ್ನು ರಾಮನ ಬಳಿಗೆ ಕಳುಹಿದಳು. ಬಳಿಕ ಹೊಂಚುಕಾದಿದ್ದ ರಾವಣನು ಆಶ್ರಮದಲ್ಲಿ ಹೀಗೆ ರಾಮಲಕ್ಷ್ಮಣರಿಲ್ಲದಿರುವ ಸಮಯವನ್ನು ನಿರೀಕ್ಷಿಸಿ ಸನ್ಯಾಸಿವೇಷದಿಂದ ರಾಮಾಶ್ರಮಕ್ಕೆ ಬಂದು ವಂಚನೋಕ್ತಿಗಳನ್ನಾಡಿ ಬಲಾತ್ಕಾರದಿಂದ ಸೀತೆಯನ್ನು ಅಪಹರಿಸಿಕೊಂಡು ಹೋಗಿ ತನ್ನ ಅರಮನೆಯ ಅಶೋಕವನದೊಳಗೆ ರಾಕ್ಷಸಿಯರ ಕಾವಲಿನಲ್ಲಿ ಸೆರೆಯಿಟ್ಟನು. ಸೀತೆಯು ಅಶೋಕವನದಲ್ಲಿ ಯಾವಾಗಲೂ ರಾಮಧ್ಯಾನವನ್ನು ಮಾಡುತ್ತ ಮಹಾ ಚಿಂತೆಯಿಂದ ನವೆಯುತ್ತಿದ್ದಳು.

ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದಮೇಲೆ ರಾಮನು ಆಶ್ರಮಕ್ಕೆ ಬಂದು ಸೀತೆಯನ್ನು ಕಾಣದೆ ದುಃಖದಿಂದ ಲಕ್ಷ್ಮಣನೊಡನೆ ಸೀತೆಯನ್ನು ಹುಡುಕುತ್ತ, ಜಟಾಯುವೆಂಬ ಗೃಧ್ರರಾಜನಿಂದ ಸೀತಾದೇವಿಯನ್ನು ರಾವಣನು ಅಪಹರಿಸಿಕೊಂಡು ಹೋದ ಸಂಗತಿಯನ್ನು ತಿಳಿದು, ಋಷ್ಯಮೂಕ ಪರ್ವತಕ್ಕೆ ಬಂದು ಅಲ್ಲಿ ಸುಗ್ರೀವನ ಮಂತ್ರಿಯಾದ ಹನುಮಂತನ ಮೂಲಕವಾಗಿ ಕಪಿರಾಜನಾದ ಸುಗ್ರೀವನ ಸ್ನೇಹವನ್ನು ಬೆಳಸಿದನು. ರಾಮನು ತಾನು ಕೊಟ್ಟ ಮಾತಿನಂತೆ ಸುಗ್ರೀವನಿಗೆ ವಿರೋಧಿಯಾದ ಅವನ ಅಣ್ಣನಾದ ವಾಲಿಯನ್ನು ಸಂಹರಿಸಿ ಕಿಷ್ಕಿಂಧಾರಾಜ್ಯ ಪಟ್ಟಕಟ್ಟಿದ ಮೇಲೆ, ಸುಗ್ರೀವನು ತಾನು ಕೊಟ್ಟ ಭಾಷೆಯಂತೆ ಸೀತಾಚೋರನಾದ ರಾವಣನೊಡನೆ ಯುದ್ಧಕ್ಕೋಸ್ಕರ ಸೈನ್ಯಸಮೇತನಾಗಿ ರಾಮನಿಗೆ ಒತ್ತಾಸೆಮಾಡುವ ಸನ್ನಾಹವುಳ್ಳವನಾಗಿ, ಸೀತಾದೇವಿಯನ್ನು ಹುಡುಕಲು ಪಶ್ಚಿಮೋತ್ತರ ಪೂರ್ವ ದಿಕ್ಕುಗಳಿಗೆ ಸುಷೇಣನು ಮೊದಲಾದ ಕಪಿವೀರರನ್ನು ಕಳುಹಿದನು.

ರಾಮನು ಸೀತೆಯನ್ನು ಹುಡುಕಲು ಹನುಮನನ್ನು ಕಳುಹಿದುದು.–

ಸುಗ್ರೀವನು ಸೀತೆಯನ್ನು ಹುಡುಕಲು ದಕ್ಷಿಣದಿಕ್ಕಿಗೆ ಬ್ರಹ್ಮಪುತ್ರನಾಗಿ ಕರಡಿಗಳಿಗೊಡೆಯನಾದ ಜಾಂಬವಂತನು, ಹನುಮಂತನು, ಅಂಗದನು ಮೊದಲಾದ ಭಟರನ್ನು ಹೋಗಹೇಳಿ, ಹನುಮಂತನು ದೇವತೆಗಳಿಂದ ವರಗಳನ್ನು ಪಡೆದು ಮಹಾವೀರನಾಗಿರುವ ಸಂಗತಿಯನ್ನು ರಾಮನಿಗೆ ತಿಳಿಸಿ, ರಾಜಕಾರ್ಯಕ್ಕೀತನೇ ಸರಿಯೆಂದು ಹನುಮಂತನನ್ನು ರಾಮನಿಗೆ ಒಪ್ಪಿಸಿದನು. ಶ್ರೀರಾಮನು ಸಂತೋಷದಿಂದ ಹನುಮನನ್ನು ಮನ್ನಿಸಿ,

ನೀನು ಸೀತೆಯನ್ನು ಕಂಡು ಆಕೆಗೆ ಇದನ್ನು ಕೊಡೆಂದು ಹೇಳಿ ತನ್ನ ಮೊಹರುಂಗುರವನ್ನು ಅವನಕೈಗೆ ಕೊಟ್ಟು ಕೆಲವು ಗುರುತುಗಳನ್ನೂ ತಿಳಿಸಿದನು. ಸುಗ್ರೀವನು ಸೀತೆಯ ವೃತ್ತಾಂತವನ್ನು ತಿಳಿದು ಬರಲು ಕಪಿವೀರರಿಗೆ ಒಂದು ತಿಂಗಳ ಅವಧಿಯನ್ನು ಕೊಟ್ಟು ಕಳುಹಿಸಿದನು.

<u>ಜಾಂಬವಂತನು ಮೊದಲಾದವರು ಸೂರ್ಯಪುತ್ರನ ಮಗಳಠಾವನ್ನು ಕಂಡುದು</u>:—ಶ್ರೀರಾಮನ ಆಜ್ಞೆಯನ್ನು ಪಡೆದು ದಕ್ಷಿಣದಿಕ್ಕಿಗೆ ಹೊರಟ ಜಾಂಬವಂತನು, ಹನುಮಂತನು ಮೊದಲಾದವರು ಸೌರಾಷ್ಟ್ರ, ಘೂರ್ಜರ, ಗೌಳ, ಪಾಂಡ್ಯ, ಚೋಳ, ಕೇರಳ ಮೊದಲಾದ ರಾಜ್ಯಗಳಲ್ಲಿ ಸಂಚರಿಸಿ ಸೀತೆಯನ್ನು ಹುಡುಕುತ್ತ ಮಧುವನಕ್ಕೆ ಬಂದರು. ಅಲ್ಲಿ ಜಾಂಬವಂತನು ಮೊದಲಾದ ವೀರರು ಮಯನಿರ್ಮಿತವಾದ ಒಂದು ಮಾಯಾಸರೋವರವನ್ನು ಕಂಡು ನೀರಿಗೋಸ್ಕರ ಆ ಕೊಳದೊಳಗೆ ಇಳಿದರು. ಕೂಡಲೇ ನೀರುಕಾಣದ ಆ ಕೊಳವು ಹನುಮಂತನು ಮೊದಲಾದವರನ್ನು ಪಾತಾಳಲೋಕದ ಬಿಲದಲ್ಲಿ ಮಯನಿರ್ಮಿತವಾದ, ಸೂರ್ಯಪುತ್ರನಾದ ಮೇರುಸಾವರ್ಣಿಯ ಮಗಳಾದ ಸ್ವಯಂಪ್ರಭೆಯೆಂಬವಳ ರಾಜ್ಯಕ್ಕೆ ತಂದುಬಿಟ್ಟಿತು. ಜಾಂಬವಂತನು ಹನುಮನು ಮೊದಲಾದವರು ಸ್ವರ್ಗಲೋಕದ ಸಂಪತ್ತಿನಿಂದ ಮೆರೆಯುತ್ತ, ಹೊಳೆಗಳೂ ಬಳ್ಳಿಮನೆಗಳೂ ಅಲ್ಲಲ್ಲಿ ಕಣ್ಣಿಗೆಕಂಡು ಮರೆಯಾಗುತ್ತ ವಿಚಿತ್ರವಾಗಿ ತೋರುವ ಸ್ವಯಂಪ್ರಭೆಯ ರಾಜ್ಯದಲ್ಲಿ ರಾವಣನನ್ನು ಹುಡುಕುತ್ತ ತೊಳಲಿದರು. ಬಳಿಕ ಅವರು ಸ್ವಯಂಪ್ರಭೆಯ ಸ್ವಯಂಜ್ಯೋತಿಯೆಂಬ ಮಹಾನಗರವನ್ನು ಕಂಡು ಅಲ್ಲಿ ಹುಡುಕುತ್ತ ಆ ರಾಜ್ಯವನ್ನಾಳುವ ಸ್ವಯಂಪ್ರಭೆಯೆಂಬ ತಪಸ್ವಿನಿಯಿಂದ ಸತ್ಕರಿಸಲ್ಪಟ್ಟು ತಾವು ರಾಮನ ಸೇವಕರೆಂದೂ ಸೀತಾಚೋರನಾದ ರಾವಣನನ್ನು ಹುಡುಕಲು ಬಂದೆವೆಂದೂ ತಿಳಿಸಿ ತಮ್ಮ ತಮ್ಮ ಹೆಸರುಗಳನ್ನೂ ಹೇಳಿದರು. ಆ ಸ್ವಯಂಪ್ರಭೆಯು ಜ್ಞಾನದೃಷ್ಟಿಯಿಂದ ರಾಮನು ಮಹಾವಿಷ್ಣುವೆಂದರಿತು, "ರಾವಣನು ಇಲ್ಲಿಲ್ಲ. ಅವನು ಲಂಕೆಯಲ್ಲಿ ಇರಬೇಕು. ಅಲ್ಲಿ ನೋಡಿರಿ" ಎಂದು ಜಾಂಬವನಿಗೆ ಹೇಳಿದಳು.

<u>ಮಹಿಮೆತೋರಿ ಜಾಂಬವನು ಮೊದಲಾದವರು ಮತ್ತೆ ಭೂಲೋಕಕ್ಕೆ ಬಂದುದು</u>:— ಜಾಂಬವಂತನು ಮೊದಲಾದವರು ಸ್ವಯಂಪ್ರಭೆಯ ನಗರದಿಂದ ಹೊರಟು ದಾರಿ ತಿಳಿಯದೆ ಮತ್ತೆ ಸ್ವಯಂಪ್ರಭೆಯನ್ನು ಕಂಡರು. ಹನುಮನು ಅದ್ಭುತವಾಗಿ ಬೆಳೆದು ತನ್ನ ಮಹಿಮೆಯನ್ನು ತೋರಿಸಲು, ಆ ಸ್ವಯಂಪ್ರಭೆಯು ಜಾಂಬವನು ಮೊದಲಾದವರನು ಕಣ್ಣು

ಮುಚ್ಚುವಂತೆ ಹೇಳಿ ಅವರನ್ನೆಲ್ಲ ಎತ್ತಿಕೊಂಡು ಬೇಗನೆ ಭೂಲೋಕಕ್ಕೆ ತಂದುಬಿಟ್ಟು ಕಳುಹಿದಳು.

ಜಾಂಬವನು ಮೊದಲಾದವರು ಸಂಪಾತಿಯನ್ನು ಕಂಡು ಖಳನಸುದ್ದಿ ತಿಳಿದು ಸಮುದ್ರಕ್ಕೆ ಬಂದುದು:— ಜಾಂಬವಂತನು ಮೊದಲಾದವರು ಮತ್ತೆ ಭೂಲೋಕಕ್ಕೆ ಬಂದು ದಕ್ಷಿಣದಿಕ್ಕನ್ನು ಹಿಡಿದುಬರುತ್ತ ಮಲಯಪರ್ವತಪ್ರದೇಶವನ್ನೈದಿ ಮುಂದೆ ಜಟಾಯುವಿನ ಅಣ್ಣನಾದ ಸಂಪಾತಿಯೆಂಬ ಹದ್ದುಗಳ ರಾಜನನ್ನು ಕಂಡು ವೃತ್ತಾಂತವನ್ನೆಲ್ಲ ತಿಳಿಸಿದರು. ಆಗ ಸಂಪಾತಿಯು ಪೂರ್ವದಲ್ಲಿ ಸೂರ್ಯಕಿರಣದ ಬೇಗೆಯಿಂದ ಸೀದುಹೋಗಿದ್ದ ಈಗ ಆ ರಾಮಸೇವಕರ ದರ್ಶನದಿಂದ ಮತ್ತೆ ಮೂಡಿದ ರೆಕ್ಕೆಗಳ ಮೇಲೆ ಆ ಜಾಂಬವನು ಮೊದಲಾದವರನ್ನು ವಹಿಸಿಕೊಂಡು ತಂದು ದಕ್ಷಿಣ ಸಮುದ್ರತೀರದಲ್ಲಿ ಇಳಿಸಿದನು. ಮತ್ತು ರಾವಣನಿರುವ ಲಂಕಾನಗರಕ್ಕೆ ಹೋಗುವ ಮಾರ್ಗವನ್ನು ಅವರಿಗೆ ತಿಳಿಸಿ ನಡೆದನು.

ಜಾಂಬವನು ಮೊದಲಾದವರು ಹನುಮನನ್ನು ಲಂಕೆಗೆ ಕಳುಹಿದುದು:—ಬಳಿಕ ಜಾಂಬವನು ಮೊದಲಾದವರು ಸಮುದ್ರತೀರದಲ್ಲಿ ನಿಂತು ಸಮುದ್ರವನ್ನು ಹಾರಿ ಲಂಕೆಗೆ ಹೋಗಲು ಹನುಮಂತನೇ ಸಮರ್ಥನೆಂದು ಯೋಚಿಸಿ, ಸಮುದ್ರವನ್ನು ದಾಟಿ ಲಂಕೆಗೆ ಹೋಗಿ ರಾತ್ರಿಯಲ್ಲಿ ಗುಪ್ತವಾಗಿ ಸಂಚರಿಸಿ ಸೀತೆಯನ್ನು ಕಂಡು ಬಾ ಎಂದು ಹನುಮಂತನಿಗೆ ಸೂಚಿಸಿ ಕಳುಹಿದರು.

ಹನುಮನು ಸಮುದ್ರ ಮಧ್ಯದಲ್ಲಿ ಕಂಟಕಗಳನ್ನು ಕಳೆದು ದಾಟಿ ಲಂಕೆಯಲ್ಲಿ ಹುಡುಕಿದುದು:—ಹನುಮಂತನು ಸಮುದ್ರತೀರದಲ್ಲಿ ಜಾಂಬವನು ಮೊದಲಾದವರನ್ನು ಬೀಳ್ಕೊಂಡು ಮಹೇಂದ್ರಪರ್ವತಕ್ಕೆ ಬಂದು ನಿಂದು ಅಲ್ಲಿಂದ ದಕ್ಷಿಣಸಮುದ್ರವನ್ನು ದಾಟಲು ಹಾರಿದನು. ಹನುಮನು ಸಮುದ್ರವನ್ನು ಹಾರುವಾಗ ಮಧ್ಯದಲ್ಲಿ ಸುರಸೆಯೆಂಬ ರಾಕ್ಷಸಿಯು ಬಂದು ಅಡ್ಡ ಹಾಕಿದಳು. ಹನುಮನು ತನ್ನನ್ನು ನುಂಗುವುದಕ್ಕೆ ಬರುವ ಆ ಸುರಸೆಯನ್ನು ಮುಷ್ಟಿಯಿಂದ ಬಡಿದು ಅವಳ ಕಾಲನ್ನು ಹಿಡಿದು ಮೇಲಕ್ಕೆ ಬೀಸಾಡಿದನು. ಬಳಿಕ ಛಾಯಾಗ್ರಾಹಿಣಿಯಾದ ರಾಹುಮಾತೆಯಾದ ಸಿಂಹಿಕೆಯೆಂಬುವಳು ಬಂದು ಆಕಾಶದಲ್ಲಿ ಹಾರುತ್ತಿರುವ ಹನುಮನ ನೆರಳನ್ನು ಹಿಡಿದು ನಿಲ್ಲಿಸಿ ಅವನನ್ನು ನುಂಗಲು ನೂರುಗಾವುದದ ಅಗಲಕ್ಕೆ ತನ್ನ ಬಾಯನ್ನು ಅಗಲಿಸಲು, ಹನುಮನು ಅದಕ್ಕೆ ಎರಡರಷ್ಟು ಶರೀರವನ್ನು ಬೆಳಸಿ ಮತ್ತೆ ಸಣ್ಣನಾದ ಆಕಾರವನ್ನು ತಾಳಿ, ಆ ಸುರಸೆ

ಯ ಬಾಯೊಳಗೆ ನುಗ್ಗಿ ಶರೀರವನ್ನು ಬಹುವಾಗಿ ಬೆಳಸಿ ಅವಳ ಶರೀರವನ್ನು ಭೇದಿಸಿಕೊಂಡು ಈಚೆಗೆಬಂದು ಅವಳನ್ನು ಸೀಳಿ ಬೀಸಾಡಿದನು. ಆಮೇಲೆ ಹನುಮನು ಮತ್ತೆ ಹಾರಿ ಲಂಕಾಪುರಕ್ಕೆ ಬಂದು ಶರೀರವನ್ನು ಚಿಕ್ಕದನ್ನಾಗಿ ಮಾಡಿಕೊಂಡು ರಾತ್ರಿಯ ಕತ್ತಲೆಯಲ್ಲಿ ಕೋಟೆಯೊಳಗೆ ಪ್ರವೇಶಿಸಿದನು. ಕೂಡಲೆ ತನ್ನನ್ನು ತಡೆದ ಲಂಕಿಣಿಯೆಂಬ ರಾಕ್ಷಸಿಯನ್ನು ಮುಷ್ಟಿಯಿಂದ ಬಡಿದು ಹನುಮನು ಲಂಕೆಯ ಕೋಟೆಗಳೊಳಗೆಲ್ಲ ಮೆಲ್ಲನೆ ಸಂಚರಿಸುತ್ತ ಅಂಗಡಿಗಳಲ್ಲೂ ಗುಡಿಗಳಲ್ಲೂ ಸಂದುಗಳಲ್ಲೂ ಕುಂಭ ನಿಕುಂಭ ಮೊದಲಾದ ರಾಕ್ಷಸರ ಉಪ್ಪರಿಗೆ ಮನೆಗಳಲ್ಲೂ ಶೂರ್ಪಣಖಿಯ ಮನೆಯಲ್ಲೂ ಸೀತೆಯನ್ನು ಹುಡುಕಿ ಕಾಣದೆ ತೊಳಲಿದನು.

ಹನುಮನು ಕುಂಭಕರ್ಣನ ಮೂಗಿನ ಉಸಿರಿನಲ್ಲಿ ಸಿಕ್ಕಿ ನೊಂದುದು;—ಹನುಮನು ಲಂಕೆಯ ಕೋಟೆಯಲ್ಲಿ ಸೀತೆಯನ್ನು ಹುಡುಕುತ್ತ ಕಾಣದೆ ರಾವಣನ ತಮ್ಮನಾದ ಕುಂಭಕರ್ಣನ ರತ್ನದ ಮನೆಯೊಳಗೆ ನುಗ್ಗಿ ಅಲ್ಲಿ ನೀಲಗಿರಿಯಂತೆ ಅದ್ಭುತಾಕಾರವಾಗಿ ಮಲಗಿ ನಿದ್ರಿಸುತ್ತಿದ್ದ ಕುಂಭಕರ್ಣನನ್ನು ನೋಡಿ ಬೆರಗಾದನು. ಬಳಿಕ ಹನುಮನು ಪ್ರಳಯ ಶಿವನ ನಿಶ್ವಾಸವಾಯುವಿನ ರಭಸದಂತೆ ಗೊರಕೆ ಹೊಡೆಯುತ್ತ ಮಲಗಿರುವ ರಾಕ್ಷಸನ ಬಳಿಗೆ ಬಂದು ನಿಂತನು. ಆಗ ಆ ರಾಕ್ಷಸನ ಉಸಿರಿನ ಗಾಳಿಯು ಹನುಮನನ್ನು ಬಡಿದು ಮೂಗಿನೊಳಗೆ ಎಳೆಯಿತು. ಹನುಮನು ಆ ರಾಕ್ಷಸನ ಉಸಿರನ್ನು ಬಿಡುವಾಗ ಮೂಗಿನಿಂದ ಈಚೆಗೆ ಬರುತ್ತ ಉಸಿರನ್ನು ಎಳೆದುಕೊಳ್ಳುವಾಗ ಅವನ ಮೂಗಿನೊಳಗೆ ಸಿಕ್ಕುತ್ತ ತಲ್ಲಣಿಸಿ, ಒಂದು ಸಲ ಆ ರಾಕ್ಷಸನು ಉಸಿರನ್ನು ಬಿಡುವಾಗ ಮೂಗಿನೊಳಗೆ ಹೋಗುತ್ತಲೇ ಅವನ ಮೂಗಿನ ಹೊಳ್ಳೆಯ ರಂಧ್ರದ್ವಾರದಲ್ಲಿ ಉಸಿರು ಬರುವ ದಾರಿಗೆ ಕೀಲು ಕೊಟ್ಟ ಹಾಗೆ ಅದ್ಭುತಾಕಾರವಾಗಿ ಬೆಳೆದನು. ಆಗ ಮೂಗಿನೊಳಗೆ ಏನೋ ಸಿಕ್ಕಿಕೊಂಡಂತೆ ಆಗಿ ಕುಂಭಕರ್ಣನಿಗೆ ಉಬ್ಬಸವು ಹೆಚ್ಚಿತು. ಕುಂಭಕರ್ಣನು ಶಕ್ತಿಗುಂದಿ ಬೆದರಿ ಪ್ರಳಯದ ಸಿಡಿಲು ಬೀಳುವಂತೆ ಸೀತನು. ಆ ಕುಂಭಕರ್ಣನು ಸೀತ ವೇಗದಿಂದ ಹನುಮನು ಈಚೆಗೆ ಹೊರಟು ವಜ್ರದ ಕಂಬಕ್ಕೆ ಬಡಿದು ಬಿದ್ದು ನೊಂದನು. ಒಡನೆಯೇ ಹನುಮನು ಅಲ್ಲಿದ್ದ ಶೂಲಾಯುಧವನ್ನು ತೆಗೆದುಕೊಂಡು ಆ ರಕ್ಕಸನನ್ನು ಕೊಲ್ಲಬೇಕೆಂದೆಣಿಸಿ ಬಳಿಕ ಇವನು ರಾಮಬಾಣದಿಂದ ಸಂಹರಿಸಲ್ಪಡಲಿ ಎಂದು ಶೂಲವನ್ನು ಬಿಟ್ಟು ಅಲ್ಲಿ ಹುಡುಕಿ ಸೀತೆಯನ್ನು ಕಾಣದೆ ಹಿಂದಿರುಗಿದನು.

ಹನುಮನು ಲಂಕೆಯಲ್ಲಿ ಸೀತೆಯನ್ನು ಕಂಡುದು;—ಹನುಮನು

ಬರಬರುತ್ತ ರಾವಣನ ತಮ್ಮನಾದ ವಿಭೀಷಣನ ಮನೆಯಲ್ಲಿ ವಿಷ್ಣುಭಕ್ತಿ ಸೂಚಕವಾದ ಆಚರಣೆಗಳನ್ನು ನೋಡಿ ಮುಂದೆ ಬಂದು, ರಾವಣನ ಅರಮನೆಯಲ್ಲಿಯೂ ಅಶ್ವಗಜ ಶಸ್ತ್ರಶಾಲೆಗಳಲ್ಲಿಯೂ ಸೆರೆಮನೆಯಲ್ಲಿಯೂ ಹುಡುಕಿ ಸೀತೆಯನ್ನು ಕಾಣದೆ ಅತಿ ದುಃಖದಿಂದ ಸಂಚರಿಸುತ್ತ ಬಂದು ಅದ್ಭುತ ವೃಕ್ಷಲತೆಗಳಿಂದ ಅತಿ ಮನೋಹರವಾದ ರಾವಣನ ಅಶೋಕವನವನ್ನು ಕಂಡು ಅಲ್ಲಿಗೆ ಹಾರಿದನು. ಹನುಮನು ಅಶೋಕವನವನ್ನು ಹೊಕ್ಕು ನೋಡುತ್ತ ಮನೋಹರ ಫಲಭರಿತವಾದ ಅಶೋಕವೆಂಬ ಒಂದು ಮರದ ಬಳಿಗೆ ಬಂದು ಆ ಮರದ ಬುಡದಲ್ಲಿ ಬಾಳೆ ಗಿಡಗಳ ಮಧ್ಯದ ಎಲೆಮನೆಯಲ್ಲಿ ರಾಮಧ್ಯಾನವನ್ನು ಮಾಡುತ್ತ ಅತಿ ದುಃಖದಿಂದ ಕೂಡಿ ಮಹಾ ಪತಿವ್ರತಾ ಲಕ್ಷಣವುಳ್ಳವಳಾಗಿ ರಾಕ್ಷಸಿಯರ ಕಾವಲಿನಲ್ಲಿರುವ ಲೋಕಮಾತೆಯಾದ ಸೀತಾದೇವಿಯನ್ನು ಕಂಡನು. ಹನುಮನು ಆಕೆಯ ಶರೀರದಲ್ಲಿ ರಾಮನು ಹೇಳಿದ ಗುರುತುಗಳನ್ನು ನೋಡಿ ಸೀತೆಯೆಂದು ನಿರ್ಣಯಿಸಿ ಮಹಾ ಸಂತೋಷವನ್ನು ಹೊಂದಿ ಕೈಮುಗಿದನು. ಹನುಮನು ಕಾವಲಿನ ರಾಕ್ಷಸಿಯರು ನಿದ್ರೆಮಾಡುವ ಸಮಯದಲ್ಲಿ ರಾಮ ಲಕ್ಷ್ಮಣ ಸುಗ್ರೀವರ ಕ್ಷೇಮಸಮಾಚಾರವನ್ನು ಸೀತಾದೇವಿಗೆ ತಿಳಿಸಿ ಅವರು ಸೀತಾದೇವಿಯನ್ನು ಹುಡುಕಲು ತನ್ನನ್ನು ಕಳುಹಿಸಿದ ಸಂಗತಿಯನ್ನೂ ವಿವರಿಸಿ ಕೆಲವು ಚಿಹ್ನೆಗಳಿಂದ ನಂಬಿಕೆಕೊಟ್ಟು ಆಕೆಗೆ ರಾಮನ ಮುದ್ರೆಯುಂಗುರವನ್ನು ಕೊಟ್ಟನು. ಸೀತೆಯು ಪರಮಾನಂದಗೊಂಡಳು. ಬಳಿಕ ಹನುಮನು ಶ್ರೀರಾಮನನ್ನು ಶೀಘ್ರವಾಗಿಯೇ ಇಲ್ಲಿಗೆ ಕರೆತರುವೆನು ಎಂದು ಹೇಳಿ ಆಕೆಯು ರಾಮನಿಗೆ ಕೊಡೆಂದು ತನ್ನ ತಲೆಯ ರತ್ನಾಭರಣವನ್ನು ಕೊಡಲು ಅದನ್ನು ಗ್ರಹಿಸಿದನು. ಸೀತೆಯು ಹನುಮನನ್ನು ಮನ್ನಿಸಿ ದುಃಖದಿಂದ ಕಳುಹಿಸಿದಳು.

ಹನುಮನು ವನಪಾಲಕರನ್ನು ಕೊಂದುದು, ಅಶೋಕವನವನ್ನು ಮುರಿದುದು;—ಹನುಮಂತನು ಸೀತಾದೇವಿಯನ್ನು ಕಂಡಮೇಲೆ ರಾವಣನಿಗೆ ತನ್ನ ಪರಾಕ್ರಮವನ್ನು ತೋರಿಸಬೇಕೆಂದು ಯೋಚಿಸಿ, ಮನೋಹರವಾದ ಆ ಅಶೋಕವನದ ವಿವಿಧ ಫಲವೃಕ್ಷಗಳನ್ನೂ ಪುಷ್ಪದ ಬಳ್ಳಿಗಳನ್ನೂ ಕೈಕಾಲುಗಳ ಬಡಿತದಿಂದ ಮುರಿದು ಪುಡಿಪುಡಿ ಮಾಡಿದನು ಮತ್ತು ಕ್ರೀಡಾ ಪರ್ವತಗಳನ್ನೂ ಕ್ರೀಡಾ ಸೌಧಗಳನ್ನೂ ಬಡಿದು ಉರುಳಿಸಿದನು. ಹನುಮನ ವನಭಂಗದ ಮಹಾ ಶಬ್ದದಿಂದ ವನಪಾಲಕರಾದ ರಾಕ್ಷಸರು ಎಚ್ಚರಗೊಂಡೆದ್ದು ಆಯುಧಪಾಣಿಗಳಾಗಿ ಬಂದು ಹನುಮನನ್ನು ಆಯುಧಗಳಿಂದ ತಿವಿದು ಬಾಧಿಸಿದರು. ಆಗ ಹನುಮ

ನು ಆ ವನಪಾಲಕ ರಾಕ್ಷಸರನ್ನು ತುಳಿದು ಕೊಂದು ಮೇಲಕ್ಕೆ ಬೀಸಾಡಿದನು. ಮತ್ತು ಬಲೆ ಬೀಸಿ ಬಾಣಗಳನ್ನು ಎಸೆಯುವ ವನಪಾಲಕರನ್ನು ಮುರಿದ ಹೆಗ್ಗಂಬಗಳಿಂದಲೇ ಬಡಿದು ಕೊಂದನು. ಜಂಬುಮಾಲಿಯೆಂಬ ಮಹಾ ಯೋಧನನ್ನೂ ಸಂಹರಿಸಿದನು.

ಹನುಮಂತನು ರಾವಣನ ಏಳುನೂರು ಕುಮಾರರನ್ನೂ ಅಕ್ಷರಾದಿ ರಾಕ್ಷಸರನ್ನೂ ಕೊಂದುದು:—ಹನುಮಂತನು ಅಶೋಕವನದಲ್ಲಿ ಸುಮಾಲಿಯೆಂಬ ರಾಕ್ಷಸನೊಬ್ಬನನ್ನು ಕೊಲ್ಲದೆ ಉಳಿಸಿ, ರಾಮದೂತನು ಬಂದಿರುವನೆಂಬ ವಾರ್ತೆಯನ್ನು ರಾವಣನಿಗೆ ತಿಳಿಸೆಂದು ಹೇಳಿ ಅವನನ್ನು ಕಳುಹಿಸಿದನು. ರಾವಣನು ಸುಮಾಲಿಯಿಂದ ಹನುಮನು ಮಾಡಿದ ವನಭಂಗವನ್ನೂ ವನಪಾಲಕ ಸಂಹಾರ ವಾರ್ತೆಯನ್ನೂ ಕೇಳಿ ಮಹಾ ರೋಷಾವಿಷ್ಟನಾಗಿ ಎದ್ದು ಕತ್ತಿಯನ್ನು ಝಳಪಿಸುತ್ತ ಹೊರಡಲು, ಅವನ ಪುತ್ರನಾದ ಅಕ್ಷನೆಂಬವನು ನಾನು ಆ ಕಪಿಯನ್ನು ಹಿಡಿದು ತರುವೆನು. ಎಂದು ಪ್ರತಿಜ್ಞೆ ಮಾಡಿ ಮಹಾ ಸೈನ್ಯದೊಡನೆ ಕೂಡಿ, ರಾವಣನ ಏಳುನೂರು ಕುಮಾರರನ್ನು ಕರೆದುಕೊಂಡು, ಅಶೋಕವನಕ್ಕೆ ಬಂದನು. ಅಕ್ಷನ ಸೈನಿಕರು ಮುತ್ತಿ ಬಾಣಗಳನ್ನು ಪ್ರಯೋಗಿಸಲು, ಹನುಮನು ವನದ ಹೆಬ್ಬಾಗಿಲಿನ ಎರಡು ಕಂಬಗಳನ್ನು ಮುರಿದು ಹಿಡಿದುಕೊಂಡು ತಿರುಗಿಸಿ ಆ ಸೈನ್ಯವನ್ನೆಲ್ಲ ಬಡಿದು ಉಜ್ಜಿದನು. ಮತ್ತು ತನ್ನ ಮೇಲೆ ಕವಿದು ಯುದ್ಧಕ್ಕೆ ಬಂದ ರಾವಣನ ಏಳುನೂರು ಕುಮಾರರನ್ನೂ ಬಡಿದು ಕೊಂದನು. ಬಳಿಕ ರಾವಣನ ಪುತ್ರನಾದ ಅಕ್ಷನೆಂಬ ಮಹಾ ವೀರರಾಕ್ಷಸನು ಹನುಮನನ್ನು ಎದುರಿಸಿದನು. ಅವನು ಪ್ರಯೋಗಿಸಿದ ಬಾಣಗಳು ಹನುಮನ ಮೈಗೆ ನಾಟದ ಗದಾದ್ಯಾಯುಧಗಳು ಹನುಮನ ಅಂಗಕ್ಕೆ ಸೋಕಿ ತುಂಡಾದುವು. ಅಕ್ಷನು ಮುಷ್ಟಿಯುದ್ಧಕ್ಕೆ ತೊಡಗಲು ಶೂರಹನುಮನು ಕೈ ಮುಷ್ಟಿಯಿಂದ ಅಕ್ಷರಾಕ್ಷಸನನ್ನು ಬಲವಾಗಿ ತಿವಿಯಲಾಗಿ ಅಕ್ಷನ ಮೂಗು ಬಾಯಿಗಳಿಂದ ರಕ್ತವು ಸೂಸಿ ಮಡಿದನು. ಹನುಮನು ಅಕ್ಷನನ್ನು ಕೊಂದು ಅವನ ತಲೆಯನು ರಾವಣ ಸಭೆಯ ಇದಿರಿಗೆ ಬೀಸಾಡಿದನು

ಆರನೆಯ ಸಂಧಿ.

ಸೂಚನೆ:—(೧) ಆ ಹನುಮ-ಆ ಹನುಮಂತನು, (೨) ವಿತತರಾಕ್ಷಸರಾಜಬಲಸಂಗತವಂ=ವಿತತ-ಅಧಿಕವಾದ, ರಾಕ್ಷಸರಾಜ-ರಕ್ಕ

ಯನಾದ ರಾವಣನ, ಬಲ-ಸೈನ್ಯಗಳ, ಸಂಗತಮಂ ಸಮೂಹವನ್ನು (೩) ಬರೆ-ಬಹಳವಾಗಿ, ಸಂಹರಿಸಿ ಕೊಂದು, ರಾವಣಸುತನಿಂ-ರಾವಣನಮಗ ನಾದ ಇಂದ್ರಜಿತ್ತಿನಿಂದ, (೪) ಅಬುಜಭವಾಸ್ತ್ರದಲಿ-ಬ್ರಹ್ಮಾಸ್ತ್ರದಲ್ಲಿ (ಬ್ರಹ್ಮದೇವನ ಬಾಣದಲ್ಲಿ), (೫) ಬಿಗಿವಡೆದಂ-ಬಂಧನ ಹೊಂದಿದನು (ಕಟ್ಟಲ್ಪಟ್ಟನು)

ವ್ಯಾಕರಣ:— (೧) ಅವಂ + ಹನುಮಂ ಅವನುಮಂ (ಗಮಕ.ಸ) ಹನುಮಂ ಎಂಬುದು ಪ್ರಕೃತಿಸ್ವರೂಪದಲ್ಲಿಯೇ ಇದೆ. ಷಟ್ಪದೀಕಾವ್ಯಗಳಲ್ಲಿ ಹೀಗೆ ಪ್ರಯೋಗಿಸುವುದು ವಾಡಿಕೆ. (೨) ರಾಕ್ಷಸರಾಜಂ-ರಾಕ್ಷಸರಾಜ ಬಲಂಗಳ್-ಬಲಂಗಳ ಸಂಗತಂ (ಷಷ್ಠೀ ತ) ವಿತತವಾದ + ರಾಕ್ಷಸ...ಸಂಗತಂ (ವಿ. ಪೂ) (೩) ಅವ್ಯಯವು, (೪) ಅಬುಜಭವನ + ಅಸ್ತ್ರಂ (ಷ. ತ) (೫) ಬಿಗಿಯುಂ + ಪಡೆದಂ (ಕ್ರಿ) ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಪವರ್ಗಕ್ಕೆ ಬಹುಳವಾಗಿ ವಕಾರಾದೇಶವುಂಟು.

ವಿಶೇಷ:—ಬಲ-ಇದು ಸಂಸ್ಕೃತವಾದರೆ ಸೈನ್ಯ, ಶಕ್ತಿ ಯೆಂಬರ್ಥ ಗಳುಳ್ಳುದು. ಕನ್ನಡವಾದರೆ ಬಲದಭಾಗವೆಂದು ಅರ್ಥವು

ಟಿಪ್ಪಣಿ:- ಸೂಚನೆ:— ಅಂದರೆ ಒಂದು ಸಂಧಿಯ ಕಥೆಯನ್ನೆಲ್ಲಾ ಬಹು ಸಂಕ್ಷೇಪವಾಗಿ ಹೇಳುವುದು

ಪದ್ಯ—1. ರಘುವಂಶ ಲಕ್ಷ್ಮೀಲೋಲ ಸುತ=ರಘುವಂಶ ರಘು ಮಹಾರಾಜನ ಸಂತತಿಯ, ಲಕ್ಷ್ಮೀಲೋಲ-ವಿಷ್ಣುವಿನ ಸ್ವರೂಪಿಯಾದ ರಾಮನ, ಸುತ-ಪುತ್ರನಾದ ಕುಶನೇ! (ಅಥವಾ ಲವನೇ!) (೧) ಕೇಳು ಸೈ-ಈವಿಷಯವನ್ನು ಕೇಳಿದೆಯಾ? (ಇದನ್ನು ಕೇಳು ಎಂದು ಎಚ್ಚರಿಸುವುದು). ಹರಿಸುತನ-ವಾಯುಪುತ್ರನಾದ ಹನುಮಂತನ (೨) ಕರ್ಮುಷ್ಟಿ-ಹಸ್ತದಿಂದ, ಲಂಕೇಶ್ವರನ-ಲಂಕಾಧಿಪತಿಯಾದ ರಾವಣನ, ನಂದನನ-ಮಗನಾದ ಅಕ್ಷನ, (೩) ಕಾಲಕಂಠಕರಾಳ=ಕಾಲ-ಯಮನ, ಕಂಠ-ಕೊರಳಿನಂತೆ, ಕರಾಳ-ಭಯಂಕರವಾದ, (೪) ಬೀಳುವಿಕೆ ಶರೀರದ ಬಿಡುವಿಕೆಯಿಂದ ಕೂಡಿದ ತಲೆಯ (ಶರೀರದಿಂದ ಅಗಲಿದ ತಲೆಯು ಅಂದರೆ ಛಿನ್ನವಾದ ಶಿರಸ್ಸು), ರಾವಣನ-ರಾವಣಾಸುರನ, ಸಭೆಯಲಿ-ಆಸ್ಥಾನದಲ್ಲಿ (೫) ಬೀಳೆ ಉರುಳಲು, ಬಳಿಕ-ಅನಂತರದಲ್ಲಿ, ಮಯತನುಜೆ-ಮಯನಪುತ್ರಿಯಾದ ರಾವಣನ ಹೆಂಡತಿಯಾದ ಮಂಡೋದರಿಯು (೬) ಮದನನು ಸಂಗತಿಯನ್ನು, ಆಕ್ಷಣ-ತತ್ಕ್ಷಣದಲ್ಲಿ, ಕೇಳಿ, ತನಕದಲಿ-ಆತುರದಿಂದ ಶೀಘ್ರವಾಗಿ), ತಲೆಯ ಎಡೆಗೆ-ಅಕ್ಷನ ಶಿರಸ್ಸಿರುವಸ್ಥಳಕ್ಕೆ, ಬಂದಳು-ಸೇರಿದಳು (ರಾವಣಪತ್ನಿಯಾದ ಮಂಡೋದರಿಯು ತನ್ನ ಮಗನಾದ

ಅಕ್ಷನ ತಲೆಯು ರಾವಣಸಭೆಯಲ್ಲಿ ಬಿದ್ದುದನ್ನು ಕೇಳಿ ಅಲ್ಲಿಗೆ ಬೇಗನೆ ಬಂದಳು)

ವ್ಯಾಕರಣ:—(೧) ಕೇಳಿದೆ + ಐ, ಐ ಎಂಬುದು ಇಲ್ಲಿ ಪ್ರಶ್ನಾರ್ಥಕವಾದ ಅವ್ಯಯವು (೭) ತೃತೀಯಾರ್ಥದಲ್ಲಿ ಸಪ್ತಮಿ (೩) ಕಾಲನ ಕಂಠ (ಷ. ತ) ಕಂಠದಂತೆ ಕರಾಳ (ಉ. ಪೂ) (೪) ಬೀಡಿಂದೆಕೂಡಿದ ತಲೆ=ಬೀಳ್ದಲೆ (ಕ. ಮ. ಲು) ಡಕಾರಕ್ಕೆ ಳಕಾರಾದೇಶವು, ಹೊಸ ಕನ್ನಡದಲ್ಲಿ ಬೀಳುದಲೆ. ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಕ, ತ ಪ ಎಂಬಕ್ಷರಗಳಿಗೆ ಗ, ದ, ಬ ಎಂಬುವು ಬಹಳವಾಗಿ ಆದೇಶವಾಗುವುವು, (೫) ಬೀಳೆ + ಎ, ಎ ಎಂಬುದು ಸತಿಸಪ್ತಮಿಯ ಪ್ರತ್ಯಯವು, (೬) ಅದು + ಹದನು=ಅಹದನು (ಗ)

ವಿ:— ಮಯತನುಜೆ-ಮಂಡೋದರಿ, ಹರಿಸುತ-ಹನುಮಂತನು.

ಟಿಪ್ಪಣಿ— ರಾಮಾಯಣವನ್ನು (ರಾಮಕಥೆಯನ್ನು) ವಾಲ್ಮೀಕಿ ಋಷಿಯು ರಾಮನ ಮಕ್ಕಳಾದ ಕುಶ, ಲವ, ಎಂಬಿಬರಿಗೂ ಹೇಳಿದನು

ಹೇಳುವುದಕ್ಕೆ ಕಾರಣ;—ಶ್ರೀರಾಮನು ತನಗೆ ಅಪವಾದ ಬಂದಿತೆಂಬ ಕಾರಣದಿಂದ ಏಳು ತಿಂಗಳ ಗರ್ಭಿಣಿಯಾದ ಪತ್ನಿಯಾದ ಸೀತೆಯನ್ನು ಲಕ್ಷ್ಮಣನೊಡನೆ ಅರಣ್ಯಕ್ಕೆ ಕಳುಹಿಸಿದನು. ಅರಣ್ಯದಲ್ಲಿ ಒಬ್ಬಳೇ ಇರುವ ಸೀತಾದೇವಿಯನ್ನು ವಾಲ್ಮೀಕಿ ಋಷಿಯು ಕಂಡು, ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗಿ ಪೋಷಿಸುತ್ತಿರಲು, ಸೀತೆಯು ನವಮಾಸಗಳು ತುಂಬ ಇಬ್ಬರು ಕುಮಾರಕರನ್ನು ಪಡೆದಳು. ಆ ಬಾಲಕರಿಗೆ ವಾಲ್ಮೀಕಿಯು ಕುಶ, ಲವ ಎಂದು ಹೆಸರಿಟ್ಟು ಧನುರ್ವಿದ್ಯೆಯೇ ಮೊದಲಾದ ಸಕಲ ವಿದ್ಯೆಗಳನ್ನು ಕಲಿಸಿದನು. ಹೀಗಿರಲು ಒಂದು ದಿವಸ ಆ ಬಾಲಕರು ವಾಲ್ಮೀಕಿಯನ್ನು ಕುರಿತು ಮುನಿನಾಥನೇ! ನಮ್ಮನ್ನು ಪಡೆದ ತಂದೆಯಾರು ನಮ್ಮ ವಂಶವು ಯಾವುದು? ಎಂದು ಕೇಳಿದರು. ಆಗ ವಾಲ್ಮೀಕಿ ಮುನೀಂದ್ರನು ರಾಮ ಕಥೆಯನ್ನು ವಿವರಿಸುವ ರಾಮಾಯಣ ಕಾವ್ಯವನ್ನು ಕುಶನಿಗೂ ಲವನಿಗೂ ಬೋಧಿಸಿದನು.

೨. ಕಂದ ಮಗುವೇ ! + ನಿನ್ನನ್ನು, ಆರು-ಯಾರು. ಕೊಂದರು-ಸಂಹರಿಸಿದರು ? ಎಲೆ ಮಗನೆ-ಎಲೈ ಪುತ್ರನೇ ! ಮುನಿದವರು-ನಿನ್ನಲ್ಲಿ ಕೋಪಗೊಂಡವರು (ಅಥವಾ ನಿನ್ನಲ್ಲಿ ದ್ವೇಷಿಸಿದವರು), ಆರು-ಯಾರು, ಅಕ್ಕಟ-ಅಕಟ-ಅಯ್ಯೋ ! (೧) ತವ-ನಿನ್ನ, ಪಿತನ-ತಂದೆಯನ್ನು ಬೇಡಿದ-ವಿಷಯಾಸಕ್ತಿಯು (ಪರಸ್ತ್ರೀ ಕಾಮುಕತ್ವದ), ಬೇರು-

ಮೂಲವು + ನಿನಗೆ, (೨) ಕೊಲೆಮಿತ್ತು-ಸಂಹಾರಾರ್ಥವಾದ ಮರಣ ದೇವತೆಯು, ಆವುದೇ-ಆಯಿತೇ? ವೀರ-ಶೂರನೇ! (೩) ಹಾ-ಕಷ್ಟವು! ಸುಕುಮಾರ-ಒಳ್ಳೆಯ ಬಾಲಕನೇ! ಹಾ ಕಷ್ಟವು! ರಣಧೀರ=ರಣ-ಯುದ್ಧದಲ್ಲಿ, ಧೀರ-ಧೈರ್ಯಶಾಲಿಯೇ! ಹಾ-ಕಷ್ಟವು! ಕಂದ-ಮಗುವೇ! ಹಾ-ಕಷ್ಟವು! ಎಂದು-ಎಂಬುದಾಗಿ + ಮಂಡೋದರಿಯು, (೪) ಮಹಾರಭಟಿಯುಲಿ=ಅಧಿಕವಾದ ಆರ್ಭಟದಿಂದ ಕೂಡಿ, (೫) ತಲೆಯ-ಅಕ್ಷನ ಶಿರಸ್ಸನ್ನು, ತಕ್ಕೈಸಿಕೊಂಡು-ತಬ್ಬಿಕೊಂಡು. ಹೊರಳಿದಳು-ಉರುಳಾಡಿದಳು.

ವ್ಯಾಕರಣ—(೧) ಇದು ಸಂಸ್ಕೃತಪದವು, (೨) ಕೊಲೆಗೋಸ್ಕರವಾದ + ಮಿತ್ತು ಕ. ಮ. ಉ) (೩) ಅವ್ಯಯವು (೪) ಮಹತಾದ + ಆರಭಟಿ (ವಿ. ಪೂ) (೫) ಕರ್ಮಾರ್ಥದಲ್ಲಿ ಷಷ್ಠಿ (ಕರ್ಮಣಿಷಷ್ಠಿ)

ವಿ॥ ಕಂದ-ಇದು ಸಂಸ್ಕೃತವಾದರೆ ಗಡೆ, ಕನ್ನಡವಾದರೆ ಮಗುವು

ಭಾವಾರ್ಥ:—ಬೇಟದ ಬೇರು ಕೊಲೆ ಮಿತ್ತಾದುವೇ ಅಕಟಕಟ ತಪಸಿತನ-ಅಯ್ಯಯ್ಯೋ! ನಿನ್ನ ತಂದೆಯು ಪರಸ್ತ್ರೀಯನ್ನು ಕಾಮಿಸಿದುದರಿಂದ ನಿನಗೆ ಮರಣ ಸಂಭವಿಸಿತೇ.

೩ + ರಾವಣನು, ಅಣುಗನ-ಮಗನ (ಅಕ್ಷನ) ತಲೆಯ-ಶಿರಸ್ಸನ್ನು, ತಕ್ಕೈಸಿಕೊಂಡು-ತಬ್ಬಿಕೊಂಡು, (೧) ಹೊರಳುವ ಸತಿಯುಂ-ಉರುಳಾಡುವ ಹೆಂಡತಿಯಾದ ಮಂಡೋದರಿಯನ್ನು, ಕಂಡಂ-ನೋಡಿದನು; + ರಾವಣನ, (೨) ಕೋಪಶಿಖಿ-ರೋಷವೆಂಬ ಅಗ್ನಿಯು, ಉದರದ-ಹೊಟ್ಟೆಯೆಂಬ, ಗುಂಡಿಗೆಯನು-ಮಡಕೆಯನ್ನು, ಒಡೆದು-ಭೇದಿಸಿಕೊಂಡು, ಮುಖದ-ಮೊಗಗಳ, ಮುಂತಳಿಗಳಲಿ-ಸಮೂಹಗಳಿಂದ, (ಅಂದರೆ ಹತ್ತು ಮುಖಗಳಿಂದ) ಉಚ್ಚಳಿಸಿದುದು-ಮಸಗಿತು, (ಹೊರಟಿತು); (೩) ಮಾತು ಇದುವೇನು-ಹೇಳತಕ್ಕುದೇನು (ಏನು ಹೇಳಲಿ?) ಅಸುರೇಂದ್ರ-ರಾಕ್ಷಸರಾಜನಾದ ರಾವಣನು, ಉದ್ದಂಡಪುರಹರ-ಮಹಾರುದ್ರನು, ಲಯದಲಿ-ಪ್ರಳಯಕಾಲದಲ್ಲಿ (ಯುಗದ ಕೊನೆಯಲ್ಲಿ), ಆ ಬ್ರಹ್ಮಾಂಡವನು-ಆ ಲೋಕಾಧಾರವಾದ ಬ್ರಹ್ಮನ ಮೊಟ್ಟೆಯನ್ನು, ಸುಡಬಗೆವ-ದಹಿಸಲೆಣಿಸುವ, ಬಗೆಯನು-ರೀತಿಯಂ, ಬಗೆದಂ-ಯೋಚಿಸಿದನು.

ಭಾವಾರ್ಥ:—ಉದರದ ಗುಂಡಿಗೆಯನೊಡೆದುಚ್ಚಳಿಸಿದುದು ಕೋಪಶಿಖಿ ಮುಖದ ಮುಂತಳಿಗಳಲಿ-ರಾವಣನ ಹೊಟ್ಟೆಯೊಳಗಣಿಂದ ಉಕ್ಕಿಬಂದ ಉಗ್ರವಾದ ಕೋಪದ ಭಾವವು ಹತ್ತು ಮುಖಗಳಲ್ಲಿಯೂ

ಕಾಣಿಸುತ್ತಿದ್ದಿತು. ಉದ್ದಂಡಪುರಹರ... ಸುಡಬಗೆದಬಗೆಯನ್ನು ಬಗೆದ ನಸುರೇಂದ್ರ-ರಾವಣನು ಪ್ರಳಯರುದ್ರನಂತೆ ಬ್ರಹ್ಮಾಂಡವನ್ನೆಲ್ಲ ಸುಟ್ಟುಬಿಡುವೆನೆಂದು ಯೋಚಿಸಿದನು.

ವ್ಯಾಕರಣ—(೧) ಹೊರಳುವಳ್ + ಸತಿ (ಗ) (೨) ಕೋಪವೆಂಬ + ಶಿಖಿ (ಅ. ಪುಂ) (೩) ಅದು, ಎಂಬುದಕ್ಕೆ ಇಲ್ಲಿ ಅರ್ಥವಿಲ್ಲ; ಪಾದಪೂರಣಾರ್ಥವಾಗಿ ಪ್ರಯೋಗವು.

ವಿ॥ ಬಗೆ-ಇದು ಧಾತುವಾದರೆ ಯೋಚಿಸು. ಎಂಗರ್ಥವು; ನಾಮವಾಚಕವಾದರೆ-ರೀತಿ, ಮನಸ್ಸು

ಟಿಪ್ಪಣಿ:—ಬ್ರಹ್ಮಾಂಡ- ಆದಿಯಲ್ಲಿ ಬ್ರಹ್ಮನು ತನ್ನ ತಪಸ್ಸಿನ ಸಾರವನ್ನು ಮಹಾ ಜಲರಾಶಿಯಲ್ಲಿ ಬಿಡಲು, ಅದು ಚಿನ್ನದ ಮೊಟ್ಟೆಯಾಯಿತು. ಬ್ರಹ್ಮನು ಆ ಮೊಟ್ಟೆಯೊಳಗೆ ಲೋಕಗಳನ್ನು ಸೃಷ್ಟಿಮಾಡಿದನು. ಇಂತಹ ಬ್ರಹ್ಮನ ಮೊಟ್ಟೆಗೆ ಬ್ರಹ್ಮಾಂಡ, ವೆಂದು ಹೆಸರು

೪. (೧) ಕಮಲಜ ದತ್ತರಥ=ಕಮಲಜ-ಬ್ರಹ್ಮನಿಂದ, ದತ್ತ-ಕುಬೇರನಿಗೆ ಕೊಡಲ್ಪಟ್ಟ, ರಥ-ತೇರು (ಅಂದರೆ ಪುಷ್ಪಕವೆಂಬ ವಿಮಾನವು), ಬರಲಿ-ಸಿದ್ಧವಾಗಲಿ. (೨) ಸಂಗರಭಯಂಕರ... ಹಿಮಕಿರಣಹಾಸಂ=ಸಂಗರ-ಯುದ್ಧದಲ್ಲಿ, ಭಯಂಕರ-ಭೀತಿಯನ್ನುಂಟುಮಾಡುವುದಾದ, ಘೋರತರ-ಅತಿಕ್ರೂರವಾದ, ಹಿಮಕಿರಣ ಹಾಸಂ-ಕತ್ತಿಯು (ಈಶ್ವರನಿಂದ ಕೊಡಲ್ಪಟ್ಟ ಕತ್ತಿಯು), ಬರಲಿ-ಸಿದ್ಧವಾಗಲಿ; + ಎಂದು ರಕ್ಕಸರಾಯ-ರಾಕ್ಷಸರಾಜನಾದ ರಾವಣನು, ಎನುತ್ತ-ಹೇಳುತ್ತ, ಮೀಸೆಗಳ-ಮೀಸೆಯ ಕೂದಲುಗಳನ್ನು, ಮುರಿದು-ತಿರುಚಿ, ನಿಂದು ಇರಲು-ನಿಂತುಕೊಂಡಿರಲು, ಇಂದ್ರಜಿತು-ರಾವಣನ ಜ್ಯೇಷ್ಠಪುತ್ರನಾದ ಇಂದ್ರಜಿತ್ತು, (೩) ಬಲುಬಿರಿಸಿನ-ಬಹು ಕಠಿನವಾದ, (೪)-ಉಬ್ಬರವಾತಿನಲಿ-ಆಡಂಬರದ ಮಾತಿನಿಂದ (ಜಂಬಿನ ಮಾತಿನಿಂದ), ಕಿಡಿ-ಬೆಂಕಿಯ ಕಣವು, ಸುರಿಯೆ-ಸೂಸುವಹಾಗೆ, ಖಡ್ಗವ-ಕತ್ತಿಯನ್ನು, ಝಡಿದು-ಝಳಪಿಸಿ, ರಕ್ಕಸರಾಯನಿಗೆ-ರಾವಣನಿಗೆ, (೫) ಇಂತು-ಈ ಮುಂದೆ ಹೇಳುವ ಪ್ರಕಾರವಾಗಿ, ಎಂದ-ಹೇಳಿದನು.

ವ್ಯಾಕರಣ—(೧) ಕಮಲಜನಿಂದ + ದತ್ತಂ (ತೃ. ತ) ದತ್ತವಾದ ರಥ (ವಿ. ಪೂ.) (೨) ಸಂಗರದಲ್ಲಿ ಭಯಂಕರ (ಸ. ತ) ಘೋರತರವಾದ ಹಿಮಕಿರಣ ಹಾಸಂ, ಭಯಂಕರವಾದ... ಹಾಸಂ (ಎರಡೂ ವಿ. ಪೂ.) (೩) ಬಲ್ಲಿತು + ಬಿರಿಸು=ಬಲ್ಬಿರಿಸು (ಬಲುಬಿರಿಸು) ಕ. ವಿ. ಪೂ. (೪)

ಉಬ್ಬರದ + ಮಾತು (ಕ. ಷ. ತ) (೫) ಇದು + ತು=ಇಂತು, ಪ್ರಕಾ ರಾರ್ಥದಲ್ಲಿ ಇದು ಎಂಬುದರ ಮೇಲೆ ತು ಪ್ರತ್ಯಯವು (ತದ್ಧಿತಾಂತಾ ವ್ಯಯ)

ವಿ॥ ಹಿಮಕಿರಣಹಾಸ-ಚಂದ್ರಹಾಸ (ಕತ್ತಿ)

ಟಿಪ್ಪಣೀ ಕಥಾಸಂದರ್ಭ; ರಾವಣಾಸುರನು ದಿಗ್ವಿಜಯಕ್ಕೋಸ್ಕರ ಹೊರಟು ಕುಬೇರನನ್ನು ಜಯಿಸಿ, ಬ್ರಹ್ಮನಿಂದ ಕುಬೇರನಿಗೆ ಕೊಡಲ್ಪ ಟ್ಟುದಾಗಿ ನೆನೆವ ಕಡೆಗೆ ಹೋಗುವ ಮಹಾ ವೇಗವುಳ್ಳ ಪುಷ್ಪಕವೆಂಬ ವಿಮಾನವನ್ನು (ಪುಷ್ಪಕರಥವನ್ನು) ಆ ಕುಬೇರನಿಂದ ಅಪಹರಿಸಿಕೊಂ ಡು ಬಂದನು.

೫. ಜೀಯ-ಪ್ರಭುವೇ! ನೀ ನೀನು, (೧) ಹಗೆಗಲಹದಲಿ-ಶತ್ರು ವಿನೊಡನೆ ಯುದ್ಧದಲ್ಲಿ, ನಿಲಲುಬೇಕೇ-ನಿಂತುಕೊಳ್ಳಬೇಕೇ ? ನಿನಗೆ (೨) ಇಂದು-ಈಗ, ಅಮರರ-ದೇವತೆಗಳ, ಒಗ್ಗಿನಲಿ-ಸಮೂಹದಲ್ಲಿ, ಹರನೊಡನೆ-ಈಶ್ವರನಿಗಿಂತ, ಮಿಕ್ಕಿನ-ಮೀರಿದವರಾದ, (ಈಶ್ವರನನ್ನು ಮೀರಿದವರಾದ) ಗಲಬೆಕಾರರು-ಕಲಹಗಾರರು. (ಯುದ್ಧಗಾರರು), ಪಾ ಡೆ ಸಮಾನವಾಗಿರುವರೇ; (ನಿನಗೆ ದೇವಸಮೂಹದಲ್ಲಿ ಈಶ್ವರನಿಗಿಂತ ಲೂ ಮೀರಿದ ಯುದ್ಧಗಾರರು ಕೂಡ ಸಮಾನರೇ? [ಅಂದರೆ ಈಶ್ವರ ನಿಗಿಂತಲೂ ಮೀರಿದ ಯುದ್ಧಗಾರರಾದ ದೇವಪುರುಷರಿಗಿಂತಲೂ ನೀನು ಅತಿಶೂರನು ಎಂದು ಭಾವ] (೩) ಹುಲುಕಪಿಗೆ-ತೃಣಪ್ರಾಯವಾದ ಕೋತಿಗೋಸ್ಕರ (ಅಲ್ಪವಾದ ಕಪಿಗೆ), ನೀನು, ಏಕೆ-ಏತಕ್ಕೆ ಹೋಗ ಬೇಕು ? ನೇಮಿಸು-ನನಗೆ ಅಪ್ಪಣೆ ಕೊಡು. ನಾನು ಆ ಕಪಿಯನ್ನು ಹಿಡಿತಂದು-ಹಿಡಿದುಕೊಂಡು ಬಂದು, ನಿಮ್ಮಯ-ನಿಮ್ಮ, ಬಳಿಯೊಳು-ಸಮೀಪದಲ್ಲಿ, ನಿಲಿಸುವೆನು-ನಿಲ್ಲಿಸುವೆನು, ಎಂದು-ಎಂಬುದಾಗಿ ಹೇಳಿ, ಅಮರೇಂದ್ರಜಿತು-ಇಂದ್ರಜಿತ್ತು, (೪) ಅರಮನೆಯ-ರಾಜಗೃಹದ ದೆಸೆ ಯಿಂದ, ಹೊರವಂಟನು-ಹೊರಟನು.

ವ್ಯಾಕರಣ — (೧) ಹಗೆಯ + ಕಲಹ (ಷ. ತ) ಅರಿಸಮಾಸ (೪ ಅರಸಿನ + ಮನೆ=ಅರಮನೆ (ಕ. ಷ ತ) ಅರಸು ಎಂಬುವರ ಸುಕಾರಕ್ಕೆ ಲೋಪ. ಪಂಚಮ್ಯರ್ಥದಲ್ಲಿ ಷಷ್ಠಿ, (೨) ಇಂದು ಎಂಬುದು ಸಪ್ತ ಮ್ಯಂತವು. (೩) ಹುಲ್ಲಿನಂತಿರುವ ಕಪಿ (ಉ. ಪೂ ಅರಿಸ

೬ (ಮುಖ್ಯ ಪದ್ಯ): —ಅವರು-ಪ್ರಸಿದ್ಧರಾದ, ಅಕ್ಷಕನ-ಅಕ್ಷಕು ಮಾರನ, ಬಳಿಯ-ಸಮೀಪದ; ಒಡನಾಡಿಗಳು-ಸಹಚಾರಿಗಳಾದ, ಜೋಡಿ ಗರು-ಕವಚಧಾರಿಗಳಾದ ಅಥವಾ ಜತೆಗೂಡಿದವರಾದ (ಜೋಡಿಗರು-ಯು

ದ್ಧಕಾಲವಲ್ಲಿ ಸ್ಪೈರ್ಪೋಟಿ ಮಾಡುವವರಾದ), ಜೀವಾಳಜೋಕೆಂಬ-ನಮ್ಮ ಮರ್ಮರಕ್ಷಣೆಯಲ್ಲಿ ಎಚ್ಚರಿಕೆಯಿಂದ ಕೂಡಿದ (೧) ಗಾಡಿಕಾರರು-ಶೀವಿಯುಳ್ಳವರಾದ, ಗಂಡಿಗರು-ಪೌರುಷವುಳ್ಳವರಾದ (ಅಥವಾ ದಟ್ಟತನವುಳ್ಳವರಾದ), ರಣಖೇಡರು=ರಣ-ಯುದ್ಧದಲ್ಲಿ, ಖೇಡರು-ಧೂರ್ತರಾದ, ಅಗ್ಗದ-ಅಧಿಕವಾದ, ಹೊಂತಕಾರಿಗಳು-ಗರ್ವದ ಕೆಲಸಗಳನ್ನು ಮಾಡುವವರಾದ, (೨) ದೇವಾಂತಕ ಪ್ರಮುಖಾದಿ ಭಟರುಗಳು=ದೇವಾಂತಕ ದೇವಾಂತಕನು, ಪ್ರಮುಖ-ಪ್ರಮುಖನು,ಆದಿ-ಮೊದಲಾಗುಳ್ಳ (ಅಥವಾ ದೇವಾಂತಕ ಪ್ರಮುಖ-ಮುಖ್ಯನಾದ ದೇವಾಂತಕನು ಆದಿ ಮೊದಲಾಗುಳ್ಳ), ಭಟರುಗಳು-ಯುದ್ಧಗಾರರ ಗುಂಪು, ಜಂಬುಮಾಲಿಯು-ಹನುಮಂತನಿಂದ ಕೊಲ್ಲಲ್ಪಟ್ಟ ಜಂಬುಮಾಲಿಯೆಂಬ ಪ್ರಹಸ್ತಪುತ್ರನನ್ನು, ಕೂಡಲು-ಸೇರುವುದಕ್ಕೋಸ್ಕರ (ಸೇರುವುದಕ್ಕೋಸ್ಕರವೋ ! ಎಂಬಹಾಗೆ), ಆಕ್ಷಣ ತತ್‌ಕ್ಷಣವೇ, (೩) ಒಂದು ನಿಮಿಷದಲಿ-ಒಂದು ನಿಮಿಷಮಾತ್ರದಲ್ಲಿ (೪) ಕೂಡಿತು-ಸೇರಿತು (ದೇವಾಂತಕ ಪ್ರಮುಖಾದಿ ಭಟರುಗಳು ಜಂಬುಮಾಲಿಯಂತೆ ಹನುಮಂತನಿಂದ ಸಾಯುವುದಕ್ಕೋಸ್ಕರ ಆ ಕ್ಷಣವೇ ಅಂದರೆ ಒಂದು ನಿಮಿಷದಲ್ಲಿ ಗುಂಪಾಗಿ ಸೇರಿದರು)

ಭಾವಾರ್ಥ—ಕೂಡಲೆ ತಾಕ್ಷಣ ಜಂಭುಮಾಲಿಯು ಕೂಡಲು ಜಂಬುಮಾಲಿಯಂತೆ ಸಾಯಲು ಆ ಕ್ಷಣವೇ ಕೂಡಿತು.

ವ್ಯಾಕರಣ—(೧)ಇದರಲ್ಲಿ ವ್ಯವಹರಿಸುವವನು ಎಂಬ ಅರ್ಥದಲ್ಲಿ ಗಾಡಿ ಎಂಬ ಶಬ್ದದ ಮೇಲೆ ಕಾರ, ಎಂಬ ಪ್ರತ್ಯಯ (ತದ್ಧಿತಾಂತ (೨) ದೇವಾಂತಕ ಪ್ರಮುಖರು-(ದ್ವಂದ್ವ) ಅಥವಾ ಏ ತ್ರ! ಪ್ರಮುಖಾದಿಗಳು,(ಬ್ಯ. ಬ. ವ್ರೀ) ಆದಿಗಳಾದ ಭಟರುಗಳು (ಷ. ಪೂ. (೩) ದ್ವಿಗು) ಪಟ್ಟವೀ ಸಾಕ್ಯಗಳಲ್ಲಿ ಪುಂಸ್ತ್ರೀಲಿಂಗ ಬಹುವಚನ ಕರ್ತೃಪದವಿದ್ದಾಗ್ಯೂ ಅವಕ್ಕೆ ಸಮುದಾಯಾರ್ಥವನ್ನು ಇಟ್ಟುಕೊಂಡು ಕ್ರಿಯಾಪದವನ್ನು ನಪುಂಸಕ ಲಿಂಗೈಕ ವಚನದಲ್ಲಿ ಪ್ರಯೋಗಿಸುವ ವಾಡಿಕೆಯುಂಟು.

೭. ಸುರೇಂದ್ರಜಿತು-ಇಂದ್ರಜಿತ್ತು, ವೀರಭಟರ ಶೂರರಾದ ಯೋಧರ, ಅಬ್ಬರಣೆ-ಆರ್ಭಟದ, ನಿಗುರುವ - ಮುಂದುವರಿಯುತ್ತಿರುವ, ತೇರ ರಥಗಳ, ಚೀತ್ಕೃತಿ-ಚೀಯ್ ಎಂಬ ಶಬ್ದದ, ಗಜದ-ಆನೆಗಳ, ಬೃಂಹಿತ-ಕೂಗುವಿಕೆಯು, ವಾರುವಂಗಳ-ಕುದುರೆಗಳ, (೧) ಹೇಷಿತಧ್ವನಿ-ಕೆನೆಯುವಿಕೆಯ ಶಬ್ದದ, ಹರಿಗೆಗಳ-ನೀಳವಾದ ಕತ್ತಿಗಳ, ಝಡಪು-ಝಳಪಿಸುವಿಕೆಯ ಶಬ್ದದ, ಭೇರಿಶಂಖ... ರವದ=ಭೇರಿ=ನಗಾರಿಯು, ಶಂಖ-ಶಂಕುವು, ಮೃದಂಗ-ಮದ್ದಳೆಯು, ದಣಕಹಳಾ-ಯುದ್ಧದ ಕಾ

ಳೆಯು ಇವುಗಳ, ರವದ-ಶಬ್ದದ, ರಭಸದಲಿ ವೇಗದಿಂದ (೨) ಮೇಲ್ವಗದ-ಊರ್ಧ್ವಲೋಕಗಳ (ಮೇಲ್ಗಡೆಯಿರುವ ಆರುಲೋಕಗಳ). ಓರಣಿಗೆ-ಶ್ರೇಣಿಯು, ಪೈಸರಿಸೆ-ಜರುಗಿಬೀಳಲು (ಎಂದು ಅತಿಶಯೋಕ್ತಿ) ನಡೆತಂದನು-ಬಂದನು (ವೀರಭಟರ ಆರ್ಭಟವು ರಥದ ಚೀತ್ಕಾರವು ಮೊದಲಾದ ಶಬ್ದಗಳ ವೇಗದಿಂದ ಭೂಲೋಕದಮೇಲ್ಗಡೆಯಿರುವ ಆರು ಲೋಕಗಳೂ ಜರುಗಿಬೀಳುವಷ್ಟುಮಟ್ಟಿಗೆ ಆಗಲು ಇಂದ್ರಜಿತ್ತು ಬಂದನು)

ವ್ಯಾಕರಣ:—(೧) ಹೇಷಿತವೆಂಬ + ಧ್ವನಿ (ಸಂ. ಪೂ) (೨) ಮೇಲ ಜಗಂ (ಕ. ಷ. ತ)

ಟಿಪ್ಪಣಿ:—ಭೂಲೋಕದ ಮೇಲ್ಗಡೆಯಲ್ಲಿ ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ ಎಂಬ ಆರು ಲೋಕಗಳು ಒಂದರಮೇಲೊಂದು ಸಾಲಾಗಿವೆ.

೮. (೧) (ಮುಖ್ಯಪದ್ಯ),— ಆ ಬಲಜಲಧಿ=ಆ, ಬಲಜಲಧಿ-ಇಂದ್ರಜಿತ್ತುವಿನ ಸಮುದ್ರದಂತಿರುವ ಸೈನ್ಯ (ಅಪಾರವಾದ ಸೈನ್ಯವು), ವಡಬಾಗ್ನಿ-ಬಡಬಾಗ್ನಿಯನ್ನು, ಮುತ್ತುವ-ಆವರಿಸುವ, ಅಂಬುಧಿಯಂತೆ-ಸಮುದ್ರದಹಾಗೆ + ಹನುಮಂತನನ್ನು, ಮುತ್ತಿತು-ಆವರಿಸಿಕೊಂಡಿತು: ಬಳಿಕ-ಅನಂತರದಲ್ಲಿ, ಹರಿಸುತಂ- ವಾಯುಪುತ್ರನಾದ ಹನುಮಂತನು, ಹತ್ತಿರಕೆ-ಸಮೀಪಕ್ಕೆ, ಹೊಗಗುಡದ-ಪ್ರವೇಶಮಾಡಗೊಡದ (ಪ್ರವೇಶಿಸಲಸಾಧ್ಯವಾದ), ಶೌರ್ಯದ ಪರಾಕ್ರಮವೆಂಬ, ಸತ್ತಿಗೆಯ-ಛತ್ರಿಯ (ಕೊಡೆಯ), ನೆಳಲಿನಲಿ-ನೆರಳಿನಲ್ಲಿ (೨) ಸಮರೋನ್ಮತ್ತ=ಸಮರ-ಯುದ್ಧದಲ್ಲಿ, ಉನ್ಮತ್ತ-ಬಲುಕೊಬ್ಬುಹೊಂದಿದವನಾಗಿ, ರೋಷಾವೇಶದ- ಕೋಪಾಕ್ರಮಣದಿಂದ ಕೂಡಿ, ರಿಪುಬಲವ-ಶತ್ರುಸೈನ್ಯವನ್ನು, ಲೆಕ್ಕಿಸದೆ-ಲಕ್ಷ್ಯಮಾಡದೆ, ಅಂಜಿಕೆಯ-ಭಯದ, ಆ ಹತ್ತುಗೆಯ-ಆ ಸಂಬಂಧದ, ಹವಣಿನಲಿ-ರೀತಿಯಿಂದ, ಇರ್ದಂ-ಇದ್ದನು.

ತಾತ್ಪರ್ಯ:— ಸಮುದ್ರದಂತೆ ಅಪಾರವಾದ ಇಂದ್ರಜಿತ್ಸೈನ್ಯವು ಸಮುದ್ರವು ತನ್ನನ್ನು ಹೀರುವ ಬಡಬಾಗ್ನಿಯನ್ನು ಆವರಿಸುವಂತೆ ತನ್ನನ್ನು ಕೊಲ್ಲುವ ಹನುಮಂತನನ್ನು ಮುತ್ತಿತು. ಬಳಿಕ ಹನುಮನು ತನ್ನ ಹತ್ತಿರಕ್ಕೆ ಯಾರೂ [illegible]ಗುವುದಕ್ಕೆ ಆಗದಂತಹ ತೀಕ್ಷ್ಣ ಶೌರ್ಯದ ಮೂಲಕವಾಗಿ ಯುದ್ಧದಲ್ಲಿ ಕೊಬ್ಬೇರಿ ರೋಷಾವೇಶದಿಂದ ಕೂಡಿ ಶತ್ರುಸೈನ್ಯವನ್ನು ಲಕ್ಷ್ಯಮಾಡದೆ ಇರತಕ್ಕವನಾದಾಗ್ಯೂ, ಆ ಶತ್ರುಸೈನ್ಯವನ್ನು ಕಂಡು ಹೆದರಿದವನಂತೆ ತೋರ್ಪಡಿಸಿಕೊಳ್ಳುತ್ತಿದ್ದನು.

ಭಾವಾರ್ಥ:—ಹತ್ತಿರಕೆ ಹೊಗಗೊಡದ ಶೌರ್ಯದ ಸತ್ತಿಗೆಯ ನೆಳ

ಲಿನಲಿ ಸಮರೋನ್ಮತ್ತ-ಯಾರೂ ಹತ್ತಿರಕ್ಕೆ ಸುಳಿಯದಂತಹ ತೀಕ್ಷ್ಣವಾದ ಶೌರ್ಯವನ್ನು ಹೊಂದಿರುವುದರಿಂದ ಯುದ್ಧದಲ್ಲಿ ಕೊಬ್ಬೇರಿ ಕುಣಿಯುವನು.

ವ್ಯಾಕರಣ—(೧) ಜಲಧಿಯಂತಿರುವ ಬಲಂ=ಬಲಜಲಧಿ (ಉ. ತ.) ಅದು ಬಲಜಲಧಿ (ಗ) (೨) ಷ. ತ.

ವಿ॥ ಉಪಮಾನ-ವಡಬನ ಮುತ್ತ್ಸಂಬುಧಿಯಂತೆ (ಸಮುದ್ರವು ಬಡಬನ ಮುತ್ತುವಂತೆ) ಉಪಮೇಯ,-ಆ ಬಲಜಲಧಿ ಹನುಮನನು ಮುತ್ತಿತು. ಮುತ್ತು-ಇದು ಧಾತುವಾದರೆ ಆವರಿಸು ಎಂದರ್ಥ ವಾಚಕವಾದರೆ ಮುತ್ತಿನ ಮಣಿ.

ಟಿಪ್ಪಣಿ:-- ಸಮುದ್ರದೊಳಗೆ, ಬಡಬೆಯು (ಹೆಣ್ಣು ಕುದುರೆಯು) ಬಾಯಿಯಲ್ಲಿ ಬೆಂಕಿಯುರಿಯುತ್ತ ಇದೆ. ಇದು ಸಮುದ್ರದ ನೀರನ್ನು ಹೆಚ್ಚದಂತೆ ಹೀರುವುದು. ಇದೇ ಬಡಬಾಗ್ನಿ.

೯. ಝುಳಪಿಸುವ-ಅಳ್ಳಾಡಿಸುತ್ತಿರುವ, ಕೈದುಗಳ-ಆಯುಧಗಳ ಹೊಳಹಿನ-ಥಳಥಳಿಸುವಿಕೆಯು, ಬೆಳಗು-ಕಾಂತಿಯು, ಬೆರಸಿತು-ಹನುಮನನ್ನು ಸಂಬಂಧಿಸಿತು (ವ್ಯಾಪಿಸಿತು), (೧) ಬರಿಯ ಬೊಬ್ಬೆಯ-ತಾನೇ ತಾನಾದ ಗರ್ಜನೆಯು, ಕಳವಳಿಕೆ ಮಹಾಶಬ್ದವು, ಆಹವದ-ಯುದ್ಧದ, (೨) ಕಡುಗಲಿಯಂ-ಮಹಾ ಶೂರನಾದ ಹನುಮನನ್ನು (೩) ಕಲಿಯೆರಿಸಿತು-ಶೌರ್ಯಹತ್ತಿಸಿತು, ಮೊಳಗುವ ಧ್ವನಿಮಾಡುತ್ತಿವ, ಅಭಿನವವಾದ್ಯರವ= ಭಿನವ-ಹೊಸದಾದ, ವಾದ್ಯ-ವಾದ್ಯಗಳ, ರವ-ಶಬ್ದವು, + ಹನುಮನಿಗೆ, ಹೆಕ್ಕಳವ-ಉತ್ಸಾಹವನ್ನು, ಹುಟ್ಟಿಸಿತು-ಉಂಟುಮಾಡಿತು. ಅಧಿಕಚಾಪಳಚಲಿಗಳು=ಅಧಿಕಚಾಪಳ-ಬಹು ಚಂಚಲರಾದ, ಚಲಿಗಳು-ಹಠವಂತರು, (ಕಲಿಗಳು-ಶೂರರು) ಔಕುವ-ಒತ್ತಿಬರುವ, ರಭಸಂ-ವೇಗವು, ಹನುಮನನ್ನು, ಅಧಿಕರೋಷದಲಿ-ಮಹಾ ಕೋಪದಿಂದ, ಉಬ್ಬಿಸಿತು ಹೆಚ್ಚಿಸಿತು.

ವ್ಯಾಕರಣ—ಬರಿದು + ಬೊಬ್ಬೆ= ಬರಿಯಬೊಬ್ಬೆ (ಕ. ವಿ. ಪೂ.) (೨) ಕಡಿಯ + ಕಲಿ (ಕ. ವಿ. ಪೂ.) (೩) ಕಲಿಯಂ + ಎರಿಸಿತು (ಕ್ರಿ)

ವಿ॥ ಕಲಿ-ಧಾತುವಾದರೆ ಅಭ್ಯಾಸಿಸು; ನಾಮವಾದರೆ ಶೂರ.

ತಿದ್ದುಪಡಿಕೆ:—ಚಾಪಳ ಕಲಿಗಳೌಕುವರಭಸ ಎಂದಿದ್ದರೆ ಚೆನ್ನಾಗುತ್ತೆ.

೧೦ ಕೋಡಗ-ಕೋತಿಯು, ಎಲ್ಲಿ ಯಾವ ಕಡೆ ಇದೆ ? ಬನವನು ಅಶೋಕವನವನ್ನು, ಉರೆ-ಬಹಳವಾಗಿ, ಪುಡಿಹುಲ್ಲುಮಾಡಿದ-ಪುಡಿಯಾದ ತೃಣವನ್ನಾಗಿಮಾಡಿದ (ಹುಲ್ಲನ್ನು ಪುಡಿಮಾಡುವಂತೆ ಪುಡಿಮಾಡಿ

ದ), (೧) ಮರ್ಕಟೌಘಮುಂ-ನೀಚಕಪಿಯು, ಎಲ್ಲಿ? ರಾಜಕುಮಾರಕರಂ-ರಾಜಪುತ್ರರನ್ನು, ಉನ್ಮತ್ತಮಾರ್ಗದಲಿ-ಹುಚ್ಚನ ರೀತಿಯಿಂದ ಕೂಡಿ. ಕೊಲ್ಲು ಗೊನೆಯುಲಿ-ಕೊಲೆಯ ಉತ್ಸಾಹದಿಂದ, ಕೊಂದ ಸಂಹರಿಸಿದ, ವಾನರಂ-ಕಪಿಯು, ಎಲ್ಲಿ? ಎನುತ-ಎಂಬುದಾಗಿ, ಇಂದ್ರಜಿತು-ಇಂದ್ರಜಿತ್ತು, ಉರವಣಿಸುತ-ರೇಗಿ ಮಾತಾಡುತ್ತ, ಹನುಮನ-ಹನುಮಂತನ, ಹೊರಗೆ-ಸಮೀಪಕ್ಕೆ, ರಥವ-ತನ್ನ ತೇರನ್ನು, ಹೊಗಿಸಿದನು-ನುಗಿಸಿದನು.

ವ್ಯಾಕರಣ;— (೧) ಅಧಮನಾದ ಮರ್ಕಟಂ (ವಿ. ತ್ರ)

ವಿ॥ ಹೊರೆ-ಇದು ಧಾತುವಾದರೆ ಕಾಪಾಡು. ನಾಮವಾದರೆ ಸಮೀಪ

ತಿದ್ದುಪಡಿ;-ಕೋಲುಗೊನೆಯುಲಿ, ಎಂದು ಮೂಲದಲ್ಲಿದೆ. ಈ ಪದ್ಯದ ದು ಪಾದಗಳಲ್ಲಿ ಪ್ರಾಸಸ್ಥಾನಗಳಲ್ಲಿ ಲಕಾರಸಂಯುಕ್ತಾಕ್ಷರವಿದೆ. ೪ನೆ ರು ಪಾದದ ಪ್ರಾಸಸ್ಥಾನದಲ್ಲಿ ಸಂಯುಕ್ತ ಲಕಾರವಿಲ್ಲ. ಕವಿಯು ಹೀಗೆ ಂದಿಗೂ ಪ್ರಯೋಗಿಸಿಲ್ಲ. ಆದುದರಿಂದ ‘ ಕೊಲ್ಲುಗೊನೆಯುಲಿ ’ ಎಂದು ತಿದ್ದಬಹುದು.

೧೧. ಒಡನೆ-ಕೂಡಲೆ, ತೋಕುವ ಬೀರುವ, ಅಂಬಿನ-ಬಾಣವುಳ್ಳ, ಒಡೆವ-ಅಡ್ಡಿಮಾಡುವ, ಶೂಲದ-ಶೂಲಾಯುಧವುಳ್ಳ (೧) ಹೊಯ್ಲು-ಹೊಡೆಯುವಿಕೆಯಿಂದ ಕೂಡಿದ (ಹೊಡೆಯುವ), ಖಡ್ಗದ-ಕತ್ತಿಯುಳ್ಳ, (೨) ಬಿಡುವ ಚಕ್ರದ=ಬಿಡುವ ಎಸೆಯುವ, ಚಕ್ರದ ಚಕ್ರಾಯುಧವುಳ್ಳ, (೩) ಬೀಸುಗವಣೆಯ-ಬೀಸಿ ಪ್ರಯೋಗಿಸುವ ಕವಣೆ ಕಲ್ಲುಳ್ಳ, ಬಹಳ ಭಟನಿಕರ=ಬಹಳ-ಅಧಿಕವಾದ, ಭಟ-ಯೋಧರ, ನಿಕರ-ಸಮೂಹವು, ನೂಕಿತು-ಮುಂದಕ್ಕೆ ಬಂದಿತು; ಸಿಡಿಲು-ಸಿಡುಗು, ತೂಳುವ-ಮುಂದು ಹರಿಯುತ್ತಿರುವ, ಅದ್ರಿಗೆ-ಪರ್ವತದಲ್ಲಿ (ಪರ್ವತದೊಡನೆ), ಸಮರಕೆ-ಯುದ್ಧಕ್ಕೋಸ್ಕರ, ಸಂವರಿಸಿಕೊಂಬಂತೆ-ಸನ್ನಾಹಮಾಡಿಕೊಳ್ಳುವ ಹಾಗೆ, ಕಲಿ ಹನುಮ-ಶೂರನಾದ ಹನುಮಂತನು, ಆ ತೋರಣದ ಆ ಹೆಬ್ಬಾಗಿಲಿನ, (೪) ತುದಿಗಡೆಯುಲಿ-ಮೇಲ್ಗಡೆಯಲ್ಲಿ (ಕೊನೆಯಭಾಗದಲ್ಲಿ) + ಮುಂದೆ ನುಗ್ಗುವ ಭಟಸಮೂಹದೊಡನೆ ಯುದ್ಧಕ್ಕೋಸ್ಕರ, ಸಿಡಿಮಿಡುಕದೆ-ಅಲ್ಲಾಡದೆ, (ಅಲ್ಲಾಡದೆ ಇರುವ ರೀತಿಯಾದ ಸನ್ನಾಹವನ್ನು ಮಾಡಿಕೊಂಡು), ಇರ್ದನು ಇದ್ದನು

ವ್ಯಾಕರಣ;— (೧) ಹೊಯ್‌ + ಲು, ಹೊಯ್‌ ಧಾತುವಿನ ಮೇಲೆ ಭಾವಾರ್ಥದಲ್ಲಿ ಲು ಪ್ರತ್ಯಯವು (ಭಾವಕೃದಂತ) (೨) ಬಿಡುವುದು + ಚಕ್ರಂ (ಗ) (೩) ಬೀಸುವುದು ಕವಣೆ (ಗ) (೪) ತುದಿಯು + ಕಡೆ (ಕ. ಷ. ತ

ವಿ॥ ಉಪಮಾನ,— ತೂಳುವದ್ರಿಗೆ ಸಿಡಿಲು ಸಮರಕೆ ಸಂವರಿಸಿ

ಕೊಂಬಂತೆ. ಉಪಮೇಯ,—ಕಲಿಹನುಮ ಮುಂದನುಗ್ಗುವ ಭಟನಿಕರ ದೊಡನೆ ಯುದ್ಧಕ್ಕೆ ತೋರಣದ ತುದಿಗಡೆಯಲ್ಲಿ ಸಿಡಿಮಿಡುಕಿದ ಇರ್ದನು

ವಿ|| ಅಂಬು ಕನ್ನಡವಾದರೆ ಬಾಣ. ಸಂಸ್ಕೃತವಾದರೆ ನೀರು

ತಿದ್ದುವಿಕೆ:—'ಬೇಸುಗೆಣೆಯಲಿ' ಎಂದು ಮೂಲದಲ್ಲಿದೆ. 'ತೋರುವಂಬಿನ' ಎಂದು ಹಿಂದೆ ಪ್ರಯೋಗವಿರುವುದರಿಂದ ದ್ವಿರುಕ್ತಿಯಾಗುತ್ತದೆ. 'ಬೇಸುಗೆಪಣೆಯು' ಎಂದು ತಿದ್ದಬಹುದು.

೧೨. ಕಲಿಹನುಮ-ಶೂರಹನುಮಂತನು, ಭರದ-ಹೆಚ್ಚಿಗೆಯುಳ್ಳ(ಅಧಿಕವಾದ, (೧) ಬೇಸಗೆಕಾಲದ ಬೇಸಗೆಯ ಸಮಯದ, (೨) ಒಣಗಿಲುಮರನ ಒಣಗಿಹೋದ ವೃಕ್ಷಗಳುಳ್ಳ, ವಿಪಿನದೊಳು-ಕಾಡಿನಲ್ಲಿ, ಇದ್ದ-ಇರುವ, ವೈಶ್ವಾನರನವೋಲು-ಅಗ್ನಿಯಹಾಗೆ, ಬಲುಕೋಪದಲಿ-ಮಹಾರೋಷದಿಂದ, ಕಿಡಿಕಿಡಿಯಾಗಿ-ಬಹಳ ಬೆಂಕಿ ಜೋರಾಗಿ (ರೇಗಿ), [ಅಗ್ನಿಯು ಬಲು ಬೇಸಗೆಯಲ್ಲಿ ಒಣಗಿದ ಮರಗಳುಳ್ಳ ಕಾಡಿನಲ್ಲಿ ಕಿಡಿಕಿಡಿಯಾಗುವಂತೆ ಕಲಿಹನುಮನು ಕೋಪದಿಂದ ಕಿಡಿಕಿಡಿಯಾಗಿ], ಧರೆಗೆ-ಭೂಮಿಗೆ, ದುಮ್ಮಿಕ್ಕಿದನು-ಹಾರಿದನು; ಗಿರಿಯ-ಪರ್ವತದ, ಸಾರದ-ಬಲದಂತೆ ಬಲವುಳ್ಳ, ತೋರಹತ್ತರ-ಮಹಾಸಾಮರ್ಥ್ಯವಂತರಾದ ಜಟರನ್ನು, ಭರದ ಅತಿಶಯವುಳ್ಳ, ಭಾರದ, ತೂಕದ-ತೂಗುವಿಕೆಯುಳ್ಳ, (ಅದಂರೆ ಬಹಳ ಭಾರದ ಪ್ರಮಾಣವುಳ್ಳ), ಉಕ್ಕಿನ-ಉಕ್ಕಿನಿಂದ ಮಾಡಿದ ಲಾಳವಿಂಡಿಗೆಯಿಂ-ಲಾಳಮುಂಡಿಗೆಯೆಂಬಾಯುಧದಿಂದ. ಕೊಂದನು-ಸಂಹರಿಸಿದನು ಹನುಮನು ಕೆಳಗೆ ದುಮುಕಿ ಮಹಾವೀರರಾಕ್ಷಸಜಟರನ್ನು ಬಹು ಭಾರವಾದ ಉಕ್ಕಿನ ಲಾಳಮುಂಡಿಗಯಿಂದ ಬಡಿದು ಕೊಂದನು.

ವ್ಯಾ||-ಬೇಸಗೆಯೆಂಬಕಾಲಂ (ಸಂ. ಪೂ) ಅರಿ. ಸ (೨) ಒಣಗು ಧಾತುವಿನ ಮೇಲೆ ಭಾವಾರ್ಥದಲ್ಲಿ ಇಲು ಪ್ರತ್ಯಯವು ಬಂದು ಒಣಗು + ಇಲು=ಒಣಗಿಲು ಎಂದಾಯಿತು. ಒಣಗಿಲಿಂದಕೂಡಿದಮರಂ (ಕ ಮ.ಲು)

ವಿ|| ಉಕ್ಕು-ಧಾತುವಾದರೆ ಉಬ್ಬು, ನಾಮವಾದರೆ ಕಬ್ಬಿಣದವಿಕಾರ, ಉಪಮಾನ:—ಭರದ ಬೇಸಗೆ ಕಾಲದೊಣಗಿಲು ವೈಶ್ವಾನರನವೊಲು, ಉಪಮೇಯ-ಬಲುಕೋಪದಲಿ ಕಿಡಿಕಿಡಿಯಾಗಿ ಕಲಿಹನುಮ.

೧೩. ಆ ಸಮಯದಲಿ-ಆಕಾಲದಲ್ಲಿ, ಸುಂಡಿಲಸೇರ್ಕುಗಳ-ಸೊಂಡಿಲುಗಳಲ್ಲಿ ಸೇರಿಸುವಿಕೆಗಳಿಂದ ಕೂಡಿದ (ಸೊಂಡಿಲುಗಳಲ್ಲಿ ಸೇರಿಸಿರುವ), ಖಂಡೆಯದ-ಕತ್ತಿಯುಳ್ಳ (೧) ಗಜದಳ-ಆನೆಗಳ ಸೈನ್ಯವು, ಹೊಕ್ಕುದು-ನುಗ್ಗಿತು! ರಣರಥ ರಾಜಿ=ರಣರಥ-ಯುದ್ಧದತೇರುಗಳ, ರಾಜಿ-ಸಮೂಹವು, ಇಳೆ-ಭೂಮಿಯು, ಬಿಕ್ಕಲು-ಉಬ್ಬಸಪಡುವಹಾಗೆ (ರಥಗಳ ಭಾರವನ್ನು ತಡೆಯಲಾರದೆ ಉಬ್ಬಸಗೊಳ್ಳುವಂತೆ), ಜರಿಸಿದುದು- ಸಂಘಟಿಸಿತು; ಅವು

ಡಿಗಳ-ಈಟಿಕೋಲುಗಳ್ಳ, ಕಕ್ಕಸರು-ಕ್ರೂರರಾದ ಕುದುರೆಸವಾರರು, ಹಯುಗಳ-ಕುದುರೆಗಳನ್ನು, ದಕ್ಕಡೆಯು-ಚೆಲ್ಲಾಟದ, ದುವ್ವಾಳಿಯಲಿ ಓಟ ದಿಂದ, (ಸವಾರಿಯಿಂದ), ನೂಕಿದರು-ಮುಂದೆ ನುಗ್ಗಿಸಿದರು; (೨) ಕಾಲಾಳು-ಪಾದಚಾರಿ ಭಟರಸೈನ್ಯವು, ಕೈದುಗಳು-ಆಯುಧಗಳು, ಖಳಪಳಎನಲು-ಖಣಖಣ ಎಂದು ಶಬ್ದ ಮಾಡುವಂತೆ, + ಆ ಆಯುಧಗಳನ್ನು ಕೈಯಿಕ್ಕಿದುದು-ಝಳಪಿಸಿತು

ವ್ಯಾ॥ (೧) ಗಜಗಳದಳಂ ಷ. ತ) ಅರಿಸ (೨) ಕಾಲಿಂದ ನಡೆಯುವ ಆಳು (ಕ. ಮ. ಲು) (೩) ಖಳಪಳ-ಅನುಕರಣಾವ್ಯಯ

ವಿ॥ ದಳ-ಇದು-ಸಂಸ್ಕೃತವಾದರೆ ಎಸಳು (ಎಲೆ), ಕನ್ನಡವಾದರೆ ಸೈನ್ಯ

೧೪ (ಮುಖ್ಯಪದ್ಯ);—ವೀರ-ಶೂರನಾದ ಕುಶನೇ! (ಅಥವಾ ಲವನೇ!), ಏನಂ-ಏನನ್ನು, ಹೇಳುವುದು-ಹೇಳತಕ್ಕದ್ದು, (ಏನುಹೇಳಲಿ?) ಪೂರ್ವದಲಿ-ಹಿಂದಕ್ಕೆ, ನಾನಾಯುಗಂಗಳಲಿ-ಅನೇಕಯುಗಗಳಲ್ಲಿ, ಅಸುರಾರಿ ಅಲ್ಲದೆ-ನಾರಾಯಣನು ಹೊರತಾಗಿ, ಅಸುರರೊಳು ರಾಕ್ಷಸರೊಡನೆ, (೧) ಸೆಣಸಿದು-ಯುದ್ಧಮಾಡಿ, ಬದುಕಿದವರು-ಜೀವಿಸಿಕೊಂಡವರು, ಆರು ಇನ್ನು ಯಾರಿದ್ದಾರೆ? ಆ ರಮಾಧೀಶನ-ಅಂತಹ ನಾರಾಯಣನ, ಸಮಾನಕೆ-ಸಾಮ್ಯಕ್ಕೆ (ಹೋಲಿಕೆಗೆ), ಅನಿಲಜನ-ಹನುಮಂತನನ್ನು, ಸೇರಿಸಲು ಬಹುದು-ಸಂಬಂಧಿಸಬಹುದು; + ಅನಿಲಜನ ಆ ಹನುಮಂತನ, ಕೈವಾರದ-ಸಾಮರ್ಥ್ಯದ, ಅಂಗ-ರೀತಿಯಿಂದ ಆದ, ಕೊಲೆಯು-ರಾಕ್ಷಸಸಂಹಾರದ, ಕವತೆಯು-ಸಂಗತಿಯನ್ನು, ನೀಂ ನೀನು, ಕೇಳು + ಎಂದು ವಾಲ್ಮೀಕಿಯು, ಎಂದ-ಹೇಳಿದನು.

ತಾತ್ಪರ್ಯ;—ವೀರಕುಶನೇ! ಏನು ಹೇಳಲಿ? ಪೂರ್ವದಲ್ಲಿ ನಾನಾಯುಗಗಳೊಳಗೆ ನಾರಾಯಣನೊಬ್ಬನು ಹೊರತಾಗಿ ಮತ್ತೆ ಯಾರೂ ರಾಕ್ಷಸರೊಡನೆ ಯುದ್ಧಮಾಡಿ ಜಯಿಸಿ ಬದುಕಲಿಲ್ಲ. ಹನುಮಂತನು ರಾಕ್ಷಸರೊಡನೆ ಕಾದಿ ಗೆದ್ದು ಬದುಕಿದುದರಿಂದ ಅಂತಹ ನಾರಾಯಣನಿಗೆ ಈ ಹನುಮನು ಸಮಾನನೆಂದು ಹೇಳಬಹುದು ಅಂತಹ ಹನುಮನು ತನ್ನ ಸಾಮರ್ಥ್ಯ ವಿಶೇಷದಿಂದ ರಾಕ್ಷಸರನ್ನು ಕೊಂದ ಸಂಗತಿಯನ್ನು ನೀನು ಕೇಳು, ಎಂದು ವಾಲ್ಮೀಕಿ ಹೇಳಿದನು.

ವ್ಯಾ॥ ಸೆಣಸು + ಇ = ಸೆಣಸಿ, ಎಂದಾಗಬೇಕು. ಉಕಾರಾಂತ ಧಾತುವಿಗೆ ಭೂತಕ್ರಿಯಾನ್ಯೂನಕ್ರಿಯಾಪ್ರತ್ಯಯವಾದ ಇ ಎಂಬುದು ಪರವಾದಾಗ ಕೆಲವು ಕಡೆ ಇದಾಗನುವು ಬರುವುದುಂಟು ಷಟ್ಪದೀ ಕಾವ್ಯದಲ್ಲಿ ಹೀಗೆ ನೋಡಿಕೆ.

ತಿದ್ದುವಿಕೆ-'ಒದುಕಿದವರು ಸುರಾರಿಯಲ್ಲದೆ' ಎಂದು ಮೂಲದಲ್ಲಿದೆ. ಆ ರಮಾಧೀಶನ ಎಂದು ಮುಂದಿರುವುದರಿಂದ 'ಬದುಕಿದವರಸುರಾರಿಯಲ್ಲದೆ' ಎಂದು ತಿದ್ದಬಹುದು.

೧೫. ಹನುಮಂತ-ಆಂಜನೇಯನು, ಕಪಿಪ-ಮುತ್ತುವ, ಕುಂತದ-ಈಟಿಕೋಲುಳ್ಳ, ಬಟ್ಟೆಯದ-ಗುರಾಣಿಯುಳ್ಳ, ಪರಿಘದ-ಲಾಳಮುಂಡಿಗೆಯುಳ್ಳ, ಪದಾತಿಯ-ಕಾಲಾಳುಗಳ, ಥಟ್ಟಂ-ಸೈನ್ಯವನ್ನು, ಅಟ್ಟಿ-ಓಡಿಸಿ, ಸದೆದನು-ಬಡಿದನು, ಒಳಹೊಗುವ-ಮೇಲೆನುಗ್ಗುವ, (೧) ಆನೆ ಕುದುರೆಯ-ಗಜಾಶ್ವಗಳ, ತೇರ-ರಥಗಳ, ತಿಂಥಿಣಿಯ-ಸಮೂಹದ. ಥಟ್ಟ-ಸೈನವನ್ನು, (೨) ಕೆಡಹುವಂ-ಬೀಳಿಸಿದನು; ಇದಿರಲ-ಮುಂದ ಒದಗುವ-ತಾಗುವ, ಗಟ್ಟಿಯರ-ಸಮರ್ಥರನ್ನೂ, ಗರ್ವಿತರ-ಕೊಬ್ಬಿದವರನ್ನೂ, ಅರೆನಿಮಿಷದಲಿ-ಅರ್ಧನಿಮಿಷಮಾತ್ರದಲ್ಲಿ, ಗಗನದ-ಅಂತರಿಕ್ಷದ, ಬಟ್ಟೆಗಳಂ-ಮಾರ್ಗಗಳನ್ನು, (೩) ಹತ್ತಿಸಿದಂ-ಏರಿಸಿದನು

ಭಾವಾರ್ಥ—ಇದಿರಲೊದಗುವ ಗಟ್ಟಿಯರ ಗರ್ವಿತರ ಗಗನದ ಬಟ್ಟೆಗಳ ಹತ್ತಿಸಿದಂ-ಮುಂದೆ ನುಗ್ಗುವ ಸಮರ್ಥರನ್ನೂ ಕೊಬ್ಬಾಳುಗಳನ್ನೂ ಬಡಿದು ಆಕಾಶಕ್ಕೆ ಬೀಸಾಡಿದನು.

ವ್ಯಾ॥ (೧) ಆನೆಯೂ + ಕುದುರೆಯೂ=ಆನೆ ಕುದುರೆ ಸೇನಾಂಗ ಇದುದರಿಂದ ದ್ವಂದ್ವ ಸಮಾಸದ ಕೊನೆಯಲ್ಲಿ ಏಕವಚನವಿದೆ. (೨) ತಿಹಾಸವನ್ನು ಹೇಳುವುದರಿಂದ ಭೂತಕಾಲ ಕ್ರಿಯಾಪದಕ್ಕೆ ಪ್ರತಿಯಾಗಿ ಭವಿಷ್ಯತ್ಕಾಲಕ್ರಿಯೆ (೩) ಗಟ್ಟಿಯರ ಗರ್ವಿತರ ಗಗನದ ಬಟ್ಟೆಗಳ ಹತ್ತಿಸಿದಂ-ಇಲ್ಲಿ ದ್ವಿಕರ್ಮಕ ಕರ್ತರಿಪ್ರಯೋಗವು.

೧೬. (ಮುಖ್ಯಪದ್ಯ) ಇಳೆ-ಭೂಮಿಯು, ಹನುಮಂತದೇವನ-ಆಂಜನೇಯಸ್ವಾಮಿಯ, ಧುರಕೆ-ಯುದ್ಧದಲ್ಲಿ, ಕರದ-ಹನುಮನ ಕೈಯಲ್ಲಿರುವ, ಕಠಿನತರೋಗ್ರದಂಡದ=ಅತಿನತರ-ಬಲು ಗಟ್ಟಿಯಾದ ಉಗ್ರ-ಭಯಂಕರವಾದ, ದಂಡದ-ಲಾಳಮುಂಡಿಗೆಯ, (೧) ಬಲುಹೊಯ್ಲಿನಲಿ ಅಧಿಕವಾದ ಬಡಿತದಿಂದ, ಬಿದ್ದ, ಕರಿರಥ ಹಯಪದಾತಿಗಳ=ಕರಿ-ಆನೆಗಳು, ರಥ-ತೇರುಗಳು, ಹಯ-ಕುದುರೆಗಳು, ಪದಾತಿಗಳ-ಕಾಲಾಳುಗಳು ಇವುಗಳ, (೨) ತೊರಳೆತೊಗಲೆಲು ಮಜ್ಜೆಮಾಂಸದ=ತೊರಳೆ-ಕರುಳು, ತೊಗಲು-ಚರ್ಮವು. ಎಲು-ಮೂಳೆಯು, ಮಜ್ಜೆ-ಕೊಬ್ಬು (ಶರೀರದ ಸಾರವು.) ಮಾಂಸದ-ಬಾಡು ಇವುಗಳ, ಹೊರಳಿಯಲಿ ಸಮೂಹದಿಂದ, ಹೊರೆದುದು-ವ್ಯಾಪ್ತವಾಯಿತು (ವ್ಯಾಪಿಸಲ್ಪಟ್ಟಿತು); ರಣಭೂಮಿ-ಯುದ್ಧರಂಗವು, ರಣಭೂತದ-ಯುದ್ಧಭೂಮಿಯಲ್ಲಿರುವ ವೆವ್ವಗಳ, (೩) ಉಣಿಸಿಗೆ-ಆಹಾರಕ್ಕೋಸ್ಕರ, ಹರಿವಣವಂ-ಹರಿವಾಣವ

ನ್ನು(ತಟ್ಟೆಯನ್ನು), ಇಟ್ಟಂತೆ-ಇಟ್ಟಹಾಗೆ, (೪) ಹೊಸಪರಿಯಾಯ್ತು-ಹೊಸದಾದ ರೀತಿಯನ್ನು ಹೊಂದಿತು.

ತಾತ್ಪರ್ಯ;—ಹನುಮಂತನು ಭೀಕರವಾದ ಲಾಳಮುಂಡಿಗೆಯಿಂದ ಆನೆ ತೇರು ಕುದುರೆ ಕಾಲಾಳುಗಳನ್ನು ಬಡಿಯಲು, ಸೈನ್ಯದ ಶರೀರದಿಂದ ಕರುಳು ತೊಗಲು ಕೊಬ್ಬು ಬಾಡುಗಳು ಕಳಚಿ ಭೂಮಿಯಮೇಲೆ ಹರಡಿಕೊಂಡಿದ್ದುದರಿಂದ, ಯುದ್ಧಭೂಮಿಯಲ್ಲಿ ಹೆಣತಿನ್ನುವ ದೆವ್ವಗಳಿಗೆ ಊಟಕ್ಕೋಸ್ಕರ ಕರುಳು ತೊಗಲು ಕೊಯ್ದು ಬಾಡುಗಳನ್ನು ತುಂಬಿದ ಹರಿವಾಣವು ಇಡಲ್ಪಟ್ಟಿದೆಯೋ ! ಎನ್ನುವಹಾಗೆ ಯುದ್ಧಭೂಮಿ ವಿಲಕ್ಷಣವಾಗಿ ಕಾಣುತ್ತಿದ್ದಿತು.

ವ್ಯಾ॥ (೧) ಬಲ್ಲಿತು + ಪೊಯ್ಲು=ಬಲ್ಲೊಯ್ಲು (ಬಲುಹೊಯ್ಲು) ಕ. ವಿ. ಪೂ (೨) ತೊರಳೆಯುಂ ತೊಗಲೂ ಪಚ್ಚೆಯೂ ಮಾಂಸವೂ ಇವುಗಳ ಸಮಾಹಾರಂ (ಸ ದ್ವಂ) ೩ ಉಣ್ ಧಾತುವಿನ ಮೇಲೆ ಭಾವಾರ್ಥದಲ್ಲಿ ಇಸುಪ್ರತ್ಯಯವು (೪) ಹೊಸದು + ಪರಿ=ಹೊಸಪರಿ (ಕ. ವಿ. ಪೂ) ಹೊಸಪರಿಯಂ ಆಯ್ತು-ಹೊಂದಿತು (ಕ್ರಿ) ಹೊರೆಮದಿಳೆ...ಎಂಬಲ್ಲಿ ಕರ್ಮಣಿಪ್ರಯೋಗವು

ತಿದ್ದುವಿಕೆ;—' ಹೊರೆ, ಎಂಬುದು ಧಾತುವಾದುದರಿಂದ ಹೊರೆದುದು, ಎಂದು ತಿದ್ದಬಹುದು

೧೭. (ಮುಖ್ಯಪದ್ಯ); -ಅನಿಲಜನ-ಹನುಮಂತನ, ಭೀಕರಾಳದ-ಭಯಂಕರವಾದ, ಅಭಿನವರಣವಂ= ಅಭಿನ-ಹೊಸದಾದ, (ಹೊಸಬಗೆಯಾದ), ರಣವಂ-ಯುದ್ಧವನ್ನು. ಹೇಳುವರೆ-ಹೇಳುವಪಕ್ಷದಲ್ಲಿ (ಹೇಳುವುದಕ್ಕೆ) ಬೆರಗು-ಆಶ್ಚರ್ಯವು! ದಶಾಕ್ಷೌಹಿಣಿಯ=ದಶ-ಹತ್ತಾದ, ಅಕ್ಷೌಹಿಣಿಯ-ಅಕ್ಷೌಹಿಣೀಸಂಖ್ಯೆಯುಳ್ಳ, ದೈತ್ಯಬಲ=ದೈತ್ಯ-ರಾಕ್ಷಸರ, ಬಲ-ಸೈನ್ಯವು (ಅಂದರೆ ೧೧,೮೭,೦೦೦ ರಾಕ್ಷಸಸೈನ್ಯವು), ಒಂದೇವೇಳೆಯಲಿ ಒಂದೇ ಕಾಲದಲ್ಲಿ (ಏಕಕಾಲದಲ್ಲಿ), + ಹನುಮಂತನ ಪೆಟ್ಟಿನಿಂದ, ಕೆಡೆದುದು ಬಿದ್ದಿತು ; ಬಾಲ-ಬಾಲಕನಾದ ಕುಶನೇ ! (ಅಥವಾ ಲವನೇ !) ಕೇಳು;-ಮಿಕ್ಕ ಉಳಿದ, ಅಸುರಾಳಿ=ಅಸುರ- ರಾಕ್ಷಸರ, ಆಳಿ-ಸಮೂಹವು ಎಡೆಯಲಿ-ಯುದ್ಧಸ್ಥಾನದಲ್ಲಿ, ಎಡೆಸರವ-ಆಶ್ರಯವನ್ನು, ಪಡೆವುದೆ- ಹೊಂದದೆ, ಅಪವರ್ಗಲಕ್ಷ್ಮಿಯ-ಮೋಕ್ಷಲಕ್ಷ್ಮಿಯೆಂಬ, ಬಾಲಕಿಯ-ಕನ್ಯಕೆಯ, ಶಿರಪದವ-ಶಿರಸ್ಥಾನವನ್ನು (ತಲೆಯಪ್ರದೇಶವನ್ನು), ಕಾಣಲಿಕೆ-ಕಾಣುವುದಕ್ಕೋಸ್ಕರ, (ಪಡೆಯುವುದಕ್ಕೋಸ್ಕರ), ಆದ್ದುದು-ಸಿದ್ಧವಾಗಿದ್ದಿತು

ಪ॥ ಹೇಳುವರೆಬೆರಗನಿಲಜನಭೀಕರಾಳದಭಿನವ ರಣವಂ-ಇಲ್ಲಿಬೆರಗು (ಆಶ್ಚರ್ಯವು) ಏನು ? ಎಂದರೆ,—ತಾ॥ ಹನುಮಂತನ ಪೆಟ್ಟಿನಿಂದ ಒಂದೇ ಕಾಲದಲ್ಲಿ ಹತ್ತಕ್ಷೌಹಿಣಿಯ ರಾಕ್ಷಸಸೈನ್ಯವು ಬಿದ್ದುಹೋಯಿತು. ಉಳಿದ

ರಾಕ್ಷಸರು ಹನುಮನಿಂದ ಪೆಟ್ಟು ತಿಂದು ಗಾಸಿಯಾಗಿ ಯುದ್ಧಸ್ಥಾನದಲ್ಲಿ ನಿಲ್ಲಲಾರದೆ ಮೋಕ್ಷಲಕ್ಷ್ಮಿಯೆಂಬ ಬಾಲಕಿಯ ಶಿರಸ್ಥಾನವನ್ನು ಕಾಣುವುದಕ್ಕೋಸ್ಕರ (ಪಡೆಯುವುದಕ್ಕೋಸ್ಕರ) ಸಿದ್ಧವಾಗಿದ್ದಿತು) ಅಂದರೆ ಉಳಿದ ರಾಕ್ಷಸರು ಹನುಮನಿಂದ ಪೆಟ್ಟುತಿಂದು ಗಾಸಿಯಾಗಿ ಯುದ್ಧಸ್ಥಾನದಲ್ಲಿ ನಿಲ್ಲಲಾರದೆ ಮಹಾಮುಕ್ತಿ ಪದವಿಯನ್ನು ಕಾಣಲಿಕ್ಕೆ ಸಿದ್ಧರಾದರು ಅಂದರೆ ಸಾಯುವಹಾಗಾದರು- ಆದುದರಿಂದ ಹನುಮನ ಭಯಂಕರ ನೂತನಯುದ್ಧವನ್ನು ಹೇಳಲು ಆಶ್ಚರ್ಯವು

ಟಿಪ್ಪಣಿ;—ಅಕ್ಷೌಹಿಣಿ;-೨೧೮೭೦ ಆನೆಗಳು, ೨೧೮೭೦ ರಥಗಳು, ೬೫೬೧೦ ಕುದುರೆಗಳು, ೧೦೯೩೫೦ ಕಾಲಾಳುಗಳು. ಇವುಗಳನ್ನೆಲ್ಲ ಕೂಡಿಸಿದರೆ ಆಗುವ ೧,೦೯,೨೦೦ ಸೈನ್ಯಕ್ಕೆ ಒಂದು ಅಕ್ಷೌಹಿಣಿ, ಎಂದು ಹೆಸರು

೧೮. ಕಲಿಹನುಮ-ಶೂರನಾದ ಹನುಮಂತನು, ಒಡೆದು- ಗುಂಪಿನಿಂದ ಬೇರೆಯಾಗಿ, ಜಾರುವ- ಜರುಗುತ್ತಿರುವ, ಭಟರ- ಯುದ್ಧಗಾರರನ್ನು, ಭಟರಿಂದ-ಇತರಯೋಧರಿಂದ, ಇಡುತ- ಹೊಡೆಯುತ್ತ, ಕರಿಗಳ- ಆನೆಗಳನ್ನು, ಕರಿಗಳಿಂದ-ಆನೆಗಳಿಂದಲೆ, ಎಡೆಗೆಡಹುತ-ಅಲ್ಲೇ ಬೀಳಿಸುತ್ತ, ಅಡಹಾಯ್ವ-ಅಡ್ಡವಾಗಿ ನುಗ್ಗುವ, ಅಶ್ವವಂ-ಕುದುರೆಗಳನ್ನು, ಅಶ್ವದಿಂದ-ಕುದುರೆಗಳಿಂದಲೇ, ಅಪ್ಪಳಿಸುತ-ಬಡಿಯುತ್ತ, (೧) ಬಿಡುರಥವನ್ನುಂದೆ ಬಿಡಲ್ಪಡುವ ತೇರುಗಳನ್ನು, ರಥದಿಂದ-ಬೇರೆ ತೇರುಗಳಿಂದ. ಹೊಯ್ದು ಬಡಿದು, (೨) ಉರೆ-ಬಹಳವಾಗಿ ಹುಡಿಗೆಡಹುತ-ಪುಡಿಮಾಡುತ್ತ, ಸಂಸಾರವನು-ಪತ್ನೀ ಪುತ್ರಾದಿ ರೂಪವಾದ ಕುಟುಂಬವನ್ನು, ಸುಡಲಿ-ದಹಿಸಿಬಿಡಲಿ; ಎನಲು-ಎಂದನ್ನುವಹಾಗೆ ಕಣನೊಳಗೆ-ಯುದ್ಧರಂಗದಲ್ಲಿ, + ರಾಕ್ಷಸಭಟರನ್ನು, ಅರೆಯಟ್ಟಿ-ಓಡಿಸಿಕೊಂಡು ಹೋಗಿ, ಸವೆದನು-ಬಡಿದನು.

ಭಾವಾರ್ಥ;—ಅರೆಯಟ್ಟಿ ಸವೆದನು ಸುಡಲಿಸಂಸಾರವನೆನಲು ಕಣನೊಳಗೆ ಕಲಿಹನುಮ-ರಾಕ್ಷಸಭಟರು ತನ್ನಿಂದ ಸಾಯುವಹಾಗೆ ಪೆಟ್ಟು ತಿಂದು ಸಂಸಾರದ ಪತ್ನೀಪುತ್ರಾದಿಗಳನ್ನು ಬಿಟ್ಟು ಸಾಯಬೇಕಾಯಿತಲ್ಲಾ ಇಂತಹ ವಿಯೋಗಾಸ್ಪದವಾಗಿ ಮಹಾ ದುಃಖಕರವಾದ ಸಂಸಾರವೆಂಬುದನ್ನು ಜನರು ಸುಟ್ಟು ನಾಶಮಾಡಲಿ, ಎಂದು ವೈರಾಗ್ಯದ ಜುಗುಪ್ಸೆಯಿಂದ ಹೇಳುವಹಾಗೆ, ಹನುಮಂತನು ಯುದ್ಧರಂಗದಲ್ಲಿ ಭಟರನ್ನು ಅಟ್ಟಿ ಕೊಂಡು ಹೋಗಿ ಒಡಿದನು.

ವ್ಯಾಕರಣ॥ (೧) ಬಿಡುವುದು + ರಥಂ (ಗ)

ತಿದ್ದುಪಿಕೆ;—ಬಿಡುವವರರಥದಿಂದ ಹಾಯಿಸ್ದರ್, ಎಂದು ಮೂಲದಲ್ಲಿನ ಪ್ರಕ್ರಮ ಭಂಗವಾಗುವುದರಿಂದಲೂ ಅನನ್ವಯವಾಗುವುದರಿಂ

ನ್ನು (ತಟ್ಟಿಯನ್ನು). ಇಟ್ಟಂತೆ-ಇಟ್ಟಹಾಗೆ, (೪) ಹೊಸಪರಿಯಾಯ್ತು-ಹೊಸದಾದ ರೀತಿಯನ್ನು ಹೊಂದಿತು.

ತಾತ್ಪರ್ಯ:—ಹನುಮಂತನು ಭೀಕರವಾದ ಲಾಳಮುಂಡಿಗೆಯಿಂದ ಆನೆ ತೇರು ಕುದುರೆ ಕಾಲಾಳುಗಳನ್ನು ಬಡಿಯಲು, ಸೈನ್ಯದ ಶರೀರದಿಂದ ಕರುಳು ತೊಗಲು ಕೊಬ್ಬು ಬಾಡುಗಳು ಕಳಚಿ ಭೂಮಿಯಮೇಲೆ ಹರಡಿಕೊಂಡಿದ್ದುದರಿಂದ, ಯುದ್ಧಭೂಮಿಯಲ್ಲಿ ಹೆಣತಿನ್ನುವ ದೆವ್ವಗಳಿಗೆ ಊಟಕ್ಕೋಸ್ಕರ ಕರುಳು ತೊಗಲು ಕೊಯ್ದು ಬಾಡುಗಳನ್ನು ತುಂಬಿದ ಹರಿವಾಣವು ಇಡಲ್ಪಟ್ಟಿದೆಯೋ ! ಎನ್ನುವಹಾಗೆ ಯುದ್ಧಭೂಮಿ ವಿಲಕ್ಷಣವಾಗಿ ಕಾಣುತ್ತಿದ್ದಿತು.

ವ್ಯಾ|| (೧) ಬಲ್ಲಿತು + ಪೊಯ್ಯು=ಒಲೊಯ್ಯು (ಒಲುಹೊಯ್ಯು) ಕೆ ವಿ. ಪೂ (೨) ತೊರಳೆಯುಂ ತೊಗಲೂ ಪುಜ್ಜೆಯೂ ಮಾಂಸವೂ ಇವುಗಳ ಸಮಾಹಾರಂ (ಸ ದ್ವಂ) ೩ ಉಣ್ ಧಾತುವಿನ ಮೇಲೆ ಭಾವಾರ್ಥದಲ್ಲಿ ಇಸುಪ್ರಯತ್ನಯವು (೪) ಹೊಸದು + ಪರಿ=ಹೊಸಪರಿ (ಕ. ವಿ. ಪೂ). ಹೊಸಪರಿಯಂ ಆಯ್ತು-ಹೊಂದಿತು (ಕ್ರಿ) ಹೊರೆದುದಿಳೆ...ಎಂಬಲ್ಲಿ ಕರ್ಮಣಿಪ್ರಯೋಗವು

ತಿದ್ದುವಿಕೆ:—' ಹೊರೆ, ಎಂಬುದು ಧಾತುವಾದುದರಿಂದ ಹೊರೆದುದು. ಎಂದು ತಿದ್ದಬಹುದು

೧೭. (ಮುಖ್ಯಪದ್ಯ):-ಅನಿಲಜನ-ಹನುಮಂತನ, ವಿಕರಾಳದ-ಭಯಂಕರವಾದ, ಅಭಿನವರಣವಂ= ಅಭಿನ-ಹೊಸದಾದ, (ಹೊಸಬಗೆಯಾದ), ರಣವಂ-ಯುದ್ಧವನ್ನು. ಹೇಳುವರೆ-ಹೇಳುವಪಕ್ಷದಲ್ಲಿ (ಹೇಳುವುದಕ್ಕೆ) ಬೆರಗು-ಆಶ್ಚರ್ಯವು! ದಶಾಕ್ಷೌಹಿಣಿಯು=ದಶ-ಹತ್ತಾದ, ಅಕ್ಷೌಹಿಣಿಯು-ಅಕ್ಷೌಹಿಣೀಸಂಖ್ಯೆಯುಳ್ಳ, ದೈತ್ಯಬಲ=ದೈತ್ಯ-ರಾಕ್ಷಸರ, ಬಲ-ಸೈನ್ಯವು (ಅಂದರೆ ೧೧,೮೭,೦೦೦ ರಾಕ್ಷಸಸೈನ್ಯವು), ಒಂದೇವೇಳೆಯಲಿ ಒಂದೇ ಕಾಲದಲ್ಲಿ (ಏಕಕಾಲದಲ್ಲಿ), + ಹನುಮಂತನ ಪೆಟ್ಟಿನಿಂದ, ಕೆಡೆದುದು ಬಿದ್ದಿತು ; ಬಾಲ-ಬಾಲಕನಾದ ಕುಶನೇ ! (ಅಥವಾ ಲವನೇ !) ಕೇಳು;-ಮಿಕ್ಕ ಉಳಿದ. ಅಸುರಾಳಿ=ಅಸುರ- ರಾಕ್ಷಸರ, ಆಳಿ-ಸಮೂಹವು ಎಡೆಯಲಿ-ಯುದ್ಧಸ್ಥಾನದಲ್ಲಿ, ಎಡೆಸರವ-ಆಶ್ರಯವನ್ನು, ಪಡೆಯದೆ- ಹೊಂದದೆ, ಅಪವರ್ಗಲಕ್ಷ್ಮಿಯ-ಮೋಕ್ಷಲಕ್ಷ್ಮಿಯೆಂಬ, ಬಾಲಕಿಯ-ಕನ್ಯಕೆಯ, ಶಿರಪದವ-ಶಿರಸ್ಥಾನವನ್ನು (ತಲೆಯಪ್ರದೇಶವನ್ನು), ಕಾಣಲಿಕೆ-ಕಾಣುವುದಕ್ಕೋಸ್ಕರ, (ಪಡೆಯುವುದಕ್ಕೋಸ್ಕರ), ಇರ್ದುದು-ಸಿದ್ಧವಾಗಿದ್ದಿತು

ವಿ|| ಹೇಳುವರೆಬೆರಗನಿಲಜನವಿಕರಾಳದಭಿನವ ರಣವಂ-ಇಲ್ಲಿಬೆರಗು (ಆಶ್ಚರ್ಯವು) ಏನು ? ಎಂದರೆ,—ತಾ|| ಹನುಮಂತನ ಪೆಟ್ಟಿನಿಂದ ಒಂದೇ ಕಾಲದಲಿ ಹತ್ತಕ್ಷೌಹಿಣಿಯ ರಾಕ್ಷಸಸೈನ್ಯವು ಬಿದ್ದುಹೋಯಿತು. ಉಳಿದ

ರಾಕ್ಷಸರು ಹನುಮನಿಂದ ಪೆಟ್ಟು ತಿಂದು ಗಾಸಿಯಾಗಿ ಯುದ್ಧ ಸ್ಥಾನದಲ್ಲಿ ನಿಲ್ಲಲಾರದೆ ಮೋಕ್ಷಲಕ್ಷ್ಮಿಯೆಂಬ ಬಾಲಕಿಯ ಶಿರಸ್ಥಾನವನ್ನು ಕಾಣುವು ದಕ್ಕೋಸ್ಕರ (ಪಡೆಯುವುದಕ್ಕೋಸ್ಕರ) ಸಿದ್ಧವಾಗಿದ್ದಿತು) ಅಂದರೆ ಉ ಳಿದ ರಾಕ್ಷಸರು ಹನುಮನಿಂದ ಪೆಟ್ಟುತಿಂದು ಗಾಸಿಯಾಗಿ ಯುದ್ಧ ಸ್ಥಾನ ದಲ್ಲಿ ನಿಲ್ಲಲಾರದೆ ಮಹಾಮುಕ್ತಿ ಪದವಿಯನ್ನು ಕಾಣಲಿಕ್ಕೆ ಸಿದ್ಧರಾದರು ಅಂ ದರೆ ಸಾಯುವಹಾಗಾದರು- ಆದುದರಿಂದ ಹನುಮನ ಭಯಂಕರ ನೂತ ನಯುದ್ಧವನ್ನು ಹೇಳಲು ಆಶ್ಚರ್ಯವು

ಟಿಪ್ಪಣಿ;—ಅಕ್ಷೌಹಿಣಿ;-೨೧೮೭೦ ಆನೆಗಳು, ೨೧೮೭೦ ರಥಗಳು, ೬೫೬೧೦ ಕುದುರೆಗಳು, ೧೦೯೩೫೦ ಕಾಲಾಳುಗಳು. ಇವುಗಳನ್ನೆಲ್ಲ ಕೂಡಿ ಸಿದರೆ ಆಗುವ ೧,೧೮,೭೦೦ ಸೈನ್ಯಕ್ಕೆ ಒಂದು ಅಕ್ಷೌಹಿಣಿ, ಎಂದು ಹೆಸರು

೧೮. ಕಲಿಹನುಮ-ಶೂರನಾದ ಹನುಮಂತನು, ಒಡೆದು- ಗುಂಪಿ ನಿಂದ ಬೇರೆಯಾಗಿ, ಜಾರುವ- ಜರುಗುತ್ತಿರುವ, ಭಟರ- ಯುದ್ಧಗಾರರ ನ್ನು, ಭಟರಿಂದ-ಇತರಯೋಧರಿಂದ, ಇಡುತ- ಹೊಡೆಯುತ್ತ, ಕರಿಗಳ- ಆನೆಗಳನ್ನು, ಕರಿಗಳಿಂದ-ಆನೆಗಳಿಂದಲೆ, ಎಡೆಗೆಡಹುತ-ಅಲ್ಲೇ ಬೀಳಿಸು ತ್ತ, ಅಡಹಾಯ್ದ-ಅಡ್ಡವಾಗಿ ನುಗ್ಗುವ, ಅಶ್ವವಂ-ಕುದುರೆಗಳನ್ನು, ಅಶ್ವ ದಿಂದ-ಕುದುರೆಗಳಿಂದಲೇ, ಅಪ್ಪಳಿಸುತ-ಬಡಿಯುತ್ತ, (೧) ಬಿಡುರಥವ- ಮುಂದೆ ಬಿಡಲ್ಪಡುವ ತೇರುಗಳನ್ನು, ರಥದಿಂದ-ಬೇರೆ ತೇರುಗಳಿಂದ, ಹೊಯ್ದು ಬಡಿದು, (೨) ಉರೆ-ಬಹಳವಾಗಿ, ಹುಡಿಗೆದರುತ-ಪುಡಿಮಾ ಡುತ್ತ, ಸಂಸಾರವನು-ಪತ್ನೀ ಪುತ್ರಾದಿ ರೂಪವಾದ ಕುಟುಂಬವನ್ನು, ಸುಡಲಿ-ದಹಿಸಿಬಿಡಲಿ; ಎನಲು-ಎಂದನ್ನುವಹಾಗೆ ಕಣನೊಳಗೆ-ಯುದ್ಧ ರಂಗದಲ್ಲಿ, + ರಾಕ್ಷಸಭಟರನ್ನು, ಅರೆಯಟ್ಟಿ-ಓಡಿಸಿಕೊಂಡು ಹೋಗಿ, ಸದೆದನು-ಬಡಿದನು.

ಭಾವಾರ್ಥ;—ಅರೆಯಟ್ಟಿಸದೆದನು ಸುಡಲಿಸಂಸಾರವನೆನಲು ಕಳ ನೊಳಗೆ ಕಲಿಹನುಮ-ರಾಕ್ಷಸಭಟರು ತನ್ನಿಂದ ಸಾಯುವಹಾಗೆ ಪೆಟ್ಟು ತಿಂದು ಸಂಸಾರದ ಪತ್ನೀಪುತ್ರಾದಿಗಳನ್ನು ಬಿಟ್ಟು ಸಾಯಬೇಕಾಯಿತ ಲ್ಲಾ ಇಂತಹ ವಿಯೋಗಾಸ್ಪದವಾಗಿ ಮಹಾ ದುಃಖಕರವಾದ ಸಂಸಾರ ವೆಂಬುದನ್ನು ಜನರು ಸುಟ್ಟು ನಾಶಮಾಡಲಿ, ಎಂದು ವೈರಾಗ್ಯದ ಜುಗು ಪ್ಸೆಯಿಂದ ಹೇಳುವಹಾಗೆ, ಹನುಮಂತನು ಯುದ್ಧರಂಗದಲ್ಲಿ ಭಟರನ್ನು ಅಟ್ಟಿ ಕೊಂಡು ಹೋಗಿ ಬಡಿದನು.

ವ್ಯಾಕರಣ॥ (೧) ಬಿಡುವುದು + ರಥಂ (೧)

ತಿದ್ದುಪಡಿಕೆ;—ಬಿಡುವವರರಥದಿಂದ ಹಾಯ್ದುರ್ವೆ ಎಂದು ಮೂಲ ದಲ್ಲಿದೆ ಪ್ರಸ್ತಾವ ಭಂಗವಾಗುವುದರಿಂದಲೂ ಅನನ್ವಯವಾಗುವುದರಿಂ

ದೆಲೂ 'ಬಿಡುರಥವ ರಥದಿಂದ ಹೋಯ್ದರ' ಎಂದು ತಿಸ್ಸಹುದು.

೧೯. + ಹನುಮಂತನು, ಸಿಡಿಸಿಡಿದು-ಹಾರಿಹಾರಿ, ಹೊಗಲು ನುಗ್ಗಲು ಎಡೆಯು ಅವಕಾಶವನ್ನು, ಕಾಣದೆ- ಹೊಂದದೆ, ಪಡಿತಳಿಸಿ ಎದುರಿಸಿ, ನಿಂದ-ನಿಂತುಕೊಂಡ, ಅಸುರರ- ರಾಕ್ಷಸರ, ಅಸುಗಳ- ಪ್ರಾಣಗಳನ್ನು, ಕೊಡಹಿ ಹಾಯ್ಕುತ-ಒದರಿಬಿಡುತ್ತ, (೧) ಈಪರಿ- ಈ ರೀತಿಯಿಂದ, ಕೋಟಿಸಂಖ್ಯೆಯಲಿ-ಒಂದುಕೋಟಿಯ ಲೆಕ್ಕದಿಂದ, + ರಾಕ್ಷಸರನ್ನು ಕೊಂದನು-ಸಂಹರಿಸಿದನು, ಬೇಸಗೆ-ಬೇಸಗೆಯಕಾಲವು, ಹೊಡೆವ- ಸುರಿಯುವ, ಹಿಮದ ಮಂಜಿನ, ಉಬ್ಬರಕೆ- ಹೆಚ್ಚಿಗೆಗೆ, ಅಡಸಿದವೊಲು- ತಾಗಿದಂತೆ, ಅಸುರೇಂದ್ರಜಿತು- ಇಂದ್ರಜಿತ್ತು, ಕಣೆಯ- ಬಾಣಗಳ, ಕೋಳಾಹಳಗಳ- ಸಮೃದ್ಧಿಗಳ (ಸಮೂಹಗಳ) (೨) ಎಸುಗೆಯಲಿ- ಪ್ರಯೋಗದಿಂದಕೂಡಿ, ಮೇಲೆ-ಹನುಮಂತನ ಮೇಲೆ, ಉಡಿದುಬಿದ್ದನು-ನುರಿಯನುಗ್ಗಿದನು

ವ್ಯಾಕರಣ:—ಇದು + ಪರಿ= ಈಪರಿ (ಗ) (೨) ಎಸು + ಗೆ, ಎಸುಧಾತುವಿನ ಮೇಲೆ ಭಾವಾರ್ಥದಲ್ಲಿ ಗೆ ಪ್ರತ್ಯಯವು

ವಿ|| ಪರಿ-ಇದು ಧಾತುವಾದರೆ- ಓಡುವುದು, ನಾಮವಾದರೆ ರೀತಿ ಉಪಮಾನ— ಹೊಡೆವಹಿಮದುಬ್ಬರಕೆ ಬೇಸಗೆಯಡಸಿದವೊಲು. ಉಃ ಮೇಯ-ಅಸುರೇಂದ್ರಜಿತು ಹನುಮನಮೇಲುಡಿದು ಬಿದ್ದನು....

೨೦. ಶರಜಾಲ= ಶರ- ಇಂದ್ರಜಿತ್ತಿನ ಬಾಣಗಳ, ಜಾಲ-ಸಮೂಹಗಳ ಜೇನಿನ ಹತ್ತುಗೆಯ-ಜೇನಿನ ಸಂಬಂಧವಾದ, ನೊಣದಂತೆ-ನೊಣಗಳಂ ಗೆ, (ಜೇನು ನೊಣಗಳಹಾಗೆ), ಒಳಯಂ- ಹನುಮನ ಸಮೀಪವನು (೧) ಮುತ್ತಿದುವು ಆವರಿಸಿದುವು; ಬಂದ, ಮುತ್ತು, ಅಗ್ನಿಸಖ ಸುತ ಅಗ್ನಿಸಖ-ವಾಯುವಿನ, ಸುತನ-ಪುತ್ರನಾದ ಹನುಮಂತನ, [೧] ಕೋಪಾಗ್ನಿಯನು-ರೋಷವೆಂಬ ಬೆಂಕಿಯನ್ನು, ಮಿಗಿಲು-ಹೆಚ್ಚಾಗಿ, ಹೊತ್ತಿದುವು-ಉರಿಗೊಳಿಸಿದುವು; [೨] ಲಯಮಿತ್ತು ನಲಯ- ಪ್ರಳಯಕಾಲದ, ಮಿತ್ತು-ಯಮಪ್ರಾಯನಾದ ಹನುಮನು [೩]ಬಲುದಂಡವನುಮುತ್ತಾ ದ ಲಾಳವುಂಡಿಗೆಯನ್ನು,ನಭಕೆ-ಅಂತರಿಕ್ಷಕ್ಕೆ, ಎತ್ತಿ-ನೀಡಿ, [೪]ಬಹಬಂದನು; ಹಲುಗಳಂ-ಹಲ್ಲುಗಳನ್ನು, ಔಡಿನಲಿ ತುಟಿಯಲ್ಲಿ, ಒತ್ತಿ ಪುಕ ಮದದ-ಕೊಬ್ಬಿನ, ಉಬ್ಬಿನಲಿ-ಹೆಚ್ಚಿಗೆಯಿಂದಕೂಡಿ, ರಾವಣಿಯ-ಇಂದ್ರಜಿತ್ತಿನ, ಮೊಗಕೆ-ಮುಖಕ್ಕೆ, ಏರಗಿದನು-ಬಡಿದನು [ಲಯಮಿತ್ತು-ಜನನಾಶಕ]

ವ್ಯಾ||-[೧] ಜಾಲ,ಎಂಬ ಪದವು ಜಾತ್ಯೇಕವಚನವಾದುದಾದ ಈ ಕ್ರಿಯಾಪದವು ಬಹುವಚನದಲ್ಲಿದೆ. [೨] ಲಯದ ಮಿತ್ತು [ಷ] [೩] ಬಲ್ಲಿತ್ತು + ದಂಡ=ಬಲ್ದಂಡ [ಬಲುದಂಡ] [ವಿ ಪೂ.ಅರಿ.ಸ] ಇತಿ

ಹಾಸವನ್ನು ಹೇಳುವುದರಿಂದ ಭೂತಕ್ರಿಯಾಪದಕ್ಕೆ ಪ್ರತಿಯಾಗಿ ಭವಿಷ್ಯತ್ಕ್ರಿಯಾ ಪದವು.

ವಿ॥ ಅಗ್ನಿಸಖಸುತ-ಹನುಮಂತ, ರಾವಣಿ-ಇಂದ್ರಜಿತ್ತು, ಉಪಮಾನ-ಜೇನಿನ ಹುತ್ತುಗೆಯ ನೊಣದಂತೆ [ಜೇನುನೊಣಗಳು ಮನುಷ್ಯನನು ಮುತ್ತುವಂತೆ] ಉಪಮೇಯ-ಶರಜಾಲ ಹನುಮನನು ಮುತ್ತಿದುವು.

ತಿದ್ದುವಿಕೆ:—ಹಲುಗಳನಾಡಿನಲಿ, ಎಂದಿದೆ. ಅನನ್ವಯವಾಗುವುದರಿಂದ 'ಹಬುಗಳ ನಾಡಿನಲಿ' ಎಂದು ತಿದ್ದಬಹುದು. ಮತ್ತು ಮೊಗನೆಗಹದನು ಎಂಬುದನ್ನು 'ಮೊಗಕೆರಗಿದನು, ಎಂದು ತಿದ್ದಬಹುದು.

೨೧ ಇಂದ್ರಜಿತ್ತು-ತೇರಿನಿಂದ-ರಥದಿಂದ ಇಳೆಗೆ-ಭೂಮಿಗೆ, ಸಿಡಿದು-ಹಾರಿ, ನೆಲಂ-ಭೂಮಿಯು, ಆಳೆ-ಮುಳುಗುವಹಾಗೆ [ಕುಸಿಯುವಹಾಗೆ], ಅಡಿಮುಗುಚೆ-ತಳಕೆಳಗಾಗಿ, ಬಿಪ್ಪನು-ಉರುಳಿದನು; ರಾವಣಿಯ-ಇಂದ್ರಜಿತ್ತಿನ, ತನು-ಶರೀರವು, ಅನಿಲಜನ-ಹನುಮಂತನ [೧] ಕರಘಾತಕೆ-ಕಯ್ಯ ಪೆಟ್ಟಿನ ಪೆಸೆಯಿಂದ, ನಡುನಡು ನಡುಗಿದುದು-ಅತ್ಯಧಿಕವಾಗಿ ಕಂಪಿಸಿತು; ಅವ ಆ ಇಂದ್ರಜಿತ್ತು, ಪರಿಭವಿಸಿ-ಭಂಗವನ್ನು ಹೊಂದಿ, ಸಂತೈಸಿಕೊಳುತ-ಆಯಾಸವನ್ನು ಪರಿಹರಿಸಿಕೊಳ್ಳುತ್ತ, ಮರಿರಥಕೆ-ಬೇರೆ ತೇರಿಗೆ, ದುಮ್ಮಿಕ್ಕಿ-ಹಾರಿ, ಪ್ರಲಯದ-ಪ್ರಳಯಕಾಲದ, ಸಿಡಿಲಪ್ರೊಲು-ಪಿಡುಗಿನಂತೆ, ಸೀವರಿಸಿ-ಗರ್ಜಿಸಿ, ಸರಳ-ಬಾಣಗಳೆಂಬ [೨] ಸರಿಮಳೆಯ-ಜಡಿಮಳೆಯನ್ನು, ಸುರಿದನು-ಬೀಳಿಸಿದನು.

ವ್ಯಾ॥ [೧] ಕರದಘಾತಂ [ಷ.ತ.] ಪಂಚಮ್ಯರ್ಥದಲ್ಲಿ ಚತುರ್ಥಿ [೨] ಸರಿಯೆಂಬ ಮಳೆ [ಕ. ಸಂ. ಪೂ]

ವಿ॥ ಉಪಮಾನ-ಪ್ರಲಯದ ಸಿಡಿಲಪ್ರೊಲು [ಪ್ರಲಯದ ಸಿಡಿಲು ಸೀವರಿಸಿ ಸರಿಮಳೆಯ ಸುರಿವಪೊಲು] ಉಪಮೇಯ ಅವ ಸೀವರಿಸಿ ಸರಳ ಸುರಿದನು

೨೨. [೧] ಎಳಮುಳ್ಳು-ಎಳೆಯದಾದ ಮುಳ್ಳು [೨] ಮದಗಜಮಂ-ಸೊಕ್ಕೇರಿದ ಆನೆಯನ್ನು, ನೆಟ್ಟುವಪ್ರೊಲು-ನಾಟಿಕೊಳ್ಳುವಹಾಗೆ, ಶರಜಾಲ-ಇಂದ್ರಜಿತ್ತಿನ ಬಾಣಗಳು, ಹನುಮನ-ಹನುಮಂತನನ್ನು, ಸೋಕಿಸಲಿ-ತಗಲುವಿಕೆಯಿಂದ, ನೂಕಿದುವು-ನಾಟಿಕೊಂಡುವು; ಅಂಜನೆಯ-ಅಂಜನಾದೇವಿಯ, ಸುತನು ಮಗನಾದ ಹನುಮಂತನು, [೩] ಶರಹತಿಗೆ-ಬಾಣಗಳ ಪೆಟ್ಟಿನ ಪೆಸೆಯಿಂದ, ಅಂಜುವನೆ-ಹೆದರುವನೆ? ರಣದ-ಯುದ್ಧದ, ಆಕೆವಾಳರ-ವೀರರಿಗೆ, ದೇವ-ಒಡೆಯನಾದ (ಯುದ್ಧವೀರಶ್ರೇಷ್ಠನಾದ) ಹನುಮಂತನು, ನಾಕದ-ದೇವತೆಗಳು, ಅವ್ವಜಲು-ಅಡ

ಗುವಹಾಗೆ, ಬೊಬ್ಬಿರಿದು-ಗರ್ಜನೆಮಾಡಿ, ಮತ್ತೆ-ತಿರುಗಿ, ದಿವಿಜಾನೀಕ-ದಿವಿಜ-ದೇವತೆಗಳ, ಅನೀಕ ಸಮೂಹವು, ಹೊಗಳಲು-ಕೊಂಡಾಡುವಂತೆ, ರಾವಣಿಯು-ಇಂದ್ರಜಿತ್ತನ್ನು, ಹೊಕ್ಕು ತಾಗಿ, ಹೊಯ್ದನು-ಹೊಡೆದನು

ವ್ಯಾ॥ (೧) ಎಳದು + ಮುಳ್ಳು=ಎಳಮುಳ್ಳು (ಕ.ವಿ ಪೂ) [೨] ಪಂಚಮ್ಯರ್ಥದಲ್ಲಿ ಚತುರ್ಥಿ

ವಿ॥ ಉಪಮಾನ-ಪಾದಗಜವನೆಳಮುಳ್ಳಾಕುವವೊಲು. ಉಪಮೇಯ—ನೂಕಿದುವು ಶರಜಾಲ ಹನುಮನ ಸೋಕಿಸಲಿ. ಅಂಜನೆಯಸುತ-ಹನುಮಂತನು. [ಅಂಜನೆಯ ಸುತನಂಜುವನೆ ಶರಹತಿಗೆ]-ಇದನ್ನು ಸಮರ್ಥಸುವಿಕೆ,—ಇಂದ್ರಜಿತುವಿನ ಬಾಣಗಳು ನಾಟಿಕೊಂಡಿದ್ದಾಗ್ಯೂ ಹನುಮನು ಲಕ್ಷ್ಯಮಾಡದೆ ಗರ್ಜಿಸಿ ಮತ್ತೆ ಇಂದ್ರಜಿತ್ತನ್ನು ಹೊಕ್ಕು ಹೊಡೆದನು. ಆದುದರಿಂದ ಅಂಜನೆಯ ಸುತನು ಶರಹತಿಗೆ ಅಂಜನು

೨೩. [ಮುಖ್ಯಪದ್ಯ]:—ಅವಂ-ಆ ಇಂದ್ರಜಿತ್ತು, ಹೊಯಿಲ್ಗೆ-ಹನುಮನ ಪೆಟ್ಟಿಗೆ, ಒಳಗಾಗದೆ-ಸಿಕ್ಕದೆ, ಅಕ್ಷಣ-ತತ್‌ಕ್ಷಣದಲ್ಲಿಯೇ, [೧] ಮೈಲುಳಿಯುಲಿ-ಶರೀರಲಾಘವದಿಂದ [ಶರೀರಸಾಧನ ವಿಶೇಷದಿಂದ], ಉಪ್ಪರಿಸಿ-ಮೇಲೆಹಾರಿ, ಸೋಲದ-ಅಪಜಯವೆಂಬ, ಮೈಲಗೆಗೆ-ದೋಷಕ್ಕೆ, [೨] ಮೈಗೊಡದೆ-ವಶನಾಗದೆ, [೩] ಮತ್ತಂತಕ ಬೇರೆ ತೇರಿಗೆ, ಪುಟನೆಗೆದು-ಪುಟಿಹಾರಿ, ಲಘುಪ್ರಕರ ಪ್ರಯೋಗವಲಿ=ಲಘು-ವೇಗಗಳ, ಪ್ರಕರ-ಸಮೂಹದಿಂದ ಕೂಡಿದ, ಪ್ರಯೋಗದಲಿ-ಬಿಡುವಿಕೆಯಿಂದ ಯುಕ್ತವಾದ, ಕೈಲುಳಿಯ-ಹಸ್ತಲಾಘವದ, ಕಣೆಗಳಲಿ-ಬಾಣಗಳಿಂದ, + ಹನುಮನನು. ಕೊಂಡನು ಅಲೆ-ಎದುರಿಸಿದನಲ್ಲವೇ ? ವಿಬುಧೇಂದ್ರಜಿತು-ಇಂದ್ರಜಿತ್ತು, ಖಲಪ್ಪೈಲವ-ಹುಚ್ಚುತನವುಳ್ಳ, ವೀರನೆ-ಶೂರನೇ ? + ಎಂದು ವಾಲ್ಮೀಕಿಯು, ಎಂದ-ಹೇಳಿದನು

ಭಾವಾರ್ಥ:—ಸೋಲದ ಮೈಲಗೆಗೆ ಮೈಗೊಡದ-ಅಪಜಯದ ಕೆಟ್ಟ ಹೆಸರನ್ನು ಪಡೆಯದ, ಖಲಪ್ಪೈಲದ ವೀರನೇ ವಿಬುಧೇಂದ್ರಜಿತು-ಇಂದ್ರಜಿತ್ತು ಜಾಣನಾದ ವೀರನೇ ಅಹುದು.

ವ್ಯಾ॥ [೧] ಮೈ + ಲುಳಿ [ಕ. ಷ ತ] [೨] ಮೈಯಂ + ಕೊಡದೆ [ಕ್ರಿ],

[ಖಲಪ್ಪೈಲದ ವೀರನೇ ವಿಬುಧೇಂದ್ರಜಿತು]-ಇದನ್ನು ಸಮರ್ಥಿಸುವುದು ಹೇಗೆಂದರೆ,— ಇಂದ್ರಜಿತ್ತು ಹನುಮನ ಪೆಟ್ಟಿಗೆ ಸಿಕ್ಕದೆ ಥಟ್ಟನೆ ಶರೀರಲಾಘವದಿಂದ ಹಾರಿ, ಸೋತನೆಂಬ ಅಪಕೀರ್ತಿ ಹೊಂದದೆ ಬೇರೆ

ಠಿಘಕ್ಕೆ ನೆಗೆದು ಅತಿವೇಗದಿಂದ ಪ್ರಯೋಗಿಸುವ ಹಸ್ತಲಾಘವದ ಬಾಣಗ ಳೊಡನೆ ಹನುಮಂತನನ್ನು ಇದಿರಿಸಿದನು. ಆದುದರಿಂದ ಇಂದ್ರಜಿತ್ತು ಹು ಚ್ಚಾಟದ ವೀರನಲ್ಲ [ಜಾಣನಾದ ವೀರನೇ ಅಹುದು]

೨೪. + ಇಂದ್ರಜಿತ್ತು, ಉಬ್ಬಿ ಉತ್ಸಾಹಗೊಂಡು, ಬೊಬ್ಬಿರಿದು ಗರ್ಜಿ ಸಿ, ಹಿಂದೆ-ಪೂರ್ವದಲ್ಲಿ, ದಿಗುವಿಜಯದಲಿ ದಿಕ್ಪಾಲಕರನ್ನು ಜಯಿಸುವುದರ ಸಂದರ್ಭದಲ್ಲಿ [ದಿಗ್ವಿಜಯಕ್ಕೆ ಹೊರಟಾಗ]. [೧] ಪುರಂದರಾದ್ಯರು= ಪುರಂದರ-ದೇವೇಂದ್ರನು, ಆದ್ಯರು-ಮೊದಲಾಗುಳ್ಳ ದಿಕ್ಪಾಲಕರು, ಸೋ ತು-ತನಗೆ ಪರಾಜಿತರಾಗಿ, ಕೊಟ್ಟ-ಇತ್ತ, ಬಾಣಗಳಿಂದ-ಅಸ್ತ್ರಗಳಿಂದ, ಅಂಜನಾಸುತನ-ಅಂಜನಾದೇವಿಯ ಮಗನಾದ ಹನುಮಂತನನ್ನು, ಹೂಳಿದಂ ಮುಚ್ಚಿದನು; ರವಿ-ಸೂರ್ಯನು, ಮಂದಯಿಸಿ-ಒತ್ತಾಗಿ, ಮುಸುಕುವ-ಮುಚ್ಚಿಕೊಳ್ಳುವ [ಆವರಿಸುವ], ಬಲಾಹಕ ವೃಂದದ=ಬಲಾಹಕ-ಮೇಘ ಗಗಳ, ವೃಂದದ-ಸಮೂಹದ, ಉಪಟಳಕೆ-ಬಾಧೆಯದೆಸೆಯಿಂದ [ತೊಂದ ರೆಗೆ], ಅಳುಕುವನೆ-ಭಯಪಡುವನೇ ? ಕಂದ-ಮಗುವಾದ ಕುಶನೇ ? [ಅಥವ ಲವನೇ !] ಕೌತುಕವಂ-ಆಶ್ಚರ್ಯವನ್ನು. ಕೇಳ್-ಕೇಳು; ಹನು ಮ ಹನುಮಂತನು, [೨] ಒಳಬಿದ್ದು-ಮೇಲೆನುಗ್ಗಿ. + ಇಂದ್ರಜಿತ್ತನ್ನು, ಎರಗಿದನು-ತಾಗಿದನು

ವ್ಯಾ॥-[೧] ಪುರಂದರನೇ ಆದ್ಯನಾಗಿವುಳ್ಳವರು [ವ್ಯ. ಬ. ವ್ರೀ] [೨] ಒಳಗೆ + ಬಿದ್ದು [ಕ್ರಿ]

ವಿ॥-ಮಂದಯಿಸಿ ಮುಸುಕುವ ಬಲಾಹಕ ವೃಂದದುಪಟಳಕಂಜು ವನೆ ರವಿ. ಎಂಬ ವಾಕ್ಯವು, ಹನುಮನು ಬಾಣಗಳಿಂದ ಹೂಳುವ ಇಂದ್ರ ಜಿತ್ತಿನ ಉಪಟಳಕ್ಕೆ ಅಂಜುವನೇ ? ಎಂಬ ಅರ್ಥವನ್ನು ಸೂಚಿಸುವ ಸಂದರ್ಭದಲ್ಲಿ ಬಂದಿದೆ. [ಅಂಜದೆ ಒಳಬಿದ್ದೆರಗಿದನು ಹನುಮ]

೨೫. + ಇಂದ್ರಜಿತ್ತು, ಬೊಬ್ಬಿರಿದು-ಗರ್ಜಿಸಿ, ಎರಗಿದ-ತಾಗಿದ, [೧] ಅರಿಭಟಭೈರವನ=ಅರಿಭಟ-ಶತ್ರುಯೋಧನಿಗೆ, ಭೈರವನ-ಭಯಭಕ್ತನ್ನುಂ ಟುಮಾಡುವವನಾದ, ಲಂಕಾಭಯಂಕರನ- ಲಂಕಾಪುರಜನರಿಗೆ ಭೀತಿಯ ನ್ನುಂಟುಮಾಡುವವನಾದ ಹನುಮಂತನನ್ನು, ಗದೆಯಿಂದ, ಅಣೆದು-ತಗು ಲಿ, ಬೊಬ್ಬೆಯ-ಗರ್ಜನೆಯು, ಬಿರುಬಿನಲಿ-ಆಡಂಬರದಿಂದ ಕೂಡಿ, + ಗದೆ ಯಿಂದ, ಬೀಸಿ ಇಟ್ಟನು ಬೀಸಿ ಹೊಡೆದನು; ಅದು, ಮುರಿವ-ಖಂಡಿಸಲ್ಪ ಡುವ, ಗದೆ-ಗದಾಯುಧವು, ಅಲ್ಲ [ಅಂದರೆ ಸಾಧಾರಣವಾಗದೆಯಲ್ಲ]; ಸು ರೇಶ್ವರನ-ದೇವೇಂದ್ರನ, ಉರುವ-ಮಹತ್ತಾದ, ವಜ್ರದ-ವಜ್ರಾಯುಧ

ದ, ಸಾರಹರ-ಬಲವನ್ನು ಹೊಂದಿರುವಂಥಾದ್ದು [ವಜ್ರಾಯುಧದಂತೆ ಕಠಿನವಾದುದು] ಅದ ಆ ಗದೆಯುನ್ನು, ತರುಬುವಡೆ-ತಡೆಯುವುದಕ್ಕೆ. ಪವಮಾನನಂದನಂ ಅಲ್ಲದೆ-ಹನುಮಂತನುಹೊರತಾಗಿ, ಇಲ್ಲ-ಮತ್ತೆ ಯಾರೂ ಇಲ್ಲವು ; + ಎಂದು ವಾಲ್ಮೀಕಿಯು, ಎಂದ-ಹೇಳಿದನು

ವ್ಯಾ॥ [೧] ಅರಿಗಳಾದ ಭಟರು=ಅರಿಭಟರು [ವಿ. ಪೂ] ಅರಿಭಟರಿಗೆ ಭೈರವಂ [ಷ. ತ]

೨೬. ಸುರೇಂದ್ರಜಿತು ಇಂದ್ರಜಿತ್ತು, ಪಡಿರಥಕೆ-ಬೇರೆ ತೇರಿಗೆ. ಲಂಘಿಸಲು-ಹಾರಲು, + ಅವನ ಗದೆಯು, ಇಟ್ಟಭಾರಕೆ-ಹನುಮನನ್ನು ಹೊಡೆದ ವೇಗದಬಿರುಸಿಯಿಂದ, ಸಿಡಿದು-ಹಾರಿ, ತರಣಿಯು-ಸೂರ್ಯನನ್ನು, ತಟ್ಟಿ-ಬಡಿದು, ಖಳನ-ಇಂದ್ರಜಿತ್ತಿನ, ತೇರಿನ ರಥದ, [೧] ನಟ್ಟನಡುವೆ-ಬಹಳ ಮಧ್ಯದಲ್ಲಿ, ಬಿದ್ದುದು-ಬಿದ್ದಿತು ; ತೇರು ಇಂದ್ರಜಿತ್ತಿನ ರಥವು, + ಆ ಗದೆಯು ಬಿದ್ದರಭಸದಿಂದ ; ಹಿಟ್ಟುದೋರಿತು ಹುಡಿಯಾಗಿ ಹೋಯಿತು. ಬಳಿಕ ಅನಂತರದಲ್ಲಿ, ಅವಂ-ಆ ಇಂದ್ರಜಿತ್ತು, + ಹನುಮನನ್ನು, ಸಬಳ ಮುಸುಂಡಿ... ಮಹಾಯುಧಂಗಳಲಿ=ಸಬಳ-ಹಾರೆ; ಮುಸುಂಡಿ ಮುಳ್ಳುಗೋಲು, ಮುದ್ಗರ-ದೊಡ್ಡಹಾರೆ, ಪಟ್ಟಿ-ಪಟ್ಟಾಕತ್ತಿ, ಪರಿಘ-ಲಾಳಮುಂಡಿಗೆ, ಪರಶ್ವಧ ಗಂಡಕೊಡಲಿ, ಆದಿ ಮೊದಲಾದ, ಮಹಾಯುಧಂಗಳಲಿ-ಭಾರಿಯ ಆಯುಧಗಳಿಂದ, ಇಟ್ಟ-ಹೊಡೆದನು

ವ್ಯಾ॥ [೧] ನಡು+ನಡು=ನಟ್ಟನಡು ಆಧಿಕ್ಯಾರ್ಥದಲ್ಲಿ ದ್ವಿರುಕ್ತಿ, ನಡು ಎಂಬುದು ಉಕಾರಾಂತ ದಿಗ್ವಾಚಕವಾದುದರಿಂದ ಸಪ್ತಮಿಯಲ್ಲಿ ಎ ಪ್ರತ್ಯಯವು.

ತಿದ್ದುವಿಕೆ ;—'ಇಟ್ಟುತೋರಿತು' ಎಂದು ಮೂಲದಲ್ಲಿದೆ. ಅನನ್ವಯುವಾಗುವುದರಿಂದ 'ಹಿಟ್ಟುದೋರಿತು' ಎಂದು ತಿದ್ದಬಹುದು.

೨೭. ಬಳಿಕ-ಅನಂತರದಲ್ಲಿ, + ಆಳುಗಳು ಕಮಲಜದತ್ತರಥವನು=ಕಮಲಜ-ಬ್ರಹ್ಮನಿಂದ, ದತ್ತ-ಕೊಡಲ್ಪಟ್ಟ, ರಥವನು-ತೇರನ್ನು, [ಪುಷ್ಪಕವಿಮಾನವನ್ನು], ನಿಲಿಸಲು ತಂದು ನಿಲ್ಲಿಸಲಾಗಿ, ಸುರೇಂದ್ರಜಿತು-ಇಂದ್ರಜಿತ್ತು, + ಅದನ್ನು, ಅಡರ್ದ-ಹತ್ತಿದನು; ಜಗಂ-ಲೋಕದ ಜನವು, ಕಳವಳಿಸೆ-ತಲ್ಲಣಿಸುವಹಾಗೆ, ಇಂದ್ರಾಗ್ನಿ...ವಾರುಣಪ=ಇಂದ್ರ-ದೇವೇಂದ್ರಾಸ್ತ್ರವು, ಯುಮ-ಯುಮುದೇವಾಸ್ತ್ರವು. ನಿರೃತಿ-ನೈರ್ಋತದೇವಾಸ್ತ್ರವು, ವಾರುಣಪ ವರುಣದೇವತಾಸ್ತ್ರವು ಇವುಗಳನ್ನು, ಶಿಳುಗಳ-ಪ್ರಯೋಗಗಳ, ಸಂದರ್ಭದಲಿ ಹದದಿಂದ, ಮುಂಕೊಳಿಸಿ ಮುಮಾಡಿಕೊಂಡು [ಅಂದರೆ ಹದವಾಗಿ ಪ್ರಯೋಗಿಸಿ], [೧] ವಾಯು ಕ

ಬೇರ...ಸೌರಾದಿಗಳಲಿ= ವಾಯು- ವಾಯುವ್ಯಾಸ್ತ್ರವು, ಕುಬೇರ-ಕುಬೇರದೇವತಾಸ್ತ್ರವು, ಹರ ಈಶ್ವರದೇವಾಸ್ತ್ರವು, ಗಿರಿ ಪರ್ವತಾಸ್ತ್ರವು, ಕುಲಿಶ-ವಜ್ರಾಯುಧಾಸ್ತ್ರವು, ಸೌರ- ಸೂರ್ಯದೇವತಾಸ್ತ್ರವು, ಆದಿಗಳಲಿ ಮೊದಲಾಗುಳ್ಳ ದೇವತಾಸ್ತ್ರಗಳಿಂದ, [೨] ವಜ್ರವಿಗ್ರಹನ= ವಜ್ರ- ವಜ್ರಾಯುಧದಂತೆ, ವಿಗ್ರಹನ ಶರೀರವುಳ್ಳವನಾದ [ಅಂದರೆ ವಜ್ರಾಯುಧದಂತೆ ಗಟ್ಟಿಯಾದ ಶರೀರವುಳ್ಳವನಾದ] ಹನುಮಂತನನ್ನು [೩] ಎಚ್ಚನು ಹೊಡೆದನು.

ವ್ಯಾ॥ ವಾಯುಕುಬೇರ ಹರ ಗಿರಿ ಕುಲಿಶ ಸೌರಗಳು [ದ್ವಂ] ಸೌರಗಳೇ ಆದಿಯಾಗುಳ್ಳವು [ವ್ಯ ಬ ವ್ರೀ•] ತೃತೀಯಾರ್ಥದಲ್ಲಿ ಸಪ್ತಮಿ [೨] ವಜ್ರವಿಗ್ರಹ [ಬ. ವ್ರೀ] [೩] ಇಸುಧಾತುವಿನ ಭೂತಕಾಲದ ಪುಲ್ಲಿಂಗೈಕವಚನರೂಪ.

ವಿಶೇಷ:—ವಾರುಣ ಈ ಅಸ್ತ್ರವು ಮಳೆಯನ್ನು ಸುರಿಸುವುದು. ವಾಯುವಿನ ಅಸ್ತ್ರ ಬಿರುಗಾಳಿಯನ್ನು ಬೀಸುವುದು, ಗಿರಿ [ಪರ್ವತಾಸ್ತ್ರ] ಇದು ಬೆಟ್ಟದ ಆಕಾರದಿಂದ ಮೇಲೆ ಬೀಳುವುದು. ಕುಲಿಶಾಸ್ತ್ರ-ಇಂದ್ರನ ವಜ್ರಾಯುಧದಂತೆ ಕಠಿನವಾಗಿ ಮೇಲೆ ಬೀಳುವ ಅಸ್ತ್ರ.

ತಿದ್ದುವಿಕೆ:—'ನಿಲಿಸಲರಿದ' ಎಂದು ಮೂಲದಲ್ಲಿದೆ. ಅನನ್ವಯವಾಗುವುದರಿಂದ 'ನಿಲಿಸಲಪರ್ದ' ಎಂದು ತಿದ್ದಬಹುದು.

೨೮. [೧] ಆವ ದಿವ್ಯಾಸ್ತ್ರಂಗಳ್ ಯಾವ ದೇವತಾಬಾಣಗಳೂ, ಈತನ ಈ ಹನುಮಂತನ [೧] ನೋವಿಗೆ ಬಾಧೆಗೆ, ಒದಗಿದುದಿಲ್ಲಂ ಹೊಂದಲಿಲ್ಲ; [ಇಂದ್ರಾದಿ ದೇವತೆಗಳು ತಮ್ಮ ಅಸ್ತ್ರಗಳಿಂದ ಬಾಧೆಯುಂಟಾಗದಿರಲೆಂದು ಹನುಮಂತನಿಗೆ ವರಗಳನ್ನು ಕೊಟ್ಟಿರುವುದರಿಂದ ಯಾವ ದೇವಾಸ್ತ್ರಗಳೂ ಹನುಮನನ್ನು ಬಾಧಿಸಲಿಲ್ಲವೆಂದು ತಾತ್ಪರ್ಯ]; ಅಸುರಶರಾವಳಿಗಳು= ಅಸುರ- ಇಂದ್ರಜಿತ್ತೆಂಬ ರಾಕ್ಷಸನ, ಶರ- ಬಾಣಗಳ, ಆವಳಿಗಳು ಶ್ರೇಣಿಗಳು, ಅನಿಲಜನ - ವಾಯುಪುತ್ರನಾದ ಹನುಮಂತನನ್ನು, ಅಳುಕಿಸಲು ಬಾಧೆಯಿಂದ ಭಯಪಡಿಸಲು, ನೆರೆದುದ ಯೋಗ್ಯತೆ ಪಡೆದುದನ್ನು, ಕಾಣೆನು ನೋಡಲಿಲ್ಲ [ಹನುಮಂತನು ವಜ್ರಶರೀರನಾದುದರಿಂದ ಯಾವ ಬಾಣಗಳೂ ಅವನಿಗೆ ಚುಚ್ಚಿ ಬಾಧೆಪಡಿಸಲಾರದೆ ಹೋದುವು] ದೇವರಿಪು ರಾಕ್ಷಸನಾದ ಇಂದ್ರಜಿತ್ತು, ಕಿಡಿಗೆದರಿ ರೇಗಿ, ಆ ವಿಬುಧರ ಆ ದೇವತೆಗಳ, ಅಸು ಪ್ರಾಣವು, ಝುಡಿಯೆ ಅಳ್ಳಾಡಿ ಹೋಗುವ ಹಾಗೆಯೂ [ಭಯದಿಂದ ನಡುಗುವಹಾಗೆಯೂ] ತ್ರಿಯಂಬಕನ-ಈಶ್ವರನ, ತನು ಶರೀರವು, ಝುಮ್ಮೆಂಡೆ ಝುಮ್ ಎನ್ನುವ ಹಾಗೆಯೂ, ಪರರಾ

ಜೀವಸಂಭವ ಶರವ=ವರ ಶ್ರೇಷ್ಠವಾದ, ರಾಜೀವಸಂಭವ-ಬ್ರಹ್ಮನ ಶರ ವ ಅಸ್ತ್ರವನ್ನು [ಶ್ರೇಷ್ಠ ಬ್ರಹ್ಮಾಸ್ತ್ರವನ್ನು,] ಹೂಡಿದಂ-ಧನುಸ್ಸಿನ ಹೆದೆಯಲ್ಲಿ ಸೇರಿಸಿದನು. [ಇಂದ್ರಜಿತ್ತು ಹನುಮನಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ಬಿಲ್ಲಿನ ಹೆದೆಯಲ್ಲಿ ಸಂಧಾನಮಾಡಿದನು.]

ವ್ಯಾ॥ [೧] ದಿವ್ಯಂಗಳಾದ + ಅಸ್ತ್ರಂಗಳ್ [ವಿ ಪೂ] ಅವುವು + ದಿವ್ಯಾಸ್ತ್ರಂಗಳ್ [ಗ]

ಟಿಪ್ಪಣಿ:— ಪೂರ್ವದಲ್ಲಿ ಇಂದ್ರಜಿತ್ತು ಬ್ರಹ್ಮನನ್ನು ಆರಾಧಿಸಿ ಆತನಿಂದ ಬ್ರಹ್ಮಾಸ್ತ್ರವನ್ನು ಪಡೆದನು.

ತಿದ್ದುಪಡಿಕೆ:- ನೋವಿಗೆರಗಿದುದಿಲ್ಲ, ಎಂದು ಮೂಲದಲ್ಲಿದೆ 'ನೋವಿಗೊಡಗಿದುದಿಲ್ಲ, ಎಂದು ತಿದ್ದಿದರೆ ಚೆನ್ನಾಗಿದೆ

೨೯. ಮುಖ್ಯಪದ್ಯ:= + ಇಂದ್ರಜಿತ್ತು ಬ್ರಹ್ಮಾಸ್ತ್ರವನ್ನು ಹೂಡಲು, ಯಮರಾಜ-ಯಮಧರ್ಮರಾಯನು, ಓಡಿದನು-ಭಯದಿಂದ ಪಲಾಯನ ಮಾಡಿದನು; [ಈ ಬ್ರಹ್ಮಾಸ್ತ್ರದಿಂದ ಮತ್ತೇನು ಪಾಪವನ್ನು ಏನು ಮಾಡುವನೋ! ಎಂದು ಭೀತಿಯಿಂದ ಯಮನೋಡಿದನು] ಭವ-ಈಶ್ವರನು, ಭಯದಲಿ-ಭೀತಿಯಿಂದ, ಬೀಡಿಕೆಗೆ-ತನ್ನ ಸ್ಥಾನಕ್ಕೆ, ಸರಿದನು-ಓಡಿದನು, ಸುರೇಂದ್ರಂ-ದೇವೇಂದ್ರನು,ಆನೆಯ ತನ್ನ ವಾಹನವಾದ ಐರಾವತ ಗಜದ, ಜೋಡ-ಅಂಗಿಯನ್ನು, ಕಳಚಿ-ತೆಗೆದು ಕರಿಗೆ ತನ್ನ ವಾಹನದ ಆನೆಗೆ, ಅಂಕುಶವ-ಅಂಕುಶಾಯುಧವನ್ನು, ಇಕ್ಕಿದನು-ಚುಚ್ಚಿದನು, [ಇಂದ್ರನು ಬ್ರಹ್ಮಾಸ್ತ್ರದ ಭೀತಿಯಿಂದ ಶೀಘ್ರವಾಗಿ ಓಡುವುದಕ್ಕೋಸ್ಕರ ತನ್ನ ವಾಹನವಾದ ಐರಾವತಗಜದ ಅಂಗಿಯನ್ನು ತೆಗೆದು ತೊಡಕಿಲ್ಲದಂತೆ ಮಾಡಿ ಅಂಕುಶದಿಂದ ಚುಚ್ಚಿದನು] [೧] ಈಶರ-ಈಬ್ರಹ್ಮಾಸ್ತ್ರವು, + ಹನುಮನನ್ನು, ಕಾಡದು-ಬಾಧಿಸುವುದಿಲ್ಲ [ಕೊಲ್ಲುವುದಿಲ್ಲ] ಅಂದರೆ ಪೂರ್ವದಲ್ಲಿ ಬ್ರಹ್ಮನು ತನ್ನ ಬ್ರಹ್ಮಾಸ್ತ್ರದಿಂದಲೂ ಮರಣವಾಗದಂತೆ ವರವನ್ನು ಕೊಟ್ಟಿರುವುದರಿಂದ ಈ ಬ್ರಹ್ಮಾಸ್ತ್ರವು ಹನುಮನನ್ನು ಕೊಲ್ಲಲಾರದು ಎಂದು ತಾತ್ಪರ್ಯವು]; + ಬ್ರಹ್ಮಾಸ್ತ್ರವು, ಕಟ್ಟಿದರೆ ಹನುಮನನ್ನು ಬಂಧಿಸಿದ ಪಕ್ಷದಲ್ಲಿ, (೨) ಕಡುಗೋಪಂ ಈ ಇಂದ್ರಜಿತ್ತಿನ ಮಹಾಕೋಪವು, ಕೈಗೂಡುವುದು ಫಲಿಸುವುದು [ಅಂದರೆ ಪೂರ್ವದಲ್ಲಿ ಬ್ರಹ್ಮನು ಹನುಮನಿಗೆ ತನ್ನ ಬ್ರಹ್ಮಾಸ್ತ್ರದಿಂದಲೂ ಮರಣವಾಗದೆ ಮುಹೂರ್ತಕಾಲ ಮಾತ್ರ ಅದಕ್ಕೆ ಕಟ್ಟು ಬಿದ್ದಿರುವಂತೆ ವರವನ್ನು ಕೊಟ್ಟಿರುವುದರಿಂದ ಆ ಬ್ರಹ್ಮಾಸ್ತ್ರವು ಮುಹೂರ್ತಮಾತ್ರ ಹನುಮಂತನನ್ನು ಕಟ್ಟಿಹಾಕಿದರೆ ಆಗ ಇಂದ್ರಜಿತ್ತು ತನ್ನ ಮಹಾಕೋಪದ ಫಲವನ್ನು ತೋರಿಸದೆ ಬಿಡನು ಎಂದು

ತಾತ್ಪರ್ಯ] + ಆ ಇಂದ್ರಜಿತ್ತು, ಮಾರುತಿಯುಂ ಹನುಮಂತನನ್ನು, ಏನನುಮಾಡುವನೊ ಏನುಮಾಡುವನೋ! + ಎಂಬ್ಬ, ಉಳಿದ ಅಸುರರು-ಮುಖ್ಯ ದೇವತೆಗಳು, ಎನುತ ಹೇಳುತ್ತ, ಅಡಗಿದರು ಭಯದಿಂದ ಅಪ್ಪಿತು ಕೊಂಡರು

ವ್ಯಾ|| ಇದು + ಶರಂ [ಗ] [೨] ಕಡಿದು + ಕೋಪಂ=ಕಡುಗೋಪಂ [ವಿ. ಪೂ] ಅರಿ, ಸ

೩೦. ಅನಿಲನಂದನ ಹನುಮಂತನ, ಅಂಜಿಕೆಗೆ ಬ್ರಹ್ಮಾಸ್ತ್ರದಿಂದುಂಟಾಗುವ ವಿಪತ್ತಿಗೋಸ್ಕರ, ಶಾಕಿನಿಗಣ ಹೆಣವನ್ನು ತಿನ್ನುವ ಶಾಕಿನಿಯೆಂಬ ಶಕ್ತಿಯ ದೆವ್ವಗಳ, ಗಣ ಸಮೂಹವು, ರಣದ- ಯುದ್ಧದ ಎಡೆಯ ಪ್ರದೇಶವನ್ನು, ಹೊಗಲು ಪ್ರವೇಶಿಸಲು, ಅಂಜಿ ಭಯಪಟ್ಟು, ಅತ್ತತ್ತ-ಆಚೆಗೆ, ಸರಿದುದು ಓಡಿತು; ಅಲ್ಲಲ್ಲಿ ಆಯಾಸ್ಥಳಗಳಲ್ಲಿ, ಹೆಣನ-ಶವದ, ತೊಲಗಿದ ಅಗಲಿದ, ಜೀವಮಂ ಜೀವವನ್ನು, ಒಯ್ವು-ತೆಗೆದು ಕೊಂಡು ಹೋಗುವ, ಕಾಲನದೂತರು-ಯಮನ ಆಳುಗಳು ಪ್ರಾಣಿಕಟಿಯ ಮುಂಗೈಯ ಅಡಿಯ ಭಾಗವನ್ನು, ಮರೆಮಾಡಿ ಮುಖಕ್ಕೆ ಮುಚ್ಚಿಕೊಂಡು [೧] ಸಮರಾಂಗಣದ ಯುದ್ಧರಂಗದ, ಭೂಮಿಯ ಪ್ರದೇಶದ, ಸೀಮೆಯಲಿ ಸರಹದ್ದಿನಲ್ಲಿ [೨] ಮೈ ಹಣುಗಿ ಶರೀರವನು ಮುದುರಿಕೊಂಡು, ಹೆದರುತಲಿ ಭಯಪಡುತ್ತ ಇರ್ದರು ಇದ್ದರು

ವ್ಯಾ|| ಸಮರದ ಅಂಗಣ [ಷ.ತ] [೩] ಮೈಯುಂ + ಹಣುಗಿ (ಕ್ರಿ)

ವಿ|| ಸರಿ ಇದು ಧಾತುವಾದರೆ ಓಡುವುದು, ನಾಮವಾದರೆ ಸಮ

ಟಿಪ್ಪಣಿ: ಶಾಕಿನಿ-ಯುದ್ಧಭೂಮಿಯಲ್ಲಿ ಹೆಣವನ್ನು ತಿನ್ನುವ ಶಕ್ತಿ ರೂಪವಾದ ದೆವ್ವ

೩೧. ಕಪಿ ಎಲೆ ಕೋತಿಯೇ! + ಈ ಅಸ್ತ್ರವನ್ನು, ಆತುಕೋ-ತೆಗೆದುಕೋ [ಪರಿಗ್ರಹಿಸು] ನೀಂ-ನೀನು, ಕಪಿಯು-ಕೋತಿಯು, ರೂಪಿನ ಆಕಾರವುಳ್ಳ, ಭೂತಪತಿ-ಈಶ್ವರನು, ಆಗು ಆಗಿರು, ಅಲ್ಲದೊಡೆ-ಅಥವಾ, ಬೊಮ್ಮನ ಬ್ರಹ್ಮನ, ತಾತಂ-ತಂದೆಯು [ಅಂದರೆ ವಿಷ್ಣುವು], ಆಗು ಆಗಿರು; ಮೇಣ್ ಅಥವಾ, ನೀಂ ನೀನು, ಬೊಮ್ಮ-ಬ್ರಹ್ಮನು, ಆಗು ಆಗಿರು ನೀ ನೀನು, (೧) ಈತುಶಾರದ ತೋಮರವ= ಈ, ತುಶಾರದ ಕ್ರೂರವಾದ, ತೋಮರವ-ಬ್ರಹ್ಮದಂಡವನ್ನು (ಬ್ರಹ್ಮಾಸ್ತ್ರವನ್ನು) (೨ ನಿರ್ಭೀತಿಯಲಿ ಭಯವಿಲ್ಲದೆ ಗೆಲಿದೆ ಆದೊಡೆ ಜಯಿಸಿದವನಾದ ಪಕ್ಷದಲ್ಲಿ ತಾ ನಾನು, ನಿನಗೆ, ಸೋತವನು ಅಪಜಯ ಹೊಂದಿದವನು; + ಎಂದು ಇಂದ್ರಜಿತ್ತು ಎನುತ ಹೇಳುತ್ತ, ಎಚ್ಚ-ಬ್ರಹ್ಮಾಸ್ತ್ರವನ್ನು ಪ್ರಯೋ

ಗಿಸಿ, ಬೊಬ್ಬಿರಿದ ಗರ್ಜಿಸಿದನು

ವ್ಯಾ॥ (೧) ತುಷಾರದ + ತೋಮರಂ (ಅಲುಕ್ಸಮಾಸ) ಇದು + ತುಷಾರದ ತೋಮರಂ [ಗ] (೨) ಪ್ರಾದಿ. ಸ

ವಿ॥ ಭೂತಪತಿ-ಈಶ್ವರ, ಬೊಮ್ಮನತಾತ ವಿಷ್ಣು.

೭೨. ಕುಶ-ಕುಶನೇ! ಕೇಳು; + ಬ್ರಹ್ಮಾಸ್ತ್ರದಿಂದ, ಸುರಿವ-ಉದುರುತ್ತಿರುವ, ಕಿಡಿ ಅಗ್ನಿಕಣಗಳು, (೧) ಅಪರಿದುವು-ಎರಿದುವು (ಹಾರಿದುವು); (೨) ಕಬ್ಬೊಗೆ ಕಪ್ಪಾದ ಹೊಗೆಯು, ಹರೆದುದು ವ್ಯಾಪಿಸಿತು; ಉರಿ ಜ್ವಾಲೆಯು, ಸಮನಿಸಿತು-ಉಂಟಾಯಿತು; (೩) ಆ ಮಹಾಶರದ-ಆ ಅಧಿಕವಾದ ಬ್ರಹ್ಮಾಸ್ತ್ರದ, ಕೊಲುವ ಪ್ರತಿಭಟನನ್ನು ಸಂಹರಿಸುವ, ಉಬ್ಬರದ ಉತ್ಸಾಹವುಳ್ಳ, ಬಗೆ ಅಭಿಪ್ರಾಯವು, ಬಯಲು ನಿಷ್ಪ್ರಯೋಜನವಾದುದು, (೪) ಅಭ್ಯಸ್ತ ಆಯಿತು + ಆ ಬ್ರಹ್ಮಾಸ್ತ್ರವು, ಒಂದರೆಗಳಿಗೆ ಮಾತ್ರದಲ್ಲಿ ಒಂದು ಅರ್ಧ ಗಳಿಗೆಯಲ್ಲಿ, ಹೊದ್ದಲು ಹನುಮನನ್ನು ತಾಗಲು, ಅಮ್ಮದೆ ಶಕ್ತವಾಗದೆ (ಹನುಮನನ್ನು ತಗುಲಲಾರದೆ), ತಿರುತಿರುಗಿ ಹಿಂಜರುಗಿ ಹಿಂಜರುಗಿ, ಬರುತ ಇರ್ದುದು ಬರುತ್ತಿದ್ದಿತು; ಹನುಮನ ಆಂಜನೇಯನ, (೫) ವಿಕ್ರಮಾಗ್ನಿಯು ಬೆಂಕಿಯಂತಿರುವ ಪರಾಕ್ರಮದ. ಹರಹು ಅತಿಶಯವು (೬) ಅದು ಎಂತುಟೊ ಎಂಥಾದ್ದೋ! ಅರರೆ-ಆಶ್ಚರ್ಯವು!

ಭಾವಾರ್ಥ:—ಕೊಲುವುಬ್ಬರದ ಬಗೆಬಯಲಾಯ್ತು-ಬ್ರಹ್ಮಾಸ್ತ್ರವು ಹನುಮನನ್ನು ಕೊಲ್ಲಬೇಕೆಂದು ಉತ್ಸಾಹದಿಂದ ಅಭಿಪ್ರಾಯಪಟ್ಟುದು ಸಾಗದೆ ಹೋಯಿತು.

ವ್ಯಾ॥ ಕಿಡಿ, ಎಂಬ ಕರ್ತೃವು ಜಾತ್ಯೇಕವಚನದಲ್ಲಿರುವುದರಿಂದ ಈ ಕ್ರಿಯಾಪದವು ಬಹುವಚನದಲ್ಲಿದೆ. (೨) ಕರಿದು + ಪೊಗೆ = ಕಬ್ಬೊಗೆ (ಕ. ವಿ. ಪೂ) (೩) ಮಹತ್ತಾದ ಶರಂ (ವಿ. ಪೂ) ಅದು ಮಹಾಶರಂ (ಗ) (೫) ಅಗ್ನಿಯಂತಿರುವ ವಿಕ್ರಮಂ (ಉ ತ್ತ) (೬) ಆವುದು + ತುಟು = ಎಂತುಟು (ಪ್ರಕಾರಾರ್ಥದಲ್ಲಿ ತುಟು ಪ್ರತ್ಯಯ.)

ವಿ॥ ಅರರೆ ಹನುಮನ ವಿಕ್ರಮಾಗ್ನಿಯು ಹರಹದೆಂತುಟೊ-ಇದ

ನ್ನು ಸಮರ್ಥಿಸುವಿ ;—ಬ್ರಹ್ಮಾಸ್ತ್ರವು ಹನುಮನನ್ನು ಹೊದ್ದಲಾರದೆ ತಿರುತಿರುಗಿ ಬರುತ್ತಿದ್ದಿತು. ಆದುದರಿಂದ ಹನುಮನ ವಿಕ್ರಮಾಗ್ನಿಯು ಅತಿಶಯವು ಅನಿವಾರ್ಯವಾದುದು.

ಟಿಪ್ಪಣಿ:—ಗಳಿಗೆ-೨೪ ನಿಮಿಷಗಳು. ಮುಹೂರ್ತ ೨ ಗಳಿಗೆ.

೩೩. ಅಂಭೋಜಭವಂ-ಬ್ರಹ್ಮನು, ಅಂಬರದಲಿ-ಅಂತರಿಕ್ಷದಲ್ಲಿ, ಕರವ-ಕ್ಕೈಗಳನ್ನು, ಮುಗಿದು- ಜೋಡಿಸಿಕೊಂಡು, ಈತನ-.ಈ ಹನುಮಂತನನ್ನು, ಬೇಡಿಕೊಂಡನು-ಹೀಗೆ ಪ್ರಾರ್ಥಿಸಿಕೊಂಡನು ; ನಾವ್-ನಾವು,(೧) ಮುನ್-ಪೂರ್ವದಲ್ಲಿ, ಇತ್ತ-ನಿನಗೆ ಕೊಟ್ಟ, ವರದಿಂ-ವರದ ಕಾರಣದಿಂದ, (ಅಥವಾ ವರದ ರೀತಿಯಿಂದ), ನೀಂ ನೀನು, ಎನಗೆ ನನಗೆ, ವರವಕೊಡು-ಅನುಗ್ರಹವನ್ನು ಮಾಡು (ಅಂದರೆ ಬ್ರಹ್ಮಾಸ್ತ್ರದಿಂದ ಸಾವಿಲ್ಲದೆ ಮುಹೂರ್ತಮಾತ್ರ ಕಟ್ಟುಬೀಳುವಂತೆ ನಾವು ವರವನ್ನು ಕೊಟ್ಟಿರುವುದರಿಂದ ಕಟ್ಟುಬಿದ್ದು ಆ ವರವನ್ನು ನಡಿಸು) ಅದು-ಪ್ರಸಿದ್ಧವಾದ, ಎಮ್ಮದು-ನಮ್ಮ ಸಂಬಂಧಿಯಾದ, ಶರಂ-ಬಾಣವು (ಅಂದರೆ ಬ್ರಹ್ಮಾಸ್ತ್ರವು), (೨) ಅಮೋಘಂ-ವ್ಯರ್ಥವಾಗದೆ ಇರತಕ್ಕುದು ; + ಎಂದು, ಬ್ರಹ್ಮನು, ಎನೆ-ಪ್ರಾರ್ಥಿಸಿ ಹೇಳಲು, ಅರಿಭಯಂಕರಹನುಮ ಶತ್ರುಗಳಿಗೆ ಭೀತಿಯನ್ನುಂಟುಮಾಡುವವನಾದ ಹನುಮಂತನು, ಮತ್ತೆ-ತಿರುಗಿ (೩) ಆ ಬಲುಸರಳ-ಆ ಮಹಾಸ್ತ್ರವನ್ನು (ಆ ಬ್ರಹ್ಮಾಸ್ತ್ರವನ್ನು), ಕರೆದನು-ಬರಹೇಳಿದನು ; ಕದನಕೇಳಿಯಲಿ-ಯುದ್ಧಲೀಲೆಯಿಂದ (೪) ಕಟ್ಟುವಡೆದನು-ಬ್ರಹ್ಮಾಸ್ತ್ರದಲ್ಲಿ ಬಂಧನವನ್ನು ಹೊಂದಿದನು (ಬ್ರಹ್ಮಾಸ್ತ್ರದಲ್ಲಿ ಸಿಕ್ಕಿದನು

ಭಾವಾರ್ಥ ;—ವರವಕೊಡು ನೀನೆನಗೆ ನಾವ್ ಮುನ್ನಿತ್ತ ವರದಿಂದ-ನಾವು ಪೂರ್ವದಲ್ಲಿ ನಿನಗೆ ವರವನ್ನು ಕೊಟ್ಟಿರುವುದರಿಂದ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು ಆ ವರವನ್ನು ಸಲ್ಲಿಸು

ವ್ಯಾ॥ (೧) ಅವ್ಯಯವು (೨) ಮೋಘವಲ್ಲದುದು (ಪ್ರಾ. ಸ) (೩) ಬಲ್ಲಿತ್ತು + ಸರಳ್=ಬಲ್ಸರಳ್ (ಬಲುಸರಳು) (ಕೇ. ಪೆ. ಪೂ) ಅದು ಬಲುಸರಳು (ಗ) (೪) ಕಟ್ಟಂಪಡೆದನು (ಕಿ)

೩೪. ರಣವಾದ್ಯತತಿ-ಯುದ್ಧವಾದ್ಯಗಳ ಸಮೂಹಗಳು (೧) ಒದರಿದುವು-ಧ್ವನಿಮಾಡಿದುವು, ಖಳ ರಾಕ್ಷಸನಾದ ಇಂದ್ರಜಿತ್ತು, ಕೆದರಿಕೊಂಡು-ರೇಗಿಕೊಂಡು, ಬ್ರಹ್ಮಾಸ್ತ್ರದಲಿ-ಬ್ರಹ್ಮಬಾಣದಲ್ಲಿ, ಕಪಿಯ-ಹನುಮನನ್ನು, ವರೂಥದಿಂದ-ತನ್ನ ರಥದ ಬುರುಕಿಯಿಂದ, ಒಡೆದು ಒಡೆದು-ಒತ್ತಿಒತ್ತಿ, ಬಿಗಿದನು-ಕಟ್ಟಿದನು, ಸೇದಿದನು-ಎಳೆದನು, ಬೆದರಿ-ಭಯಪಟ್ಟು, ಹೋದ-ನಡೆದ, ಅಣ್ಣಗಳು ಭಟರಗುಂಪು, ಕೈಗಳಲಿ-ಹಸ್ತಗಳಿಂದ, ಎದೆಯ-ಹೃದಯವನ್ನು, ನೇವರಿಸುತ್ತ-ಸವರಿಕೊಳ್ಳುತ್ತ (ಅಂದರೆ ಎದೆಯ ನೇವರಿಕೆಯಿಂದ ಸಂತೈಸಿಕೊಳ್ಳುತ್ತ), ರಣದಂಪದಟ-ಯುದ್ಧಪ್ರಭಾವವುಳ್ಳ (೧) ನರಕೇಸರಿಯ ದೂತನನು-ನರಸಿಂಹಸ್ವಾಮಿ ಸ್ವರೂಪನಾದ ರಾಮನ ಸೇವಕನಾದ ಹನುಮನನ್ನು, ಒಗ್ಗಿನಲಿ-ಒಕ್ಕಟ್ಟಿನಿಂದ, ಐದಿತು-ಸೇರಿತು

ವ್ಯಾ॥ (೧) ನರನಾಗಿಯೂ ಕೇಸರಿಯಾಗಿಯೂ ಇರುವವನು (ವಿ. ಭ)

ತಿದ್ದುವಿಕೆ:-'ಹೊಯ್ದಣ್ಣಗಳು' ಎಂದು ಮೂಲದಲ್ಲಿದೆ. ಅನನ್ವಯ ಆದುದರಿಂದ 'ಹೋದಣ್ಣಗಳು' ಎಂದು ತಿದ್ದಬಹುದು

ಏಳನೆಯ ಸಂಧಿ.

ಸೂಚನೆ:-ಚಂಡಬಲ=ಚಂಡ-ತೀಕ್ಷ್ಣವಾದ, ಬಲ-ಸಾಮರ್ಥ್ಯವುಳ್ಳವನಾದ, ಗಂಡಗಂಡರ-ಧೀರಪತಿಗಳಿಗೆ, ಗಂಡ-ಒಡೆಯನಾದ, ರಣದೊಳುದ್ದಂಡ-ಯುದ್ಧದಲ್ಲಿ ಅಧಿಕನಾದ, ಮಾರುತಿ-ಹನುಮಂತನು ರಾವಣನ-ರಾವಣಾಸುರನನ್ನು, ಸಭೆಯಲಿ-ಆಸ್ಥಾನದಲ್ಲಿ (೧) ಸುಪ್ರತಾಪದಲಿ-ಒಳ್ಳೆಯ ಪರಾಕ್ರಮದಿಂದ, ಜರಿದು-ತಿರಸ್ಕರಿಸಿ ಮಾತಾಡಿ, ಮೆರೆದನು-ಪ್ರಕಾಶಿಸಿದನು

ವ್ಯಾ॥ (೧) ಸುಷ್ಠುವಾದ ಪ್ರತಾಪಂ (ಪ್ರಾ. ೧)

ಭಾವಾರ್ಥ:-ಗಂಡಗಂಡರಗಂಡ-ಮಹಾಧೀರಶ್ರೇಷ್ಠ

೧. ಕುಶ-ಎಲೆ ಕುಶನೇ! ಕೇಳಿದೈ-ಕೇಳಿದೆಯಾ? (೧) ಸೋಲದ-ಹನುಮನಿಂದ ಅಪಜಯವುಳ್ಳವರಾದ (ಹನುಮನಿಗೆ ಸೋತುಹೋಗಿದ್ದ), ಅಸುರರು-ರಾಕ್ಷಸರಗುಂಪು, ಕನಲ್ದು-ಕೋಪಗೊಂಡು, ವಿಷಮ ರಾಕ್ಷಸ ಕಾಲಭೈರವನನು=ವಿಷಮ-ಕ್ರೂರರಾದ, ರಾಕ್ಷಸ-ರಕ್ಕಸರಿಗೆ ಕಾಲಭೈರವನನು, ಪ್ರಳಯಕಾಲದ ಭೈರವಸ್ವಾಮಿ ಪ್ರಾಯನಾದ ಹನುಮನನ್ನು, (೨) ಕಠಾರಿಕುಂತದಲಿ-ತಿವಿವಕಠಾರಿಯೆಂಬ ಆಯುಧವು ಕುಂತದಲಿ-ಈಟಿಯು ಇವುಗಳಿಂದಲೂ, (೩) ಲಾಳವಿಂಡಿಗೆ ಭಿಂಡಿವಾಳ ಕರಾಳಖಡ್ಗ ... ಗದಾದಿಶಸ್ತ್ರದಲಿ= ಲಾಳವಿಂಡಿಗೆ ಲಾಳಮುಂಡಿಗೆಯು, ಭಿಂಡಿವಾಳ- ಮಾರುದ್ದದ ಗುದಿಗೆ, ಕರಾಳ- ಭಯಂಕರವಾದ, ಖಡ್ಗ - ಕತ್ತಿಯು, ಮುಸುಂಡಿ ಮುಳ್ಳುಗೋಲು, ಮುದ್ಗರ-ದೊಡ್ಡಹಾರೆಯು, ಶೂಲ-ಶೂಲಾಯುಧವು ಪಟ್ಟಸ-ಮೊನೆಗತ್ತಿಯು, ಸುರಗಿ-ಸೂರಿಕತ್ತಿ, ಪರಶು-ಗಂಡಕೊಡಲಿ, ಗದಾ ಲೋಡು, ಆದಿ ಮೊದಲಾಗುಳ್ಳ, ಶಸ್ತ್ರದಲಿ-ಆಯುಧಗಳಿಂದ ಕೂಡಿ, ಮುತ್ತಿಕೊಂಡರು-ಆವರಿಸಿತು

ವ್ಯಾ॥-ಸೋಲುಧಾತುವಿನ ಮೇಲೆ ಭಾವಾರ್ಥದಲ್ಲಿ ಅಪ್ರತ್ಯಯ. ಸೋಲು + ಅ (೨) ದ್ವಂ (೩) ಕರಾಳಖಡ್ಗ (ಸಿ. ಪೂ) ಲಾಳವಿಂಡಿಗೆ

...ಗದೆಗಳು (ದ್ವಂ) ಗದೆಗಳೇ ಆದಿಯಾಗುಳ್ಳವು (ಬ.ವ್ರೀ) ಗದಾದಿಯಾ ಪಶಸ್ತ್ರಂ (ವಿ. ಪೂ)

೨. ಕೋಳಾಹಳದ-ಗದ್ದಲವುಳ್ಳವರಾದ, (೧) ಬಲುಗಡಿಯ-ಮಹಾಶಕ್ತಿಯುಳ್ಳವರಾದ, ಭಟರು ರಾಕ್ಷಸಯೋಧರು, ಅಬ್ಬರಿಸಿ-ಆರ್ಭಟಮಾಡಿ + ಹನುಮನನ್ನು, ಬಡಿದರು-ಅಪ್ಪಳಿಸಿದರು; ಇರಿದರು-ಚುಚ್ಚಿದರು; ಹೊರಳಿಚಿದರು ಉರುಳಾಡಿಸಿದರು ; ಎಡೆಗೆಡಹಿಡಹಿದರು- ಅಂಗಲಾಚಿಬೀಳಿಸಿದನು, ಸೂಳುಪಾಡಿನಲ-ಸಂಚಿನಿಂದ, ಸದೆದರು-ಗುದ್ದಿದರು ಹೊಡೆಯದಿರಿರೋ-ಇದನ್ನು ಬಡಿಯಬೇಡಿರೋ !. ಈಕಪಿ-ಈಕೋತಿಯು, ಸಾಯದು-ಮಡಿಯದು; + ಈ ಕಪಿಯನ್ನು, ಹೆಡಗುಡಿಯಬಿಗಿದು- ಹಿಂಗುಟ್ಟುಮುರಿಕಟ್ಟಿ, ಅಸುರವಲ್ಲಭನ-ರಾಕ್ಷಸರಾಜನಾದ ರಾವಣನ, ಎಡೆಗೆ-ಸಮಿಪಕ್ಕೆ, (೨) ಪೊರಕೊಂಡೊಯ್ವಂ ಹೊತ್ತುಕೊಂಡು ಹೋಗೋಣ; + ಎಂದು ಕೆಲವು ಭಟರು, ಎನೆ ಹೇಳಲು, ಖಳವ್ರಾತ-ರಾಕ್ಷಸರಸಮೂಹವು, + ಹನುಮನನ್ನು, ಹೊತ್ತುದು-ವಹಿಸಿತು

ವ್ಯಾ॥ ಬಲ್ಗಿತು, + ಗಡಿ=ಬಲ್ಗಡಿ (ಬಲುಗಡಿ) ಕ.ವಿ.ಪೂ)
ಒಯ್ವಂ-ಒಯ್ ಧಾತುವಿನ ಮೇಲೆ ವಿಧ್ಯರ್ಥದಲ್ಲಿ ಉತ್ತಮಪುರುಷ ಬಹುವಚನದಲ್ಲಿ ಅಂ ಪ್ರತ್ಯಯ-ಒಯ್ + ವ + ಅಂ.

ತಿದ್ದುವಿಕೆ:- 'ಒಡೆದರರಿದರು, ಎಂದಿದೆ. 'ಬಡಿದರಿರಿದರು, ಎಂದು ತಿದ್ದಬಹುದು 'ಹೊರಕೊಂಡೊಯ್ವನೆ, ಎಂಬುದನ್ನು 'ಹೊರಕೊಂಡೊಯ್ವವನೆ, ಎಂಬುದನ್ನು 'ಹೊರಕೊಂಡೊಯ್ವವೆನೆ, ಎಂದು ತಿದ್ದಬಹುದು

೩. ಧರೆಯನು-ಭೂಮಿಯನ್ನು, ಕಿತ್ತು-ಉತ್ಪಾಟಿಸಿ, ಧರಿಸುವ-ಹೊತ್ತುಕೊಳ್ಳುವರಾದ, (೧) ಎಣ್ಪತ್ತೈದುಸಾವಿರ- ಲಕ್ಷ ಸಾವಿರದಲೆಕ್ಕವುಳ್ಳ, ಅತಿಬಲ ಸರಿಗರಕ್ಕಸರು- ಬಹುಶಕ್ತಿಯುಳ್ಳಭಾರಿ ರಾಕ್ಷಸರು, + ಹನುಮನನ್ನು, ಎಳೆಂಟು ಸೂಳಲಿ ಎಳೆಂಟು ಮಡಿಕೆಯಲ್ಲಿ ಹೊತ್ತುಹೊತ್ತು-ವಹಿಸಿವಹಿಸಿ, ಸತ್ತುದು ಅತ್ಯಾಯಾಸಪಟ್ಟಿತು; (ಅತ್ಯಾಯಾಸವಾಯಿತೇಹೊರತು ಹನುಮನನ್ನು ಹೊರಲಿಕ್ಕೆ ಆಗಲಿಲ್ಲವೆಂದು ಭಾವ) + ಈ ಕಪಿಯನ್ನು, ಎತ್ತದಿರಿ ಎತ್ತಬೇಡಿರಿ; ಇದನನು ಈ ಕಪಿಯನ್ನು (೨) ಬಲುಮಿಣಿಯಲಿ-ಮಸಣ್ಣಾದ ಚರ್ಮದ ಹಗ್ಗದಿಂದ, ಸುತ್ತಿ-ಸುತ್ತುಹಾಕಿ, ಸಿಂಧುರಘಟೆಗಳಿಂದ=ಸಿಂಧುರ-ಆನೆಗಳ, ಘಟೆಗಳಿಂದ-ಸಮೂಹಗಳಿಂದ ಎಳಸುತ್ತ- ಸೆಳೆಸುತ್ತ, ಕೊಂಡೊಯ್ಯಿ- ತೆಗೆದುಕೊಂಡುಹೋಗಿರಿ; + ಎಂದು ಕೆಲವರು ರಾಕ್ಷಸರು, ಎನಲು- ಹೇಳಲು + ಆ ರಾಕ್ಷಸರು, ಕಪಿಯ ಹನುಮನನ್ನು ಆನೆಯಲಿ-ಗಜಗಳಲ್ಲಿ, ಹಮ್ಮಿದರು ಮಿಣಿಯಿಂದ ಸೇರಿಸಿದರು,

ವ್ಯಾ॥ (೧) ಎಂಟು + ಪತ್ತು=ಎಣ್ಬತ್ತು (ಗ) ಎಣ್ಬತ್ತು + ಸಾವಿರಂ (ಗ) (೨) ಬಲ್ಲಿತ್ತು + ಮಿಣಿ=ಬಲ್ಮಿಣಿ (ಬಲುಮಿಣಿ) ಕ. ವಿ. ಪೂ

೪. (೧) ಇಭರ್ಾಸಿರಘಟಾವಳಿ=ಇಭರ್ಾಸಿರ-ಎರಡುಸಾವಿರವಾದ, ಘಟಾ-ಆನೆಗಳ ಸಮೂಹಗಳ, ಆವಳಿ ಶ್ರೇಣಿಯು, + ಹನುಮನನ್ನು, ಎಳೆಯಲು-ಸೆಳೆಯಲು, ಅನಿಲಜ-ಹನುಮಂತನು, ಜಡಿದ-ತನ್ನ ಶರೀರವನ್ನು ಭೂಮಿಗೆ ಅವುಕಿದ, ಜವದ- ವೇಗದ, ಉಗ್ಗಡದ- ಹೆಚ್ಚಿಗೆಯ ಸತ್ತ್ವದಲಿ-ಶಕ್ತಿಯಿಂದ, ನೆಲಕೆ-ಭೂಮಿಗೆ, ದಾಡೆಯಂ ಕೊಂಬುಗಳನ್ನು, ಊರಿ-ಒತ್ತಿ, ಛೀಳಿಟ್ಟು ಕಿರಿಚಿಕೊಂಡು, ಅಳಿದುವು ಸತ್ತುವು (ಎರಡು ಸಾವಿರ ಆನೆಗಳ ಸಮೂಹದ ಶ್ರೇಣಿಯು ಹನುಮನನ್ನು ಎಳೆಯಲು ಹನುಮನು ತನ್ನ ಶರೀರವನ್ನು ಭೂಮಿಗೆ ಅವುಕಿದ ಬಲುಜೋರಿನ ಶಕ್ತಿಯಿಂದ ಅವನನ್ನು ಎಳೆಯುವುದಕ್ಕಾಗದೆ ನೆಲಕ್ಕೆ ಕೊಂಬುಗಳನ್ನೂರಿ ಸಾಹಸಮಾಡಿ ಕಿರಿಚುತ್ತ ಸತ್ತುವು); ಹರಿರಿಪು- ಇಂದ್ರಜಿತ್ತು. ಇದರ ಕೂಡೆ-ಈಕಪಿಯ ಸಂಗಡ; ಭಲಂ ಹಠವೇಸರಿ,ಎನುತ-ಎಂದೆನ್ನುತ್ತ, (ಅಂದರೆ ಇದನ್ನು ತೆಗೆದುಕೊಂಡೇ ಹೋಗಬೇಕು ಎಂದು ಹಠವಾಡಿ ಹೇಳುತ್ತ) ಹಲುಮೊರೆದು-ಹಲ್ಲುಗಳನ್ನು ಕಡಿದು, (೨) ಕುಂಭಕರ್ಣ ಮಹಾನಿಶಾಚರನ-ಕುಂಭಕರ್ಣನೆಂಬ ದೊಡ್ಡ ರಾಕ್ಷಸನ (ಚಿಕ್ಕಪ್ಪನ), ವಜ್ರದ-ವಜ್ರಮಣಿಯ, ಹಳಿಯ-ಹಲ್ಲೆಗಳಿಂದ ರಚಿತವಾದ, ರಥವನು-ತೇರನು, ತರಿಸಿದನು-ಬರಮಾಡಿದನು

ವ್ಯಾ॥ (೧) ಎರಡು ಸಾಸಿರಂ=ಇಭರ್ಾಸಿರಂ, ಎರಡು ಎಂಬುದಕ್ಕೆ ಇರ್ ಪೂರ್ವಾದೇಶವು ಬರುವುದು ಇರ್ + ಸಾವಿರಂ=ಇಭರ್ಾಸಿರಂ॥ಯಕಾರವಕಾರಗಳು ಹೊರತಾಗಿ ಉಳಿದ ವ್ಯಂಜನಗಳಿಗೆ ಸಂಖ್ಯಾವಾಚಕದ ಸಕಾರವು ಪರವಾದರೆ ಆ ಸಕಾರಕ್ಕೆ ಭಕಾರಾದೇಶವುಂಟು (೨) ಮಹಾನಿಶಾಚರಂ (ವಿ. ಪೂ, ಕುಂಭಕರ್ಣನೆಂಬ ಮಹಾನಿಶಾಚರಂ (ಸಂ. ಪೂ)

ಟಿ॥ ಹರಿರಿಪು-ಇಂದ್ರಜಿತ್ತು, ಹಳಿ-ಇದು ಧಾತುವಾದರೆ ನಿಂದಿಸುವುದು ನಾಮವಾದರೆ ಹಲ್ಲೆ.

ತಿದ್ದುವಿಕೆ:- ಎಳೆಯಲಿಸರ್ಾಸಿರ, ಎಂದು ಮೂಲದಲ್ಲಿದೆ. ವ್ಯಾಕರಣ ಸೂತ್ರಪ್ರಕಾರವಾಗಿ ಇಭರ್ಾಸಿರ, ಎಂದು ತಿದ್ದಬಹುದು

೫. + ರಾಕ್ಷಸರು, ಕುಂಭಕರ್ಣನ ರಥದ, ಮಿಳಿನೊಗನ= ಮಿಳಿ-ಚರ್ಮದ ಹಗ್ಗವು, ನೊಗನ ನೊಗವು ಇವುಗಳನ್ನೂ, (೧) ಕೀಲಚ್ಚುಕೂಬರಬಳೆಮೊಳೆಯನು=ಕೀಲು ಗೂಟವು, ಅಚ್ಚು-ರಥದಮಧ್ಯದ ಅಚ್ಚಿನಮರವು, ಕೂಬರ-ನೊಗವನ್ನು ಹೊರುವ ಮೂಕಿಮರವು, ಬಳೆ-ಚಕ್ರದಲ್ಲಿ ಅಚ್ಚು ಸೇರುವ ಕಣೆ ನ ಸುತ್ತಿನ ಬಳೆಯು, ಮೊಳೆಯನು ಅಚ್ಚಿನ

ಮರದ ಕೊನೆಯಲ್ಲಿ ಚಕ್ರಕ್ಕೆ ಅಡ್ಡಿಯಾದ ಕಡಾಣಿಮೊಳೆಯು ಇವುಗಳನ್ನೂ, ಅರಯು-ಸರಿಯಾಗಿವೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ಹೆರೆಯನು-ಚಕ್ರವು ಸುಲಭವಾಗಿ ತಿರುಗುವುದಕ್ಕೋಸ್ಕರ ರಂಧ್ರದ ಸ್ಥಾನದಲ್ಲಿ ಹಾಕುವ ಎಣ್ಣೆಯನ್ನು, ಬಳಿದು-ಹಚ್ಚಿ, ಇಳೆಯ-ಭೂಮಿಯನ್ನು ಪೊತ್ತ-ವಹಿಸಿಕೊಂಡಿರುವ, ಇಭರಾಜಿಯಿಂದ-ಆನೆಗಳ ಸಮೂಹಕ್ಕಿಂತಲೂ, ಅಗ್ಗಳದ ಅಧಿಕವಾದ (ಪ್ರಬಲವಾದ) ಎಣ್ಬತ್ತು ಸಾವಿರದ ೮೦ ಸಾವಿರದ ಲೆಕ್ಕವುಳ್ಳ, ಗಜಗಳ-ಆನೆಗಳನ್ನು, (೨) ಇದ್ದೆಸೆಯಲಿ-ರಥದ ಎರಡು ಕಡೆಗಳಲ್ಲಿಯೂ, ಹೂಡಿದರು-ಸೇರಿಸಿದರು, ಕೂಡೆ-ಒಡನೆಯೇ, ಒನದಲಿ-ಅಶೋಕವನದಲ್ಲಿ, ಲಕ್ಷಸಂಖ್ಯೆಯಲಿ-ಒಂದುಲಕ್ಷದ ಲೆಕ್ಕದಿಂದ, ಬೊಂಬಾಳದೀವಿಗೆ-ಕಕ್ಕಡದ ದೀಪಗಳು (ಮಸಾಲು ದೀಪಗಳು) (೩) ಬೆಳಗಿದುವು-ಪ್ರಕಾಶಿಸಿದುವು. (ರಥಕ್ಕೆ ಎರಡುಕಡೆಯೂ ೮೦ ಸಾವಿರದ ಆನೆಗಳನ್ನು ಕಟ್ಟಿದರು. ಕೂಡಲೇ ಕಕ್ಕಡದದೀಪಗಳನ್ನು ಹಚ್ಚಿದರು

ವ್ಯಾ॥ (೧) ಕೀಲಚ್ಚು ಕೂಬರಬಳೆ ಮೊಳೆ ಇವುಗಳ ಸಮಾಹಾರ (ಸ. ದ್ವಂ) (೨) ಎರಡು ದೆಸೆಗಳ |ಸಮಾಹಾರಂ=ಇದೆಸೆ (ಇದ್ದೆಸೆ ಸ. ದ್ವಿ. (೩) ಬೊಂಬಾಳದೀವಿಗೆ ಎಂಬುದು ಜಾತ್ಯೇಕವಚನದ ಕರ್ತೃವಾದುದರಿಂದ ಈ ಕ್ರಿಯಾಪದವು ಬಹುವಚನದಲ್ಲಿದೆ.

ವಿ॥ ಇಳೆಯ ಹೊತ್ತಿಭರಾಜ-ಅಷ್ಟದಿಗ್ಗಜಗಳು.

ತಿದ್ದುವಿಕೆ;—'ಹೊರೆಯನು ಬಳಿದು' ಎಂಬುದನ್ನು 'ಹೆರೆಯನು ಬಳಿದು' ಎಂದು ತಿದ್ದಬಹುದು. 'ರಾಜಿಯಿಂದಗ್ಗಳಗಳದಗಜ' ಎಂಬುದನ್ನು 'ರಾಜಿಯಿಂದಗ್ಗಳದಗಜಗಳ' ಎಂದು ತಿದ್ದಬಹುದು.

೬. ಅವನಿತಳ-ಭೂಮಿಯಪ್ರದೇಶವು, ತಗ್ಗಲು-ಹನುಮನುಜಡಿಯುವ ಭಾರದಿಂದ ಕುಸಿದು ಹೋಗಲು, ಸರಿಗ ರಕ್ಕಸಕಿಂಕರರು=ಸರಿಗದಡಿಯರಾದ (ಭಾರಿ ಶರೀರವುಳ್ಳವರಾದ), ರಕ್ಕಸಕಿಂಕರರು-ರಾಕ್ಷಸಸೇವಕರು, ಬೊಬ್ಬಿರಿದು-ಗರ್ಜಿಸಿ. (೧) ಬಲುಸನ್ನೆಗಳಲಿ-ದೊಡ್ಡ ಸನ್ನೆಮರಗಳಿಂದಲೂ (ಅಡಿಗೆ ಕೊಡುವ ದೊಡ್ಡ ಹೆದ್ದನೆಯ ಮರಗಳಿಂದಲೂ), ಉಕ್ಕಿನ-ಉಕ್ಕಿನಿಂದ ಮಾಡಿದ, ತರುಬುಗಳಲಿ-ಮೀಟುತ್ತುವ ಕಂಬಗಳಿಂದಲೂ, + ಹನುಮನನ್ನು, ತೇರಿಗೆ-ರಥಕ್ಕೋಸ್ಕರ, ಎತ್ತಿದರು; ಮಾರುತಿಯು-ಹನುಮಂತನ, ಭಾರದಲಿ-ಜಡಿಯುವಿಕೆಯಿಂದುಂಟಾದ ಭಾರದಿಂದ, ಇಳೆ-ಭೂಮಿಯು, ಎರಗೆ-ಜಗ್ಗಲು, ಫಣಿರಾಜ-ಭೂಮಿಯನ್ನು ಹೊತ್ತಿರುವ ಆದಿಶೇಷನು, ಅಳಿಚಿದನು-ಕೂಗಿಕೊಂಡನು; ಕೂರುಮನು-ಭೂಮಿಯನ್ನು ಮೊದಲು ಹೊತ್ತಿರುವ ಆದಿಕೂರ್ಮನು, ಬರಲಿ

ದನು-ವೊರೆಯಿಟ್ಟನು; ಇಳಂ-ಭೂಮಿಯುನ್ನು ಹೊತ್ತಿರುವ ಅಷ್ಟದಿ
ಗ್ಗಜಗಳು, (೨) ಕೂಗಿಟ್ಟುವು ಕೂಗಿಕೊಂಡುವು; ಮೇರುಗಿರಿ-ಭೂಮಿ
ಯನ್ನು ವಹಿಸಿರುವ ಮೇರುಪರ್ವತವು, ತಗ್ಗಿತು-ಕುಗ್ಗಿಹೋಯಿತು.

ವ್ಯಾ॥ (೧) ಬಲ್ಲಿದುವು + ಪನ್ನೆಗಳ್ = ಬಲ್ಸನ್ನೆಗಳ್ (ಬಲುಸನ್ನೆಗ
ಳು) ಕ. ವಿ. ಪೂ. (೨) ಇಭಂ, ಎಂದು ಜಾತ್ಯೇಕವಚನದ ಕರ್ತೃವಿರುವು
ದರಿಂದ ಈ ಕ್ರಿಯೆ ಬಹುವಚನವಲ್ಲಿದೆ.

ವಿ॥ ತರುಬು-ಇದು ಧಾತುವಾದರೆ-ತಡೆಯುವುದು ನಾಮವಾದರೆ
ಮೀಟಿತ್ತುವ ಕಂಬ.

೭. ರಕ್ಕಸರು-ರಾಕ್ಷಸರು, (೧) ತರುಬೊತ್ತಿ-ಮೀಟಿತ್ತುವಕಂಬ
ವನ್ನು ಅವುಕಿ + ಹನುಮಂತನ್ನು, ಎತ್ತಲು, ಹನುಮನ-ಹನುಮಂತನ,
ಭಾರದಲಿ-ಜಗ್ಗುವುದರ ಭಾರದಿಂದ, ಅಳಿದರು-ಸತ್ತರು; ಅನಿಲಜನು-
ಹನುಮನು, ಒಳೆದ-ಓರೆಯಾದ, ಪಕ್ಕಯಲಿ- ಪಾರ್ಶ್ವದಲ್ಲಿ, ಕರಿ-ಹೂ
ಡಿದ್ದ ಆನೆಗಳು, (೨) ಸತ್ತುವು-ಮಡಿದುವು (ಹನುಮನು ಯಾವಕಡೆಗೆ
ವಾಲಿದನೋ ಆಕಡೆ ಹೂಡಿದ್ದ ಆನೆಗಳು ಭಾರದಿಂದ ಅತ್ಯಾಯಾಸಗೊಂ
ಡು ಬಿದ್ದುವು), ಅಸುರರು-ರಾಕ್ಷಸರು; ಬಗೆಯದೆ-ಅದನ್ನು ಲಕ್ಷ್ಯಮಾ
ಡದೆ, ಉರವಣಿಸಿ-ವೇಗದಿ; ಆನೆಗಳಂ-ಗಜಗಳನ್ನು ಎತ್ತಿಸಿದರು-ಎತ್ತಿನಿಲ್ಲಿ
ಸಿದರು; ಸೂಸೆಂಟರಲಿ-ಎಂಟುಸುಡಿಕೆಯಿಂದ, + ಹನುಮನನ್ನು, ಸುತ್ತಿ
ದರು-ಸುತ್ತುಹಾಕಿದರು; ಬಳಿಕ-ಆಮೇಲೆ, ಅಮರೇಂದ್ರಜಿತು ಇಂದ್ರ
ಜಿತ್ತು, (೩) ಜೇಸತ್ತು-ಜುಗುಪ್ಸೆಹೊಂದಿ, ಅಸುರರಿಗೆ-ರಾಕ್ಷಸರಿಗೆ, ಇಂ
ತು-ಹೀಗೆ, ಎಂದನು-ಹೇಳಿದನು

ವ್ಯಾ॥ (೧) ತರುಬಂ + ಒತ್ತಿ (ಕ್ರಿ) (೨) ಕರಿ, ಇದು ಜಾತ್ಯೇಕ
ವಚನದ ಕರ್ತೃ, ಆದುದರಿಂದ ಕ್ರಿಯೆ ಬಹುವಚನ (೩) ಬೇಸರುಧಾತು
ವಿನ ಭೂತನ್ಯೂನ ಕ್ರಿಯಾರೂಪ

ತಿದ್ದುವಿಕೆ:- ತರುಬೊತ್ತೆ, ಎಂಬುದನ್ನು ತರುಬೊತ್ತಿ, ಎಂದು
ತಿದ್ದುವದರಿಂದ ಚೆನ್ನಾಗಿದೆ

೮. ಇದು-ಈಕಪಿಯು, ಕೈದುಗಳ-ಆಯುಧಗಳ, ಕವತೆಗೆ ಸಂಬಂ
ಧಕ್ಕೆ (ಪೆಟ್ಟಿಗೆ), ಸೆಡೆಯದು-ಭಯಪಡುವುದಿಲ್ಲ; ಇದು-ಈಕಪಿಯು, ಕರಿ
ಗಳಿಗೆ- ಆನೆಗಳಿಗೂ, ಖಳರಿಗೆ- ರಾಕ್ಷಸರಿಗೂ, ಸೆಡೆಯದು- ಹದರದು,
ಇದು-ಈಕಪಿಯು, ಮಿಕ್ಕಾದ ಕೊಲೆಗೆ-ಉಳಿದ ಸಂಹಾರವ್ಯಾಪಾರಕ್ಕೆ
(ಇತರ ವಿಧವಾದ ಸಂಹಾರ ಕಾರ್ಯದಪೆಸೆಯಿಂದ.) ಮಡಿಯದು-ಸಾಯು
ವುದಿಲ್ಲ; ಇದರೊಡನೆ-ಈಕಪಿಯು ಸಂಗಡ, ಹೋರದಿರಿ-ಹೋರಾಡಬೇಡಿರಿ.

ಬಿಡಿರೊ-ತ್ಯಜಿಸಿರೋ! ಇದರೊಡನೆ ಈಕಪಿಯಿಂದ, ಸಾಯಲುಬೇಡ-ಸತ್ತು ಹೋಗಬೇಡಿರಿ; ನಿಲ್ಲಿ ನಿಲ್ಲಿರಿ; (೧) ಬಲುಮರಗಿಚ್ಚಂ-ಮಹತ್ತಾದ ಮರಗಳ ಬೆಂಕಿಯನ್ನು, ಒಟ್ಟಿದು ರಾಶಿಹಾಕಿ, + ಈಕಪಿಯನ್ನು, ಸುಡಿ-ಸುಟ್ಟುಬಿಡಿ; ಎನುತ-ಎಂಬುದಾಗಿ, ಇಂದ್ರಾರಾತಿ=ಇಂದ್ರ-ದೇವೇಂದ್ರನಿಗೆ, ಅರಾತಿ- ಶತ್ರುವಾದವನು (ಇಂದ್ರಜಿತ್ತು), ನಿಜಬಲಕೆ- ತನ್ನ ಸೈನ್ಯಕ್ಕೆ, ನೇಮಿಸಿದಂ- ಆಜ್ಞೆಮಾಡಿದನು (ಮರಗಳಿಂದ ದೊಡ್ಡ ಬೆಂಕಿಯನ್ನು ಮಾಡಿ ಇದನ್ನು ಸುಡಿಯೆಂದು ಇಂದ್ರಜಿತ್ತು ತನ್ನಸೇನೆಗೆ ನೇಮಿಸಿದನು)

ವ್ಯಾ॥ (೧) ಮರದ + ಕಿಚ್ಚು = ಮರಗಿಚ್ಚು (ಕ. ಷ. ತ) ಬಲ್ಲಿತ್ತು + ಮರಗಿಚ್ಚು - ಬಲ್ಮರಗಿಚ್ಚು (ಬಲುಮರಗಿಚ್ಚು) (ಕ. ವಿ. ಪೂ)

೯. + ರಾಕ್ಷಸರು, ಇಟ್ಟಣಿಯ-ಒತ್ತಾದ, (೧) ಹಳೆಮರನಂ-ಹಳೆಯಮರಗಳನ್ನು, (೨) ತಾಳೇಳರ-ಏಳು ತಾಳೆಮರಗಳ, ಉದ್ದದಲಿ-ಎತ್ತರದಿಂದ (ಏಳು ತಾಳೆಗಿಡಗಳ ಉದ್ದಕ್ಕೆ) ಒಟ್ಟಿದರು-ರಾಶಿಹಾಕಿದರು; ಉರಿಗಳಂ-ಜ್ವಾಲೆಗಳನ್ನು (ಬೆಂಕಿಯುರಿಗಳನ್ನು), ಇಟ್ಟು ಹಾಕಿ, ಬೊಬ್ಬಿರಿದು-ಗರ್ಜಿಸಿ, ನಾಲ್ಕುಮೈಗಳಲಿ-ನಾಲ್ಕುಪಾರ್ಶ್ವಗಳಲ್ಲಿಯೂ, ಅಬ್ಬರಿಸಿದರು-ಬಲವಾಗಿ ಕೂಗಿದರು; + ಹನುಮನು, ಪಟ್ಟಣವಂ-ಲಂಕಾಪುರನ್ನು, ಉರಿಗೊಳಿಸಲು-ಸುಡುವುದಕ್ಕೆ, ಇದು-ಈರಾಕ್ಷಸರು ಉರಿ ಹಾಕಿದುದು, ತಾ ತಾನು, ತನಗೆ, ಒಟ್ಟು-ದಾರಿಯಾಯಿತು; (ಈರಾಕ್ಷಸರು ಉರಿ ಹಾಕಿದುದರಿಂದ; ನಾನು ರಥಕ್ಕೆ ಬಿದ್ದರೆ ರಥದಲ್ಲಿ ನನ್ನನ್ನು ಇವರು ರಾವಣನಿದಿರಿಗೆ ತೆಗೆದುಕೊಂಡು ಹೋಗಲು ರಾವಣನಾಜ್ಞೆಯಿಂದ ನನ್ನಬಾಲಕ್ಕೆ ಬೆಂಕಿಯನ್ನು ಹೊತ್ತಿಸುವುದರಿಂದ ನಾನು ಲಂಕೆಯನ್ನು ಸುಡುವುದಕ್ಕೆ ಇವರು ಈಗ ಉರಿ ಇಟ್ಟುದೇ ನನಗೆ ಉಪಾಯವಾಯಿತು) ಎನುತ-ಎಂದುಕೊಳ್ಳುತ್ತ, ಅರಿಚ-ಕೂಗಿ, (೩) ಹಲುಗಿರಿದು-ಹಲ್ಲುಗಳನ್ನುತೆರೆದು, ಒಟ್ಟಿದ-ರಾಶಿಹಾಕಿದ, ಇಂಧನ-ಸೌದೆಗಳು, ಕೆದರಿ ಹರಡಿಕೊಳ್ಳುವಹಾಗೆ, ರಥದ ತೇರಿನ, ಮಧ್ಯದಲಿ ನಡುವೆ, ಬಿದ್ದನು

ವ್ಯಾ॥ (೧) ಹಳದು + ಮರಂ (ಕ. ವಿ. ಪೂ) (೨) ತಾಳ + ಏಳು (ಕ. ಷ. ತ) (೩) ಹಲ್ಲುಗಿರಿದು (ಕ್ರಿ)

ವಿ॥ ತಾಳ್-ಧಾತುವಾದರೆ ಧರಿಸುವುದು. ನಾಮವಾದರೆ ತಾಳೆಗಿಡ.

೧೦. ಇಂದ್ರಾರಿ-ದೇವೇಂದ್ರಶತ್ರುವು (ಇಂದ್ರಜಿತ್ತು) (೧) ಬಿರುನಗೆಮಲಿ-ಬಿರುಸಾದ ನಗುವಿನಿಂದ ಕೂಡಿ. (೨) ದಳ್ಳುರಿ ದುರುಗಲಿನ=ಮಹಾಜ್ವಾಲೆಯ ಸಮೂಹವುಳ್ಳ, ಕೊಳ್ಳಿಗಳಲಿ- ಕೆಂಡಗೊಳ್ಳಿಗಳೊಡನೆ, ಇವ್ವಸೆಗೆ ಎರಡು ಪಕ್ಕಗಳಿಗೆ, ಒರಗದಂತಿರೆ- ವಾಲಾಪದಹಾಗೆ, ಹಳವಿಗೆ

ಯು ರಥಧ್ವಜದ, ಕಂಬದಲಿ ಸ್ತಂಭದಲ್ಲಿ, + ಹನುಮನನ್ನು, ಕಟ್ಟಿದನು-ಬಿಗಿದನು (ರಥದ ಅಚ್ಚಿನ ಪಕ್ಕಗಳಿಗೆ ಉರಿಗೊಳ್ಳಿಗಳನ್ನುಸೇರಿಸಿ ಹನುಮನನ್ನು ಎರಡುಕಡೆಗೆ ಅಲ್ಲಾಡದಂತೆ ರಥದ ಧ್ವಜಸ್ತಂಭಕ್ಕೆ ಕಟ್ಟಿದನು; ಹ-ಎನು-ಹನುಮಂತನು, ಕಿರುಕಿರನೆ-ಕಿರಕಿರ ಎಂಬುದಾಗಿ, ಹಲುಗಿರಿದು-ಹಲ್ಲನ್ನು ತೆರೆದು, ಹಣುಗುತ-ಅಡಗುತ್ತ, ಗಿರಿಕುಗುಟ್ಟುತಂ ಕಿಚಗುಟ್ಟುತ್ತ, ಇಣಿಕಿ ನೋಡುತ-ತಲೆಹಾಕಿ ಬಗ್ಗಿನೋಡುತ್ತ, ಮನದೊಳಗೆ-ತನ್ನ ಮನಸ್ಸಿನಲ್ಲಿ, ನಗರಕೆ-ಲಂಕಾಪಟ್ಟಣಕ್ಕೆ, ಹರಿವ-ನಾಶವನ್ನು, ನೆನೆಯುತ ಇರ್ದನು-ಯೋಚಿಸುತ್ತಿದ್ದನು (ನಾನು ಇನ್ನು ಲಂಕಾನಗರವನ್ನು ಉರಿಯಿಂದ ನಾಶಮಾಡುವೆನೆಂದು ಯೋಚಿಸುತ್ತಿದ್ದನು.

ವ್ಯಾ॥ (೧) ಬೆಟ್ಟಿತು + ನಗೆ=ಬಿರುನಗೆ (ಕ. ವಿ ಪೂ) (೨) ದಳ್ಳಿತ್ತು + ಉರಿ=ದಳ್ಳುರಿ, ದಳ್ಳಿದುವು + ಉರಿಗಳ್=ದಳ್ಳುರಿಗಳ್ (ಕ. ವಿ. ಪೂ) ದಳ್ಳುರಿಗಳ ತುರುಗಲು (ಕ. ಷ. ತ)

೧೧. ಅಲ್ಲಿಂಮೇಲೆ-ಅನಂತರಲ್ಲಿ, + ರಥವು, ನೆಲ ಭೂಮಿಯು, ಧಡಧಡಿಸಲು-ಧಡಧಡ ಎನ್ನುವಹಾಗೆ. ನಡೆದುದು ಹೊರಟಿತು: ಆನೆಯಲಿ- ರಥದ ಗಜಗಳಲ್ಲಿ ಅಂಕುಶದ-ಅಂಕುಶಾಯುಧಗಳಿಂದಲೂ, (೧) ಬೆಂಗೊಡತಿಗಳ-ಬೆನ್ನಮೇಲಣ ಕೊಡಚಿಗಳಿಂದಲೂ, ಬಲುಹೊಯ್ಲು-ಅಧಿಕವಾದ ಬಡಿಯುವಿಕೆಯು, ಬೊಬ್ಬೆಯ ಭಟಗರ್ಜನೆಯು, ಬಿರುಬುಗಹಳೆಗಳ ಅತಿಶಯಿತವಾದಕಹಳೆಯೆಂಬ ವಾದ್ಯಗಳ,ಬಡಿವ-ಹೊಡೆಯಲ್ಪಡುವ, ಹರೆಗಳ-ವಾದ್ಯಗಳ, ಕಳಕಳಕೆ-ಗದ್ದಲದ ದೆಸೆಯಿಂದ, ಫಣೀಂದ್ರ-ಭೂಮಿಯನ್ನುಹೊತ್ತಿರುವ ಆದಿಶೇಷನು, ಕೂಗಿಡೆ-ಕಿರಿಚಿಕೊಳ್ಳಲು, ನಗೇಂದ್ರಚಯಂ=ನಗೇಂದ್ರ-ದೊಡ್ಡಬೆಟ್ಟಗಳ, ಚಯಂ-ಸಮೂಹವು. ಓಗುರ್ಜಿಸೆ-ತಲೆಕೆಳಗಾಗಲು ತೇರು-ಆ ರಥವು, ತೋಪಿನ- ಅಶೋಕವನದ, ತುದಿಯ-ಕೊನೆಯ, ಬಾಗಿಲಿಗೆ-ದ್ವಾರಪ್ರದೇಶಕ್ಕೆ, ಬಂದುದು-ಬಂದಿತು

ವ್ಯಾ॥ (೧) ಬೆನ್ನ + ಕೊಡತಿಗಳ್ (ಕ. ಷ. ತ)

ತಿದ್ದುವಿಕೆ;—'ದಡದಡಿಸಲಾನೆಯುಲಂಕುಶದ' ಎಂದು ತಿದ್ದಿದರೆ ಸಮಂಜಸ.

೧೨. ಅಸುರರಥ ರಾಕ್ಷಸನ ರಥವು, ಬಳಿವೊಳೆಯನು=ಬಳಿ ಚಕ್ರದಲ್ಲಿ ಅಚ್ಚು ಸೇರುವ ಕಣ್ಣಿನ ಸುತ್ತಿನ ಬಳೆಯು, ಮೊಳೆಯು ಕದಾಣಿ ಮೊಳೆಯು ಇವುಗಳನ್ನು, ಆರಯ್ಯ-ನೋಡಿಕೊಳ್ಳುವ, ಕಮ್ಮಾರರ-ಕಬ್ಬಿಣ ಕೆಲಸಗಾರರ, ಉಲುಹುಗಳ-ಕೂಗುವಿಕೆಗಳಿಂದಲೂ, ಕೈಬಾಚಿ ಚೇಣಾದ=ಕೈಬಾಚಿಯು, ಚೇಲಣದ ಸಣ್ಣ ಉಳಿಯು ಇವುಗಳ, ಉ

ು ಉಳಿಯೆಂಬ ಸಾಮಾನಿನ, ಕೆಲಸದ ಕೈಗಾರಿಕೆಯನ್ನು ಮಾಡುವವರಾ ವ, ಬಡಗಿಯರ-ಮರಗೆಲಸದವರ, [೧] ಬಿರುದನಿಯ ಬಲವಾದ ಶಬ್ದ ದಿಂದಲೂ, ಪಥಾಗ್ರದಿ ತೇರಿನ ದಾರಿಯ ಮುಂದುಗಡೆಯಲ್ಲಿ, (೨) ಕುಳಿ ತೆವರ-ಹಳ್ಳತಿಟ್ಟುಗಳನ್ನು, ತಳಪಟ್ಟ ಮಾಡುವ-ಸಮನೆಲವನ್ನಾಗಿ ಮಾ ಡತಕ್ಕವರಾದ, ಅಲಗು ಗುದ್ದಲಿ-ಮೊನೆಗುದ್ದಲಿಯು, ಗೋರೆಗಳ ಎಲ ಗುದ್ದಲಿಯು ಇವುಗಳ; [೩] ಬಲುಗೆಲಸದ-ಅಧಿಕವಾದ ಕೆಲಸವನ್ನು ಮಾಡುವ, ಒಡ್ಡರ ಕಾಮಾಟಿದವರ, ಕಳಕಳದ ಗದ ಲದಿಂದಲೂ ಕೂ ಬರುತ ಇರ್ದುದು-ಬರುತ್ತಿದ್ದಿತು.

ವ್ಯಾ॥ [೧] ಬೆಟ್ಟಿತು + ದನಿ=ಬಿರುದನಿ [ಕ. ಪಿ. ಪೂ.] [೨] ಕು ಳಿಯೂ ತೆವರೂ ಇವುಗಳ ಸಮಾಹಾರಂ=ಕುಳಿತೆವರು [ಸ ದ. ೧. [೩] ಎಲ್ಲಿತ್ತು + ಕೆಲಸ [ಕ. ಪಿ. ಪೂ]

ವಿ॥ ಉಳಿ-ಧಾತುವಾದರೆ ಮಿಗುವುದು, ನಾಮವಾದರೆ ಬಡಗಿಯ ಆಯುಧ.

೧೩. (ಮುಖ್ಯಪದ್ಯ)— + ರಾಕ್ಷಸರು, ನಟ್ಟ-ಭೂಮಿಯಲ್ಲಿ ಹೂತ್ತು ಕೊಂಡ, ಗಾಲಿಯ-ರಥದ ಚಕ್ರಗಳನ್ನು, ಕೀಳುತ-ಮೇಲೆತ್ತುತ್ತ, ಅರ ಳ-ದಾರಿಯ ಕಲ್ಲುಗಳನ್ನು, ಕುಟ್ಟುತ-ಕುಟ್ಟಿ ಹುಡಿಮಾಡುತ್ತ, ಅಚ್ಚಿನ ರಥದ ಅಚ್ಚಿನ ಮರದ [ಅಚ್ಚಿನಮರಕ್ಕೆ ಸೇರಿಸಿರುವ], ಕಿಚ್ಚಿನ-ಕೊಳ್ಳಿ ಯಂಕಿಯ, ಉರುಬೆಯ-ಉರಿಯುವಿಕೆಗಳ (ಜ್ವಾಲೆಗಳ), ಘಟ್ಟಣೆಗೆ-ಸಮೂ ಹಕ್ಕೆ, ಪಕ್ಕಲೆಯ-ಪಕಾಲೆಯ (ಚರ್ಮದ ಚೀಲದ) ಎಣ್ಣೆಗಳ-ತೈಲಗಳ, ಧಾರೆಗಳ-ಧಾರೆಗಳನ್ನು, ಬಿಡುತ-ಸುರಿಯುತ್ತ... ಘಟ್ಟು ಕೆಡೆವ-ಎಳೆಯ ರಿಂದ ಬೀಳುವ, ಆನೆಗಳಿಗೆ-ಗಜಗಳಿಗೆ, ಆನೆಯ-ಪ್ರತಿಗಾದ ಆನೆಗಳ ನ್ನು (ಬೇರೆಯಾದ ಆನೆಗಳನ್ನು) ಸಿಕ್ಕಿತ-ಹೂಡುತ್ತ, ಅಸುರರಿಗೆ ಕೆಲಸ ಮಾಡಿ ಆಯಾಸವಟ್ಟ ರಾಕ್ಷಸರಿಗೆ, ಅಸುರರನು ಪ್ರತಿರಾಕ್ಷಸರನ್ನು (ಬೇ ರೆ ರಕ್ಕಸರನ್ನು), ಹೊಗಗೊಟ್ಟುತ-ನುಗ್ಗಿಸುತ್ತ, ಈವರಿ-ಈರೀತಿಯಲ್ಲಿ, ನಡಿಸಿ-ರಥವನ್ನು ಹರಿಯಿಸಿ, ಮೃಡಪರಾಕ್ರಮನ=ಮೃಡ ಈಶ್ವರನ, ಪರಾಕ್ರಮನ-ಶೌರ್ಯದಂತೆ ಶೌರ್ಯವುಳ್ಳ, ಹನುಮನನ್ನು, ತಂದರು-ಕರೆ ದುಕೊಂಡುಬಂದರು

ವಿ॥ ಅಗೆ-ಇದು ಧಾತುವಾದರೆ ಶೋಧಣೆ ಮಾಡುವುದು ನಾಮವಾ ದರೆ ಕಲ್ಲು. ಮೃಡಪರಾಕ್ರಮ-ಹನುಮಂತನು

ತಿದ್ದುಪಡಿ; ಘಟ್ಟು ಕೆಡೆವಾನೆಗಳ್ಗೆ, ಎಂದು ಇದ್ದರೆ ಚೆನ್ನಾಗಿದೆ

೧೪. + ರಾಕ್ಷಸರು ಮುರಿಮುರಿದ-ಸೊಟ್ಟುಸೊಟ್ಟಾದ, ಕೇರಿಯ ಪೇಟೆಯ, ತೊಡಕು ಪಥಂ-ಅಕ್ರಮವಾದ ವೀದಿಯ, ಮನೆಮನೆಯ.. ಬಹಳ ಗೃಹಗಳನ್ನು ಕೆಡಹಿದರು ಕೆಡಹಿಬಿಟ್ಟರು | ರಥವು ರಾವಣನ ಆಸ್ಥಾನಕ್ಕೆ ನೇರವಾಗಿ ಹೋಗುವುದಕ್ಕೆ (ಸ್ಥಳ) ನಾಲಿಲ್ಲಿ ಅಡ್ಡ ಬಂದ ಸೊಟ್ಟುಸೊಟ್ಟಾದ ಕೇರಿಯ ಕ್ರಮವಿಲ್ಲದ ಬೀದಿಯ ಬಹಳ ಮನೆಗಳನ್ನು ಕೆಡಹಿಬಿಟ್ಟರು] ಅನುವ ಎದುರಿಗೆ ಸಿಕ್ಕುವ, ವಿವಿಧಸೌಧದ್ವಾರಸಂಕುಳವ=ವಿವಿಧ-ಹಲವು ಬಗೆಯಾದ, ಸೌಧ-ಉಪ್ಪರಿಗೆ ಮನೆಗಳ, ದ್ವಾರ-ಬಾಗಿಲಪ್ರದೇಶಗಳು ಇವುಗಳ, ಸಂಕುಳವ-ಸಮೂಹವನ್ನು, ..ತೆ ಒಡಿದರು- ಒಡೆದುಹಾಕಿದರು ; ಅನಿಲಜಂ- ಹನುಮಂತನು, ಅಖಿಳಜನ-ಜನಮುಖ್ಯಜನವೂ, ಅಂಜಲು-ಹೆದರುವಹಾಗೆ, [೧] ಸಿಡಿಯುಬಾಳಿನ- ತನ ಉದ್ದವಾದ ಬಾಲವನ್ನು, ಬೆಳಸಿ-ದೊಡ್ಡದನ್ನಾಗಿ ಮಾಡಿಕೊಂಡು (ಬೆಳ್ಳಸಿಕೊಂಡು) + ಆ ಬಾಲದಿಂದ, ಬೀದಿಗಳ (೨) ಎಡಬಲದ- ಎಡಗಡೆಯ ಬಲಗಡೆಯ ನೆಲೆಯ ಉಪ್ಪರಿಗೆಗಳಂ-ಅಂತಸ್ತಿನ ಮಹಡಿಗಳ ಮನೆಯನ್ನು ಅಡಿಮೇಗುಮಾಡುತ-ತಳಕೆಳಗಾಗಿ ಕೆಡಹುತ್ತ, ಐತಂದಂ-ಬಂದನು

ವ್ಯಾ॥ [೧] ಸಿಡಿದು ; ಬಾಲಂ=ಸಿಡಿಯುಬಾಲಂ [ಕ. ವಿ. ಪೂ.] [೨] ಎಡವೂ ಬಲವೂ ಇವುಗಳ ಸಮಾಹಾರಂ (ಸ. ದ್ವಂ)

೧೫. ಖಳಪುರದೊಳಗೆ-ರಾಕ್ಷಸನಗರದಲ್ಲಿ, ಕಳಕಳಿಕೆ-ಗದ್ದಲವು, ಕಡುಹು ಆಯ್ತು -ಹೆಚ್ಚಾಯಿತು ; ಇದ- ಈ, ಎತ್ತಣಮಾರಿಯನು-ಎಲ್ಲಿಯ ಮೃತ್ಯುದೇವತೆಯನ್ನು, + ಇವರು, ಪೊಳಲೊಳಗೆ- ಪಟ್ಟಣದಲ್ಲಿ, ಹೊಗಿಸಿದರು-ನುಗ್ಗಿಸಿದರು ; ಅಕಟ-ಅಯ್ಯೋ ! ಖಳರಿಗೆ ರಾಕ್ಷಸರಿಗೆ, ಇದು (೧) ಕೇಡುಗಾಲಂ- ವಿನಾಶಸಮಯವು, ತಿಳಿಯಲಿಲ್ಲ. ಹೀಗೆ ಮಾಡುವರೆಂಬುದನ್ನು ನಾವು ಅರಿಯಲಿಲ್ಲ. ಇರಬಾರದು ಇಲ್ಲಿವಾಸಮಾಡಬಾರದು ಎಂದು-ಎಂಬುದಾಗಿ, ಅಲ್ಲಿ ಅದಲ್ಲಿ-ಅಲ್ಲಲ್ಲಿ, ಬಲ್ಲವರು-ವಿವೇಕಿಗಳು, ತಳವಳಪಡುತ ಚಿಂತಿಸುತ್ತ, ದುರ್ಗವನು-ಪಟ್ಟಣವನ್ನು, ಉಳಿದು-ಬಿಟ್ಟು (೨) ಶಾಖಾಪುರಾದಿಗಳ=ಶಾಖಾಪುರ-ರಾಜಧಾನಿಯ ಸಮೀಪದಲ್ಲಿರುವ ಗ್ರಾಮವು, ಆದಿಗಳ-ಮೊದಲಾದುವುಗಳನ್ನು, ಐದಿದರು-ಸೇರಿಕೊಂಡರು

ವ್ಯಾ॥ (೧) ಕೇಡಿನ+ಕಾಲಂ (ಷ. ತ.) ಅರಿಸ (೨) ಷ. ಬ. ವ್ರೀ.

ತಿದ್ದುಪಡಿ — 'ಬಲ್ಲವರಳಿದು ದುರ್ಗವ' ಎಂದಿದೆ 'ಬಲ್ಲವರುಳಿದು ದುರ್ಗವ' ಎಂದು ತಿದ್ದಿದರೆ ಚನ್ನಾಗಿದೆ. (ದುರ್ಗವನು ಕೋಟೆಯನ್ನು ಉಳಿದು)

೧೬. + ಈ ರಾಕ್ಷಸಸೇನೆಗಳು, ಅರಿದು ತಿಳಿದು ಕೂಡ, (೧) ಈ, ತೆಪ್ಪ

ರಯನು-ದೊಡ್ಡ ಪ್ರತ್ಯಾದೇಶವೆಂಬುದನ್ನು, ಈ ವಿನಾಶಕ ಕಟುಂಬವನ್ನು) ಊರ-ಪಟ್ಟಣವನ್ನು, (೩) ಸೂಗಿಸಿದರು-ಪ್ರವೇಶಮಾಡಿಸಿದರು; ಕೇಡು-ಜನವಿನಾಶವು, (೩) ಆಯ್ತು-ನಿಶ್ಚಯವಾಗಿ ಆಗುವುದು; + ಎಂದು ಧವಳಾರಗೋಪುರದ=ಧವಳಾರ-ಮಹಡಿಯು, ಗೋಪುರದ-ಗೋಪುರವು ಇವುಗಳ, ಏರಿಕೆಯ-ಆರೋಹಣವುಳ್ಳ (ಮಹಡಿಯಮೇಲೂ ಗೋಪುರದಮೇಲೂ ಹತ್ತಿ ಕುಳಿತಿರುವ), ನೋಟಕರು-ನೋಟ ನೋಡುವವರು, ಎನುತ-ಎಂದುಕೊಳ್ಳುತ್ತ, ಮುರಿಗೆಡೆದು-ತಿರುಗಿಕೆಳಗಿಳಿದು, ದೂರದಲಿ-ದೂರ ಸ್ಥಳದಲ್ಲಿ, (೪) ನಿಂದು ಇಹರು ನಿಂತಿದ್ದರು; ಬಳಿಕ-ಅನಂತರದಲ್ಲಿ, ಅವ-ಆ ಹನುಮಂತನು, ಕುಡಿಯುರಿದ-ಬೆಳೆದ (ವೃದ್ಧಿಯಾದ), ಬಾಲದ-ತನ್ನ ಬಾಲವೆಂಬ, ಗೋರೆಯುರಿ-ಎಲೆಗುದ್ದಲಿಯಿಂದ, ತೋರಣದ-ಊರ ಹೊರಬಾಗಿಲ ಪ್ರದೇಶಗಳ (ಊರ ಹೆಬ್ಬಾಗಿಲಿನ ಪ್ರದೇಶಗಳ). ಸಾಲುಗಳ-ಶ್ರೇಣಿಗಳನ್ನು, ಗೋರಿದನು-ಬಾಚಿದನು (ಅಥವಾ ಎಳೆದನು), + ಅವುಗಳನ್ನು, ತಳಮುಗುಚಿದನು-ತಳಕೆಳಗಾಗಿ ಕೆಡಹಿದನು (ಹನುಮಂತನು ಊರ ಹೆಬ್ಬಾಗಿಲ ಪ್ರದೇಶಗಳ ಸಾಲನ್ನು ಬಾಲದಿಂದ ಗೋರಿ ಉರುಳಿಸಿದನು)

ವ್ಯಾ || (೧) ಪಿರಿದು + ಮಾರಿ = ಪೆಮ್ಮಾರಿ (ಹೆಮ್ಮಾರಿ) ಹ. ವಿ. ಪ್ರೋ ಇದು ಹೆಮ್ಮಾರಿ (ಗ) (೨) ಹೆಮ್ಮಾರಿಯನು ಊರಹೊಗಿಸಿದರು. ಇಲ್ಲಿ ದ್ವಿಕರ್ಮಕ ಕರ್ತರಿ ಪ್ರಯೋಗವು; ಎರಡು ಕರ್ಮಪದಗಳಿವೆ (೩) ಅತಿ ನಿಶ್ಚಯವನ್ನು ಹೇಳುವುದರಿಂದ ಭವಿಷ್ಯತ್ತಿಗೆ ಪ್ರತಿಯಾಗಿ ಭೂತಕಾಲ ಕ್ರಿಯಾಪದವು (೪) ಇತಿಹಾಸವನ್ನು ಹೇಳುವುದರಿಂದ ಭವಿಷ್ಯತ್ತಿಗೆ ಪ್ರತಿಯಾಗಿ ಭೂತಕ್ರಿಯೆ.

೧೭. (೧) ಹೊರಗೆ ಮನೆಗಳ ಮುಂದುಗಡೆಯಲ್ಲಿ ಇರುವ, ಪಳುಕಿನ-ಸ್ಫಟಿಕದ, ಅರೆ-ಕಲ್ಲುಗಳು (ಮೆಟ್ಟಲಿನ ಸ್ಫಟಿಕ ಶಿಲೆಗಳು) + ಹನುಮನ, ವಜ್ರದ-ರಥದ ವಜ್ರರತ್ನದ, ಹಳಿಯ-ಹಲ್ಲೆಗಳ, ಹೊಯ್ಲಿಗೆ-ಪೆಟ್ಟಿನ ಕವೆಯಿಂದ, (೨) ನೆಗ್ಗಿದುವು-ಪಚ್ಚಾಬಿದ್ದುವು (ಹನುಮನ) ರಥದ ವಜ್ರದ ಹಲ್ಲೆಗಳನ್ನು ಕಿತ್ತುಕೊಂಡು ಹೊಡೆದುದರಿಂದ ಮನೆಗಳ ಮುಂದಿನ ಸ್ಫಟಿಕಶಿಲೆಗಳು ನೆಗ್ಗಿಹೋದುವು; ಬೀದಿಯ, ಬಳಿಯ ಸಮೀಪದಲ್ಲಿರುವ, ಮಣಿಮಯ ಭದ್ರಭವನಾಳಿಗಳು=ಮಣಿಮಯ-ರತ್ನಖಚಿತವಾದ, ಭದ್ರ-ಮಂಗಳಕರವಾದ, ಭವನ-ಮನೆಗಳ, ಆವಳಿಗಳು-ಶ್ರೇಣಿಗಳು, ಅನಿಲಜನ-ಹನುಮಂತನ, (೩) ಬಳಲುಗೈ ಸೋಂಕಿನ — ಕ್ಕೆ-ಬದ್ಧವಾಗಿ ಜೋಲಾಡುವ ಹಸ್ತದ, ಸೋಂಕಿನಲಿ-ತಗಲು

ನೆಲಕೆ-ಭೂಮಿಗೆ, ಅಪ್ಪಳಿಸಿಬಿದ್ದುವು-ಬಡಿಯುಬಿದ್ದುವು; ಪುರದೊಳ್-ಲಂಕಾನಗರದಲ್ಲಿ, ಅಗಲಕೆ-ಆಯಾ ಪ್ರದೇಶದಲ್ಲಿ, ಕಳಕಳಿಕೆ-ಗದ್ದಲವು, ಕಡುಹುಳಿಗೆ-ಹೆಚ್ಚಾಗಲು, ಖಳ-ರಾವಣಾಸುರನು, ಬಂದು, ಓಲಗವ ಇತ್ತನು-ಸಭೆಯನ್ನು ಮಾಡಿದನು.

ವ್ಯಾ॥ (೧) ಹೊರಗು, ಇದು ಉಕಾರಾಂತ ದಿಗ್ವಾಚಕವಾದುದರಿಂದ ಸಪ್ತಮಿಯಲ್ಲಿ ಎ ಪ್ರತ್ಯಯವು (೨) ಅರೆ, ಎಂದು ಜಾತ್ಯೇಕವಚನದವಿರುವುದರಿಂದ ಈ ಕ್ರಿಯಾಪದವು ಬಹುವಚನದಲ್ಲಿದೆ. (೩) ಬಳಲುವುದು+ಕೈ=ಬಳಲುಗೈ (೪) ಕೈಯು ನೋಂಕು (ಕ. ಷ. ತ)

೧೮. ಇಂದ್ರಾರಾತಿ-ಇಂದ್ರಶತ್ರುವು (ಇಂದ್ರಜಿತ್ತು) (೧) ರಾಕ್ಷಸ ಮದ ದ್ವಿಪವೃಂದ ಕಂಠೀರವನ=ರಾಕ್ಷಸ-ರಕ್ಕಸರೆಂಬ, ಮದ-ಸೊಕ್ಕನ್ನು ಹೊಂದಿದ, ದ್ವಿಪ-ಆನೆಗಳ, ವೃಂದ-ಸಮೂಹಕ್ಕೆ, ಕಂಠೀರವನ-ಸಿಂಹಪ್ರಾಯನಾದ, ಖಳಕುಲ ಕಾಲಭೈರವನ-ಖಳ ರಾಕ್ಷಸರ, ಕುಲ ಸಮೂಹಕ್ಕೆ, ಕಾಲ-ಪ್ರಳಯನನುಂಟುಮಾಡುವ, ಭೈರವನ ಭೈರವಮೂರ್ತಿ ಪ್ರಾಯನಾದ, ಕೀಶಪುರಂದರನ=ಕೀಶ-ಕಪಿಗಳಿಗೆ, ಪುರಂದರನ-ಇಂದ್ರಪ್ರಾಯನಾದ (ಕಪಿಶ್ರೇಷ್ಠನಾದ) ಹನುಮನನ್ನು, ರಾವಣನಸಭೆಗೆ, ತಂದಂ-ತೆಗೆದುಕೊಂಡು ಬಂದನು; ನಂದನವ-ಅಶೋಕವನವನ್ನು, ಕಿತ್ತು-ಮುರಿದು, ಅಕ್ಷಮುಖ್ಯರ-ಅಕ್ಷಕುಮಾರನೇ ಮೊದಲಾದಗುಳ್ಳವರನ್ನು, ಕೊಂದ-ಸಂಹರಿಸಿದ, ಕೋಡಗಂ-ಕೋತಿಯು, ಇದಕೊ ಇಗೋ-ನೋಡು; ಮನಸಿಗೆ ನಿನ್ನ ಚಿತ್ತಕ್ಕೆ, ಬಂದ ತೋರಿದ, ಪರಿಯನು ರೀತಿಯನ್ನು, ಮಾಡು ಆಚರಿಸು; + ಎಂದು ಇಂದ್ರಜಿತ್ತು, ಎನುತ-ಹೇಳುತ್ತ, ಅಯ್ಯಂಗೆ-ತಂದೆಯಾದ ರಾವಣನಿಗೆ, ಕೈಮುಗಿದಂ-ಹಸ್ತಗಳನ್ನು ಜೋಡಿಸಿದನು.

ಭಾವಾರ್ಥ;—ಕೀಶಪುರಂದರ ಕಪಿಶ್ರೇಷ್ಠನು. ರಾಕ್ಷಸ...ಕಂಠೀರವ-ಸೊಕ್ಕೇರಿದ ಭಾರಿ ರಾಕ್ಷಸರನ್ನು ಕೊಲ್ಲುವವನು. ಖಳಕುಲ ಕಾಲಭೈರವ-ರಾಕ್ಷಸಸಮೂಹವನ್ನು ನಾಶಮಾಡುವವನು.

ವ್ಯಾ॥ (೧) ಮದದಿಂದ ಕೂಡಿದ ದ್ವಿಪಗಳು = ಮದದ್ವಿಪಗಳು [ಮ. ಲು] ರಾಕ್ಷಸರೆಂಬ ಮದದ್ವಿಪಗಳು [ಅ. ಪೂ] ದ್ವಿಪಗಳ ವೃಂದ (ಷ. ತ) ವೃಂದಕ್ಕೆ ಕಂಠೀರವ (ಷ. ತ)

೧೯. (ಮುಖ್ಯಪದ್ಯ);—ದಶಶಿರನ ರಾವಣನ, ಮುಖ ಮೋರೆಯು, (೧) ಹೂತುದು ಹೂ ಬಿಟ್ಟಿತು (ಕಪಿಯನ್ನು ಹಿಡಿತಂದುದನ್ನು ನೋಡುತ್ತಲೇ ರಾವಣನ ಮುಖವು ಸಂತೋಷದಿಂದ ಅರಳಿತು); ಈತಂ ಈ, ಕಲಿಹನುಮ-ಶೂರಹನುಮಂತನು, ದುಷ್ಪ್ರೀತಿವಾಕ್ಯ ದ್ವೇಷದ ಮಾತುಗಳ, ಸ್ಫುರಣೆಗಳ ಹೊರಡುವಿಕೆಗಳ, ನಿಜರೀತಿಗಳಂ=ನಿಜ

ರಾವಣನ ಸ್ವಚ್ಛೇಯುವಾದ, ಎತಿಗಳಂ ಒನೆಗಳನ್ನು, ಅರೆನೋಟದಿಂದ ಅರ್ಧಭಾಗದ ದೃಷ್ಟಿಯಿಂದ, ಈಕ್ಷಿಸುತ-ನಿರೀಕ್ಷಣೆಮಾಡುತ್ತ, ಬಲೆಗೆ ಪಾಶಕ್ಕೆ, ಸಿಲುಕಿದ ಸಿಕ್ಕಿಕೊಂಡ, ಕೋತಿಯ-ಸಾಧಾರಣ ಕಪಿಯ, ಅಂದದೊಳು-ರೀತಿಯಿಂದ, (೨) ಉಸಿರುದೊಡಕಿನ-ಉಸಿರುಕಟ್ಟುವಿಕೆಯಿಂದಲೂ (೩) ಧಾತುಗುಂದಿದ ರಸಹೀನವಾದ (ಕಳೆಕಡಮೆಯಾದ ಅಂದರೆ ಬಾಡಿಹೋದ], ಮುಖದ-ಮೋರೆಯ, ಮುರುಹಿನ ವಕ್ರತೆಯಿಂದಲೂ, [೪] ಮುಚ್ಚುಗಂಗಳಲಿ ಮುಚ್ಚಿದ ನೇತ್ರಗಳಿಂದಲೂ, + ಕೂಡಿ ಇದ್ದನು.

ಅರ್ಥವನ್ನು ಸುಲಭವಾಗಿ ವಾಕ್ಯರೂಪದಲ್ಲಿ ಬರೆಯುವಿಕೆ:—ಕಪಿಯನ್ನು ಹಿಡಿದುತಂದುದನ್ನು ನೋಡುತ್ತಲೇ ರಾವಣನ ಮುಖವು ಸಂತೋಷದಿಂದ ಅರಳಿಹೋಯಿತು. ಈ ಹನುಮಂತನು, ರಾವಣನ ಬಾಯಿಯಲ್ಲಿ ಜಿದ್ದಿನಿಂದ ಯಾವಯಾವ ರೀತಿಯಾಗಿ ಮಾತುಗಳು ಹೊರಡುವುವೋ ಎಂಬುದನ್ನು ಅರೆಗಣ್ಣಿನ ದೃಷ್ಟಿಯಿಂದ ನಿರೀಕ್ಷಿಸುತ್ತ, ಬಲೆಗೆ ಸಿಕ್ಕಿದ ಸಾಧಾರಣ ಕಪಿಯಂತೆ ಉಸಿರುಕಟ್ಟಿಕೊಂಡು ಬಾಡಿದ ಮುಖವನ್ನು ಓರೆಮಾಡಿಕೊಂಡು ಕಣ್ಣು ಮುಚ್ಚಿಕೊಂಡು ಇದ್ದನು.

ಭಾವಾರ್ಥ:- ಹೂತುದಾನನದ ಶಶಿರನ-ರಾವಣನಮುಖವು ಸಂತೋಷದಿಂದ ಅಳಿತು -

ವ್ಯಾ॥- (೧) ಹೂ (ಪೂ) ಧಾತುವಿನ ಭೂತಕಾಲದ ನಪುಂಸಕೈಕವಚನರೂಪವು (೨) ಉಸಿರಿನತೊಡಕು [ಕ. ಷ. ತ] [೩] ಧಾತುವಿನಿಂದ ಕುಂದಿದುದು [ಕ್ರಿ] ಧಾತುಗುಂದಿದುದು+ ಮುಖಂ [ಗ] [೪] ಮುಚ್ಚಿದುವು + ಕಣ್ಗಳು [ಗ]

ವಿ॰- ಉಪಮಾನ-ಬಲೆಗೆ ಸಿಲುಕಿದ ಕೋತಿಯುಂದದಲಿ. ಉಪಮೇಯ- ಉಸಿರುದೊಡಕಿನ...ಮುಚ್ಚುಗಂಗಳಲಿ ಇದ್ದನು.

೨೦. ಖಳಪತಿ-ರಾಕ್ಷಸಾಧಿಪತಿಯಾದ ರಾವಣನು ಕಿಡಿಗುಳಿ-ಬೆಂಕಿಚೂರನ್ನು, ಉಗುವ ಸುರಿಸುವ, ಕೋಪದಲಿ-ರೋಷದಿಂದ ಕೂಡಿ, + ಈ ಕಪಿಯನ್ನು, ಕೊಲ್ಲು ಸಂಹರಿಸು, ಕಡಿ-ಕತ್ತರಿಸು, ತಿವಿ ಚುಚ್ಚು; ತಿದಿಯಂ-ಚರ್ಮವನ್ನು, ಉಗಿ-ಸುಲಿ, ಹೊಯ್-ಹೊಡೆ, ಹಲ್ಲುಗಳ- ದಂತಗಳನ್ನು, ತರಿ-ಮುರಿ, ಕೊರೆ ಇರಿ, ಎನುತ ಎಂಬುದಾಗಿ, ಬೆಸಸೆ ಅಪ್ಪಣೆಮಾಡಲು, ಭಟನಿಕರ ಆಳುಗಳ ಗುಂಪಿನವರು, ಈತನನು ಈ ಹನುಮನನ್ನು, ಘಲ್ಲಿಸಿದರು ಆಯುಧಗಳಿಂದ ಹೊಡೆದರು; ಹನುಮನು, ಗಾಢಿಯ ಅಧಿಕವಾದ, ಘಲ್ಲಣೆಯ-ಪೆಟ್ಟಿನಿಂದ ಆದ, ಗಾಯದಲಿ-ವ್ರಣದಿಂದಕೂಡಿ, ನಿಖಿಳಕ್ಕೆ

ದುಗಳ-ಸಮಸ್ತಾಯುಧಗಳನ್ನೂ, (೧) ಹುಲ್ಲುಕಡ್ಡಿಗೆ ತೃಣಕಾಷ್ಠಾ ಯುಣನ್ನಾಗಿಯೂ, ಬಗೆಯದೆ-ಗಣಿಸದೆ (ಲಕ್ಷಿಸದೆ ಇದ್ದನು

ವ್ಯಾ॥ (೧) ದ್ವಿತೀಯಾರ್ಥದಲ್ಲಿ ಚತುರ್ಥಿ

ಭಾವಾರ್ಥ:- ಹುಲ್ಲುಕಡ್ಡಿಗೆ ಬಗೆಯದಿದ್ದನು ನಿಖಿಳಕ್ಷ್ವೇದುಗಳ-ಸಮಸ್ತಾಯುಧಗಳನ್ನೂ ಹುಲ್ಲುಕಡ್ಡಿಗಿಂತಲೂ ಕಡೆಯಾಗಿ ಎಣಿಸಿದನು (ಸಮಸ್ತಾಯುಧಗಳನ್ನೂ ಸ್ವಲ್ಪವೂ ಗಣನೆ ಮಾಡಲಿಲ್ಲ)

೨೧. ಹೋಹೋ-ಸಾಕುಸಾಕು; ಸೈರಿಸಿಕೊ ತಡೆಯುರೋ! ಹೊಯ್ಯದಿರಿ ಇವನನ್ನು, ಹೊಡೆಯಬೇಡಿರಿ; ವಿಚಾರಂ ವಿಮರ್ಶೆ ಮಾಡತಕ್ಕದು (೧) ಉಂಟು ಇದೆ; ಇವಂ ಈತನು, ಎಲ್ಲಿಯವಂ ಯಾವಸ್ಥಳದವನು? ಇವಗೆ-ಈತನಿಗೆ, ಆರು-ಯಾರು? ಒಡೆಯ-ಪ್ರಭುವು? ಇವ ಈತನು, ನಮ್ಮ ಈ ಪುರಕ್ಕೆ-ಈ ಪಟ್ಟಣಕ್ಕೆ, ಬಂದ, ಕಾರಿಯದ-ಕೆಲಸದ, ಕಾರಣದ ನಿಮಿತ್ತವನ್ನು, ಬೆಸಗೊಂಬೆವು-ಕೇಳುವೆವು; ಎಂದು ಎಂಬುದಾಗಿ, ಚಮೂರಮಣಂ-ಸೈನ್ಯಾಧಿಪತಿಯಾದ ಪ್ರಹಸ್ತನು, ಅನುಚರರ- ಸೇವಕರನ್ನು, ಜರೆದು-ತಿರಸ್ಕರಿಸಿ, ಸಮೀರಜನ ಹನುಮಂತನನ್ನು, ನೀಂ-ನೀನು, ಆರಯಾಳ, ಬಂಟಂ-ದೂತನು, ಎನುತ್ತ ಎಂಬುದಾಗಿ, ಬೆಸಗೊಂಡ-ಕೇಳಿದನು

ವ್ಯಾ॥ (೧) ಉಳ್ ಧಾತುವಿನ ಪ್ರಥಮಪುರುಷ ನಪುಂಸಕೈಕವಚನರೂಪ

೨೨. ನೋವು-ಬಾಧೆಯು, ಘನ-ಅಧಿಕವಾದುದು ಆಗಿದೆ; ಮಾತಾಡಬಾರದು- ಮಾತಾಡುವುದಕ್ಕೆ ಆಗುವುದಿಲ್ಲ; ಜೀವ ಪ್ರಾಣವು, ಸಂಚಲವಾಗುತ ಇದೆ ಹಾರಾಡುತ್ತಿದೆ; ನಾವು (೧) ಸಜ್ಜೀವಿಗಳು=ಸತ್ ನವಿಾಚೀನನಾದ, ಜೀವಿಗಳು-ಜೀವವುಳ್ಳವರು (ಅಂದರೆ ನೋವಿಲ್ಲದ ಜೀವವುಳ್ಳವರು), ಆದಡೆ-ಆದಪಕ್ಷದಲ್ಲಿ, ಬಳಿಕ-ಆಮೇಲೆ, ಎಮಗೆ ನಮಗೆ, ಮಾತು-ಮಾತಾಡುವಿಕೆಯು, ಏಸಲೇ-ಅಲ್ಲವೇ? (ಅಂದರೆ ನಮ್ಮ ಶರೀರದ ಕಟ್ಟು ಪರಿಹಾರವಾಗಿ ನಮ್ಮ ಜೀವಕ್ಕೆ ಬಾಧೆತಪ್ಪಿದರ ಆಮೇಲೆ ನಮ್ಮಿಂದ ಮಾತು ಹೊರಡುವದು [ಎಂದು ಭಾವ] ನಾವು), ಮಾಡಿದ-ನಡಿಸಿದ, ಪೊಲ್ಲದು-ಕೆಡಕು, ಆವುದು ಏನು? ನೀವು, ನಮ್ಮನು-ನಮ್ಮನ್ನು, ಕಟ್ಟಿ-ಹಗ್ಗದಿಂದ ಬಿಗಿದು, ಇದು- ಈ, ಕೊಲುವ್ವನು ಸಂಹರಿಸುವುದು, (೨) ಆವರಾಯರ-ಯಾವದೊರೆಗಳ, ರಾಜನೀತಿ-ರಾಜನ ಮಾರ್ಗವು? ಎಂದು, ಆ ಹನುಮನು, ಎಂದನು-ಹೇಳಿದನು

ವ್ಯಾ॥ (೧) ಸತ್+ಜೀವಂ=ಸಜ್ಜೀವಂ (ವಿ-ಪೂ) ಸಜ್ಜೀವವುಳ್ಳವ =ಸಜ್ಜೀವಿಗಳ್ (ತದ್ಧಿತಾಂತ) (೨) ಆರ+ರಾಯರ ಗ)

೨೩. ಆ ಪ್ರಹಸ್ತ-ರಾವಣನ ಮಂತ್ರಿಯಾದ ಆ ಪ್ರಹಸ್ತನು, (೧) ನಮು

ಗೃಹಾಂತರ [illegible] ನಗೆಯಿಂದ, ನಗುತ- ನಗುತ್ತ, ಹನೂಮನ-ಆಂಜ ನೇಯನ, ಸೊಗದ- [illegible], [illegible] ಧೂರ್ತನಾದನ ದ- [illegible], [illegible] ಅಧಿಪನ್ [illegible], ಭಂಗಿಯಿಂ [illegible] [illegible] ಬಲದಿಂದ [illegible] [illegible]), [illegible]- ತಿಳಿದು [illegible] [illegible] [illegible] ಯುದ್ಧಗಾಢನು [illegible] [illegible] [illegible] [illegible] ಗಂ=ಕುಟಿಲ ವಕ್ರ ಮಾಗರ್ಗವುಳ್ಳ [ಕಪ ಟ ವ] [illegible] ; + [೨] ಇವನ ದು [illegible] ಲೋಕಸಾಮಾನ್ಯದ [ಸಾಧಾರಣವಾದ] ಪವನ್ನ ಗದ-ಕೋಪ, ಬರಿಲ್ಲ- [illegible] ತಿಯಿಲ್ಲ, ಇವನ- ಇವನನ್ನು, ನುಡಿಸಿದು- ಮಾತಾಡಿಸಿ, [illegible] + ಎಂದು, ಎಂದು ಹೇಳಿದ ನು [ಇವನು ಲೋಕಸಾಧಾರಣಾಕಪಿಯಲ್ಲ. ಮಾತಾಡಿಸಿ ನೋಡಬೇಕೆಂದನು

ಟಿಪ್ಪ॥ [೧] ಮಂಗುಳಂತಿರ್ದನಗೆ [ಕ. ಉ. ಪ್ರೂ] [೨] ನಾಡ+ ಜಾಣಿಕೆ [ಕೆ. . ಸು. ತ]

ವಿ॥ ಧೂರ್ತನಾದನ, ಎಂಬಲ್ಲಿ ವನನ ಎಂಬುದಕೆ ಬಾಯಿಯಿಂದು ಅರ್ಥ. ಲಕ್ಷಣೆಯಿಂದ, ಬಾಯಿಯಿಂದ ಹೊರಡುವ ಮಾತು ಎಂದು ಇಲ್ಲಿ ಅರ್ಥವು).

೨೪. + ಮಂತ್ರಿ ಪ್ರಹಸ್ತನು, ಹನುಮನ ತೋಳ-ಬಾಹುವಿನ, ಕ ಟ್ಟು ಒಂದು ಬಂಧನವೊಂದು [ಬಿಗಿತವೊಂದು] ಉಳಿಯ ಹೊರತಾಗ, ಮಿ ಕ್ಕ ಸ ಉಳಿದ, [೧] ಕಾಲುಕೈ [illegible] ಕೊರಳ್ [illegible], ಕಾಲಪಾಶದ= ಕಾಲ ಯಮನ, ಪಾಶದ ಹಗ್ಗದಂತಿರುವ ಹಗ್ಗದ ಕಟ್ಟ-ಬಿಗಿತವನ್ನು ಸಡಿಲಿಸಿ-ಬಿಡಿಸಿ [೨] ಕೇಳಲಿಕೆ ಪ್ರತ್ತಿ ಮಾಡಲಾಗ ಹನುಮ-ಆಂಜನೇಯ ನು, ನನಗೆ, ಹೇಳಬೇಕೇ-ಉತ್ತರ ಕೊಡಬೇಕೇ! ಆದೊಡೆ ಹಾಗಾದರೆ [೩] [illegible] ಕರ್ಣವನ್ನು ಕೊಟ್ಟು [ಗಮನಕೊಟ್ಟು] ಆಲಿಸು ಕೇಳು ನಿಮ್ಮ ನಿಮ್ಮನು, [illegible] ಆಳುವ [illegible] ರಾಜನ [ರಾವಣನ] [೪] ತಲೆಗೊಳಲು-ತಲೆಯನ್ನು ತೆಗೆದುಕೊಳ್ಳಲು, ಬಂದೆನು ; ತಾನು- ನಾನು, ದೂತ-ರಾಜನ [illegible] + ಎಂದು, ಎಂದು ಹೇಳಿದನು

ಭಾವಾರ್ಥ. ನಿಮ್ಮ [illegible] ಆಳುವ [illegible] ತಲೆಗೊಳಲುಬಂದೆನು-ನಿಮ್ಮ [illegible] ದೊರೆಯನು [ರಾವಣನನ್ನು] [illegible], ಬಂದೆನು

ಟಿಪ್ಪ॥ [೧] ಡ್ಯಂ [೨] ಕೇಳ + ಲಿಕೆ. ಕೇಳುಧಾತುವಿನ ಮೇಲೆ [illegible], ಎಂಬುದು ಸತಿ ಸಪ್ತಮಿಯ [illegible] [೩] ಕಿವಿಯಿಂ ಕೊಟ್ಟು

[ಶ್ರಿ] [೮] ತಲೆಯುಂಕೊಳಲು [ಶ್ರಿ]

೨೫. ಅತಂ-ನಿಮ್ಮ ಆದೊರೆಯು, ಆದು ಯಾರು? ಎನಲು ಎಂದು ಪ್ರಶ್ನೆಮಾಡಲು, ಅಹುದು-ಸರಿ; ಕೇಳುವರೀತಿ ಪ್ರಶ್ನೆ ಮಾಡುವಬಗೆಯು, ಲೇಸು-ಚೆನ್ನಾದುದು [ಪ್ರಶ್ನೆ ಮಾಡುವರೀತಿ ಚೆನ್ನಾಗಿದೆ] [೧] ಪುಲಸ್ತ್ಯ ಕುಲಸಂಭೂತ ... ದಶಾನನಂ=ಪುಲಸ್ತ್ಯ ಪುಲಸ್ತ್ಯ ಮುನೀಶ್ವರನ, ಕುಲ-ವಂಶದಲ್ಲಿ, ಸಂಭೂತ-ಹುಟ್ಟಿದವನಾದ, ಭೂಭಾರಕ-ಭೂಮಿಗೆ ಭಾರಸ್ವ ರೂಪನಾದ [ಅಂದರೆ ಲೋಕಕಂಟಕನಾದ] ದಶಾನನಂ-ಹತ್ತು ತಲೆಗಳುಳ್ಳವನು, ಒಬ್ಬನು, ಉಂಟುಗಡ-ಇದ್ದಾನೆಯಲ್ಲವೇ! ಆತನ-ಆರಾವಣನ ಒಡಹುಟ್ಟಿದ-ಕೂಡಹುಟ್ಟಿದ [ಅಂದರೆ ಆ ರಾವಣನ ತಾಯಿಯ ತಂಗಿಯ ಮಗನಾಗಿ ರಾವಣನಿಗೆ ಸಹೋದರನಾದ], [೨] ಖರಾದಿ ಮಹಾತಿಬಲ-ಭಟರುಗಳಂ=ಖರ-ಖರಾಸುರನು, ಆದಿ-ಮೊದಲಾಗುಳ್ಳ, ಮಹತ್-ಘನತೆಯುಳ್ಳವರಾದ, ಅತಿಬಲ-ಬಹುಸಾಮರ್ಥ್ಯವುಳ್ಳವರಾದ, ಭಟರುಗಳಂ ಯೋಧರನ್ನು, ಉಗ್ರಪರೇತಪುರಕೆ=ಉಗ್ರ-ಭಯಂಕರವಾದ, ಪರೇತಪುರಕೆ=ಪರೇತ-ಸತ್ತವರ, ಪುರಕೆ-ಪಟ್ಟಣಕ್ಕೆ (ಅಂದರೆ ಯಮಪಟ್ಟಣಕ್ಕೆ, ಅಟ್ಟಿದನಂ-ಓಡಿಸಿದ ಪುರುಷನನ್ನು [ಅಂದರೆ ರಾಮನನ್ನು] ನೀಂ-ನೀನು, ಕೇಳಿ, ಅರಿಯಾ-ತಿಳಿಯೆಯಾ? ಎಂದು ಹನುಮನು, ಎಂದ-ಹೇಳಿದನು [ಖರಾದಿಶೂರರಾಕ್ಷಸರನ್ನು ಕೊಂದವನನ್ನು ನೀನು ಕೇಳಿ ತಿಳಿದಿಲ್ಲವೇ? ಎಂದನು]

ಭಾವಾರ್ಥ:—ಖರಾದಿ [ಮಹಾತಿಬಲಭಟರುಗಳ ಉಗ್ರಪರೇತಪುರ ಕಟ್ಟಿದನಂ-ಖರಾದಿ-ಘನ ಶೂರಯೋಧರನ್ನು ಕೊಂದವನನ್ನು.

ವಿ|| ಪರೇತಪುರ-ಯಮನಪಟ್ಟಣ.

ವ್ಯಾ|| [೧] ಪುಲಸ್ತ್ಯನಕುಲಂ [ಷ. ತ.] ಕುಲದಲ್ಲಿ ಸಂಭೂತ [ಸ. ತ] ಭೂಗೆಭಾರಕ [ಷ. ತ] ಭೂಭಾರಕನಾದ ದಶಾನನಂ [ವಿ. ಪೂ] ಸಂಭೂತನಾದ ದಶಾನನಂ [ವಿ. ಪೂ] [೨] ಖರ ಆದಿ [ವ್ಯ. ಬ. ವ್ರೀ] ಅತಿಯಾದ ಬಲವುಳ್ಳವರು [ಬ ವ್ರೀ] ಮಹಾಂತರಾದ ಅತಿಬಲಭಟರುಗಳು, ಖರಾದಿಗಳಾದ .. ಭಟರುಗಳು (೨ ವಿ. ಪೂ.)

ಟಿಪ್ಪಣಿ:—ಬ್ರಹ್ಮನ ಮಗನಾದ ಪುಲಸ್ತ್ಯಮುನಿಯ ಪುತ್ರನು ವಿಶ್ರವಸ್ಸು. ವಿಶ್ರವಸ್ಸಿನ ಮಗನು ರಾವಣನು.

೨೬. ಮಾಯಿಯುಲಿ-ಮಾಯಾವಿದ್ಯೆಯಿಂದ (ಮಾಯೆಯಿಂದ ತಾಳಿದ ಚಿನ್ನದಜಿಂಕೆಯ ರೂಪದಿಂದ), ಸುಳಿವ-ಸಂಚರಿಸುವ, ಅಸುರನ-ಮಾರೀಚನೆಂಬ ರಾಕ್ಷಸನ, ಅಸುವನು ಪ್ರಾಣವನ್ನು, ಸಾಯಕದಲಿ- ಬಾಣದಿಂದ

ಉಗಿದವನ-ಎಳೆದವನನ್ನು (ರಾಮನನ್ನು) ಬಲ್ಲೈ-ತಿಳಿದಿದ್ದೀಯಾ? ರಾಯು ಸಭೆಯಲಿ-ಸೀತಾಸ್ವಯಂವರಕ್ಕೆ ಬಂದ ದೊರೆಗಳ ಸಮಾಜದಲ್ಲಿ, ರಾಜಮೌಳಿಯು ಈಶ್ವರನ, ಚಾಪದಲಿ ಧನುಸ್ಸಿನಲ್ಲಿ, ಸಿಕ್ಕಿ-ತಗುಲಿಕೊಂಡು. (ಈಶ್ವರನ ಧನುಸ್ಸಿನ ಕೆಳಗೆ ಸಿಕ್ಕಿಕೊಂಡು,) ಸಾಯಬಗೆದವನ-ಮಾನಭಂಗದಿಂದ ಮರಣಹೊಂದಬೇಕೆಂದು ಯೋಚಿಸಿದವನ (ರಾವಣನ) ಅನುಜೆಯು ತಂಗಿಯಾದ ಶೂರ್ಪಣಖಿಯು, ಅಭಿಮಾನಾಯತವ=ಅಭಿಮಾನ-ಮಾನದ, ಆಯತವ-ಹೆಚ್ಚಿಗೆಯನ್ನು, ಕೊಂಡವನ-ಅಪಹರಿಸಿದವನನ್ನು (ಶೂರ್ಪಣಖಿಯ ಕಿವಿ ಮೂಗುಗಳನ್ನು ಕೊಯ್ದು ಮಹಾ ಮಾನಭಂಗಮಾಡಿದವನನ್ನು (ರಾಮನನ್ನು) ಬಾಯ ಜನಗಳ ಬಾಯಿಯಮಾತಿನ, ಕುರುಹಿನಲಿ-ಗುರುತಿನಿಂದ, ಬಲ್ಲೈ-ತಿಳಿದಿದ್ದೀಯಾ? ತಾಂ-ನಾನು, ಆ ನರೇಂದ್ರನ-ಆ ರಾಜನ (ಆ ರಾಮನೆಂಬ ರಾಜನ) ದೂತ-ಬಂಟನು + ಎಂದು ಹನುಮನು, ಎಂದ-ಹೇಳಿದನು.

ಭಾವಾರ್ಥ;—ರಾಯುಸಭೆಯ ರಾಜಮೌಳಿಯಲಿ ಚಾಪದಲಿ...ಕೊಂಡವನ ಬಲ್ಲೈ ಬಾಯಕುರುಹಿನಲಿ:ರಾಜಸಭೆಯಲ್ಲಿ ಈಶ್ವರಧನುಸ್ಸಿನ ಕೆಳಗೆ ಸಿಕ್ಕಿ ಮಾನಭಂಗದಿಂದ ಸಾಯಲೆಣಿಸಿದ ರಾವಣನ ತಂಗಿಯಾದ ಶೂರ್ಪಣಖಿಯ ಮಾನಭಂಗವನ್ನು ಮಾಡಿದವನನ್ನು ಜನಗಳ ಬಾಯಿಯಿಂದ ಕೇಳಿ ತಿಳಿದಿದ್ದೀಯಾ?

ವಿ॥ ರಾಜಮೌಳಿ-ಈಶ್ವರ

೨೭. ಮುಗುಳ್ದೆ-ತಿರುಗಿ, ಉಳ್ಳುವು-ಇರತಕ್ಕ, ಕೇಳುವ-ನನ್ನನ್ನು ಪ್ರಶ್ನೆಮಾಡುವ, (೧) ಸೊಗಸುವಾತುಗಳು-ನಿನಗೆ ಇಷ್ಟವಾದ ಮಾತುಗಳು; ಇನ್ನು ಏನು ಉಂಟು-ಮತ್ತೆ ಏನಿವೆ? (ನನ್ನನ್ನು ಪ್ರಶ್ನೆಮಾಡುವುದಕ್ಕಾಗಿರುವ ನಿನಗೆ ಇಷ್ಟವಾದ ಮಾತುಗಳು ಇನ್ನೇನಿವೆ?) + ಎಂದು ಹನುಮನು, ಎನೆ ಹೇಳಲು, + ಮತ್ತು, ಹುಸಿ ಸುಳ್ಳು, ಹೊಗದವೊಲು ಸಂಬಂಧಿಸದಹಾಗೆ, ಹೇಳಿದವು-ನುಡಿದವು (ಸುಳ್ಳಿಲ್ಲದಂತೆ ಹೇಳಿದೆವು) ನಮಗೆ, ಇದಕೆ-ಇದಕ್ಕೋಸ್ಕರ (ವಾಸ್ತವ್ಯಾಂಶವನ್ನು ಹೇಳುವುದಕ್ಕೆ) (೨) ಅಂಜಲು-ಭಯವು, ಏಕೆ-ಏತಕ್ಕೆ? ಎನಲು-ಎಂದು ಹೇಳಲು. + ಪ್ರಹಸ್ತನು, ನಗೆಯು ನಗುವಿಕೆಯಿಂದ ಕೂಡಿದ, (೩) ನಸುಕೋಪದಲಿ ಸ್ವಲ್ಪ ರೋಷದಿಂದಕೂಡಿ, + ನೀನು, ನಮ್ಮ, ಈ ನಗರಕೆ ಈ ಪಟ್ಟಣಕ್ಕೆ ಏತಕೆ-ಏಕೆ, ಬಂದೆ? ನಿನ್ನ, ಪತಿ-ಒಡೆಯನು, ಏನುಕಾರಣ ಯಾವ ನಿಮಿತ್ತವಾಗಿ, (೪) ಹುಲುಕೋಡಗವ-ಅಲ್ಪವಾದ ಕಪಿಯನ್ನು (ನಿನ್ನನ್ನು

ಕಳುಹಿದಂ-ಅಟ್ಟಿದನು? + ಎಂದು, ಎಂದ-ಕೇಳಿದನು.

ವ್ಯಾ॥ (೧) ಸೊಗಸಿನ + ಮಾತುಗಳು (ಕ. ಷ. ತ) ಸಮಾಸದ
ಉತ್ತರಪದದ ಪವರ್ಗದ ಅಂತ್ಯಾಕ್ಷರವಾದ ಮಕಾರಕ್ಕೆ ವಕಾರಾದೇ
(೨) ಅಂಜು + ಅಲು = ಅಂಜಲು, ಅಂಜು ಧಾತುವಿನಮೇಲೆ ಭಾವಾರ್ಥದ
ಅಲು ಪ್ರತ್ಯಯ. (೩) ನಸುವಾದ ಕೋಪಂ (ವಿ. ಪೂ) ಅರಿ. ಷ[೪] ಪುಲ್ಲ
ಶಿರ್ಪ ಕೋಡಗಂ = ಪುಲ್ಲೊಕ್ಕೋಡಗಂ (ಹುಲುಕೋಡಗಂ) (ಕ.ಉ.ಪೂ)

೨೮. ಎಲವೋ-ಎಲೋ ! ಆದೊಡೆ-ಹಾಗಾದರೆ, ಕೇಳು; (೧) ಶಿ
ವೀರೈದರವಂ-ಹತ್ತು ತಲೆಗಳುಳ್ಳವನು (ರಾವಣನು), ಈಪುರದ ಈ ಪ
ಟ್ಟಣದ, ಅರಸುಗಡ-ದೊರೆಯಲ್ಲವೇ? + ಅವನು, ಕಾದಲರಿಯದೆ- ಪ
ಯಾದ ರಾಮನೊಡನೆ ಯುದ್ಧಮಾಡಲಾರದೆ, ಕಳವಿನಲಿ ಚೋರತನದಿ
ನ, ಕುಂಭಿನಿಯ-ಭೂಮಿಯ, ನಂದನೆಯ-ಮಗಳಾದ ಸೀತೆಯನ್ನು, ಒ
ಯ್ದುಗಡ-ಅಪಹರಿಸಿಕೊಂಡು ಹೋದನಲ್ಲವೇ? ನಾವು, ಇದ ಈ ಸಂಗತಿ
ಯನ್ನು, ಅರಿಯೆವು-ತಿಳಿಯೆವು, ಬಳಿಕ-ಆಮೇಲೆ, ಆ ದಿನೇಂದ್ರಕುಲೇ
ದ್ರ=ಆ ದಿನೇಂದ್ರ-ಸೂರ್ಯನ, ಕುಲ-ವಂಶದ, ಇಂದ್ರ-ಪ್ರಭುವಾದರಾವ
ಕು, ತನ್ನ, ತಳೋದರಿಯಂ-ಹೆಂಗಸನ್ನು [ಹೆಂಡತಿಯಾದ ಸೀತೆಯನ್ನು]
ಅರಿ ಎಂದು-ಹುಡುಕಿಕೊಂಡು ಬಾ ಎಂದು, ಕಳುಹಲು-ಕಳುಹಿಸಲು, +
ಆವ್-ನಾವು, + ಈ ಪಟ್ಟಣಕ್ಕೆ, ಬಂದೆವು + ಎಂದು ಹನುಮನು, ಎಂ
ದ ಹೇಳಿದನು.

ವ್ಯಾ॥ [೧] ಎರಡು + ಐದು = ಈರೈದು (ಗ) ಶಿರಂಗಳ + ಈರೈದು
ಶಿರವೀರೈದು. ಸಮಾಸದಲ್ಲಿ ಅಕಾರಾಂತವಾದ ಪೂರ್ವಪದವೂ ಸ್ವರಾದಿ
ಯಾದ ಸಂಖ್ಯಾವಾಚಕವಾದ ಉತ್ತರಪದವೂ ಇದ್ದರೆ ಪೂರ್ವಪದಕ್ಕೂ
ಉತ್ತರಪದಕ್ಕೂ ನಡುವೆ ಅನುಸ್ವಾರವು ಆಗಮವಾಗಿ ಬರುವುದು. ಮಕಾ
ರಕ್ಕೆ ವಕಾರಾದೇಶ. ಶಿರವೀರೈದರಸಂಬಂಧಿ = ಶಿರವೀರೈದರವಂ (ತದ್ಧಿತ
ನಾಮ)

ವಿ॥ ಕುಂಭಿನಿಯ ನಂದನೆ ಸೀತಾದೇವಿ, ದಿನೇಂದ್ರಕುಲೇಂದ್ರ-ರಾವ
ಅರಸು- ಇದು ಧಾತುವಾದ ಹುಡುಕುವುದು. ನಾಮವಾದರೆ ದೊರೆ
ತಳೋದರಿ) ತಳ-ಗಾಜಪ್ಪಟ್ಟ ಬೆರಳುಳ್ಳ ಅಂಗೈಯಂತಿರುವ, ಉದರಿ
ಹೊಟ್ಟೆಯುಳ್ಳವಳು (ಹೆಂಗಸು ಎಂದು ಸಾಮಾನ್ಯವಾಗಿ ಅರ್ಥವು)

೨೯. ಎಲವೊ- ಎಲೋ ! ನಾವು, ಆಸತಿಯ- ಆ ಸೀತಾದೇವಿಯನ್ನು
ಕಂಡ-ನೋಡಿದ, ಕೆಲಸ ಕಾರ್ಯವು, ಮುಂಚಿತು- ಮೊದಲೇ ಆಯಿತು; +

ನಾವು ಸೀತಾದೇವಿಯನ್ನು, ಕಂಡೆವು-ನೋಡಿದೆವು ; ಅಲ್ಲದೆ-ಹೊರತಾಗಿ (೧) ಗಲಬೆಗಾರರು-ದೊಂಬಿಗಾರರು. ಅಣಕಸಣಕದಲ್ಲಿ-ಹುಚ್ಚು ಪೆಟ್ಟುಗಳಿಂದ (ಯದ್ವಾತದ್ವಾಪ್ರಹಾರಗಳಿಂದ), + ನಮ್ಮನ್ನು, ಗಾಸಿಮಾಡಿದರು-ಆಯಾಸಪಡಿಸಿದರು; ಬಳಿಕ ಅನಂತರದಲ್ಲಿ. + ನಾವು, ಕೈಮೈಸೋಂಕಿಗೆ-ಹೊಡೆದಾಟಕ್ಕೆ, ಆದರೆ ಶಕ್ತರಾಗದೆ (ಶಕ್ತಿಯಿಲ್ಲದೆ), ಸೋಲದಲಿ- ಅಪಜಯದಿಂದ, ಸಿಲುಕಿದೆವು-ಬಂಧನಕ್ಕೆ ಸಿಕ್ಕಿದೆವು ; ಬಂಧನಕೆ ಕಟ್ಟಿಗೆ, ಒಳಗುಬಟ್ಟುದು-ಸಿಕ್ಕಿದುದು, ಪುರಾಕೃತಂ-ಪೂರ್ವಜನ್ಮದಲ್ಲಿ ಮಾಡಲ್ಪಟ್ಟ, ವಿಧಿ-ಕರ್ಮವು (ಪೂರ್ವಜನ್ಮದ ಕರ್ಮದಫಲವು); + ಈವಿಧಿಯು, ಆರವಶಂ-ಯಾರ ಅಧೀನವು ? (ಅಂದರೆ ಯಾರಿಂದ ಮೀರುವುದಕ್ಕೆ ಸಾಧ್ಯವು ?) (ವಿಧಿಯನ್ನು ಅನುಭವಿಸಿಯೇತೀರಬೇಕು ಎಂದು ಭಾವ) + ಎಂದು, ಹನುಮನು, ಎಂದ

ವ್ಯಾ॥ (೧) ಗಲಬೆಯನ್ನು ಮಾಡುವವರು=ಗಲಬೆಗಾರರು. ಇದನ್ನು ಮಾಡುವವರು ಎಂಬರ್ಥದಲ್ಲಿ ಗಾರ ಎಂಬ ತದ್ಧಿತಪ್ರತ್ಯಯವು(ತದ್ಧಿತಾಂತ

ತಿದ್ದುವಿಕೆ- ‘ ಎಲವೊ ನಾವಾಸತಿಯು ? ಎಂದಿದ್ದರೆ ಸಮಂಜಸ.

೩೦. + ನಾವು, ನಿಮ್ಮ, ರಕ್ಕಸಗಟ್ಟಿಯರ ರಾಕ್ಷಸವೀರರ, ಗಾಢಣೆಗೆ-ಪಟ್ಟಗೆ, ಸೈರಿಸದೆ-ತಡೆಯಲಾರದೆ, ಓಟ್ಟದೆಗೆದೆವು- ಧಾರಿಹಿಡಿದೆವು (ಓಡಿದೆವು); + ಅವರು,ನಮ್ಮನ್ನು,ಅಟ್ಟೆ-ಹಿಂದಬಿದ್ದು, ಹಿಡಿದರು-ಹಿಡಿದುಕೊಂಡರು; ಹಿಡಿದು, ಎನ್ನಂ-ನನ್ನನ್ನು, ಸದೆಬಡಿದು-ಚೆನ್ನಾಗಿ ಹೊಡೆದು, ಈವರಿಯ-ಈರೀತಿಯಲ್ಲಿ, ಕಟ್ಟಿ-ಬಿಗಿದು, ತಂದರು-ತೆಗೆದುಕೊಂಡುಬಂದರು; ನಾವು, ಲೋಗರೆ- ಇತರರ, ಉಟ್ಟೆಯವರೇ- ಪಕ್ಷದವರೇ, ದಿಟ- ನಿಜವು (ನಾವು ಶತ್ರುಪಕ್ಷದವರೇನಿಜವು) ನೀವು, ವಿಚಾರಿಸಿ-ನ್ಯಾಯವಿಮರ್ಶೆಮಾಡಿ, + ನಮ್ಮನ್ನು, ಬಿಟ್ಟರೆಯುಬಿಡಿ-ಬಿಟ್ಟರೂಬಿಡಿ ; ಬಿಡದೆ- ಹೋಗಗುಡದೆ, ಕೊಲುವರೆ ಕೊಲ್ಲಿ ಸಂಹರಿಸುವಪಕ್ಷದಲ್ಲೂ ಸಂಹರಿಸಿರಿ; + ಎಂದು ಹನುಮನು, ಎಂದ ಹೇಳಿದನು

೩೧. ನಮ್ಮ, ಅದೃಷ್ಟದ ಪೂರ್ವಜನ್ಮಕರ್ಮದ, ಭೋಗ- ಫಲಾನುಭವವು (ಫಲವನ್ನು ಅನುಭವಿಸುವಿಕೆಯು), ಇನಿತು- ಇಷ್ಟುಮಟ್ಟಿಗೆ, ಆಗಲಿಬಿದ್ದುದು ಆಗಬೇಕಾಗಿದ್ದಿತು; (ಇಷ್ಟರಮಟ್ಟಿಗೆ ನಮ್ಮ ಜನ್ಮಾಂತರ ಕರ್ಮದ ಫಲವನ್ನು ಅನುಭವಿಸಬೇಕಾಗಿದ್ದಿತು) ; ಅಪ್-ನಾವು, ಇದಂ-ಈ ಜನ್ಮಾಂತರ ಕರ್ಮಫಲಭೋಗವನ್ನು, ಈಗಲು-ಈಗ, ಒಲ್ಲೆವು ಎನಲು-ಬೇಡವೆಂಬುದಾಗಿ ಹೇಳಲು, ಅಳವೇ ಸಾಧ್ಯವೇ ? (ಅಂದರೆ ಕರ್ಮಫಲ

ವನ್ನು ಅನುಭವಿಸಿ ತೀರಬೇಕೇಹೊರತು ಈಗ ಬೇಡವೆಂದು ಬಿಡಲು ಸಾಧ್ಯವಲ್ಲವೆಂದು ಭಾವ) ತಾಂ ನಾನು, ಇನ್ನು-ಮುಂದೆ, ಮುಂಗಿ ವ್ಯಥೆಪಟ್ಟು, ಮಾಡುವುದು ಏನು-ಮಾಡತಕ್ಕುದೇನು? ಆಗಲಿ; ಅದಕೆ ಅದಕ್ಕೋಸ್ಕರ, ಏನು-ಚಿಂತೆಯೇನು? ಉಸಿರು ನಮ್ಮ ಪ್ರಾಣವು, ಬದುಕಿದ್ದಾಗಲು-ಉಳ್ಳಿದಿರುವಾಗಲೇ, ನಾವು, ಹಗೆಯ-ದ್ವೇಷದ, ಹರಿಹಿನ ಆಧಿಕ್ಯವುಳ್ಳ-ಆಳ್ವನ-ನಿಮ್ಮ ದೊರೆಯ, (೧) ವ್ಯೈಗುರುಹ ಆಕಾರದ ಗುರುತನ್ನು, ಅರಿವೆವು-ತಿಳಿಯುವೆವು [ನಾವು ಬದುಕಿರುವಾಗಲೇ ದ್ವೇಷಿಯಾದ ನಿಮ್ಮ ದೊರೆಯ ಆಕಾರದ ಗುರುತನ್ನು ನೋಡಿ ತಿಳಿವೆವು]; ಆತನ ಆ ನಿಮ್ಮ ದೊರೆಯನ್ನು, ತನಗೆ ನನಗೆ-ತೋರಿಸಿ-ಕಾಣಿಸಿರಿ; + ಎಂದು ಹನುಮನು ಎಂದ-ಹೇಳಿದನು

ವ್ಯಾ॥ (೧) ವ್ಯೈಯ + ಕುರುಹು (ಕ. ಷ. ತ)

೩೨. + ನಮ್ಮ ದೊರೆಯನ್ನು, ತೋರಬೇಕೇ-ನಿನಗೆ ತೋರಿಸಬೇಕೇ? ಆದರೆ ಹಾಗಾದರೆ, ನಿನಗೆ, ಕರುಣವ-ಕೃಪೆಯನ್ನು, ತೋರಬೇಕು-ತೋರಿಸಬೇಕು (ನಿನ್ನಲ್ಲಿ ಕರುಣವಿಟ್ಟು ನಮ್ಮ ದೊರೆಯನ್ನು ತೋರಿಸಬೇಕು); + ಎಂದು, ಆ ಸಚಿವಪತಿ-ಆ ಮಂತ್ರೀಶ್ವರನಾದ ಪ್ರಹಸ್ತನು, ಎನುತ್ತಲೆ-ಹೇಳುತ್ತ, [೧] ಸುರರಾಜದಲ್ಲಣನ=ಸುರರಾಜ ದೇವೇಂದ್ರನನ್ನು, ತಲ್ಲಣನ ಭಯಪಡಿಸುವವನಾದ ರಾವಣನನ್ನು, + ಹನುಮನಿಗೆ, ತೋರಿಸಿದನು-ಕಾಣಿಸಿದನು, ತೋರಿಸಲು ರಾವಣನನ್ನು ಕಾಣಿಸಲು, + ಹನುಮನು, [೨] ತಲೆದೂಗಿ ಶಿರಸ್ಸನ್ನು ಅಲ್ಲಾಡಿಸಿ, [೩] ನಸುನಗೆದೋರಿಕೆಯ= ನಸುನಗೆ-ಮುಂದಹಾಸದ, ತೋರಿಕೆಯ-ಸ್ಫುರಣೆಯುಳ್ಳವನಾಗಿ, ನಯನಾಗ್ರದ=ನಯನ-ಕಣ್ಣುಗಳ, ಅಗ್ರದ ತುದಿಯ, ಉಗ್ರದ ರೌದ್ರರಸದ, ಬೀರಿಕೆಯಲಿ ಎರಚುವಿಕೆಯಿಂದ ಕೂಡಿ, ಆ ಪ್ರಹಸ್ತಂಗೆ ಆ ಪ್ರಹಸ್ತನನ್ನು ಕುರಿತು, ಈ ಮಾತಂ-ಈ ಮುಂದೆ ಹೇಳುವ ಮಾತನ್ನು, ಆಡಿದನು-ಹೇಳಿದನು

ಭಾವಾರ್ಥ;—ನಯನಾಗ್ರದುಗ್ರದ ಬೀರಿಕೆಯಲಿ-ಕಡೆಗಣ್ಣಿನ ನೋಟದಿಂದ ಮಹಾಭೀತಿಯನ್ನುಂಟುಮಾಡುತ್ತ

ವ್ಯಾ॥ [೧] ಸುರರರಾಜಂ [ಷ ತ] ಸುರರಾಜನನ್ನು ತಲ್ಲಣಗೊಳಿಸುವವನು [ಕೃದಂತ] [೨] ತಲೆಯಂ + ತೂಗಿ [ಕ್ರಿ] ನಸುನಗೆ [ಕ.ವಿ ಪೂ] ನಗೆಯತೋರಿಕೆ [ಕ. ಷ. ತ]

ವಿ॥- ಸುರರಾಜದಲ್ಲಣ-ರಾವಣ

ತಿದ್ದುವಿಕೆ:- ‘ ತೋರುಬೇಕಾದರೆ, ಎಂದು ಮೂಲದಲ್ಲಿದೆ. ಅನನ್ವಯವಾಗುವುದರಿಂದ ತೋರಬೇಕಾದರೆ, ಎಂದು ತಿದ್ದುವುದ.

೩೩. [ಮುಖ್ಯಪದ್ಯ:- [೧] ಅಯುತಾಕ್ಷಿಯು=ಆಯುತ- ವಿಶಾಲವಾದ, ಅಕ್ಷಿಯು-ಕಣ್ಣುಳ್ಳವಳಾದ ಸೀತಾದೇವಿಯನ್ನು, ತಂದ-ತೆಗೆದುಕೊಂಡು ಬಂದ, [೧] ರಕ್ಕಸನಾಯಂ-ನಾಯಿಯಂತಿರುವ ರಾಕ್ಷಸನನ್ನು [ರಾವಣನನ್ನು]+ನಾವು, [೨] ಕಾಕತಾಳನ್ಯಾಯದಿಂದಲೆ ಕಾಗೆಯು ಬರುವಿಕೆಯಂತೆಯೂ ತಾಳೆಹಣ್ಣಿನ ಬೀಳುವಿಕೆಯಂತೆಯೂ ಸಂಭವಿಸುವ ರೀತಿಯಿಂದ, ಏತಕೆ ಏಕೆ, ಕಂಡೆವೈ- ನೋಡಿದೆವೋ ! ಶಿವಶಿವ ಹರಹರಾ ! ಮಹಾದೇವ-ಪರಮೇಶ್ವರನೇ! ಆಯಸದ-ನಮ್ಮ ಶ್ರಮವೆಂಬ, ಕತ್ತಲೆಗೆ-ಅಂಧಕಾರಕ್ಕೆ [೩] ಕಣ್ದೆರವು ತಕ್ಕ ಫಲವು, ಆಯಿತು- ಉಂಟಾಯಿತು, ಇಕ-ಹೀಗಾದಮೇಲೆ, ಆವ್- ನಾವು, ಅಬುಜದಳಾಯತಾಕ್ಷನ= ಅಬುಜ-ಕಮಲದ, ದಳ-ಎಸಳಿನಂತೆ, ಆಯತ-ವಿಸ್ತಾರವಾದ, ಅಕ್ಷನ-ಕಣ್ಣುಳ್ಳವನಾದ ರಾಮನ, ಪಾದಸೇವೆಯಲಿ- ಚರಣಶುಶ್ರೂಷೆಯಿಂದ, ಧನ್ಯರು-ಕೃತಾರ್ಥರು ಆದೆವು;+ಎಂದು, ಆಹನುಮ, ಎಂದನು-ಹೇಳಿದನು

ತಾತ್ಪರ್ಯ,—ಸೀತಾದೇವಿದುನ್ನು ಅಪಹರಿಸಿ ತಂದ ನಾಯಿಯಂತೆ ಅತ್ಯಲ್ಪನಾದ ಈ ರಾಕ್ಷಸನನ್ನು ಕಾಕತಾಳನ್ಯಾಯದಿಂದ [ಅಂದರೆ ದೈವವಶದಿಂದ] ಏಕೆ ಕಣ್ಣಿನಿಂದ ನೋಡಿದೆವೊ! ಶಿವಶಿವಾ, ಮಹಾದೇವಾ ! ಸೀತಾದೇವಿಯನ್ನು ಹುಡುಕಲು ಕತ್ತಲೆಯಂತೆ ಅಸಾಧ್ಯವಾದ ನಾನು ಪಟ್ಟಶ್ರಮಕ್ಕೆ ಸೀತಾದೇವಿಯನ್ನು ಕಂಡುದರಿಂದ ತಕ್ಕಫಲವಾಯಿತು. ಇನ್ನು ನಾವು ರಾಮನ ಪಾದಸೇವೆ ಮಾಡಿದುದರಲ್ಲಿ (ಶ್ರೀರಾಮನ ದೂತಕಾರ್ಯವನ್ನು ಮಾಡಿದುದರಲ್ಲಿ) ಧನ್ಯರಾದೆವು, ಎಂದು ಆ ಹನುಮನು ಹೇಳಿದನು

ಭಾವಾರ್ಥ;- ರಕ್ಕಸನಾಯನೇತಕೆ ಕಾಕತಾಳನ್ಯಾಯದಿಂದಲೆ ಕಂಡವೈ-ನಾವು ಸೀತಾದೇವಿಯನ್ನು ನೋಡುವುದಕ್ಕೋಸ್ಕರ ಇಲ್ಲಿಗೆ ಬಂದು ದೈವವಶದಿಂದ, ಅತ್ಯಧಮನಾದ ಈ ರಾಕ್ಷಸನನ್ನು ಏಕೆ ಕಣ್ಣಿನಿಂದ ನೋಡಿದವೋ !

ವ್ಯಾ॥ [೧] ನಾಯಂತಿರ್ಪ್ಪರಕ್ಕಸಂ [ಉ. ತ್ತ] [೨] ಕಾಕವೂ ತಾಳವೂ=ಕಾಕತಾಳಗಳು[ದ್ವಂ]ಕಾಕತಾಳಗಳಂತೆ ಇರುವನ್ಯಾಯಂ[ಉ.ಪೂ]

ವಿ॥ ಅಬುಜದಳಾಯತಾಕ್ಷ-ರಾಮನು

ಟಿಪ್ಪಣಿ:- ಕಾಕತಾಳನ್ಯಾಯ—ಕಾಗೆಯು ಎಲ್ಲೋ ಬರುತ್ತಿರುವಾ
ಗ ತಾಳೆಮರದಿಂದ ತಾಳೆಯಹಣ್ಣು ಬೀಳುವಂತೆ ಆಗುವರೀತಿ [ಅಂದರೆ
ಒಂದಾನೊಂದು ಉದ್ದೇಶದಿಂದ ಒಂದುಸ್ಥಳಕ್ಕೆ ಬಂದಾಗ ದೈವವಶದಿಂದ
ಯಾವುದೋ ಒಂದನ್ನು ಕಾಣುವರೀತಿ]

೩.೪ [ಮುಖ್ಯಭಾಗ].-ಎಲವೊ-ಎಲೋ! ರಾವಣ-ರಾವಣನೇ! ನಿರ
ರ್ಥಕ-ವ್ಯರ್ಥವಾಗಿ, ಈಜಗದ-ಈಲೋಕದ [೧] ಅಳಿವು ಪರ್ಯಂತದಿ-ವಿ
ನಾಶಕಾಲದವರೆಗೂ, [೨]ಮಹಾಂಧತಮೋನಿವಾಸಕವ=ಮಹತ್-ಅಧಿಕ
ವಾದ, ಅಂಧತಮಃ ಗಾಢಾಂಧಕಾರರೂಪವಾದ[ಅಪಯಶಸ್ಸೆಂಬ],ನಿವಾ
ಸಕವ-ಮನೆಯನ್ನು, ಗಳಿಸಿಕೊಂಡೆ ಅಲಾ-ಸಂಪಾದಿಸಿಕೊಂಡೆಯಲ್ಲವೇ?

[೨] ಕಳವಿನಲಿ-ಚೋರತನದಿಂದ.ಕಾಕುತ್ಸ್ಥಭೂಪನ= ಕಾಕು
ತ್ಸ್ಥ-ಕಕುತ್ಸ್ಥರಾಜನವಂಶದಲ್ಲಿ ಹುಟ್ಟಿದವನಾದ ರಾಮನೆಂಬ, ಭೂಪ
ನ-ದೊರೆಯ, ಲಲನೆಯನು-ಪತ್ನಿಯನ್ನು, ತರಲು ಅಹುದೆ-ತರಬಹುದೇ?
ಎಲೊ ಎಲೋ! ಹೊಲೆಯ-ಚಂಡಾಲನೇ! [ಪಾಪಿಯೇ!] ಹೋಗು-
ನಡೆ; ನಿನ್ನ, ಮೋರೆಯ-ಮುಖವನ್ನು, ಸುಡುಸುಡು ದಹಿಸು ದಹಿಸು,
+ ನಿನ್ನಮೋರೆಯನ್ನು, ನೋಡುವರೆ-ನೋಡಬಹುದೇ ? + ಎಂದು ಹನು
ಮಂತ ಎಂದ

ವ್ಯಾ॥ [೧]. ಮಹತ್ತಾದ + ಅಂಧತಮಸ್ಸು=ಮಹಾಂಧತಮಸ್ಸು
[ವಿ. ಪೂ] ಅಂಧತಮಸ್ಸೆಂಬ ನಿವಾಸಕಂ [ಅ. ಪೂ] ನಿವಾಸ+ಕ. ಸ್ವಾ
ರ್ಥದಲ್ಲಿ ಕ ಪ್ರತ್ಯಯವು

ಪೂರ್ವಾರ್ಧದ ಭಾವ-ಎಲೋ ರಾವಣನೇ! ನೀನು ಕಳವಿನಿಂದ
ಸೀತಾದೇವಿಯನ್ನು ತಂದುದರಿಂದ ವ್ಯರ್ಥವಾಗಿ ಈಜಗತ್ತು ನಾಶವಾಗುವ
ವರೆಗೂ ಮಹತ್ತಾದ ಅಪಯಶಸ್ಸನ್ನು ಪಡೆದುಕೊಂಡೆ

ವಿ। ಕಾಕುತ್ಸ್ಥ ಭೂಪ-ರಾಮನೆಂಬ ದೊರೆ

೩೫. ಅಕಟಾ-ಅಯ್ಯೋ! ಕಂಡು-ಪರಸ್ತ್ರೀಯನ್ನು ಅಪಹರಿಸಿ ತಂದ
ವನನ್ನು ನೋಡಿ, ಸೈರಿಸಿ-ಸಹಿಸಿ, ಬಿಡುವುದು, [೧] ಬಲುವೀರರಿಗೆ-
ಮಹಾಶೂರರಿಗೆ [೨] ಬಂಡತನ-ನಾಚಿಕೆಗೇಡತನವು, + ಅಂತಹ ಪರಸ್ತ್ರೀ
ಯನ್ನು ಅಪಹರಿಸಿದವನನ್ನು, ಕಡಿಖಂಡಕೊಯ್ಯಲುಬೇಕು ಚೂರುಚೂ
ರಾಗಿ ಛೇದಿಸಬೇಕು; ಇದು, ಬಲ್ಲರ-ವಿದ್ವಾಂಸರ, ಶಾಸ್ತ್ರಸಿದ್ಧಂ=ಶಾಸ್ತ್ರ

ನೀತಿಶಾಸ್ತ್ರದಲ್ಲಿ, ಸಿದ್ಧಂ-ಉಕ್ತವಾದುದು ; + ನನಗೆ, ಬಂಡತನಂ-ನಾಚಿಕೆಗೇಡತನವು, ಆಯ್ತು-ಉಂಟಾಯಿತು (ಪರಸ್ತ್ರೀಯನ್ನು ತಂದ ನಿನ್ನನ್ನು ನೋಡಿಯೂ ನಾನು ಸಹಿಸಿಬಿಟ್ಟುದರಿಂದ ನನಗೆ ನಾಚಿಕೆಗೇಡಾಯಿತು); ಏನ-ಏನನ್ನು, ಮಾಡುವೆ-ಮಾಡಲಿ? [೩] ಗಂಡುಗಲಿ ರಾಮನಲಿ=ಗಂಡುಗಲಿ ಧೀರಶೂರನಾದ, ರಾಮನಲಿ-ರಾಮನಿಂದ, ನೇಮಪ-ಈರಾಕ್ಷಸನನ್ನು ಕೊಲ್ಲುವ ಆಜ್ಞೆಯನ್ನು, ಕೊಂಡು-ಪಡೆದು, ಬಾರದೆ [೩] ಹೊಳ್ಳುಹೋದೆಸು-ನಿಷ್ಪ್ರಯೋಜನತ್ವವನ್ನು ಹೊಂದಿದೆನು, + ಎಂದು, ಹನುಮನು, ಎನುತ್ತ-ಹೇಳಿಕೊಳ್ಳುತ್ತ, ಹಲುಮೊರೆದ-ಹಲ್ಲುಗಳನ್ನು ಕಡಿದನು

ವ್ಯಾ॥ [೧] ಬಲ್ಲಿದರ್ + ವೀರರ್ [ಬಲುವೀರರು] ವಿ. ಪೂ [ಅರಿ. ಸ] [೨] ಬಂಡನಭಾವಂ=ಬಂಡತನಂ [ಭಾವಾರ್ಥದಲ್ಲಿ ತನ ಎಂಬುದು ತದ್ಧಿತಪ್ರತ್ಯಯವು] (೩) ಗಂಡಾದ+ಕಲಿ (ಕ. ವಿ. ಪೂ)

ತಿದ್ದುವಿಕೆ:- ' ಜಡಿಖಂಡ, ಎಂದು ಮೂಲದಲ್ಲಿದೆ. ' ಕಡಿಖಂಡ, ಎಂದು ತಿದ್ದಿದರೆ ಚೆನ್ನಾಗಿದೆ.

೩೬ ಇವನಂ-ಇ, ಜಳ್ಳುರಕ್ಕಸನಂ-ನಿಸ್ಸಾರನಾದ ರಾಕ್ಷಸನನ್ನು (ಅಶಕ್ತರಾಕ್ಷಸನನ್ನು (೧) ಈ ...ಂಗಳ್ಳನನು-ಈಸ್ತ್ರೀಚೋರನನ್ನು (೨) ರಣಗಳ್ಳನನು-ಯುದ್ಧಕ್ಕೆ ತಲೆ ತಪ್ಪಿಸಿಕೊಳ್ಳುವವನಾದ (೩) ಗತಿಗೇಡುಗನನು-ಪರಲೋಕದ ಸದ್ಗತಿಯನ್ನು ಕೆಡಿಸಿಕೊಂಡವನಾದ, ಈದ್ರೋಹರಕ್ಕಸನ ಈ ಕೇಡುಗಾರನಾದ ರಾಕ್ಷಸನನ್ನು, ಸಂತಾಪಿಸುತ-ಬೇಗೆಗೊಳಿಸುತ್ತ, ಎಳ್ಳನಿತು-ಎಳ್ಳಷ್ಟಾಗಿ, ಕಡಿಖಂಡಮಾಡಿಯೆ ಚೂರುಚೂರುಮಾಡಿಯೇ, (೪) ಹೊಳ್ಳುವಾರಿಸಲು-ಜಳ್ಳಿನಂತೆ ತೂರಿಬಿಡಲು, ಊದುವೆನು-ಊದಿಬಿಡುವೆನು, + ನಾನು, ಬರುತ-ರಾಮನ ದೆಸೆಯಿಂದ ಬರುತ್ತ, ಅಕಟ-ಅಯ್ಯೋ! ನೇಮವನು ಈರಾಕ್ಷಸನನ್ನು ಕೊಲ್ಲುವ ಅಪ್ಪಣೆಯನ್ನು, ಕೈಕೊಳ್ಳದೆ-ಪಡೆಯದೆ, ಆಪೆನು-ಬಂದೆನು; + ಎಂದು ಹನುಮನು, ಎಂದ-ಹೇಳಿಕೊಂಡನು

ವ್ಯಾ॥ (೧) ಹೆಣ್ಣಿನ+ಕಳ್ಳಂ (ಕ. ಷ. ತ) (೨) ರಣದಲ್ಲಿ ಕಳ್ಳ (ಕ. ಸ. ತ) (೩) ಗತಿಯ+ಕೇಡು=ಗತಿಗೇಡು (ಷ.ತ) ಅರಿಸ॥ ಗತಿಗೇಡನ್ನು ಆಚರಿಸುವವನು॥ ಗತಿಗೇಡು ಗ, ಆಚರಣಾರ್ಥದಲ್ಲಿ ಗ ಪ್ರತ್ಯಯ (೪) ಹೊಳ್ಳಿನಂತೆ ತೂರಿಸಲು (ಕ್ರಿ)

೩೭. ಬಲ್ಮೊಡೆ-ಕರ್ತವ್ಯವನ್ನು ತಿಳಿವಪಕ್ಷದಲ್ಲಿ, ಮೀಸೆಗಳ-ಮೀಸೆ

ಕೂದಲುಗಳುಳ್ಳ, ಗಡ್ಡದ-ಗಲ್ಲದ ಕೂದಲುಳ್ಳ,ತೋರಿದ-ತೋರ್ಪಟ್ಟ, ಈ, ಸಂದಣಿಯ-ಒತ್ತಾದ, ಸಾಲಿನ-ಶ್ರೇಣಿಯಾದ, ಮೋರೆಗಳ-ರಾಕ್ಷಸ ನಮುಖಗಳನ್ನು (ಒತ್ತಾದ ಹತ್ತು ಮುಖಗಳನ್ನು), ಕಾರಿಡಲು-ಹೊಪ್ಪ ಳಿಯೇಳುವಂತೆ, ಸುಡಬೇಕು-ದಹಿಸಬೇಕು ; ಕೊಯ್ದು ಖಂಡಗಳ-ಕತ್ತ ರಿಸಿದ ಮಾಂಸವಿಶೇಷಗಳನ್ನು, ಬೀರಬೇಕು-ಎರಚಬೇಕು; ಅಕಟಅಕಟ- ಅಯ್ಯಯ್ಯೋ! ಸ್ಮರಣೆಮೋರಿಹುದು-ತಾಳ್ಮೆಯನ್ನು ತೋರಿಸಿರುವುದು, ತನ್ನಗೆ-ನನಗೆ, (೧) ಕಡುಹೀನತನ-ಬಲುತುಚ್ಛತನವು + ಎಂದು, ಆ ಹನ ಮ್ಮ, ಎನುತ-ಹೇಳಿಕೊಳ್ಳುತ್ತ. ಏರಿಸಿದ-ಹೆಚ್ಚಿಸಿದ, ಬಲುಗೋಪದಲಿ- ಮಹಾರೋಷದಿಂದ, ಹಲುಮೊರೆದನು-ಹಲ್ಲುಕಡಿದನು

ವ್ಯಾ॥ (೧) ಹೀನನಭಾವಂನಹೀನತನಂ, (ತದ್ಧಿತಭಾವನಾಮ) ಭಾವಾರ್ಥದಲ್ಲಿ ತನಪ್ರತ್ಯಯ ॥ ಕಡಿದು+ಹೀನತನಂ (ವಿ- ಪೂ)

೩೮. ಎಲವೊ-ಎಲೋ ! ಈ ಪುತ್ರಮಿತ್ರಾವಳಿಸಹಿತ= ಈ, ಪುತ್ರ-ಮ ಕ್ಕಳು, ಮಿತ್ರ-ಸ್ನೇಹಿತರು ಇವರ, ಆವಳಿಸಹಿತ-ಶ್ರೇಣಿಯ ಸಂಗಡವೂ (ಶ್ರೇಣಿಯೊಡನೆಯೂ), ನಿನ್ನ-ನಿನ್ನ ಸಂಬಂಧಿಯಾದ, (೧) ಈ ತ್ರಿಕೂ ಟಾಚಲಸಹಿತ-ಲಂಕಾಪುರವನ್ನು ವಹಿಸಿರುವ-ಈ ತ್ರಿಕೂಟಪರ್ವತದೊಡ ನೆಯೂ, ನಿನಗೆ, ಒಸೆದು-ವಶವಾಗಿ, ಸೇರಿದ-ಸಂಘಟಿಸಿದ, ಸಕಲ-ಸಮ ಸ್ತವಾದ, ಸಿರಿಸಹಿತ-ಐಶ್ವರ್ಯದೊಡನೆಯೂ, ನಿನ್ನ-ನಿನ್ನನ್ನು, ಕಡಲೊ ಳಗೆ-ಸಮುದ್ರದಲ್ಲಿ, ಕಲಕುವೆನು-ಧ್ವಂಸ ಮಾಡುವೆನು ; ತಪ್ಪಿದ ಕೆಲಸ ಕೆ-ಮೀರಿದ ಕಾರ್ಯಕ್ಕೆ (ನಿನ್ನನ್ನು ಸಂಹರಿಸುವಂತೆ ರಾಮನಾಜ್ಞೆಯನ್ನು ಪಡೆಯದೆ ತಪ್ಪಿಬಂದುದಕ್ಕೆ) ಇನ್ನು ಎಂ-ಬಳಿಕ ಏನುಮಾಡತಕ್ಕದು? + ಎಂದು, ಆಹನುಮ, ಅಳಲಿ ದುಃಖಿಸಿ, (೨)-ಹೂಂಕೃತಿಗೈದು-ಹೂಂಕಾ ರವನ್ನುಮಾಡಿ, ಕಿಡಿಕಿಡಿ ಆದನು-ಬಲುರೇಗಿದನು

ವ್ಯಾ॥ (೧) ತ್ರಿಕೂಟವೆಂಬ + ಅಚಲ (ಸಂ. ಪೂ) ಅಚಲದಿಂದ ಸಹಿ ತ (ತೃ, ತ) (೨) ಹೂಂಕೃತಿಯಂಗೈದು (ಕ್ರಿ)

೩೯. ಇವನ-ಇವನನ್ನು, ನುಡಿಸಿದೊಡೆ-ಮಾತಾಡಿಸಿದರೆ, ಏನು-ಸ್ವಲ್ಪ ವೂ ಹುರಡು ಪ್ರಯೋಜನವು, ಇಲ್ಲ; ಇವನಂ-ಈಕಪಿಯನ್ನು, ಒಯ್ದು- ತೆಗೆದುಕೊಂಡುಹೋಗಿ, ನಿಕುಂಭಿಳೆಯ- ನಿಕುಂಭಿಳೆಯೆಂಬ (ಆಲದಮರ ದ ಬುಡದ) ನಿಜಭವನದ-ನಿನ್ನಹೋಮಶಾಲೆಯ, ಇದಿರಿನ- ಮುಂಭಾಗ ದಲ್ಲಿರುವ, ಶೂಲದಲಿ ಶೂಲಾಯುಧದಲ್ಲಿ, ಸಲಿಸು-ಸೇರಿಸು (ಅಂದರೆ ಶೂ ಲಕ್ಕೆ ಹಾಕಿಸು); ಎಂದು-ಎಂಬುದಾಗಿ, ದಿವಿಜರಿಪು-ರಾಕ್ಷಸನಾದ ರಾವಣ

ನು, ತನುಜಂಗೆ-ಮಗನಾದ ಇಂದ್ರಜಿತ್ತಿಗೆ, ನೇಮಿಸಲು-ಆಜ್ಞೆಮಾಡಲು, ಬಳಿಕ-ಅನಂತರದಲ್ಲಿ (೧) ಪುಣ್ಯಶ್ರವಣ ವೀರವಿಭೀಷಣನು=ಪುಣ್ಯಕರವಾದ, ಶ್ರವಣ- ಕಥೆಗಳ ಕೇಳುವಿಕೆಯುಳ್ಳವನಾದ, ವೀರ ಶೂರನಾದ, ವಿಭೀಷಣನು ರಾವಣನ ತಮ್ಮನಾದ ವಿಭೀಷಣನು (೨) ಅವಿರಳಕ್ರೋಧಂಗೆ- ಅವಿರಳ ಅಧಿಕವಾದ, ಕ್ರೋಧಂಗೆ-ಕೋಪವುಳ್ಳವನಾದ ರಾವಣನಿಗೆ, ಕೈಮುಗಿದು, ಈಹದನ- ಮುಂದೆ ಹೇಳುವ ಈ ಸಂಗತಿಯನ್ನು, ಎಂದನು-ಹೇಳಿದನು, ರಾವಣನು ಹನುಮನನ್ನು ಶೂಲಕೆ ಹಾಕಿಸು ಎಂದು ಹೇಳಿದ ಪಾಪಕರವಾದ ಮಾತನ್ನು ಪುಣ್ಯಕಥಾಶ್ರವಣ ಮಾಡತಕ್ಕವನಾದ ವೀರವಿಭೀಷಣನು ಕೇಳಿ ಸಹಿಸದೆ ಬಹುಕೋಪಿಯಾದ ರಾವಣನಿಗೆಕೈಮುಗಿದಿಂತೆಂದನು ಎಂದು ಭಾವ.

ವ್ಯಾ|| (೧) ಪುಣ್ಯವಾದ ಶ್ರವಣವುಳ್ಳವನು, (ಬ.ವ್ರೀ) ವೀರನಾದ ವಿಭೀಷಣನು (ವಿ. ಪೂ) ಪುಣ್ಯಶ್ರವಣನಾದ...ವಿಭೀಷಣನು (ವಿ ಪೂ) (೨) ವಿರಳವಲ್ಲದುದು=ಅವಿರಳ (ನ.ತ) ಅವಿರಳ ಕ್ರೋಧಂ(ಬ. ವ್ರೀ)

(ಮುಖ್ಯಪದ್ಯ) ಚರರು-ರಾಜಸೇವಕರು, ಮಾಡುವುದು-ಆಚರಿಸುವುದು, ಆವುದು-ಯಾವುದು? (ಸೇವಕರು ಮಾಡುವ ಕಾರ್ಯವೇನು?) + ಎಂದರೆ, ಆಳ್ದನ-ತಮ್ಮ ದೊರೆಯ, ನಿರತಿಶಯ ವಿಕ್ರಾಂತಲಕ್ಷ್ಮಿಯ =ನಿರತಿಶಯ-ಅತ್ಯಾಧಿಕ್ಯವುಳ್ಳ (ಅತ್ಯಧಿಕವಾದ), ವಿಕ್ರಾಂತಲಕ್ಷ್ಮಿಯ-ವೀರಲಕ್ಷ್ಮಿಯ (ಮಹಾ ಪರಾಕ್ರಮದ), ಸಿರಿಯಂ-ಪ್ರಕಾಶವನ್ನೂ (ಕೀರ್ತಿಯನ್ನೂ); ಅಗ್ಗದ-ಅಧಿಕವಾದ, ಸುಪ್ರತಾಪದ-ಒಳ್ಳೆಯ ರಾಜಪ್ರಭಾವವನ್ನೂ (ರಾಜಮಹಿಮೆಯನ್ನೂ), ಹೊಗಳುವುದೆ ಕೊಂಡಾಡುವುದೇ + ದೂತರಿಗೆ. ಸಹಜ-ಸ್ವಾಭಾವಿಕವಾದುದು (ದೂತರು ಮಾಡುವ ಕಾರ್ಯವು ಇದೇ ಎಂದು ಭಾವ;) ರಾಯರಿಗೆ-ದೊರೆಗಳಿಗೆ, ಅರಿವಿರೋಧಕೆ-ಶತ್ರುವಿನ ಮೇಲಣ ದ್ವೇಷಕ್ಕೋಸ್ಕರ, ದೂತಹಿಂಸಾಚರಣೆ=ದೂತ-ಸೇವಕನ, ಹಿಂಸಾ-ಸಂಹಾರದ, ಆಚರಣೆ-ನಡೆವಳಿಕೆಯು (ದೂತರನ್ನು ಕೊಲ್ಲುವುದು), ಚದುರೇ ಜಾಣತನವೇ? + ರಾಯರಿಗೆ, ತರುಚರವಧಾಪರಿಸಮಯ=ತರುಚರ-ಕಪಿಯ, ವಧಾ-ಸಂಹಾರದ, ಪರಿಸಮಯ-ಆಚರಣೆಯು (ಕಪಿಯನ್ನು ಸಂಹಾರಮಾಡುವುದು) ಪರಿಹಾಸಕಂ ಅಲಾ-ನಗೆಗೇಡು ಅಲ್ಲವೇ? + ಎಂದು, ವಿಭೀಷಣನು,ರಾವಣನಿಗೆ ಎಂದ-ಹೇಳಿದನು

ವಿ|| ಅರಿವಿರೋಧಕೆ....ಚದುರೇರಾಯರಿಗೆ, ತರುಚರ...ಪರಿಹಾಸಕ

ಪ್ರಶ್ನೆ- ಈ ವಾಕ್ಯಗಳು ಯಾವ ಸಂದರ್ಭದಲ್ಲಿ?—ಉತ್ತರ:—ರಾವಣನು

ಹನುಮನನ್ನು ಶೂಲದಲ್ಲಿ ಏರಿಸಿರಿ ಎಂದು ಆಜ್ಞೆಮಾಡಿದಾಗ ವಿಭೀಷಣನು ಅಣ್ಣನಿಗೆ ನೀತಿಹೇಳುವ ಸಂದರ್ಭದಲ್ಲಿ. (ಷಥೆಯು, ಎಂದಿದ್ದರೆಸರಿ.)

೪೧. ಆದೊಡೆ ಹಾಗಾದರೆ, ಈ ಕಪಿವರನ ಈ ವಾನರಶ್ರೇಷ್ಠನ, ಕಿವಿಗಳ-ಕರ್ಣಗಳನ್ನು, ಕೊಯ್ದುಬಿಡಿಸಿ ಕತ್ತರಿಸಿಹಾಕಿರಿ; ಇವಂ ಈತನು, ಅಂಗಸ್ಫುಟನಸಂಪಾದನೆಯು= ಅಂಗ ಅವಯವದ, ಸ್ಫುಟನ-ಛೇದನದ, ಸಂಪಾದನೆಯು-ಅರ್ಜನೆಯನ್ನು (ಅವಯವಚ್ಛೇದನವನ್ನು ಪಡೆದುದನ್ನು), ಸೂರ್ಯಾನ್ವಯನಿಗೆ=ಸೂರ್ಯ-ಸೂರ್ಯನ, ಅನ್ವಯನಿಗೆ-ವಂಶವುಳ್ಳವನಾದ ರಾಮನಿಗೆ, ಎಚ್ಚರಿಸಲಿ ತಿಳಿಸಲಿ; + ಎಂದು ರಾವಣನು. ಎನಲು-ಹೇಳಲು, ಆಕೊಲೆ-ಆ ಕಪಿಯನ್ನು ಸಂಹರಿಸುವಿಕೆಯು, (೧) ಮಾಯ್ದುದು-ನಿವಾರಣೆಯಾಯಿತು; ಕಪಿವರನ-ವಾನರ ಶ್ರೇಷ್ಠನಾದ ಹನುಮನ, ಕಿವಿಗೆ-ಕರ್ಣಕ್ಕೆ, ಒಯ್ದು-ತೆಗೆದುಕೊಂಡು ಹೋಗಿ, ಚಾಚಿದ-ಕೊಯ್ಯುವುದಕ್ಕೋಸ್ಕರ ನೀಡಿದ, ಖಡ್ಗಂ-ರಾಕ್ಷಸರ ಕತ್ತಿಯು, (೩) ಇಕ್ಕಡಿ-ಎರಡುತುಂಡು, ಆದುದು ಅಲ್ಲದೆ-ಆಯಿತೇ ಹೊರತು, ಅನಿಲಜನ-ಹನುಮಂತನ, ರೋಮಚಯ-ಕೂದಲುಗುಂಪುಕೂಡ, ಹರಿದುದಿಲ್ಲ-ಕತ್ತರಿಸಲ್ಪಡಲಿಲ್ಲ (ಹನುಮನ ಕಿವಿಗೆ ಚಾಚಿದ ಕತ್ತಿ ಮುರಿದು ಎರಡು ತುಂಡಾಯಿತೇ ಹೊರತು ಹನುಮನ ರೋಮ ಕೂಡ ಹರಿಯಲಿಲ್ಲ)

ವ್ಯಾ॥ (೧) ಮಾಯ್ ಧಾತುವಿನ ಭೂತರೂಪ-ಮಾಯ್ದುದು (ಮಾದುದು) (೨) ಎರಡು ಕಡಿಗಳ ಸಮಾಹಾರಂ (ಸಮಾಹಾರದ್ವಿಗು)

೪೨ ಅಸುರೇಂದ್ರ ರಾಕ್ಷಸರಾಜನಾದ ರಾವಣನು,(೧)ಬೆರಗುಗೊಂಡು-ಹನುಮನ ಕಿವಿಗೊಡ್ಡಿದ ಕತ್ತಿ ಮುರಿದುದನ್ನು ನೋಡಿ ಆಶ್ಚರ್ಯಹೊಂದಿ, ಮೂಗಿನ ಬೆರಳಲಿ-ಮೂಗಿನಮೇಲಿಟ್ಟ ಕೈಬೆಟ್ಟನಿಂದ ಕೂಡಿ (ಮೂಗಿನ ಮೇಲೆ ಬೆರಳಿಟ್ಟುಕೊಂಡು), ಇರೆ-ಇರಲು, ಬಳಿಕ-ಅನಂತರದಲಿ, ಆ ಪ್ರಹಸ್ತನು, (೨) ಕಿರುನಗೆಯ-ಮಂದಹಾಸವನ್ನು, ಕೇವಣಿಸಿ-ಎಟಿಚಿ, ರಾಮಭೃತ್ಯಂಗೆ-ರಾಮದೂತನಾದ ಹನುಮನನ್ನು ಕುರಿತು, ನುಡಿದನು-ಹೀಗೆ ಮಾತಾಡಿದನು; + ನೀನು, ಉರುವ-ಮಹತ್ತಾದ, ನಮ್ಮ, ಈ ವನವಂ-ಈ ಅಶೋಕವನವನ್ನು ಏತಕೆ-ಏಕೆ, ಮುರಿದೆ-ಭಂಗಮಾಡಿದೆ? + ಎಂದು, ಎನೆ-ಕೇಳಲು, (೩) ಕಿವಿಮುಚ್ಚಿ-ಕರ್ಣಗಳನ್ನು ಮುಚ್ಚಿಕೊಂಡು, ನಾವು, ಇದಂ-ಈ ವನಭಂಗವನ್ನು, ಅರಿಯೆವು-ಸಮ್ಮತಿಸಲಿಲ್ಲ (ಅಪೇಕ್ಷಿಸಲಿಲ್ಲ), (೪) ಇನಿಸು-ಇಷ್ಟು (ವನಭಂಗವೆಲ್ಲ) ಎಮ್ಮಯ ನಮ್ಮ, ಬಾಲಂ ಪುಚ್ಛವು, ಎಸಗಿದ ಮಾಡಿದ, ಕೆಲಸ ಕಾರ್ಯವು; + ಎಂದು ಹನುಮನು, ಎಂದ-ಹೇಳಿದನು.

ವ್ಯಾ॥ (೧. ೩) ಬೆರಗಂ-ಕೊಂಡು, ಕಿವಿಯುಂಪುಚ್ಚ (೨ ಕ್ರಿ) (೨) ಕಿರಿದು- ಗ=ಕಿರಿದನಗೆ (ವಿ. ಪೂ) (೪) ಪರಿಮಾಣವಾಚಕ, ಅದು ಇದು ಎಂಬುವುಗಳ ಮೇಲೆ ಪರಿಮಾಣಾರ್ಥದಲ್ಲಿ ಸು ಪ್ರತ್ಯಯವು

೪೩. (ಮುಖ್ಯಪದ್ಯ);—ತದ್ವ್ಯವಹರಣೆ-ಆ ವನಭಂಗದ ನಡೆವಳಿಕೆಯು; (ಆ ವನಭಂಗದ ಕಾರ್ಯವು) ಇವನ ಈತನಿಗೆ, ಸಂಮತಂ ಇಷ್ಟವಾದುದು, ಅಲ್ಲಗಡ ಅಲ್ಲವಲ್ಲವೇ? (ಅಂದರೆ ಆ ವನಭಂಗದ ಕಾರ್ಯವನ್ನು ಇವನು ಮಾಡಲಿಲ್ಲವಲ್ಲವೇ?) + ತದ್ವ್ಯವಹರಣೆ-ಆ ವನಭಂಗಕಾರ್ಯವು, ಲಾಂಗೂಲದಲಿ ಇವನ ಬಾಲದಿಂದ, ಸಂಭವಿಸಿದುದುಗಡ-ಉಂಟಾಯಿತಲ್ಲವೇ (ಆ ವನಭಂಗವನ್ನು ಇವನ ಬಾಲವು ಮಾಡಿತಲ್ಲವೇ? ಕಡಿಯಲು-ಆ ಬಾಲವನ್ನು ಕತ್ತರಿಸಲು, ಅಸದಳಂ ಆದೊಡೆ ಅಸಾಧ್ಯವಾದ ಪಕ್ಷದಲ್ಲಿ, ಅಗ್ನಿಯಲಿ ಬೆಂಕಿಯಿಂದ್ದಲೂ, ನಿವಸನದಲಿ-ಬಟ್ಟೆಯಿಂದಲೂ,ಎಣ್ಣೆಯಲಿ-ತೈಲದಿಂದಲೂ, ಹರಿಬವ-ಕರ್ತವ್ಯವನ್ನು (ಬಾಲವಿನಾಶಕಕಾರ್ಯವನ್ನು) ಹಪಣಿಸುವುದು-ಮಾಡತಕ್ಕುದು, ಎಂದು-ಎಂಬುದಾಗಿ, ಆ ದಿವಿಜಪತಿಜಿತು-ಆ ಇಂದ್ರಜಿತ್ತು, ಒಪ್ಪದಿಂದ-ನ್ಯಾಯಪದ್ಧತಿಯಿಂದ, ರಾಕ್ಷಸೇಂದ್ರಂಗೆ- ರಾಕ್ಷಸರಾಜನಾದ ರಾವಣನಿಗೆ, ಬಿನ್ನವಿಸಿದನು ವಿಜ್ಞಾಪನೆಮಾಡಿದನು)ಈ ಕಪಿಯು ತನ್ನ ಬಾಲವು ವನಭಂಗವನ್ನು ಮಾಡಿತೆಂದು ಹೇಳುವುದರಿಂದ ಆ ಬಾಲವನ್ನು ನಾಶಪಡಿಸುವುದೇ(ನ್ಯಾಯವಾದಕಾರಣ) ಬಾಲವನ್ನು ಎಣ್ಣೆ ಬಟ್ಟೆಯಿಂದ ಸುತ್ತಿ ಬೆಂಕಿ ಹೊತ್ತಿಸಿ ಸುಟ್ಟು ನಾಶಮಾಡತಕ್ಕುದು ಎಂದು ಇಂದ್ರಜಿತ್ತು ರಾವಣನಿಗೆ ಹೇಳಿದನು.

ಭಾವಾರ್ಥ —ಅಗ್ನಿಯಲಿನಿವಸನದಲೆಣ್ಣೆಯಲಿ ಹರಿಬವ ಹಪಣಿಸುವುದು-ಬಾಲಕ್ಕೆ ಎಣ್ಣೆ ಬಟ್ಟೆಯನ್ನು ಸುತ್ತಿ ಬೆಂಕಿ ಹೊತ್ತಿಸಿ ಅದನ್ನು ಸುಟ್ಟು ನಾಶಮಾಡತಕ್ಕುದು

ತಿದ್ದುವಿಕೆ:—'ಹಪಣಿಸುವುದೆನೆತಪ್ಪದೆಂದಾ' ಎಂದು ಮೂಲದಲ್ಲಿದೆ ಅನನ್ವಯವಾಗುವುದರಿಂದ 'ಹಪಣಿಸುವುದೆನುತೊಪ್ಪದಿಂದಾ' ಎಂದು ತಿದ್ದಬಹುದು.

೪೪. ಇದರೊಡನೆ-ಈ ಕಪಿಯ ಸಂಗಡ, ಹೋರಬೇಡ-ಹೆಣಗಾಡಬೇಡ; + ಈ ಕಪಿಯಲ್ಲಿ, ಶಸ್ತ್ರದ ಆಯುಧದ, ಗಾರುಹಂ-ಎರಗಾಟವು, ಅಗುವಿಸದು-ಎಳಿಗೆಯಾಗುವುದಿಲ್ಲ ಪ್ರಯೋಜನಪಡೆಯುವುದಿಲ್ಲ; + ಇದು ಭೂರಿಬಾಧೆಗೆ- ಅಧಿಕವಾದ ಹಿಂಸಾಕಾರ್ಯಕ್ಕೆ, ಸೆಡೆಯದು ಹೆದರುವುದಿಲ್ಲ; ಈ ಕಪಿಯು, ಬಾಲವನು ಪುಚ್ಛವನ್ನು ಸುಡುವುದೆ-ಸುಟ್ಟುಬಿಡುವುದೇ,

ಸುನೀತಿ-ಒಳ್ಳೆಯ ಪ್ರಯತ್ನವು; + ಎಂದು, ಇಂದ್ರಜಿತ್ತು, ಎನೆ-ಹೇಳಲು ಭೂರಿಬಲ-ಅಧಿಕವಾದ ರಾಕ್ಷಸಸೈನ್ಯವು, ಬಾಲವನು ಹನುಮನ ಪುಚ್ಛವನ್ನು, ಬಗ್ಗಿಸೆ ಬಾಗಿಸುವುದಕ್ಕೋಸ್ಕರ, ಹಾರಿ-ನೆಗೆದು. ಬಳಲಲು ಬಗ್ಗಿಸಲಾರದ ಆಯಾಸಹೊಂದಲು, ಬಳಿಕಲಿ-ಆಮೇಲೆ, ಆ ಶಕ್ರಾರಿ ಆ ಇಂದ್ರಶತ್ರುವು (ಇಂದ್ರಜಿತ್ತು), ಕೈದೀವಿಗೆಗಳಿಂದ-ಹಸ್ತದಲ್ಲಿರುವ ಕಕ್ಕಡದೀಪಗಳಿಂದ ಕೂಡಿ (ಹಸ್ತದಲ್ಲಿರುವ ಕಕ್ಕಡದ ದೀಪದ ಉರಿಗಳನ್ನು ತೋರಿಸುತ್ತ)-ಕಪಿವರನ-ವಾನರಪತಿಯಾದ ಹನುಮನನು. ಇರುಕಿದನು-ಔಕಿ ತಬ್ಬಿ ಹಿಡಿದನು

ಭಾವಾರ್ಥ:—ಶಸ್ತ್ರದಗಾರುಡವಗೆದರ್ಿಸದು ಈ ಕಪಿಗೆ ಆಯುಧವನ್ನು ಪ್ರಯೋಗಿಸಿದರೆ ಅದರಿಂದ ನೋವಾಗದು.

೪೫ ವೀರಹನುಮಂತ ಶೂರಹನುಮನು, ಚೀರಿ ಕೂಗಿ, ಕಿರಿಕಿರಿ ಗುಟ್ಟುತಲಿ ಕಿರಿಕಿರಿ ಎಂದು ಧ್ವನಿಮಾಡುತ್ತ, (೧) ತಳವಾರಿ ಕೆಳಗೆಹಾರಿ, ಬಿದ್ದನು; ಹಲುಗಿರಿದು ಹಲ್ಲುಗಳನ್ನು ತೋರಿಸುತ್ತ, ಹುಬ್ಬೇರಿಸುತ-ಹುಬ್ಬನ್ನು ಮೇಲಕ್ಕೆಳೆದುಕೊಳ್ಳುತ್ತ, ಹಣುಗುತ್ತ-ಅಡಗುತ್ತ, ಹೆದರುತ-ಭಯಪಡುತ್ತ, ತಲೆಯ ಶಿರಸ್ಸನ್ನು, ಚಟ್ಟಕ್ಕೆ ಮುದುರಿಕೊಂಡು (ಕೆಳಗೊತ್ತಿಕೊಂಡು), ತೋರಿಸಿದ ತನಗೆ ತೋರ್ಪಡಿಸಿದ; ದೀವಿಗೆಗೆ-ದೀಪಕ್ಕೆ, ಕರುಣಾವ ಕೃಪೆಯನ್ನು, ತೋರಲು-ತೋರ್ಪಡಿಸುವುದಕ್ಕೋಸ್ಕರ, ನಗೆಗಾರರಿಗೆ ನಗುವವರಿಗೆ, ನಾಟಕವ-ಭಯಪಟ್ಟವನ ಅವಸ್ಥೆಯನ್ನು, ತೋರ್ಪಡಿಸುವಿಕೆಯನ್ನು, ನಟಿಸುತ-ಮಾಡುತ್ತ, ಬಾಲವನು ಪುಚ್ಛವನ್ನು, + ರಾಕ್ಷಸರಿಗೆ, ಇತ್ತನು ಕೊಟ್ಟನು. (ಹನುಮನು ರಾಕ್ಷಸರಿಗೆ ಬಾಲವನ್ನು ಕೊಡದೆ ಪೀಡಿಸುತ್ತಿದ್ದು ದೀಪದ ಉರಿಯನ್ನು ತೋರಿಸುತ್ತಲೇ ಹೆದರಿ ವಶನಾದನೆಂದು ನಗೆಗಾರರು ನಗುವಂತೆ, ಹೆದರಿದ ಭಾವವನ್ನು ತೋರ್ಪಡಿಸುತ್ತ ರಾಕ್ಷಸರಿಗೆ ಬಾಲವನ್ನು ಕೊಟ್ಟನು ಎಂದು ಭಾವ)

ಭಾವಾರ್ಥ;—ನಗೆಗಾರರಿಗೆ ನಾಟಕವನಟಿಸುತ-ನಗುವವರಿಗೆ ಹೆದರಿದವನಂತ ತೋರ್ಪಡಿಸಿಕೊಳ್ಳುತ್ತ ವ್ಯಾ॥ (೧) ತಳದಲ್ಲಿ+ಪಾರಿ(ಕ್ರಿ)

೪೬. ಭಾವ-ಪ್ರಾಣಿಯು (ಕಪಿಯು). ಸಿಕ್ಕಿದನು ವಶನಾದನು, ಎಂಬುದಾಗಿ, ಸಭೆಯ-ಆಸ್ಥಾನದ, ಅವದು-ಆ, ಬಿಭಾವರೀಚರರು-ರಾಕ್ಷಸರು, (೧) ಉಬ್ಬುನಗೆಯಲಿ ಉಕ್ಕುತ್ತಿರುವ ನಗುವಿನಿಂದ ಕೂಡಿ, ಪಾವಮಾನಿಯು ಹನುಮಂತನನ್ನು. ಅಳ್ಳೆಗುತ್ತಿನಲಿ-ಪಕ್ಕೆಗಳ ಹೊಯ್ದುಕೊಳ್ಳುವಿಕೆಯಿಂದ ಯುಕ್ತರಾಗಿ, ಮುಕ್ಕುರಿಕಿತು ಮುತ್ತಿಕೊಂಡಿತು; ಬಳಿಕ-ಅನಂತರದಲ್ಲಿ, ಆ ರಾವಣನು, ಸಭೆಯೊಳಗೆ-ಆಸ್ಥಾನದಲ್ಲಿ, ತೀಪಿ

ದ ತುಂಬಿದ, ಅತಿಶಯರೋಷದಿಂದ-ಹೆಚ್ಚಿಗೆಯಿಂದ ಕೂಡಿದ ಕೋಪದಿಂದ ಕೂಡಿ, ಕಪಿಯು ಈ ವಾನರನ, ಬಾಲವಂ ಪುಚ್ಛವನ್ನು, ಸುಡಿ ದಹಿಸಿ, ಎಂದು ಎಂಬುದಾಗಿ, ಅಸುರಾವಳಿಗೆ=ಅಸುರ-ರಾಕ್ಷಸರ, ಆವಳಿಗೆ-ಶ್ರೇಣಿಗೆ, ಬೆಸಸಿದನು-ಆಜ್ಞೆ ಮಾಡಿದನು.

ವ್ಯಾ|| (೧) ಉಬ್ಬುವುದು+ನಗೆ (ಗ)   ವಿ|| ಸಾವಮಾನಿ-ಹನುಮಂತ.

ತಿದ್ದುವಿಕೆ:—'ಮುಕ್ಕುರಿಕಿಧವರಳ್ಳೆ' ಎಂದು ಮೂಲದಲ್ಲಿದೆ. ಅನನ್ವಯವಾಗುವುದರಿಂದ 'ಮುಕ್ಕುರಿಕಿತವರಳ್ಳೆ' ಎಂದು ತಿದ್ದಬಹುದು.

೪೭. ಬಳಿಕ-ಅನಂತರದಲ್ಲಿ, (೧) ಅರುವತ್ತು ಸಾವಿರ ದಡಿಗ ರಕ್ಕಸರು ಅರವತ್ತು ಸಾವಿರ ಮುಂದಿಯರಾದ ಭಾರಿ ರಾಕ್ಷಸರು, ಅಡಸಿ ಮೇಲೆ ಬಿದ್ದು,+ಗೃಹವಾಸಿಗಳು ಆಲಯದ-ತಮ್ಮ ಮನೆಯೊಳಗಿರುವ ಅಹಿಯನು-ಹಾವನ್ನು, ಉಗಿದಂತೆ-ಎಳೆದಹಾಗೆ, ಅನಿಲಜನ ಹನುಮಂತನ ಬಲುಗಡಿಯ-ಮಹಾ ಶಕ್ತಿಯುಳ್ಳ, ಬಾಲವನು ಪುಚ್ಛವನ್ನು, ಉಗಿದರು ಎಳೆದರು; +೬೦ ಸಾವಿರ ರಾಕ್ಷಸರು, ಸೀರೆಯಂ-ಬಟ್ಟೆಗಳನ್ನು, ತೈಲದೊಳು-ಎಣ್ಣೆಯಲ್ಲಿ, ಜಡಿದು ಔಕಿ, ಅದ್ದಿ ನೆನೆಯಿಸಿ, ಈ, ಜಗದ-ಲೋಕಗಳಿಗೆ, ಒಡೆಯ-ಅಧಿಪತಿಯಾದ, ತೊರವೆಯರಾಯ ನರಕೇಸರಿಯು-ತೊರವೆಯೆಂಬ ಊರಿನ ಪ್ರಭುವಾದ ನರಸಿಂಹಸ್ವಾಮಿಯ ಸ್ವರೂಪಿಯಾದ ರಾಮನ, ಕಿಂಕರನ ದೂತನಾದ ಹನುಮಂತನ,+ಆ ಬಾಲಕ್ಕೆ, ಉಡಿಸಲು-ಸುತ್ತುವುದಕ್ಕೋಸ್ಕರ, ಉಪ್ಯೋಗಿಸಿದರು-ಉಪಕ್ರಮಿಸಿದರು (ರಾಕ್ಷಸರು ಬಟ್ಟೆಗಳನ್ನು ಎಣ್ಣೆಯಲ್ಲಿ ಜಡಿದು ಅದ್ದಿ ಕಪಿಯ ಬಾಲಕ್ಕೆ ಸುತ್ತಲು ಉಪಕ್ರಮಿಸಿದರು.)

ವ್ಯಾ|| (೧) ಆರು+ಪತ್ತು=ಅರುವತ್ತು [ಗ] ಅರುವತ್ತು ಸಾವಿರ [ಗ] ದಡಿಗರಾದ+ರಕ್ಕಸರು [ಕ.ವಿ.ಪೂ] ಅರುವತ್ತು ಸಾವಿರ...ರಕ್ಕಸರು [ದ್ವಿ]

ಟಿಪ್ಪಣಿ:—ಕವಿಯು ಈ ಪದ್ಯದಲ್ಲಿ ತನ್ನ ಇಷ್ಟದೇವತೆಯಾದ ತೊರವೆಯ ನರಸಿಂಹಸ್ವಾಮಿಯ ಅಂಕಿತವನ್ನು ಸೂಚಿಸಿದ್ದಾನೆ.

ವಿ|| ಉಪಮಾನ:—[ಗೃಹವಾಸಿಗಳು] ಆಲಯದಹಿಯನುಗಿದಂತೆ ಉಪಮೇಯ-ಅರುವತ್ತು ಸಾವಿರ ದಡಿಗರಕ್ಕಸರನಿಲಜನ ಬಲುಗಡಿಯಬಾಲವನುಗಿದರು.

ಸಂಕೇತ ವಿವರಣೆ.

ದ್ವಿ. ತ-ದ್ವಿತೀಯಾತತ್ಪುರುಷ ಸ

ತೃ. ತ-ತೃತೀಯಾತತ್ಪುರುಷ

ಪಂ. ತ-ಪಂಚಮೀತತ್ಪುರುಷ

ಷ. ತ-ಷಷ್ಠೀತತ್ಪುರುಷ

ಕ. ಷ ತ-ಕನ್ನಡದ ಷಷ್ಠೀತತ್ಪುರುಷ

ಸ. ತ-ಸಪ್ತಮೀತತ್ಪುರುಷ

ನ. ತ-ನಞ್ತತ್ಪುರುಷ

ವಿ. ಪೂ-ವಿಶೇಷಣಪೂರ್ವಪದ ಕರ್ಮಧಾರಯ

ಕ. ವಿ. ಪೂ ಕನ್ನಡ ವಿಶೇಷ ಪೂರ್ವಪ

ವಿ. ಭ-ವಿಶೇಷಣೋಭಯಪದಕರ್ಮ

ವಿ. ತ್ತ-ವಿಶೇಷಣೋತ್ತರ ಪದಕರ್ಮ

ಉ. ಪೂ. ಉಪಮಾನಪೂರ್ವಪದಕರ್ಮ

ಉ. ತ್ತ-ಉಪಮಾನೋತ್ತರಕರ್ಮಧಾ

ಸಂ. ಪೂ-ಸಂಭಾವನಾಪೂರ್ವಪದ ಕ

ಅ. ಪೂ-ಅವಧಾರಣಾಪೂರ್ವಪದ ಕರ್ಮಧಾರಯ

ಕ. ಅ. ಪೂ-ಕನ್ನಡದ ಅವಧಾರಣಾ ಪೂರ್ವಪದಕ

ಪ್ರಾ. ಕ-ಪ್ರಾದಿಕರ್ಮಧಾರಯ

ಮ. ಲು-ಮಧ್ಯಮಪದ ಲುಪ್ತ ಕರ್ಮ

ಕ. ಮ. ಲು.-ಕನ್ನಡದ ಮಧ್ಯಮಪದಲುಪ್ತ ಕ

ದ್ವಿ-ದ್ವಿಗುಸಮಾಸ

ಕ. ದ್ವಿ-ಕನ್ನಡದದ್ವಿಗು

ಸ. ದ್ವಿ-ಸಮಾಹಾರದ್ವಿಗು

ಕ. ಸ. ದ್ವಿ-ಕನ್ನಡದಸಮಾಹಾರದ್ವಿ

ಬ. ವ್ರೀ-ಬಹುವ್ರೀಹಿಸಮಾಸ

ವ್ಯ. ಬ. ವ್ರೀ-ವ್ಯಧಿಕರಣಬಹುವ್ರೀ

ನ. ಬ. ವ್ರೀ-ನಞ್ಬಹುವ್ರೀಹಿ

ಪ್ರಾ. ಬ. ವ್ರೀ-ಪ್ರಾದಿ ಬಹುವ್ರೀಹಿ

ದ್ವಂ-ದ್ವಂದ್ವಸಮಾಸ

ಸ. ದ್ವಂ-ಸಮಾಹಾರದ್ವಂದ್ವ

ಕ. ಅ. ಭಾ-ಕನ್ನಡದ ಅವ್ಯಯೀಭಾ

ಉ. ಪ. ಸ-ಉಪಪದಸಮಾಸ

ಗ ಗಮಕಸಮಾಸ

ಕ್ರಿ-ಕ್ರಿಯಾಸಮಾಸ

ಅರಿ. ಸ-ಅರಿಸಮಾಸ

+ ಈ ಚಿಹ್ನೆಯು ಮುಂದೆ ಇರುವು[ದು ಅಧ್ಯಾಹಾರ ಮಾಡಿಕೊಂಡ ಪದ.

ಎಂಟನೆಯ ಸಂಧಿ.

ಸೂಚನೆ:—(೧) ತ್ರಿಪುರದಹನದ-ಮೂರು ಪುರಗಳನ್ನು ಸುಟ್ಟವನಾದ, ಭಾಳಲೋಚನನ = ಭಾಳ-ಹಣೆಯಲ್ಲಿ, ಲೋಚನ-ಅಗ್ನಿನೇತ್ರವುಳ್ಳವನಾದ ಈಶ್ವರನ, ಉಪಮೆಗೆ-ಹೋಲಿಕೆಗೆ (ಸಾದೃಶ್ಯಕ್ಕೆ) (೨) ಐಮಡಿ-ಐದರಷ್ಟು ಎನಲು-ಎನ್ನುವ ಹಾಗೆ, ಮಾರುತಿ-ಹನುಮಂತನು, ವಿಪುಳವಹ್ನಿಯ = ವಿಪುಳ-ಅಧಿಕವಾದ, ವಹ್ನಿಯ ಬಾಲದಬೆಂಕಿಯು, ವದನದಲಿ-ಬಾಯಿಯಲ್ಲಿ, ರಿಪುಹರನ-ಶತ್ರುವಾದ ರಾವಣನ ಲಂಕಾಪಟ್ಟಣವನ್ನು ನೂಕಿದನು-ತಳ್ಳಿದನು.

ಭಾವಾರ್ಥ:—ಈಶ್ವರನು ತನ್ನ ಹಣೆಗಣ್ಣಿನ ಅಗ್ನಿಯಿಂದ ತ್ರಿಪುರವನ್ನು ಸುಟ್ಟುದಕ್ಕೆ ಐದರಷ್ಟಾಗಿರುವಂತೆ ಹನುಮಂತನು ತನ್ನ ಬಾಲದ ಅಗ್ನಿಯಿಂದ ಶತ್ರುವಾದ ರಾವಣನ ಲಂಕಾಪುರವನ್ನು ಸುಟ್ಟನು.

ವ್ಯಾ|| (೧) ತ್ರಿಪುರಗಳು (ದ್ವಿ)...ದಹನ (ಕೃದಂತ) (೪) ಐದು+ಮಡಿಗಳ ಸಮಾಹಾರಂ = ಐಮಡಿ (ತ. ಸ. ದ್ವಿ)

೧. ಕುಶ-ಕುಶನೇ! ಕೇಳಿದ್ದೈ-ಇದನ್ನು ಕೇಳಿದೆಯಾ? (೧) ಉಬ್ಬಾಳಿಗರು-ವೃದ್ಧಿಯಾದ ಶೌರ್ಯವುಳ್ಳವರಾದ, ಕರ್ಬುರರು-ರಾಕ್ಷಸರಾದ, ಆಳುಗಳು-ಭಟರು, ಕಲ್ಪಿತೋಗ್ರಕರಾಳಕಾಯದ = ಕಲ್ಪಿತ ಮಾಡಲ್ಪಟ್ಟ, ಉಗ್ರ-ಭಯಂಕರವಾದ, ಕರಾಳ-ಉನ್ನತವಾದ, ಕಾಯದ-ಶರೀರವುಳ್ಳ, ಕಪಿಯ-ಆ ವಾನರ ಹನುಮನನ್ನು (ಅಂದರೆ ಶರೀರವನ್ನು ಭಯಂಕರವಾಗಿರುವಹಾಗೆ ಉನ್ನತವಾಗಿ ಬೆಳಸಿಕೊಂಡ ಕಪಿ ಹನುಮನನ್ನು) ಕೈದೀವಿಗೆಗಳ-ಹಸ್ತದ ದೀಪಗಳ, ಬಗ್ಗನಿ-ಸಮೂಹದಿಂದ, ಕೈಮಾಡಿ-ವಶಮಾಡಿಕೊಂಡು (ಅಂದರೆ ಕೈದೀಪದ ಉರಿಗಳನ್ನು ತೋರಿಸುವುದರಿಂದ ವಶಮಾಡಿಕೊಂಡು) ಸೂರ್ಯಾನ್ವಯನ-ಸೂರ್ಯವಂಶವುಳ್ಳ ರಾಮನ, ಕಿಂಕರನ-ದೂತನಾದ ಹನುಮಂತನ, ಬಾಲವನು-ಪುಚ್ಛವನ್ನು, ಬರಸೆಳೆದು-ಮುಂದಕ್ಕೆ ಎಳೆದು, ರಾಳದ-ಸಜ್ಜರಸದಲ್ಲಿಯೂ, ತೈಲಗಳ-ಎಣ್ಣೆಗಳಲ್ಲಿಯೂ, ಅದ್ದುಗೆಯ-ನೆನಸುವಿಕೆಯುಳ್ಳ (ಅಂದರೆ ಸಜ್ಜರಸದಲ್ಲೂ ಎಣ್ಣೆಯಲ್ಲೂ ಅದ್ದಿದ) ಅರುವೆಗಳಲಿ-ಬಟ್ಟೆಗಳಿಂದ, ಸುತ್ತಿದರು (ಸಜ್ಜರಸದಲ್ಲೂ ಎಣ್ಣೆಯಲ್ಲೂ ಅದ್ದಿದ ಬಟ್ಟೆಗಳನ್ನು ಹನುಮನ ಬಾಲಕ್ಕೆ ಸುತ್ತಿದರು)

ವ್ಯಾ|| (೧) ಉಬ್ಬಿದುದು + ಆಳು = ಉಬ್ಬಾಳು, + ಇಗ = ಉಬ್ಬಾಳಿಗ ಉಬ್ಬಾಳನ್ನು ಆಚರಿಸುವವರು ಎಂಬರ್ಥದಲ್ಲಿ ಇಗ ಎಂಬ ತದ್ಧಿತ ಪ್ರತ್ಯಯವು

ತಿದ್ದುವಿಕೆ;— ಧಾಳವ, ಎಂದು ಮೂಲದಲ್ಲಿದೆ. ರಾಳದ, ಎಂದು ತಿದ್ದಬಹುದು

೨. + ಹನುಮನ ಬಾಲಕ್ಕೆ, ಸುತ್ತಸುತ್ತಲು-ಬಟ್ಟೆಗಳನ್ನು ಸುತ್ತುತ್ತ ಇರಲು: ಬಾಲವು, ಹತ್ತು-ಮೊದಲಿನ ಪ್ರಮಾಣಕ್ಕೆ ಹತ್ತುಮಡಿಯು ನೂರು-ಅದಕ್ಕೆ ನೂರ ಮಡಿಯು, (೧) ಇನ್ನೂರು-ಅದಕ್ಕೆ ಎರಡು ನೂರು ಮಡಿಯು (೨) ತದ್ವಿಗುಣೋತ್ತರದ-ಆಮೇಲೆ ಅದಕ್ಕೆ ಎರಡುಮಡಿಯ (ಅಂದರೆ ಆಮೇಲೆ ನಾಲ್ಕುನೂರು ಮಡಿಯು), ಪರಿವಿಡಿಯ-ಕ್ರಮದ, ವೃದ್ಧಿಯಲಿ-ಹೆಚ್ಚುವಿಕೆಯಿಂದ, ಬೆಳೆಯುತ್ತಿರ್ದುದು ವೃದ್ಧಿಯಾಗುತ್ತಿದ್ದಿತು ; + ರಾಕ್ಷಸರು ಬಾಲಕ್ಕೆ, ಸೀರೆಗಳ-ಬಟ್ಟೆಗಳನು, ಸುತ್ತುತ ಇರ್ದರು-ಸುತ್ತುತ್ತ ಇದ್ದರು; + ಆ ಬಾಲವು, ಬೆಳೆಯುತ ಇರ್ದುದು-ಹೆಚ್ಚುತ್ತಲೇ ಇದ್ದಿತು ನೋಡನೋಡಲು—ನೋಡುತ್ತ ಇರಲು, ಹೊತ್ತುಹೊತ್ತಿಗೆ-ಪ್ರತಿವೇಳೆಗೂ, + ವೃದ್ಧಿಯಾಗುವುದರಿಂದ, ಅಸುರವಲ್ಲಭನ-ರಾಕ್ಷಸಪತಿಯಾದ ರಾವಣನ, ಕಂಗಳಿಗೆ—ನೇತ್ರಗಳಿಗೆ, ಕೌತುಕವ-ಆಶ್ಚರ್ಯವನ್ನು, ಸುತ್ತಿದುದು-ಮುಚ್ಚಿತು (ಆಶ್ಚರ್ಯವನ್ನುಂಟು ಮಾಡಿತು).

ಭಾವಾರ್ಥ.— ಸುತ್ತಸುತ್ತಲು ಬೆಳೆಯುತಿರ್ದುದು ಹತ್ತು ನೂರಿನ್ನೂರು ತದ್ದ್ವಿಗುಣೋತ್ತರದ ಪರಿವಿಡಿಯ ವೃದ್ಧಿಯಲಿ-ಹನುಮನಬಾಲಕ್ಕೆ ಬಟ್ಟೆಗಳನ್ನು ಸುತ್ತುತ್ತ ಇರಲು ಬಾಲವು ಮೊದಲಿನ ಪ್ರಮಾಣಕ್ಕೆ ಹತ್ತರಷ್ಟು, ಆಮೇಲೆ ನೂರರಷ್ಟು ಅನಂತರದಲ್ಲಿ ಎರಡುನೂರರಷ್ಟು, ಬಳಿಕ ಅದಕ್ಕೆ ಎರಡರಷ್ಟು (ಅಂದರೆ ನಾಲ್ಕು ನೂರರಷ್ಟು) ಈ ಕ್ರಮದಿಂದ ಬೆಳೆಯುತ್ತ ಬಂದಿತು.

ವ್ಯಾ|| (೧) ಎರಡು ನೂರು = ಇರ್ನೂರು (ಇನ್ನೂರು) ಗ (೨) ದ್ವಿಗುಣಗಳು (ದ್ವಿ) ತತ್ + ದ್ವಿಗುಣಗಳು (ಷ. ತ) ಉತ್ತರದಲ್ಲಿ ತದ್ದ್ವಿಗುಣಗಳು = ದ್ವಿಗುಣೋತ್ತರದಂ (ಸ. ತ)

೩. ರಕ್ಕಸನು-ರಾವಣರಾಕ್ಷಸನು, ಮೀಸೆಯ-ಮೀಸೆಯಕೂದಲನ್ನು, ತಿದ್ದಿ-ಕೈಬೆಟ್ಟಿನತುದಿಯಿಂದ ನೇರ್ಪಡಿಸಿ, ಮುರುಹಿ-ತಿರುಚಿ, ಎದ್ದು, ನಿಂದಿರ್ದನು-ನಿಂತುಕೊಂಡಿದ್ದನು. ಆ ರಾವಣನು, ಬಿಡದೆ-ಅವಿಚ್ಛಿನ್ನವಾಗಿ, ಅದ್ದಲಿಸೆ-ಕೂಗಿ ಅಟ್ಟಲು, ಚರರು-ಸೇವಕರು, ಗತ ಜೀರ್ಣವಸ್ತ್ರಗಳ = ಗತ-ಹರಿದುಹೋದ, ಜೀರ್ಣ-ಪಿಸುದುಹೋದ, ವಸ್ತ್ರಗಳ-ಬಟ್ಟೆಗಳನ್ನು, ತಂದು, ಒಟ್ಟಿದರು-ರಾಶಿ

ಹಾಸಿಕಿದರು, ಖಳನಿಕರ-ರಾಕ್ಷಸಗುಂಪಿನವರು, ಅರುವೆಗಳಂ-ಬಟ್ಟೆಗಳನ್ನು, ತೈಲದೊಳು-ಎಣ್ಣೆಯಲ್ಲಿ, ಅದ್ದಿ-ನೆನೆಯಿಸಿ, ಉಬ್ಬಿದ್ದು-ಉತ್ಸಾಹಗೊಂಡು, ಗುಡುಗುಟ್ಟಿ-ಗರ್ಜಿಸಿ, ಅನಿಲಜನ-ಹನುಮಂತನ, ಹೊರಬಿದ್ದ ಬಾಲವಂ-ದೂರದವರೆಗೆ ಬಿದ್ದಿರುವ ಪುಚ್ಛವನ್ನು, ಒದೆದು ಒದೆದು-ಔಕಿಔಕಿ, ಸುತ್ತಿದರು.

ತಿದ್ದುವಿಕೆ:—ಬಿಡದದ್ದಲಿಸೆ, ಎಂದು ತಿದ್ದಬಹುದು. ಗುರಿಗಟ್ಟಿ, ಎಂಬುದನ್ನು ಗುಡಗುಟ್ಟಿ, ಎಂದೂ ತಿದ್ದಬಹುದು.

೪. ಸಂಖ್ಯಪದ್ಯ,—ಭೂರಿಸಂಖ್ಯೆಯ—ಅಧಿಕವಾದ ಲೆಕ್ಕವುಳ್ಳ (ಅನೇಕವಾದ,) ಬಣ್ಣ ಬಿಳಿದನ-ಬಿಳಿಯಬಣ್ಣವುಳ್ಳ, ಸೀರೆ-ಬಟ್ಟೆಯು, ಕಪಿಯ ಬಾಲದಲ್ಲಿ, ತೀರುತೀವಲಿ-ನಾನಾರೀತಿಯಿಂದ, ಕಟ್ಟುಕಡಿದುರ್ದು-ಬಿಗಿಯಲ್ಪಡುತ್ತಿದ್ದಿತು ; ಬುದ್ದಲಿ ಹಾಡಪಕ್ಕಲೆ ಕಂಬಿಗಳ್=ಬುದ್ದಲಿ-ಚರ್ಮದ ಗುಡಾಣವು, ಹಾಡ-ಹಂಡೆಯು, ಪಕ್ಕಲೆ-ಕಕಾಲೆಯು, ಕಂಬಿಗಳ್-ಉದ್ದವಾದ ಪೀಪಾಯಿಯು ಇವುಗಳ, ಕೊಡನ-ಬಿಂದಿಗೆಗಳ, ಘೃತತೈಲಬಸೆಗಳ=ಘೃತ-ತುಪ್ಪವು, ತೈಲ-ಎಣ್ಣೆಯು, ಬಸೆಗಳ್-ಕೊಬ್ಬು ಇವುಗಳ, ಧಾರೆಗಳ-ಪ್ರವಾಹಗಳ, ಸಾರ-ದ್ರವವು, ಕಟ್ಟಿತು-ಆವರಿಸಿತು ; ತೋದು-ಬಟ್ಟೆಗಳನ್ನು ನೆನಸಿ, ಸುತ್ತುವ-ಬಾಲಕ್ಕೆ ಬಿಗಿಯುವ, ಭೂರಿರವ-ಮಹಾಶಬ್ದವು (ರಾಕ್ಷಸರ ಗದ್ದಲವು), ಹನುಮನ-ಹನುಮಂತನನ್ನು, (೧) ಹಿಡಿಸಿತ್ತು-ತುಂಬಿತು, ಅದ-ಅದನ್ನು, ಏಂ ಹೇಳಲ್-ಏನು ಹೇಳಲಿ ; ಎಂದು, ವಾಲ್ಮೀಕಿಯು, ಎಂದ-ಹೇಳಿದನು.

ವ್ಯಾ॥-(೧) ಹಿಡಿಸು+ಇತ್ತು, ಇತ್ತು ಭೂತಕಾಲದ ಪ್ರಥಮಪುರುಷ ನಪುಂಸಕೈಕವಚನದ ಪ್ರತ್ಯಯ. ವಿ॥ ತೀರು—ಧಾತುವಾದರೆ ಪೂರೈಸುವುದು, ನಾಮವಾದರೆ ರೀತಿ.

ತಿದ್ದುವಿಕೆ.—ಬಾರಸಂಖ್ಯೆಯ, ಎಂದು ಮೂಲದಲ್ಲಿದೆ. ಭೂರಿಸಂಖ್ಯೆಯ ಎಂದು ತಿದ್ದಿದರೆ ಸಮಂಜಸವಾಗುತ್ತದೆ.

೫. ಭರಭರದ-—ನಾನಾವಿಧವಾದ, ಕೊಪ್ಪರಿಗೆಗಳು-ಎಣ್ಣೆಯ ಕೊಪ್ಪರಿಗೆಗಳು, ಸಾಸಿರದಸಂಖ್ಯೆಯುಳ್ಳ-ಸಹಸ್ರದ ಲೆಕ್ಕದಿಂದ ಕೂಡಿ, +ಚರದಿಂದ ಇಳುಹಿದುವು-ಇಳಿಸಲ್ಪಟ್ಟುವು, ಸುರಿಸುರಿದ-ಬಹಳವಾಗಿ ಸುರಿದ, ತೈಲತಟಾಕ-ಕೆರೆಯಂತಿರುವ ಎಣ್ಣೆಯೂ, ಅಪರಿಮಿತ-ಮಿತಿಯಿಲ್ಲದ (ಅತ್ಯಧಿಕವಾದ), ಜೀರ್ಣದವಾಸಂ ಶಿಥಿಲವಾಗ ಬಟ್ಟೆಯೂ, ಸುಸಿಗ್ಧೋಷ್ಣತ = ಮಹಿಮ-ಮಾಹಾತ್ಮ್ಯೆಯಿಂದ, ಉಷ್ಣ

ಎಂಬುದಾಗಿ, + ರಾವಣನು, ಜಡಿಯೆ-ಗದರಿಸಲು, ಠಕ್ಕ ಸರು-ರಾಕ್ಷಸರು ಝಡಿಪಿಗಳಿಂದ-ಜಗ್ಗಿ ನಜೆಯುವಿಕೆಗಳಿಂದ. ಅಡಕಿ-ಎಣ್ಣೆ ಬಟ್ಟೆಗಳನ್ನು ರಾಹಾಕಿ, ಲಕ್ಷ ಸಂಖ್ಯೆಯಲಿ-ಲಕ್ಷದ ಲೆಕ್ಕದಿಂದ ಕೂಡಿದ, ತೈಲಾಂಬರದಲಿ-ಎಣ್ಣೆ ಬಟ್ಟೆಗಳಿಂದ, ಈತನ-ಈ ಹನುಮಂತನ, (೧) ನಿಡಿಯಬಾಲವ-ಉದ್ದವಾದ ಪುಚ್ಛವನ್ನು, ಸುತ್ತುತ ಇರ್ದರು-ಸುತ್ತುತ್ತಿದ್ದರು.

ವ್ಯಾ||-(೧) ನಿಡಿದು+ಬಾಲಂ =ನಿಡಿಯಬಾಲಂ (ಕೆ. ಎ. ಪ್ರೊ)

ತಿದ್ದುವಿಕೆ:—'ತಂದುಡಿಸಿರೊಎಂದಿದೆ' ಮೂರನೆಯ ಪಾದದಲ್ಲಿ ೨೩ ಮಾತ್ರೆಗಳಿಗೆ ಒಂದು ಮಾತ್ರೆ ಕಡಮೆಯಾಗುವುದರಿಂದ 'ತಂದುಡಿಸಿರೋ ! ಎಂದು ತಿದ್ದುವುದು.

೯. + ರಾಕ್ಷಸರು, ಎಡೆಗೆ ಎಡೆಗೆ-ಹನುಮನ ಬಾಲದ ಅಷ್ಟಷ್ಟು ಸ್ಥಳಕ್ಕೆ, ಹತ್ತಿಗಳ, ಹೊರೆಗಳ-ಕಂತೆಗಳಲ್ಲಿ, ಹೊಡಚಿದ-ಸೇರಿದ, ಅರಳೆಯ-ಹತ್ತಿಯನ್ನು, ಸುತ್ತಿದರು; ಮತ್ತೆ-ತಿರುಗಿ, ಎಡೆಗೆ ಎಡೆಗೆ-ಹನುಮನ ಬಾಲದ ಅಷ್ಟಷ್ಟು ಸ್ಥಳಕ್ಕೆ, ಹೆಡಗೆಗಳ-ದೊಡ್ಡ ಗೂಡೆಗಳಲ್ಲಿರುವ, ಪುಡಿಯರಗು ಸಜ್ಜರಸಾದಿ ಧೂಸರವ= ಪುಡಿಯರಗು-ಅರಗಿನ ಪುಡಿಯು, ಸಜ್ಜರಸ-ರಾಳವು, ಆದಿ-ಮೊದಲಾದ, ಧೂಸರನ-ಬಣ್ಣದ ವಸ್ತುಗಳನ್ನು, ಹೊಯ್ ಹೊಯ್ದು-ಸುರಿದು ಸುರಿದು, ಎಡೆಗೆ ಎಡೆಗೆ-ಬಾಲದ ಉಳಿದ ಅಷ್ಟಷ್ಟು ಸ್ಥಳಕ್ಕೆ, ಬಸೆಗಳ- ಕೊಬ್ಬುಗಳನ್ನು, ಹೊರೆದು-ಒಳಿದು, ಬೆಳೆದ-ವೃದ್ಧಿಯಾದ, ಬಾಲವ-ಹನುಮನ ಪುಚ್ಛವನ್ನು, ಬಿಡದೆ-ತ್ಯಜಿಸದೆ, ಸುತ್ತಲು, ಲಾಂಗೂಲ-ಹನುಮನ ಬಾಲವು, ಮತ್ತೆ-ತಿರುಗಿ, ಬೆಳೆಯುತ ಇರ್ದುದು-ಹೆಚ್ಚುತ್ತಲೇ ಇದ್ದಿತು.

ತಿದ್ದುವಿಕೆ:—ಧೂಸರದ, ಎಂದು ಮೂಲದಲ್ಲಿದೆ. ಅನನ್ವಯವಾಗುವುರಿಂದ ಧೂಸರವ, ಎಂದು ತಿದ್ದಬಹುದು. 'ಬಳಿದು, ಎಂಬುದನ್ನು 'ಬೆಳೆದ ಎಂದು ತಿದ್ದಬಹುದು.

೧೦. ಹಳಸೀರೆ-ಹಳೆಯಬಟ್ಟೆಗಳು (೨) ತೀರುದುವು-ಪೂರಯಿಸಿ ಹೋದುವು; + ರಾವಣನ, ವಸ್ತ್ರಾಗಾರದ=ವಸ್ತ್ರಗಳ-ಬಟ್ಟೆಗಳ, ಆಗಾರದ-ಶಾಲೆಯ ವಸ್ತ್ರಶಾಲೆಯ) ಅಖಿಳಾಂಬರದ-ಎಲ್ಲಾ ಬಟ್ಟೆಗಳ, ಹೊರೆಗಳ-ಮೂಟೆಗಳ. ಸಾರ-ಸುರುಳೂ (ಜೀವಾಳವೂ), ಸವೆದುದು-ಕಡಿಮೆಯಾಗಿ ಹೋಯಿತು, ಅಂದರೆ ರಾವಣನ ವಸ್ತ್ರಶಾಲೆಯಲ್ಲಿದ್ದ ಮೂಟೆ ಯೊಳಗಣ ಎಲ್ಲಾ ಬಟ್ಟೆಗಳೂ ತೀರಿಹೋಗುವು)

ಅಸುರನ-ರಾವಣರಾಕ್ಷಸನ, ಕಣಜಪೆಟ್ಟಿಗೆ-ಕಣಜದಪೆಟ್ಟಿಗೆ ಯೊಳಗಿರುವ, ಮೇರೆ ಯಿಲ್ಲದ-ಮಿತಿಯಿಲ್ಲದ (ಅಪಾರವಾದ ಅಥವಾ ಅಪರಿಮಿತವಾದ), ತೈಲ ಘೃತ-ಎಣ್ಣೆತುಪ್ಪಗಳು, ಸವೆದುವು-ವೆಚ್ಚವಾಗಿ ಹೋದುವು; ಬಳಿಕ-ಅನಂತರದಲ್ಲಿ; ಕೇರಿ ಕೇರಿಯಲಿ-ಪೇಟೆಪೇಟೆಯಲ್ಲಿಯೂ; ಊರ-ಪಟ್ಟಣದ, ಸರದರ-ವೈಶ್ಯರ (ಕೋಮಟಿಗರ), ಹಾರ-ವರ-ಬ್ರಾಹ್ಮಣ; ಬೇಹಾರಿಗಳ-ವರ್ತಕರ, (೩) ಬಲು ಸೂರೆ-ಬಟ್ಟೆಗಳ ಮತ್ತು ಎಣ್ಣೆತುಪ್ಪಗಳ ಸುಲಿಗೆಯು, ಆದುದು-ಆಯಿತು (ರಾವಣನ ಆಜ್ಞೆಯಿಂದ ಸೇವಕರು ಪೇಟೆಗಳಲ್ಲಿ ಊರಿನವೈಶ್ಯರ ಬ್ರಾಹ್ಮಣರ ವ್ಯಾಪಾರಿಗಳ ಬಟ್ಟೆಗಳನ್ನೂ ಎಣ್ಣೆತುಪ್ಪಗಳನ್ನೂ ಸೂರೆಮಾಡಿಕೊಂಡು ತೆಗೆದು ಕೊಂಡು ಹೋದರು.)

ವ್ಯಾ||- (೧) ಹಳಸು + ಸೀರೆ (ತ. ಪು. ಪ್ರೊ.) (೨) ಸೀರೆ ಎಂಬ ಜಾತ್ಯೇಕವಚನದ ಶಬ್ದವಿರುವುದರಿಂದ ಈ ಕ್ರಿಯಾಪದವು ಬಹುವಚನದಲ್ಲಿದೆ (೩) ಬಲ್ಲಿತ್ತು + ಸೂರೆ = ಬಲ್ಸೂರೆ (ಬಲುಸೂರೆ) ಕ. ಪು. ಪ್ರೊ.

೧೧. ಬಳಿಕ-ಅನಂತರದಲ್ಲಿ, ದೊರೆದೊರೆಯರ-ಎಲ್ಲಾ ಅರಸುಗಳ, ಅರ ಮನೆಯ-ರಾಜಗೃಹದ, ಮಂತ್ರೀಶ್ವರರ-ಮಂತ್ರಿಶ್ರೇಷ್ಠರ, ಮಂದಿರದ-ಮನೆಯ, ಅರಸುಮಕ್ಕಳ-ರಾಜಪುತ್ರರ, ಪರಿಸರದ-ಭಾರಿಮನೆಯ, ಆಪ್ತರ-ರಾಜಮಿತ್ರರ, ನಿಳಯಂಗಳ-ಮನೆಗಳ, ಪರಿಜನದ-ಸೇವಕರ, ಪುರಜನದ-ಪಟ್ಟಣಪ್ರಜೆಗಳ, ಮನೆ ಯ-ಗೃಹದ, ಸಂಚಿತದ-ಶೇಖರಿಸಲ್ಪಟ್ಟ, ವಸ್ತ್ರಾಕರುಷಣವು = ವಸ್ತ್ರ-ಬಟ್ಟೆಗಳ ಆಕರುಷಣವು-ಎಳೆಯುವಿಕೆಯು (ಅಪಹರಿಸುವಿಕೆಯು); ಆಯ್ತು-ಆಯಿತು (ದೊರೆಗಳ ಮಂತ್ರಿಗಳ ರಾಜಪುತ್ರರ ರಾಜಮಿತ್ರರ ಸೇವಕರ ಪುರಜನರ ಮನೆ ಗಳಲ್ಲಿ ಶೇಖರಿಸಿದ್ದ ಬಟ್ಟೆಗಳನ್ನೆಲ್ಲ ರಾವಣಸೇವಕರು ಕಿತ್ತುಕೊಂಡುಬಂದರು) ಲಂಕಾಪುರದ-ಲಂಕಾಪಟ್ಟಣದ, ಗಾವಳಿ-ಗದ್ದಲವು, ಅಗಲದಲಿ-ವಿಸ್ತಾರವಾಗಿ ಗುಡಿಯಿರಿದು-ಸುತ್ತಿಕೊಂಡು, ಗಾಢಿಸಿದುದು-ಹೆಚ್ಚಾಯಿತು.

ವಿ|| ದೊರೆ ಇದು ಭಾಷವಾದರೆ ಬಿಭಿನ್ನ, ನಾಮವಾದರೆ ರಾಜ.

೧೨. ಊರೊಳಗೆ- ಪಟ್ಟಣದಲ್ಲಿ, ಉಳ್ಳ-ಇರುವ (೧) ಗಾಣಿಗರ-ಎಣ್ಣೆಯನ್ನು ತೆಗೆವ ಗಾಣವನ್ನಿಟ್ಟುಕೊಂಡು ವ್ಯವಹರಿಸುವರ, ಅಂಗಡಿಯ-ವಾಣಿ ಜ್ಯಶಾಲೆಯಲ್ಲಿರುವ, ವಣಿಜಗೃಹಂಗಳ = ವಣಿಜ-ವರ್ತಕರ (ವ್ಯಾಪಾರಿಗಳ) ಗೃ ಹಂಗಳ-ಮನೆಗಳಲ್ಲಿರುವ, ಕುಸುಮೆಕಮ್ಮಂಗು ಬೇವಳಿಡಲಿಕೆ ಹುಲಿಗಲಿ ತಾರೆಯು

ಗಸೆಗಳ—ಕುಸುಮೆ-ಕುಸುಂಬೆಹೂವು, ಕುಂಕುಮ-ಕೇಸರಿ, ಕವುಂಗು-ಕೆಂಪುಬಣ್ಣದಯಾರೆಯು, ಬೇವು-ಬೇವಿನಕಾಯಿ ಬೀಜವು- ಔಡಲಿಕೆ-ಹರಳು, ಹುಲಿಗಲಿ-ಹೊಂಗೆ, ತಾರೆ, ಅಗಸೆಗಳ-ಅಗಸೆಯಬೀಜವು ಇವುಗಳ, ತೆಂಗು...ಎಳಂಗುಂ-ತೆಂಗಂ-ಕೊಬ್ಬರಿ,ಸಾಸುವೆ-ಸಾಸುವೆಯು, ಇಪ್ಪೆ-ಹಿಪ್ಪೆಹೂವು, ಗೇರು-ಗೇರುಬಿತ್ತವು, ಎಳಂಗಂ-ವಾಯುವಿಳಂಗವು ಇವುಗಳ, ಅಂಕಲೆ-ಅಂಕೋಲೆಯು, ಮುಖ್ಯ-ಮೊದಲಾದುವುಗಳ, ತೈಲದ ಎಣ್ಣೆಗಳ, ಸಂಗಡಿಯು-ಸಮೂಹದ, ಸಂಪರಣೆ-ಶೇಖರವು (ಸಂಗ್ರಹವು), ಕಪಿಯ-ಹನುಮನ, ಬಾಲದಲಿ-ಪುಚ್ಛದಲ್ಲಿ, ಸವೆದುದು-ವೆಚ್ಚವಾಗಿ ಹೋಯಿತು (ಗಾಣಿಗರ ಅಂಗಡಿಯಲ್ಲೂ ವರ್ತಕರಮನೆಗಳಲ್ಲೂ ಇದ್ದ ಕುಸುಂಬೆಬೇವು ಹರಳು-ಮೊದಲಾದುವುಗಳ ಎಣ್ಣೆಯನ್ನೆಲ್ಲ ತೆಗೆದುಕೊಂಡು ಬಂದು ಹನುಮನ ಬಾಲಕ್ಕೆ ಸುರಿದರು.)

೧೩. ಜೀಯ-ಪ್ರಭುವೇ, ಹೊಳಲ-ಪಟ್ಟಣದಲ್ಲಿರುವ, ಧನಿಕರ—ಹಣವಂತರ, ಧಾರ್ಮಿಕರ-ಧರ್ಮಮಾರ್ಗಪ್ರವಿಷ್ಟರ, ಮನೆಗಳ-ಗೃಹಗಳ, ದೊರೆಗಳ-ಅರಸುಗಳ, ಭವನದ-ಮನೆಗಳ, ವಸನಗಳು-ಬಟ್ಟೆಗಳು, ಉಳಿದುದಿಲ್ಲ-ಬಿಡಲ್ಪಡಲಿಲ್ಲ (ಅಂದರೆ ಧನಿಕರ ಧಾರ್ಮಿಕರ ಅರಸುಗಳ ಮನೆಗಳ ಬಟ್ಟೆಗಳೆಲ್ಲ ಹನುಮನ ಬಾಲಕ್ಕೋಸ್ಕರ ರಕ್ಷಿತರಲ್ಪಟ್ಟುವು ಎಂದು ತಾತ್ಪರ್ಯವು) ಅವರವರ-ಆಯಾಪ್ರಜೆಗಳ, ಗೃಹಘೃತತೈಲಂ—ಗೃಹ-ಮನೆಗಳ, ಘೃತ-ತುಪ್ಪವು,ತೈಲಂ-ಎಣ್ಣೆಯು ಇವುಗಳು, ಎನಿತು-ಎಷ್ಟೋ, ಅನಿತು-ಅಷ್ಟು, +ಹನುಮನಬಾಲದಲ್ಲಿ, ಬಳಿಯಬಿದ್ದುದು-ಸುರಿಯಲ್ಪಟ್ಟಿತು; (ಜನಗಳ ಮನೆಗಳ ಎಣ್ಣೆತುಪ್ಪಗಳನ್ನೆಲ್ಲ ಸುರಿದುದಾಯಿತು) ಬಾಲದ-ಹನುಮನ ಪುಚ್ಛದ, ಬೆಳವಿಗೆಗೆ-ಹೆಚ್ಚುವಿಕೆಗೆ, ಬಡವು-ಕುಂದು, ಇಲ್ಲಂ-ಇಲ್ಲವು+ಎಂದು ಸೇವಕರು ಎನೆ-ಹೇಳಲು, ಖಳತಿಲಕ=ರಾಕ್ಷಸರಿಗೆ ತಿಲಕಪ್ರಾಯನಾದ (ಅಂದರೆ ರಾಕ್ಷಸಶ್ರೇಷ್ಠನಾದ) ರಾವಣನು, ಅಂತಃಪುರದ-ರಾಣಿವಾಸದ, ಜನದ-ಜನಗಳ (ಅಂದರೆ ಅಂತಃಪುರದ ಸ್ತ್ರೀಯರ) ಅಂಬರವಂ-ಬಟ್ಟೆಗಳನ್ನು, ತರಿಸಿದನು-ಬರಮಾಡಿದನು.

ಭಾವಾರ್ಥ:—ಬಾಲದಬೆಳವಿಗೆಗೆ ಬಡವಿಲ್ಲಂ—ಹನುಮನ ಬಾಲವು ಇನ್ನೂ ಬೆಳೆಯುತ್ತಲೇ ಇದೆ.

೧೪. ಹಳದಿ...ಲತಿಕೆಗಳ—ಹಳದಿ-ಅರಿಸಿನ ಬಣ್ಣದ್ದು,ಸಂಧ್ಯಾರಾಗ-ಸಂಜೆಗೆಂಪಿನ ಬಣ್ಣವುಳ್ಳದು, ಹರಿಣಾವಳಿ-ಜಿಂಕೆಗಳ ಶ್ರೇಣಿಯ ಚಿತ್ರವುಳ್ಳದು, ಹಯಾವಳಿ-ದುದುರಿಸಾಲಿನ ಚಿತ್ರವುಳ್ಳದು, ಹಸ್ತಿ-ಆನೆಯ ಚಿತ್ರವುಳ್ಳದು, ಹರಿಮುಖ

ಸಿಂಹದ ಮುಖಗಳ, ಪಳಸಿತಾವಳಿ-ಪ್ರಕಾಶಮಾನವಾದ ಶ್ರೇಣಿಯ ಚಿತ್ರವುಳ್ಳದು, ವಿವಿಧಚಿತ್ರ-ಹಲವುಬಗೆಯ ಚಿತ್ರಗಳುಳ್ಳದು, ಲತಾಂತ-ಹೂಗಳ ಚಿತ್ರವುಳ್ಳದು, ಲತಿಕೆಗಳ-ಬಳ್ಳಿಯ ಚಿತ್ರವುಳ್ಳದು ಎಂಬ, ಪಳಿ....ಮೇಘವಣ್ಣಿಗೆಗಳ=ಪಳಿ.. ನವುರಾದುದು, ಸುರೇಖೆ-ಒಳ್ಳೆಯ ಗೆರೆಗಳುಳ್ಳದು, ಮಯೂರ-ನವಿಲಿನ ಚಿತ್ರವುಳ್ಳದು, ಹಂಸಾವಳಿ-ಹಂಸಪಕ್ಷಿ ಶ್ರೇಣಿಯ ಚಿತ್ರವುಳ್ಳದು, ಸುರಾವಳಿ-ದೇವತಾಶ್ರೇಣಿಯ ಚಿತ್ರವುಳ್ಳದು, ಮೇಘವಣ್ಣಿಗೆಗಳ-ಮೇಘವರ್ಣವುಳ್ಳದು, ಎಂಬ ವಿವಿಧನಿವಸನಗಳು-ಹಲವುಬಗೆಯ ಸೀರೆಗಳು, ಕಪಿಯ-ಹನುಮನ, ಬಾಲದಲಿ-ಪುಚ್ಛದಲ್ಲಿ, ಎಸೆದುವು-ಪ್ರಕಾಶಿಸಿದುವು (ರಾವಣನ ರಾಣಿವಾಸದಲ್ಲಿದ್ದ ಹಳದಿ... ಮೊದಲಾದ ಹಲವು ಬಗೆಯ ಸೀರೆಗಳನ್ನು ತಂದು ಹನುಮನ ಬಾಲಕ್ಕೆ ಸುತ್ತಿದರು ಎಂದು ತಾತ್ಪರ್ಯ.)

೧೫ (೧) ಮಾದಳಿರು-ಮಾವಿನಚಿಗುರಿನ ಬಣ್ಣವುಳ್ಳದು, ಮಂಟಿಗೆ-ಹೊಂಬಣ್ಣವುಳ್ಳದು, ಮಾದಲಿ-ಮಾದಳದ ಹಣ್ಣಿನ ಚಿತ್ರವುಳ್ಳದು, ವೈದೂಡವಿ-ಜರತಾರಿಯುಳ್ಳದು, ಸಾವಂತಿ-ಸೇವಂತಿಗೆ ಹೂವಿನ ಚಿತ್ರವುಳ್ಳದು, ಸೊಸಿನ-ಮನೋಹರವಾದ, ಬೀದಿ-ಗೆರೆಗಳ ಸಾಲುಳ್ಳದು, ಬಿಳಿದು-ಬಿಳಿಯ ಬಣ್ಣವುಳ್ಳದು, (೨) ಎಳಗಾವಿ-ಎಳೆಯಕಾವಿ ಬಣ್ಣವುಳ್ಳದು, ಸಂಪಗೆ ಗಾವಿ-ಕೆಂಡಸಂಪಗೆ ಬಣ್ಣವುಳ್ಳದು, (೩) ತೆಳುಗಾವಿ-ತೆಳ್ಳನೆಯ ಕಾವಿಬಣ್ಣವುಳ್ಳದು, ಆದ-ಆಸಿದ, ಸೀರೆ-ನಾರಿನಿಂದ ಮಾಡಿದುವು, ಸರೋಜವಲ್ಲರಿ-ತಾವರೆಯ ಹೂವಿನಿಂದ ಕೂಡಿದ ಬಳ್ಳಿಯ ಚಿತ್ರವುಳ್ಳದು, ಪಾದಪಾವಳಿ-ಗಿಡಗಳ ಶ್ರೇಣಿಯ ಚಿತ್ರವುಳ್ಳದು ಪಟ್ಟೆಗಳು-ರೇಷ್ಮೆಯಿಂದ ಮಾಡಿದುವು, ಮೊದಲಾದ-ಮುಂತಾದ, ವಿವಿಧಾಂಬರಗಳು-ಹಲವುಬಗೆಯ ಸೀರೆಗಳು, ಕಪಿಯ-ಹನುಮನ, ಬಾಲದಲಿ-ಪುಚ್ಛದಲ್ಲಿ ಎಸೆದುವು-ಪ್ರಕಾಶಿಸಿದುವು (ರಾವಣನ ರಾಣಿಯರ ಮಾದಳಿರು ಹಳದಿ ಮೊದಲಾದ ಹಲವು ಬಗೆಯ ಸೀರೆಗಳನ್ನೆಲ್ಲ ತಂದು ಹನುಮನ ಬಾಲಕ್ಕೆ ಸುತ್ತಿದರು)

ವ್ಯಾ||- (೧) ಮಾವಿನ + ತಳಿರು=ಮಾಂದಳಿ ೧ (ಮಾದಳಿರು) ಕ. ಷ. ತ (೨) ಎಳದು + ಕಾವಿ (ಕ. ವಿ. ಪೂ) (೩) ತೆಳ್ಳಿತು + ಕಾವಿ=ತೆಳ್ಗಾವಿ (ತೆಳಗಾವಿ) ಕ. ವಿ. ಪೂ.

೧೬. (ಮುಖ್ಯಪದ್ಯ):-ಜೀಯ-ಪ್ರಭುವೇ! ಬಡವು ಬಿನುಗು ಸಮರ್ಥರು=ಬಡವು-ದರಿದ್ರರು, ಬಿನುಗು-ಸಾಧಾರಣರು, ಸಮರ್ಥರು-ಧನಿಕರು, ಎನ್ನದೆ-ಎಂದು ನೋಡದೆ, + ಸಕಲಪ್ರಜೆಯ, (೧) ಉಡುವ ಸೀರೆಗಳು-ಉಟ್ಟುಕೊಳ್ಳುವ ಬಟ್ಟೆ

ಗಳು, ಉಳಿಯೆ-ಹೊರತಾಗಿ, + ಬಳಸದ ವಸ್ತ್ರಗಳೆಲ್ಲ, ಬಂದುವು-ಬಂದುಸೇರಿದುವು(ಅಂದರೆ ಇವರು ಬಡವರು, ಇವರು ಸಾಧಾರಣರು, ಇವರು ಧನಿಕರು ಎಂದು ನೋಡದೆ ಸಮಸ್ತ ಪ್ರಜೆಗಳ ಉಟ್ಟುಕೊಳ್ಳುವ ಬಟ್ಟೆಗಳನ್ನು ಬಿಟ್ಟು ಮಿಕ್ಕ ಬಳಸದೆ ಇಟ್ಟಿದ್ದ ವಸ್ತ್ರಗಳನ್ನೆಲ್ಲ ತಂದು ಬಿಟ್ಟವು ಎಂದು ತಾತ್ಪರ್ಯ.) ನುಡಿಯಲು-ಹೇಳಲು, ಅಮ್ಮೆವು-ಶಕ್ತರಾಗೆವು, (ಹೇಳಲಾರೆವು) ; ಊರೊಳಗೆ-ಪಟ್ಟಣದಲ್ಲಿ, ಮೊರೆ-ಗೋಳಾಟವು, (ಬಟ್ಟೆಗಳು ಹೋದುವೆಂಬ ಗೋಳು) ಬಲುಹು ಆದುದು-ಹೆಚ್ಚಾಯಿತು; ಬಾಲದಲಿ-ಕಪಿಯ ಪುಚ್ಛದಲ್ಲಿ, ಬೆಳವಿಗೆ-ಹೆಚ್ಚು ಏಕೆಯು ಬಿಡದು-ತಪ್ಪಲಿಲ್ಲ (ಕಪಿಯ ಬಾಲವು ಮಾತ್ರ ವೃದ್ಧಿಯಾಗುತ್ತಲೇ ಇದೆ;) + ಕಪಿಯಬಾಲದಲ್ಲಿ ನೆಲೆಕಡೆಯು-ಸ್ಥಿರವಾದ (ಒಂದೇ ಪ್ರಮಾಣದ) ನಿಲವಂ-ನಿಲ್ಲು ಏಕೆಯನ್ನು (ಅಂದರೆ ವೃದ್ಧಿಯಿಲ್ಲದೆ ಒಂದೇ ರೀತಿಯಿಂದ ನಿಲ್ಲುವಿಕೆಯನ್ನು), ಕಾಣೆವು-ನೋಡಲಿಲ್ಲ ; + ಎಂದು ಸೇವಕರು, ಎನೆ-ಹೇಳಲು, ಅಸುರ-ರಾವಣ ರಾಕ್ಷಸನು, ಕಾಳ್ಗೆಡೆಯದೆ-ತಿರಸ್ಕರಿಸದೆ, (೨) ಊಡನು-ಉಟ್ಟುಕೊಳ್ಳುವ ಬಟ್ಟೆಯನ್ನು (ಪ್ರಜೆಗಳು ಉಡುವ ಬಟ್ಟೆಗಳನ್ನು) ಸುಲಿಯಹೋಗಿ-ಕಿತ್ತುಕೊಳ್ಳಹೋಗಿರಿ (ಸೆಳೆದುಕೊಂಡು ಬರಲು ಹೋಗಿರಿ) ; ಎಂದು-ಎಂಬುದಾಗಿ, ಗರ್ಜಿಸಿಗ-ಗದರಿಸಿದನು (ಪ್ರಜೆಗಳ ಉಡುವ ಬಟ್ಟೆಗಳನ್ನು ಸುಲಿದುಕೊಂಡು ಬನ್ನಿ ಹೋಗಿರಿ ಎಂದು ರಾವಣನು ಸೇವಕರಿಗೆ ಗದರಿಸಿದನು)

ವ್ಯಾ|- (೧)ಉಡುವುವು + ಸೀರೆಗಳು (ಗ) (೨) ಉಡು ಎಂಬ ಧಾತು ವಿನಿಂದಾದ ರೂಪವು.

ತಿದ್ದುವಿಕೆ;—ಕಾಳ್ಗೆಡೆಯ ದೂರನು ಎಂದು ಮೂಲದಲ್ಲಿದೆ. 'ಕಾಳ್ಗೆಡೆಯದೂಡನು' ಎಂದು ತಿದ್ದಿದರೆ ಚೆನ್ನಾಗುತ್ತದೆ.

೧೭. ಹನುಮಂತನು-ಆಂಜನೇಯನು, ಆ ಕಡು ಕೂಳರಕ್ಕಸಂ-ಆ ಬಹು ನೀಚರಾಕ್ಷಸನಾದ ರಾವಣನು ಎಂದ-ಹೇಳಿದ, ಮಾತನು-ನುಡಿಯನ್ನು [ಉಡುವ ಬಟ್ಟೆಯನ್ನು ಸುಲಿದು ತನ್ನಿರಿ ಎಂದು ಹೇಳಿದ ಮಾತನ್ನು] ಕೇಳಿದನು ; ಕೇಳಿ-ರಾವಣನ ಆ ಮಾತನ್ನು ಕೇಳಿ, ರಾಮ ರಾಮ ಎನುತ-ಎಂದೆನ್ನುತ್ತ, ಕಿವಿಗಳ-ಕರ್ಣಗಳನ್ನು, ಮುಚ್ಚಿಕೊಂಡನು-ಕೈಗಳಿಂದ ಮುಚ್ಚಿಕೊಂಡನು (ಉಡುವ ಬಟ್ಟೆಗಳನ್ನು ಸುಲಿಯಬೇಕೆಂಬ ಮಾತನ್ನು ಕೇಳಿ ಸಹಿಸದೆ ಕಿವಿಮುಚ್ಚಿದನು) ಇವ-ಈ ರಾಕ್ಷಸನು, ಚಾಸು, ಕೂಳಂ-ನೀಚನು, ಆದೊಡೆ-ಆದರೆ, ಆವ್‌-ನಾವು ಅತಿ ಕೂಳರು-ಬಹು ನೀಚರು, ಅಹುದು-ಆಗುವುದು, ಅನುಚಿತವು-ಅಯುಕ್ತ

[ಅಂದರೆ ಈ ರಾಕ್ಷಸನು ಉಡುವ ಬಟ್ಟೆಯನ್ನು ಸುಲಿಸಿ ಅಲ್ಪನನ್ನಿಸಿಕೊ ನಾವು ಬಾಲವನ್ನು ಇನ್ನೂ ಬೆಳೆಸಿ ಸರ್ವರು ಉಡುವ ಬಟ್ಟೆಗಳನ್ನು ಸುಲಿಸಲಿ ಅವಕಾಶ ಕೊಟ್ಟು ಅತಿನೀಚನೆಂದನ್ನಿಸಿಕೊಳ್ಳುವುದು ಸರಿಯಲ್ಲ] ನಾವ್-ನಾ ಬಾಲಕ್ಕೆ-ಪುಚ್ಛಕ್ಕೆ, ನೆಗೆ-ಬಹಳವಾಗಿ, ಬುದ್ಧಿಯಿಂ-ಬುದ್ಧಿವಾದವನ್ನು, ಹೆ ವೆವು; + ಎಂದು, ಆ ಹನುಮ, ಎಂದನು-ಎಂದುಕೊಂಡನು.

೧೮. ಇವಂ-ಈ ರಾವಣನು, ಬಂಡನು-ಮಾನಗೆಟ್ಟವನು. ಈ ಖಳ ಈ ರಾಕ್ಷಸನು, ಲೋಕದ-ಪ್ರಪಂಚದ, ಬಂಡರಿಗೆ-ಮಾನಹೀನರಿಗೆ, ಗುರು-ಉ ದೇಶಕರ್ತನು: ಇವಂ-ಈ ರಾಕ್ಷಸನು, (೧) ನಾಣುನಸಿಕರ-ನಾಚಿಕೆಗೆಟ್ಟವರ ಚಂಡಿ-ಅಧಿಪತಿಯು, ಎಲೆ ಬಾಲವೇ-ಎಲೆ ಪುಚ್ಛವೇ ! ಇನ್ನು-ಪುತ್ತೆ, ಬೆಳೆ ದಿರು-ಹೆಚ್ಚಬೇಡ; ಸಾಕು-ಬಿಡು ; ಇವ-ಈ ರಾಕ್ಷಸನು, ಕಂಡವರನು-ನೊ ದವರನ್ನು, ಸುಲಿಸದೆಇರನು-ಉಟ್ಟಬಟ್ಟೆಗಳನ್ನು ಕೊಳ್ಳೆಹೊಡಿಸದೆ ಬಿಡನ ನಾವ್-ನಾವು, ಈ ಬಂಡತನದವರು-ಇಂತಹ ಮಾನಹೀನತ್ವವುಳ್ಳವರು ಅ ಅಲ್ಲವು ;+ ನಾವು, ಕೈಗೊಂಡ-ಹಿಡಿದ, ಕೆಲಸದ-ಕಾರ್ಯದ, ಅದನು-ಆ, ಕತೆ ಸಮಾಚಾರವನ್ನು, ನಿನಗೆ, ಇನ್ನು ಅರುಹಲುವೆನು-ಹೇಳುವುದೇಕೆ ? (ಅಂ ನಾನು ಹಿಡಿದಕಾರ್ಯದ ವಿಷಯವು ನಿನಗೆ ತಿಳಿದೇ ಇದೆ. ಅದೇ ಮುಖ್ಯವೆಂದು ಭಾ

ಭಾವಾರ್ಥ.— ಈ ಖಳನು ಲೋಕದ ಬಂಡರಿಗೆ ಗುರು-ಈ ರಾಕ್ಷಸ ಬಲು ಮಾನಗೆಟ್ಟವನು. ನಾಣುನಸಿಕರ ಚಂಡಿಯಿವನು-ಈ ರಾಕ್ಷಸನು ಬ ನಾಚಿಕೆಗೆಟ್ಟವನು.

ವ್ಯಾ||-[೧] ನಾಣಂ + ನಸಿಪವನು [ಕೃದಂತನಾಮ] ನಾಚಿಕೆಯನ ನಾಶಮಾಡುವವನು ಎಂಬರ್ಥವು.

೧೯. + ನಾನು, ಹೊಳಲ- ಈ ಪಟ್ಟಣದ (೧) ಕನ್ಯಾಜನ ಬಾಲಕಿಯರ, ನಾಚಿಕೆಗೊಳಲು-ಲಜ್ಜೆಯನ್ನು ಅಪಹರಿಸಲು [ನಾಚಿಕೆಗೆಡಿಸಲಿಕೆ ಬಂದೆನೆ ? (ನಾನು ಬಾಲವನ್ನು ಬೆಳೆಸುವುದರಿಂದ ರಾವಣನು ಈ ಊರ ಬಾ ಕಿಯರ ಸೀರೆಗಳನ್ನೆಲ್ಲ ಸುಲಿಸುವಂತೆ ಮಾಡಿ ಅವರನ್ನು ನಾಚಿಕೆಗೆಡಿಸುವ ಕ್ಕೋಸ್ಕರ ಬಂದೆನೇ ?) + ಬಾಲವೇ ! ಬಂದ-ನಾನು ಇಲ್ಲಿಗೆ ಬಂದು ಸೇರ ಕಾರ್ಯದ-ಕೆಲಸದ, ನಲೆಯ-ಸ್ವರೂಪವನ್ನು . ನೀನೇ, ನೋಡಿಕೊ-ತಿಳಿದುಕೊ. ಎಂದು, ಹನುಮನು, ಎನೆ-ಹೇಳಲು, ಆ ಬಾಲ-ಹನುಮನ ಪುಚ್ಛವು ನಿಂದುದು ಬೆಳೆಯದೆ ನಿಂತಿತು ಇಳೆಸು ಘಟ..., ..ಲನಾಡನ-ಸ್ತ್ರೀಯರು, ಎನೆ

ನನಗೆ, ತಾಯ್ಗಳು-ಪಾತೃಪ್ರಾಯರಾದವರು (ತಾಯಿಯರಂತೆ ಮಾನರಕ್ಷಣಾರ್ಹರು); ಮರುಳುತನ-ಮೂಢತ್ವವು; ಬೇಡ; + ನೀನು, ಬರಿದೇ-ವ್ಯರ್ಥವಾಗಿ ಬೆಳೆಯದಿರು-ವೃದ್ಧಿಯಾಗಬೇಡ; ನಮಗೆ, ಅಪಕೀರ್ತಿಸಾಧನವ-ಅಪಯಶಸ್ಸಿನ ಸಂಪಾದನೆಯನ್ನು, ಬೆಳಸದಿರು-ಹೆಚ್ಚಿಸಬೇಡ [ಇವರು ಸ್ತ್ರೀಯರು ನಾಚಿಕೆಯನ್ನು ಕೆಡಿಸಲಿಕ್ಕೆ ಕಾರಣಭೂತನಾದನೆಂಬ ನನಗೆ ಬಹಳವಾಗಿ ಅಪಕೀರ್ತಿಯನ್ನುಂಟು ಮಾಡಬೇಡ]:

ವ್ಯಾ||-[೧] ಕನ್ನೆಯರೆಂಬ+ಜನಂ [ಸಂ. ಪೂ]

೨೦. (ಬಹುಮುಖ್ಯಪದ್ಯ):—ಎಲೈಬಾಲವೇ ಇನಿತಕೆ-ಇಷ್ಟಕ್ಕೆ(ಅಂದರೆ ಇಂತಹ ಸುವಸ್ತ್ರಗಳನ್ನು ಪಡೆವುದಕ್ಕೆ, ಪೂರ್ವಭವದಲಿ-ಹಿಂದಣಜನ್ಮದಲ್ಲಿ, ಕೊಟ್ಟು-ಸುವಸ್ತ್ರದಾನವನ್ನು ಮಾಡಿ, ಹುಟ್ಟಿದುದು ಇಲ್ಲವಾಗಿ-ಹುಟ್ಟಲಿಲ್ಲವಾದ ಕಾರಣದಿಂದ, ಕಮಲಜ-ಬ್ರಹ್ಮನು, ಕಟ್ಟಿದ-ಧರಿಸಿಕೊಂಡಿರುವ, ಈ ದಟ್ಟಿಯನು-ಈ ಚಡ್ಡಿಯನ್ನು, + ನನಗ, ಕೊಟ್ಟನು-ಇತ್ತನು; ಇದು—ಈ ದಟ್ಟಿಯೇ ನಮ್ಮಗೆ, ನಿಧಾನಂ—ಉಡುವ ಬಟ್ಟೆಯು; ನೀ—ನೀನು, ಆದಿಯೊಳು—ಪೂರ್ವಜನ್ಮದಲ್ಲಿ, ನೆಟ್ಟನೆ—ಸರಿಯಾಗಿ, ಆವಸುಕೃತವ-ಯಾವಪುಣ್ಯಕರ್ಮವನ್ನು, ಮುಟ್ಟಿ-ಹಿಡಿದು, ಮಾಡಿದೆಯೊ—ಆಚರಿಸಿದ್ದೆಯೋ! ನಿನ್ನವೊಲು-ನಿನ್ನಹಾಗೆ, ಉಟ್ಟು-ಸುವಸ್ತ್ರಗಳನ್ನು ಧರಿಸಿ, ಮೆರೆವವರು-ಪ್ರಕಾಶಿಸುವವರು, ಆರು-ಯಾರಿದ್ದಾರೆ? ಇನ್ನು-ಮುಂದೆ, ಅಧಟುತನಂ-ಸಾಹಸವು (ಬೆಳೆಯುವಿಕೆಯು) ಸಾಕು-ಬೇಡ; +ಎಂದು, ಹನುಮನು, ಎಂದ—ಬಾಲಕ್ಕೆ ಹೇಳಿದನು.

ತಾತ್ಪರ್ಯ:—ಎಲೆಬಾಲವೇ? ಕೇಳು, ನಿನ್ನಂತೆ ಇಂತಹ ಸುವಸ್ತ್ರಗಳನ್ನು ಧರಿಸುವುದಕ್ಕೆ ನಾನು ಪೂರ್ವಜನ್ಮದಲ್ಲಿ ಸುವಸ್ತ್ರದಾನವನ್ನು ಮಾಡಿ ಹುಟ್ಟಿಲ್ಲವಾದ ಕಾರಣದಿಂದ, ಬ್ರಹ್ಮನು (ಬ್ರಹ್ಮಚರ್ಯಾಶ್ರಮದಲ್ಲಿಯೇ ಇದ್ದು) ಈ ದಟ್ಟಿಯನ್ನೇ ಕಟ್ಟಿಕೊಂಡಿರಬೇಕೆಂದು ನಮ್ಮ ಹಣೆಯಲ್ಲಿ ಬರೆದಿದ್ದಾನೆ. ಆದುದರಿಂದ ಈ ದಟ್ಟಿಯೇ ನಮಗೆ ಉಡುವ ಬಟ್ಟೆಯಾಗಿದೆ. ಆದರೆ ನೀನು ಪೂರ್ವಜನ್ಮದಲ್ಲಿ ಯಾವ ಪುಣ್ಯ ಕರ್ಮವನ್ನು ಚೆನ್ನಾಗಿ ಮಾಡಿದ್ದೀಯೋ! ಏಕೆಂದರೆ:—ನಿನ್ನಂತೆ ಅನರ್ಘವಾದ ಬಟ್ಟೆಗಳನ್ನು ಉಟ್ಟು ಮೆರೆಯುವವರು ಯಾರಿದ್ದಾರೆ? ಇನ್ನು ನೀನು ಬೆಳೆಯುವುದು ಸಾಕು. ಎಂದು ಹನುಮಂತನು ರಾಕ್ಷಸರಿಂದ ಸುತ್ತಲ್ಪಟ್ಟ ವಿವಿಧ ಸುವಸ್ತ್ರಗಳಿಂದ ಮೆರೆಯುತ್ತಾ ಬೆಳೆಯುತ್ತಿರುವ ತನ್ನ ಬಾಲವನ್ನು ಕುರಿತು ಹೇಳಿದನು.

ಟಿಪ್ಪಣಿ:—ಬ್ರಹ್ಮಚರ್ಯಾಶ್ರಮದಲ್ಲಿ ದಟ್ಟಿಯನ್ನೇ (ಕೌಪೀನವನ್ನೇ) ಧರಿಸಬೇಕೆಂದು ಶಾಸ್ತ್ರದಲ್ಲಿ ಉಕ್ತವಾಗಿದೆ. ಹನುಮಂತನು ನಿತ್ಯ ಬ್ರಹ್ಮಚಾರಿಯೆಂದು ಪ್ರಸಿದ್ಧನು.

೨೧. ಬಳಿಕ:—ಅನಂತರದಲ್ಲಿ, ಬಾಲ-ಪುಚ್ಛವು, ಅಸುರಾಂತಕನ-ರಾಕ್ಷಸನಾಶಕನಾದ ರಾಮನ, ನಿಜಚರನ-ಸ್ವಕೀಯ ಸೇವಕನಾದ ಹನುಮಂತನ, ನೇಮದಲಿ-ಆಜ್ಞೆಯಿಂದ, ಸಂತವಿಸಿದುದು-ಬೆಳೆಯದೆ ನಿಂತುಹೋಯಿತು. ಈಶನ ಈ ಹನುಮನ, ಪ್ರತಾಪದಲಿ-ಪೌರುಷದಿಂದ, ಅಂತರಿಕ್ಷವಂ-ಆಕಾಶವನ್ನು, ಅಳ್ಳಿರಿದುದು-ವ್ಯಾಪಿಸಿತು; ಇನ್ನು-ಮತ್ತೆ, ತಂತುಪಟ-ನೂಲಿನ ಬಟ್ಟೆಗಳು, ಸಾಕು; ಬೆಳವಿಗೆ-ಕಪಿಯಬಾಲದ ಹೆಚ್ಚಿಗೆಯು, ಸಂತವಾದುದು-ನಿಂತುಹೋಯಿತು, ಸುಲಿಯದಿರಿ-ಜನಗಳ ಬಟ್ಟೆಗಳನ್ನು ಅಪಹರಿಸಬೇಡಿರಿ; ಹೋ-ಸಾಕು ಸಂತವಿಸಿ-ನಿಲ್ಲಿರಿ; ಎಂದು-ಎಂಬದಾಗಿ ಹೇಳಿ, ಅಲ್ಲಲ್ಲಿ-ಆಯಾಸ್ಥಳಗಳಲ್ಲಿ, ಸೇವಕರಿಂದ ಡಂಗುರಗಳು-ಪ್ರಕಟನ ಭೇರಿಗಳು, ಒದರಿದುವು-ಧ್ವನಿಮಾಡಲ್ಪಟ್ಟುವು (ಬಾಲವು ಬೆಳೆಯದೆ ನಿಂತುದರಿಂದ ಇನ್ನು ಬಟ್ಟೆಗಳನ್ನು ಸುಲಿಯಬೇಡಿರಿ ಎಂದು ರಾವಣನಾಜ್ಞೆಯಿಂದ ಸೇವಕರು ಅಲ್ಲಲ್ಲಿ ಹೇಳುತ್ತ ಡಂಗುರಗಳನ್ನು ಹೊಡೆದರು)

೨೨. ಬಳಿಕ-ಆ ಮೇಲೆ, (೧) ಕುಮತಿ-ದುರ್ಬುದ್ಧಿಯುಳ್ಳವನಾದ, ರಾವಣನು, ಎದ್ದು, ಉದ್ಧರಿಸಿ-ಸೊಕ್ಕೇರಿ, ದೈತ್ಯರ-ರಾಕ್ಷಸರನ್ನು, ಕರೆದು-ಕೂಗಿ, ನೇಮಿಸೆ-ಆಜ್ಞೆಮಾಡಲು + ರಾಕ್ಷಸರು, ನಿಮಿಷದಲಿ-ಒಂದು ನಿಮಿಷ ಕಾಲದಲ್ಲ + ಹನುಮನ ಬಾಲವನ್ನು, ಹತ್ತಿದರು-ಏರಿದರು, (೨) ತುದಿಬಾಲದಲಿದ್ದೆ ಬಾಲದ ಕೊನೆಯಲ್ಲಿ, ಹುತವಹನ-ಬೆಂಕಿಯನ್ನು, ಅದುರಿ-ತಗುಲಿಸಿ, ಹೊತ್ತಿಕ್ಕಿದರು-ಉರಿಗೊಳಿಸಿದರು, ರಘುಭೂರಮಣನ=ರಘು-ರಘುವಂಶದ, ಭೂರಮಣನ-ದೊರೆಯಾದ ರಾಮನ, ಅನುಚರನು-ದೂತನಾದ ಹನುಮಂತನು, ಅರಿಚಿ-ಕೂಗಿ, ಕೆಡೆಯಲು-ಬೀಳಲಾಗಿ; ಭಟಸ್ತೋಮ-ರಾಕ್ಷಸರಾದ ಆಳುಗಳ ಸಮೂಹವು, ತಮತಮಗೆ-ತಮ್ಮ ತಮ್ಮಷ್ಟಕ್ಕೆ, ಘೊಳ್ಳೆಂದು-ಘೊಳ್ಳೆಂಬುದಾಗಿ ನಕ್ಕು, ಗುಹಿಲಿಕ್ಕಿತು-ಕೂಗಿಕೊಂಡಿತು.

ವ್ಯಾ|| (೧) ಕುತ್ಸಿತವಾದ + ಮತಿಯುಳ್ಳವನು (ಬ. ವ್ರೀ) (೨) ಬಾಲದ ತುದಿ (ಕ. ಅ. ಭಾತ)

೨೩. ಈ ಶಕ್ರಾರಿ-ಈ ಇಂದ್ರಜಿತ್ತು, ಜಾಣನು-ಚತುರನು; ಈ ಕಪಿಗೆ-ಈ ಕೋತಿಯು, ಉನ್ಮಾದ-ಜೋಪಾಳವನ್ನು, ಕಾಣಿಸಿದನು-ತೋರ್ಪಡಿಸಿದನು; +

ಎಂದು, ಗೀರ್ವಾಣರಿಪು-ರಾಕ್ಷಸನಾದ ರಾವಣನು, ಎನುತ-ಹೇಳುತ್ತ, ಅಡಿ ಬಿದ್ದು-ಕೆಳಗೆ ಬಿದ್ದು, ತಂಬುಲ-ಬಾಯಿಯೊಳಗಿರುವ ತಾಂಬೂಲದ ರಸವು, ಸೂಸಲು-ಸುರಿಯಲು, ಗೋಣುಗಳಂ-ಕುತ್ತಿಗೆಗಳನ್ನು, ಎಡಬಲಕೆ-ಎಡದಕಡೆಗೂ ಬಲದಕಡೆಗೂ, ಒರಗಿಸುತ-ಮಲಗಿಸುತ್ತ, ನಗಲು-ನಗುತ್ತಿರಲು (೧) ಅಕ್ಷೀ ಬಲಂ-ಅಕ್ಷೀಣ-ಅಧಿಕವಾದ, ಬಲಂ-ಶಕ್ತಿಯುಳ್ಳವನಾದ ಹನುಮಂತನು, ಅದು-ಆ ನಗುವಿಕೆಯನ್ನು, ಕಂಡು-ನೋಡಿ, ಈ ನಗೆಯ-ಈ ನಗುವನ್ನು, ನಿಲಿಸುವೆನು-ನಿಲ್ಲಿಸುವೆನು: ನೀನು, ನಿಮಿಷ-ನಿಮಿಷಕಾಲವು, ಸೈರಿಸು-ತಡೆದುಕೋ! + ಎಂದು ಮನದಲಿ-ತನ್ನ ಮನಸ್ಸಿನಲ್ಲಿ, ಎಂದ-ಎಂದುಕೊಂಡನು (ರಾವಣನು ನಗುವುದನ್ನು ನೋಡಿ ಹನುಮನು ಈ ನಗುವನ್ನು ನಿಲ್ಲಿಸುವೆನು ನಿಮಿಷಮಾತ್ರ ತಡೆ ಎಂದು ಮನಸ್ಸಿನಲ್ಲಿ ಎಂದುಕೊಂಡನು)

ವ್ಯಾ|| (೧) ಕ್ಷೀಣವಲ್ಲದುದು ಅಕ್ಷೀಣಂ(ನ.ತ) ಅಕ್ಷೀಣ ಬಲಂ (ಬ.ವ್ರೀ)

೨೪. ಊರೊಳು-ಪಟ್ಟಣದಲ್ಲಿ, ಈತನ-ಈ ಕಪಿಯನ್ನು, ಮೆರಸಿ-ಮೆರೆ ವಣಿಗೆ ಮಾಡಿ (೧) ಮಹಿಜಾನಾರಿಗೆ-ಮಹಿಜಾ-ಸೀತೆಯೆಂಬ, ನಾರಿಗೆ-ಸ್ತ್ರೀಗೆ ಈತನ-ಇವನನ್ನು, ತೋರಿ-ಕಾಣಿಸಿ, ತಡೆಯದೆ-ನಾವಕಾಶಮಾಡದೆ, + ಇವನನ್ನು (೨) ವಾರಿಧಿಯ-ಸಮುದ್ರದ ದೆಸೆಯಿಂದ, ಹೊರವಡಿಸಿ ಬಿಡಿ-ಹೊರಡಿಸು ಬಿಡಿ ಸಮುದ್ರದ ಆಚೆಗೆ ಹೊರಡಿಸಿ ಬಿಡಿ); + ಇವನು ತನ್ನ, ಒಡೆಯನು-ದೊರೆಯು, ಇದ್ದ ಎಡೆಗೆ-ಇರುವ ಸ್ಥಳಕ್ಕೆ, (೩) ದಾರಿದೆಗೆಯಲಿ-ನಡೆಯಲಿ; ಎಂದು-ಎಂಬ (ದಾಗಿ, ನಾರೀಚೋರ-ಹೆಂಗಸನ್ನು ಕದ್ದವನಾದ (ಹೆಂಗಳ್ಳನಾದ ರಾವಣನು) ನೇಮಿಸೆ-ಆಜ್ಞೆಮಾಡಲು, ಬಳಿಕ-ಅನಂತರದಲ್ಲಿ, (೪) ಬಲ್ಲಿದವೀರಭಟರು-ಮಹಾ ಶೂರರಾದ ಆಳುಗಳು, ಒತ್ತಾಗಿ-ದಟ್ಟವಾಗಿ ಸೇರಿ, ಮಾರುತಿಯ-ಹನುಮಂತ ನನ್ನು, ಹೊರವಡಿಸಿದರು-ಹೊರಡಿಸಿದರು.

ವ್ಯಾ|| (೧) ಮಹಿಜೆಯೆಂಬನಾರಿ (ಸಂ. ಪ್ರೊ) (೨) ಪಂಚಮ್ಯರ್ಥದಲ್ಲಿ ಷಷ್ಠಿ (೩) ದಾರಿಯಂ ತೆಗೆಯಲಿ (ಕ್ರಿ) ವೀರಭಟರು (ವಿ. ಪೂ) ಬಲ್ಲಿದ ರಾದ ವೀರಭಟರು (ವಿ. ಪೂ) ಅರಿ. ಸ.

೨೫. ರಾಕ್ಷಸಭಟರು, ಹಣೆಗೆ-ಹನುಮನ ಹಣೆಯಲ್ಲಿ, ಮಸಿಯನು-ಕಾಡಿಗೆಯ ನಾಮವನ್ನು, (ಕಪ್ಪಿನ ನಾಮವನ್ನು) ಬರೆದು-ತಿದ್ದಿ, (೧) ನಿಡು-ದಾಸಣಾನ ದಂಡೆಯ-ಉದ್ದವಾದ ದಾಸವಾಳದ ಹೂವಿನ ಒತ್ತುಸರವನ್ನು, ಹನುಮನ ಕೊರಳಿಗೆ ಸೇರಿಸಿ, ಪಗ್ಗದ-ಅಂಗಕ್ಕೆ ಕಟ್ಟಿದ ಹಗ್ಗದ, ಕಣಿಕೆಗಳ-ಕುಣಿಕೆ

ಕನ್ನು, ಸಡಿಲಿಸಿ-ಸಡಿಲವಮಾಡಿ, ಎರಡು ಪಕ್ಕಗಳಲಿ-ಉಭಯ ಪಾರ್ಶ್ವಗಳಲ್ಲಿಯೂ, ಉಬ್ಬಿ-ಉತ್ಸಾಹಗೊಂಡು ಬೊಬ್ಬಿರಿದು-ಕೂಗಿ, ಕೈಚಪ್ಪಳೆಗಳಲಿ-ಅಂಗೈಗಳ ಬಡಿತಗಳಿಂದ ಕೂಡಿ, ಕುಣಿಸಿ-ಕುಣಿವಂತೆ ಮಾಡಿ, ವೀರಣಕೊಳಲ್ಕೊಂಬುಗಳ=ವೀರಣ-ಅಗಲವಾದ ಕಡ್ಡಿಯ ವಾದ್ಯವು, ಕೊಳಲ್-ಬಿದಿರಿನ ವಾದ್ಯವು, ಕೊಂಬುಗಳ-ಕೊಂಬು ಎಂಬ ವಾದ್ಯವು, ಇವುಗಳ, ಅಣಿಯರದಲಿ-ಅಧಿಕವಾದ ಶಬ್ದದಲ್ಲಿ-ಶಬ್ದದೊಡನೆ, ಅನಿಲಜನ-ಹನುಮಂತನನ್ನು, ರಾಜಬೀದಿಯಲಿ-ದೊಡ್ಡಬೀದಿಯಲ್ಲಿ ತಂದರು-ನಡಿಸಿಕೊಂಡು ಬಂದರು.

ವ್ಯಾ|| (೧) ದಾಸಣದ+ದಂಡೆ (ಅಲುಕ್ಸಮಾಸ) ಹಿಡಿದು + ದಾಸಣದ ದಂಡೆ (ಶ. ವಿ. ಪೂ.)

೨೬. ನೋಟಕರು:—ಜನಮನ ಮರವಣಿಗೆಯನ್ನು ನೋಡತಕ್ಕವರ ಗುಂಪು, ನಗೆಗಳ—ನಗುವಿಕೆಗಳ, ಹೊರಳಿಗಳಲಿ-ಸಮೂಹಗಳಿಂದ ಕೂಡಿ, ಅಂಗಡಿಯ ಹಸರದ-ಅಂಗಡಿಯ ಪ್ರದೇಶದ, (೧) ಹುರಿಗಡಲೆ...ಹಂಪಲಗಳನು=ಹುರಿಗಡಲೆ-ಹುರಿದಕಡಲೆಯು, ಗುಡ-ಬೆಲ್ಲವು, ಹಣ್ಣು (೨) ಹಂಪಲಗಳನು-ರಚನೆಯಿಂದಾದ ತಿಂಡಿಯುಪದಾರ್ಥವು, ಇವುಗಳನ್ನು, ಹಾಯ್ಕುತಲಿ-ಬೀಸಾಡುತ್ತ, ನೆರೆದುದೈ-ಸೇರಿತು; + ರಾಕ್ಷಸ ಸೇವಕರು ನೆರೆನೆರೆದು-ಸೇರಿಸೇರಿ; ಕಪಿಯ-ಹನುಮನನ್ನು, ಕುಣಿದಾಡಿಸುತ-ಕುಣಿದಾಡಿಸುತ್ತ, ನಿಜಪುರದ-ತಮ್ಮ ಪಟ್ಟಣದ, ಕಡೆಗೋಟೆಯ-ಕೊನೆಯ ಕೋಟೆಯ, ಕವಾಟದ-ಬಾಗಿಲಿನ, ಹೊರಗೆ-ಸಮೀಪಕ್ಕೆ ತಂದು-ಕರೆದುಕೊಂಡು ಬಂದು, ಬೊಬ್ಬಿರಿದು-ಗಟ್ಟಿಯಾಗಿ ಕೂಗಿ, ಅಲ್ಲಿಂದ-ಆ ಪ್ರದೇಶದಿಂದ, ಎಬ್ಬಿದರು-ಹೊರಡಿಸಿದರು.

ವ್ಯಾ|| (೧) ಹುರಿದುದು ಕಡಲೆ (೧) ಹುರಿಗಡಲೆ...ಹಂಪಲಗಳು [ದ್ವಂ] [೨] ಪಣ್ದುಪಲಂ=ಪಣ್ಪಾಲಂ [ಹಂಪಲಂ] ಸಜ್ಜೀಕರಿಸಿದ ಫಲವೆಂದು ಅರ್ಥ.

೨೭. ಅಧಿಕಬಲ-ಮಹಾಶಕ್ತಿಯುಳ್ಳವನಾದ ಹನುಮ-ಹನುಮಂತನು, ನಸುನಗುತಲಿ-ಕಿರುನಗೆಯನ್ನು ನಗುತ್ತ, ಅಲ್ಲಿಯೇ-ಆ ಸ್ಥಳದಲ್ಲಿಯೇ, ವಿಧಿಯ ಪಾಶವ-ಬ್ರಹ್ಮಪಾಶವನ್ನು (ಬ್ರಹ್ಮಾಸ್ತ್ರವನ್ನು), ಹರಿದು-ಚೂರುಮಾಡಿ, ಕೋಪದ-ರೋಷದ, ಕದವ-ಬಾಗಿಲನ್ನು, ಕಳಚಿದು-ತೆರೆದು, ಕೆಕ್ಕರಿಸಿ-ಕಣ್ಣು ಕೆಂಪಾಗಿಸಿ ನೋಡಿ, [illegible] ಶರೀರವನ್ನು ಕೂಡಿ. [illegible] ಜರಿವಧೆಗೆ-[illegible] ರಕ್ಕಸ, ಹೇಸದೆ-[illegible] ಪರಿಘದಲಿ-[illegible] ಮುಂದಿಗೆಯಿಂದ, ಎಡಬಲದ-ಎಡದಕಡೆಯೂ [illegible]

ಬುಧ ವಿರೋಧಿಗಳನು-ರಾಕ್ಷಸರನ್ನು, ಸಿಧನಗೊಳಿಸಿದನು-ನಾಶಗೊಳಿಸಿದನು. ಅಟ್ಟಿದ-ತನ್ನನ್ನು ಅಟ್ಟಿಕೊಂಡು ಬಂದ, ಅತಿಬಲರ-ಮಹಾಶಕ್ತಿಯುಳ್ಳ ರಾಕ್ಷಸರ ದೆಸೆಯಿಂದ (ಮಹಾಬಲ ರಾಕ್ಷಸರನ್ನು ಬಿಟ್ಟು) ತಿರುಗಿದನು-ಹಿಂದಕ್ಕೆ ನಡೆದನು (ಲಂಕೆಯ ಕಡೆಗೆ ತಿರುಗಿದನು)

ವ್ಯಾ||-ವೈಬುಧ ವಿರೋಧಿಗಳು-ರಾಕ್ಷಸರು.

ತಿದ್ದುವಿಕೆ, ‹‹ತಿರುಗಿದನಟ್ಟಿದತಿಬಲರ, ಎಂದು ತಿದ್ದಿದರೆ ಚೆನ್ನಾಗುತ್ತದೆ.

ಭಾವಾರ್ಥ:—ಕೋಪದ ಕದವ ಕಳಚಿದು-ರೋಷವನ್ನು ತೋರ್ಪಡಿಸಿ.

೨೮. †ಹನುಮಂತನು, ತಿರುಗಿ-ಹಿಂದಕ್ಕೆ ನಡೆದು, ಬಾಲದ-ಪುಚ್ಛದ ಕೊನೆಯ-ತುದಿಯಲ್ಲಿರುವ, ವಹ್ನಿಯ-ಅಗ್ನಿಯನ್ನು, ಸರಿಗೊಳಿಸಿ-ಸರಿಮಾಡಿಕೊಂಡು (ಸ್ಫುಟಮಾಡಿಕೊಂಡು), ಪುಟನೆಗೆದು-ಪುಟಹಾರಿ, ಸುರನರ ಭುಜಂಗಮ ಭುವನದಲ್ಲಣನ = ಸುರ-ದೇವತೆಗಳು; ನರ-ಮನುಷ್ಯರು, ಭುಜಂಗಮ-ಸರ್ಪಗಳು ಇವರ, ಭುವನ-ಲೋಕಗಳನ್ನು (ಅಂದರೆ ಸ್ವರ್ಗ ಭೂಮಿ ಪಾತಾಳಗಳೆಂಬ ತ್ರಿಲೋಕಗಳನ್ನು), ತಲ್ಲಣ-ಭಯಗೊಳಿಸುವನಾದ ರಾವಣನ, ಸರಿಸದಲಿ-ಎದುರಿನಲ್ಲಿ, ನಿಂದನು-ನಿಂತುಕೊಂಡನು ; ಇದು-ಈ, ಮಾರಿ-ಮೃತ್ಯು ದೇವತೆಯು, ಇಂದ್ರಾರಾತಿಯ-ಇಂದ್ರಜಿತ್ತಿನ, ಸರಳ-ಬ್ರಹ್ಮಾಸ್ತ್ರವನ್ನು, ಹೊಯ್ದು-ಬಡಿದು, ಮರಳಿ-ತಿರುಗಿ ಬಂದುದೆ-ಪಟ್ಟಣದೊಳಕ್ಕೆ ಬಂದಿತಲ್ಲಾ ! ಎಂದು, (೧) ಪೌರಜನ-ಪಟ್ಟಣದಲ್ಲಿರುವವರಾದ ಪ್ರಜೆಯು, ಎನುತ-ಹೇಳುತ್ತ, ಉಬ್ಬರದ-ಅಧಿಕವಾದ ಭೀತಿಯಲಿ-ಭಯದಿಂದ (೨) ದೆಸೆದೆಸೆಗೆ-ಎಲ್ಲಾ ದಿಕ್ಕಿಗೂ ಓಡಿದುದು-ಪಲಾಯನ ಮಾಡಿತು.

ವ್ಯಾ||- (೧) ಸಂ. ಪೂ (೨) ವೀಪ್ಸಾರ್ಥದಲ್ಲಿ ದ್ವಿರುಕ್ತಿ

ತಿದ್ದುವಿಕೆ:—ಕೊರಳ ನಿಂದ್ರಾರಾತಿ, ಎಂಬುದನ್ನು ಸರಳ ನಿಂದ್ರಾರಾತಿ ಎಂದು ತಿದ್ದಬಹುದು.

೨೯. ತರಣಿವಂಶಜ-ಸೂರ್ಯಕುಲೋತ್ಪನ್ನನಾದ ಕುಶನೇ ! ಅಥವಾ ಲವನೇ ! ಕೇಳು ; ಸಭೆ-ಆಸ್ಥಾನದಜನವು, ಪವನಜನ-ಹನುಮಂತನ (೧) ಉರಿವಣೆಗೆ-ಬಾಲದ ಬೆಂಕಿ ಕಾಹಿನದೆಸೆಯಿಂದ, ಬೆಚ್ಚಿದುದು-ಭಯಪಟ್ಟಿತು, ಧೈರ್ಯೋತ್ಕರನು = ಧೈರ್ಯ-ಧೀರತನದಿಂದ, ಉತ್ಕರನು-ಮೇಲೆತ್ತಲ್ಪಟ್ಟ ಕೈಯುಳ್ಳವನಾದ (ಅಥವಾ ಧೈರ್ಯಾತಿಶಯವುಳ್ಳ), ವೀರ-ಶೂರನಾದ, ದಶಶಿರನು-ರಾವಣನು ಖಂಡೆಯವ-ಕತ್ತಿಯನ್ನು (ಅಥವಾ ಧೈರ್ಯೋತ್ಕರನು ದಶಶಿರನು, ವೀರಖಂಡೆಯವ-ವೀರ

ಕತ್ತಿಯನ್ನು. ಕೊಂಡನು-ಹಿಡಿದನು; ಎಲೆವಿಭೀಷಣ .ಎಲೈ ವಿಭೀಷಣನೇ ! ನಮಗೆ ನಮ್ಮಲ್ಲಿ, ಉರಿ-ಅಗ್ನಿ ಜ್ವಾಲೆಯು, ಬಲುಹು-ಅಧಿಕವಾಗಿದೆ: ಕೈತಪ್ಪು-ಸ್ವಾಧೀನ ತಪ್ಪುವುದು (ನಮ್ಮ ವಶವಿಾರುವುದು,) ಅಹುದು-ಆಗುವುದು (ಅಂದರೆ ನಮ್ಮ ಬಾಲದಲ್ಲಿ ಉರಿಹೆಚ್ಚಾಗಿರುವುದರಿಂದ ಒಂದುವೇಳೆ ಅದು ನಮ್ಮ ಹತೋಟಿತಪ್ಪಿ ನಿನ್ನ ಮೇಲೂ ವ್ಯಾಪಿಸಬಹುದು) + ಆದುದರಿಂದ, ತೆರಳು-ಆಚೆಗೆ ಹೊರಡು + ಎಂದು, ಕಪಿ-ಹನುಮಂತನು, ಎನುತ-ಹೇಳುತ್ತ (ವಿಭೀಷಣನು ವಿಷ್ಣುಭಕ್ತನಾಗಿ ಸಾತ್ವಿಕ ನಾದುದರಿಂದ ತನ್ನ ಬಾಲದ ಮಹಾಜ್ವಾಲೆಯು ಆತನಿಗೇನಾದರೂ ವ್ಯಾಪಿಸಿ ಅಪಾಯ ಬಂದೀತೆಂಬ ಶಂಕೆಯಿಂದ ಆಚೆಗೆ ಹೊರಡು, ಎಂದು ಆವನಿಗೆ ಹನುಮನು ಹೇಳುತ್ತ) ಕರದ-ಕೈಯಲ್ಲಿ (೧) ಖಂಡೆಯದ-ಕತ್ತಿಯುಳ್ಳ, ಅಸುರನ-ರಾವಣರಾಕ್ಷಸನ, ಆನನಕೆ-ಮುಖಗಳಿಗೆ, ಉರಿಯ-ಬಾಲದ ಜ್ವಾಲೆಯನ್ನು, ಏರಿಸಿದನು-ಹತ್ತಿಸಿದನು (ಹನುಮನು ಖಡ್ಗಪಾಣಿಯಾದ ರಾವಣನ ಮುಖಗಳಿಗೆ ಬಾಲದ ಉರಿಯನ್ನು ಹತ್ತಿಸಿದನು)

ವ್ಯಾ||- (೧) ಉರಿ+ವಣೆ, ಉರಿ ಧಾತುವಿನಮೇಲೆ ಭಾವಾರ್ಥದಲ್ಲಿ ವಣೆ ಪ್ರತ್ಯಯವು (೨) ಇದು ಅಸುರನ ಎಂಬುದಕ್ಕೆ ಷಷ್ಠ್ಯಂತ ವಿಶೇಷಣ|| ತರಣಿವಂಶಜ-ಕುಶ (ಅಥವಾ ಲವ)

ಭಾವಾರ್ಥ—ಕೈ ತಪ್ಪಹುದುಹತೋಟಿ ವಿಾರಿಹೋಗಬಹುದು (ಕೈ ಮುಂಚಿ ಹೋದೀತು)

ತಿದ್ದುವಿಕೆ—'ನಿಮಗೆಲೆ' ಎಂಬುದನ್ನು 'ನಮಗೆಲೆ' ಎಂದು ತಿದ್ದಬಹುದು,

೩೦. ಬಳಿಕ-ಹನುಮನು ರಾವಣನಮುಖಕ್ಕೆ ಉರಿಹೊಗಿಸಿದನಮೇಲೆ. ಅಸುರೇಂದ್ರ-ರಾಕ್ಷಸ ರಾಜನಾದ ರಾವಣನು, ಗಡ್ಡವನು-ಗಡ್ಡವನ್ನು, ಅದಿರಸುತ-ನಡಿಗಿಸುತ್ತ, ಗಗನಕ್ಕೆ-ಅಂತರಿಕ್ಷಕ್ಕೆ, ಹಾಯ್ದನು-ಹಾರಿದನು, ಅಲ್ಲಿ ಅದಲ್ಲಿ-ಆಯಾಸ್ಥಳಗಳಲ್ಲಿ, ಇದ್ದ, ಭಟನಿಕರ-ಆಳುಗಳ ಗುಂಪು, ಹೊದಕೆಗಳ-ಹೊದೆದುಕೊಂಡಿರುವ ಬಟ್ಟೆಗಳನ್ನು, ಬಿಸುಟು-ಬೀಸಾಡಿ, ಓಡಿತು-ಪಲಾಯನ ಮಾಡಿತು, ಕಪಿ-ಹನುಮಂತನು ಉಬ್ಬಿ-ಉತ್ಸಾಹಗೊಂಡು, ಭಟರಸಮೂಹವನ್ನು (೧) ಖಿವಿವೆರಳಲಿ-ಕೈಬೆಟ್ಟಿನಕೊನೆಯಿಂದ, ಇರಿದು-ಚುಚ್ಚಿ, ನಗೆಯ-ಹಾರಿ, ಕೈಗುದಿಗೆಯಲಿ-ಹಸ್ತದಲ್ಲಿರುವ ಲಾಳಮುಂಡಿಗೆಯಿಂದ ಇಟ್ಟನು-ಹೊಡೆದನು, + ಆ ಭಟ ಸಮೂಹವನ್ನು, ಪಡೆದು-ನಿಗ್ರಹಿಸಿ, ಮತ್ತೆ-ತಿರುಗಿ, ದಕ್ಕ ಸರಳಾಯನ-ರಾಕ್ಷಸ ರಾಜನಾದ ರಾವಣನ, ಅರಮನೆಯ-ರಾಜಗೃಹವನ್ನು ಕುರಿತು, ಸುಳಿದನು-ನಡೆದನು

ವ್ಯಾ||- (೧) ಬೆರಳ + ತುದಿ = ತುದಿವೆರಳು (ಕ. ಆ. ಭಾ)

೩೧. (ಮುಖ್ಯಪದ್ಯ):—+ಹನುಮಂತನು, ಬೊಬ್ಬಿರಿದು-ಗರ್ಜಿ ತುದಿವಾಲದ-ಬಾಲದ ತುದಿಯಲ್ಲಿ, ನಿರಿಸಿನ-ವಿನ್ಯಾಸವುಳ್ಳ (ಪ್ರಯೋಗಿಸಿದ) ಆ ಯ-ಬೆಂಕಿಯಲ್ಲಿ, ಉದಿತ ಶಿಖಾಳಿಯನು = ಉದಿತ-ಸ್ಫುಟವಾದ, ಶಿಖಾ-ಉರಿಗ ಆಳಿಯನು-ಶ್ರೇಣಿಯನ್ನು- ಬರ್ಹಿರ್ಮುಖ ವಿರೋಧಿಯ-ರಾಕ್ಷಸನಾದ ರಾವಣ ಭದ್ರಭವನದಲಿ-ಮಂಗಳಕರವಾದ ಮನೆಯಲ್ಲಿ (ಅರಮನೆಯಲ್ಲಿ), ತುರುಕಿದನ ಚಾಚಿದನು (ಅಡಚಿದನು):

(ಬಹು ಮುಖ್ಯಭಾಗ):—ಪುರಜನಂಗಳಿಗೆ-ಪಟ್ಟಣದ ಪ್ರಜೆಗಳಿಗೆ, ಅ ರರಾಯನ-ರಾಕ್ಷಸರಾಜನಾದ ರಾವಣನ, ಮೊರೆಯ-ಕೂಗಿನಿಂದ ಕೂಡಿ ಬಾಯ್ಗಳ-ಬಾಯಿಗಳುಳ್ಳ, ಬಾಯಹೊಯ್ಗಳ-ಬಾಯಿ ಒಡಿದುಕೊಳ್ಳುವಿಕೆಯ ಳ್ಳ, ತೆರೆದ-ತೆಗೆದುಬಿಟ್ಟ, ಮೇಲುದಿನ-ಮೇಲುಸೆರಗುಳ್ಳ, ಅರಸಿಯರ-ರಾಣಿಯ ಕುರುಹಿನ-ಗುರುತಿನ. ಅರಿಕೆ-ತಿಳಿವಳಿಕೆಯು, ಆಯಿತು-ಉಂಟಾಯಿತು

ತಾತ್ಪರ್ಯ.—ಹನುಮಂತನು-ಗರ್ಜಿಸಿ ತನ್ನ ಬಾಲದ ತುದಿಯಲ್ಲ ಇ ಬೆಂಕಿಯ ಉರಿಗಳ ಸಮೂಹವನ್ನು ರಾವಣನ ಮನೋಹರವಾದ ಅರಮ ಯಲ್ಲಿ ಚಾಚಿದನು.

ರಾವಣನ ರಾಣಿಯರು ಬೆಂಕಿಯ ತಾಪವನ್ನು ತಾಳಲಾರದೆ ಬಾಯಿತೆರೆದ ಕೂಗುತ್ತ ಬಾಯಿ ಬಡಿದುಕೊಳ್ಳುತ್ತ ಮೇಲು ಸೆರಗನ್ನು ತೆರೆದುಕೊಂಡು ಅರಮ ನಿಂದ ಹೊರಕ್ಕೆ ಓಡಿಬರಲು, ಯಾವಾಗಲೂ ಯಾರಕಣ್ಣಿಗೂ ಕಾಣಿಸಿಕೊಳ್ಳ ರುವುದರಿಂದ ಯಾರಿಗೂಗುರುತು ತಿಳಿಯದೆ ಇದ್ದ ಅಂತಃಪುರದ ರಾಣಿಯ ನ್ನು ಪಟ್ಟಣದ ಜನಗಳು ಹೊರಗೆ ಕಣ್ಣಾರೆನೋಡಿ ಆ ರಾಣಿಯರ ಗುರ ನ್ನು ತಿಳಿದುಕೊಂಡರು (ರಾವಣನ ಅಂತಃಪುರದ ರಾಣಿಯರೆಲ್ಲ ಬೀದಿಗೆ ಬಂದ ನಾಚಿಕೆಗೇಡಾಯಿತು ಎಂದು ಭಾವವು.)

ತಿದ್ದುವಿಕೆ.—"ಪರಿಜನಂಗಳಿಗೆ" ಎಂದಿದೆ. ಪರಿಜನಂಗಳು ಎಂದರೆ ಸೇವ ರು ಅಸಮಂಜಸಾರ್ಥವಾಗುವುದರಿಂದ "ಪುರಜನಂಗಳಿಗೆ" ಎಂದು ತಿದ್ದ ಹುದು.

೩೨. (ಮುಖ್ಯಪದ್ಯ):—ಅಸಮಬಲ-ಅಸದೃಶ ಶಕ್ತಿಯುಳ್ಳವನಾದ ಹುಮನು, ಮಸಗಿ-ರೇಗಿ, ಮಾರಾಂತ-ಪ್ರತಿಭಟಿಸಿದ (ಎದುರಿಸಿದ) ಅಸುರರಾ ಜನ-ರಾಕ್ಷಸ ರಾಜನಾದ ರಾವಣನ, ಮುಸುಡುಗಳ-ಮುಖಗಳ, [೧] ಮುಂ

ಬಾಗದಲಿ - ಮುಂದುಗಡೆಯಲ್ಲಿ, ಉರಿಯ - ಬಾಲದ ಜ್ವಾಲೆಯನ್ನು ಝಾಡಿಸಿದನು - ಚಾಚಿದನು ; ವಿಮಾನದ - ಚಂದ್ರಶಾಲೆಯು (ಶಿರೋಗೃಹದ) ಅಥವಾ ಅರಮನೆಯ, ಅಗ್ರದಲಿ - ಮೇಲ್ಗಡೆಯಲ್ಲಿ, ಅಭ್ರಮಂಡಲಕೆ - ಮೇಘ ಮಂಡಲದವರೆಗೆ, ವಸತಿ - ಕಟ್ಟಡಗಳು, ಎನಿತು - ಎಷ್ಟು ಇವೆಯೋ, ಅನಿತನು - ಅಷ್ಟನ್ನು, ಮಹಾಗ್ನಿಯ - ಅಧಿಕವಾದ ಬೆಂಕಿಯ, ಬಸಿರೊಳಗೆ - ಹೊಟ್ಟೆಯಲ್ಲಿ, ಬೈಚಿಟ್ಟು - ಅಡಗಿಸಿ, ಬೊಬ್ಬಿರಿದು - ಗರ್ಜಿಸಿ, ಲಾಳವಿಂಡಿಗೆಯ - ಲಾಳ ಮುಂಡಿಗೆಯನ್ನು, ತಿರುಹುತ - ತಿರುಗಿಸುತ್ತ, ತಿರುಗಿದನು - ಹೊರಟನು.

ಭಾವಾರ್ಥ:—ವಿಮಾನದಗ್ರದಲಭ್ರ .... ಬೈಚಿಟ್ಟು - ಶಿರೋಗೃಹದ ಅಥವಾ ಅರಮನೆಯ ಮೇಲ್ಗಡೆ ಮೇಘಮಂಡಲದವರೆಗೆ ಕಟ್ಟಿರುವ ಕಟ್ಟಡಗಳಿಗೆಲ್ಲ ಬೆಂಕಿಯನ್ನು ಚಾಚಿ.

ವ್ಯಾ || (೧) ಬಾಗದ + ಮುಂದು = ಮುಂಬಾಗ (ಕ. ಅ. ಭಾ)

೩೩. ಬಳಿಕ - ಆಮೇಲೆ, ಅಸುರಪತಿ - ರಾವಣನು, ಗಗದಲಿ - ಅಂತರಿಕ್ಷದಲ್ಲಿ (ಅಂತರಿಕ್ಷದವರೆಗೆ ಎತ್ತರವಾದ ತನ್ನ ಮನೆಯ ಅಂತಸ್ತಿನಲ್ಲಿ), ಧಗಧಗಿಪ - ಧಗಧಗ ಎಂದು ಉರಿಯುತ್ತಿರುವ, ಕಿಚ್ಚನು - ಬೆಂಕಿಯನ್ನು, ಕಂಡು - ನೋಡಿ, ಬೆಚ್ಚಿದು - ಗಾಬರಿಬಿದ್ದು, ಬೆಗಡಿನಲಿ - ಭಯದಿಂದ, ಕುಂಭಕರ್ಣನಂ - ತನ್ನ ತಮ್ಮನಾದ ಕುಂಭಕರ್ಣನನ್ನು, ತೆಗೆಯಹೇಳಿದು - ಮನೆಯಿಂದ ಹೊರಗೆ ತೆಗೆದು ಕೊಂಡು ಹೋಗಹೇಳಿ (ಮನೆಯಿಂದ ಆಚೆಗೆ ತೆಗೆದುಕೊಂಡು ಹೋಗಬೇಕೆಂದು) ಬಳಿಸಂದ - ತನ್ನ ಸಮೀಪದಲ್ಲಿದ್ದ, ಅಸುರಸಂಕುಳಕೆ - ರಾಕ್ಷಸರ ಸಮೂಹಕ್ಕೆ, ಬೆಸಸಿದನು - ಅಪ್ಪಣೆಮಾಡಿದನು. (ಕುಂಭಕರ್ಣನು ಹಿಂದೆ ಘೋರವಾದ ತಪಸ್ಸನ್ನು ಮಾಡಿ ಆ ತಪಸ್ಸಿಗೆ ಮೆಚ್ಚಿಬಂದ ಬ್ರಹ್ಮನಿಂದ ಅನೇಕ ಸಹಸ್ರ ವರ್ಷಗಳವರೆಗೆ ಮಲಗಿ ನಿದ್ರೆಮಾಡುವಂತೆ ವರವನ್ನು ಪಡೆದುದರಿಂದ, ಎಚ್ಚರವಿಲ್ಲದೆ ಅವಿಚ್ಛಿನ್ನವಾಗಿ ಮಲಗಿ ನಿದ್ರೆಮಾಡುತ್ತಿರುವ ಕುಂಭಕರ್ಣನಿಗೆ ಹನುಮನ ಬಾಲದ ಬೆಂಕಿಯು ಸೋಕಿ ಅಪಾಯವಾದೀತೆಂಬ ಶಂಕೆಯಿಂದ ರಾವಣನು, ಮಲಗಿದ್ದ ಕುಂಭಕರ್ಣನನ್ನು ಮನೆಯಿಂದಹೊರಗೆ ಸಾಗಿಸಿಕೊಂಡು ಹೋಗುವಂತೆ ತನ್ನ ಬಳಿಯ ರಾಕ್ಷಸರಿಗೆ ಆಜ್ಞೆಮಾಡಿದನು ಎಂದು ತಾತ್ಪರ್ಯ) ವೀಗಡರಕ್ಕಸರು - ಭಾರಿರಾಕ್ಷಸರು, (೧) ಅಗಿವ - ಅಧಿಕವಾದ, ಬೊಬ್ಬೆಯಲಿ - ಗರ್ಜನೆಯಿಂದಕೂಡಿ, (೨) ಅಳಿವಿಗೆ - ಅಗ್ನಿಯಿಂದುಂಟಾಗುವ ಅಪಾಯಕ್ಕೆ, ಅಳುಕದೆ - ಹೆದರದೆ, ಎಕ್ಕತುಳದಲಿ - ಒಕ್ಕಟಾಗಿಸೇರಿ, ಉದಿವಣಿಸಿ - ರೇಗಿ, ಹೊಕ್ಕರು - ಕುಂಭ

ಕರ್ಣನ ನಿದ್ರಾಗೃಹಕ್ಕೆ ನುಗ್ಗಿದರು (ಕುಂಭಕರ್ಣನಿಗೆ ನಿದ್ರೆಗೋಸ್ಕರವೇ ಕಟ್ಟಲ್ಪಟ್ಟಿದ್ದ ಮನೆಗೆ ರಾಕ್ಷಸರು ನುಗ್ಗಿದರು)

ವ್ಯಾ || (೧) ಅಗಿವುದು ಬೊಬ್ಬೆ (೫) ಅಳಿ ಧಾತುವಿನಮೇಲೆ ಭಾವಾರ್ಥದಲ್ಲಿ ವು ಪ್ರತ್ಯಯ

೩೪. ಸರಿಗರಕ್ಕಸಕಿಂಕರರು — ಸರಿಗ—ದಡಿಯರಾದ, ರಕ್ಕಸಕಿಂಕರರು—ರಾಕ್ಷಸಸೇವಕರು, ಬಾಗಿಲುಗಳನು – ಕುಂಭಕರ್ಣನ ನಿದ್ರಾಗೃಹದಕದಗಳನ್ನು, ಮುರಿದು – ಖಂಡಿಸಿ, ಸಂಧಿಸಿ – ಒಳಗೆಸೇರಿ, (೧) ನೆಲನರಿಚಿ – ಸಂಚಾರದ ಪರಾಕುಘೋಷವನ್ನು ಕೂಗಿ, ಹೂಣಿಸಿ – ಪ್ರತಿಜ್ಞೆಮಾಡಿ,(ಹೂಮಿಸಿ – ಹೂಂಕಾರ ಮಾಡಿ), ಅಮರಾಚಲವ – ಮೇರುಪರ್ವತವನ್ನು, ಹೊರುವಂತೆ – ವಹಿಸುವಹಾಗೆ + ಮಲಗಿದ ಕುಂಭಕರ್ಣನನ್ನು, ಹೊತ್ತರು — ಹೊತ್ತುಕೊಂಡರು; + ತೊರೆದ - ಬಿಟ್ಟ, ಜೀವದ - ಪ್ರಾಣವುಳ್ಳ, ಹೆಣನ - ಶವವನ್ನು, ನಗರದ – ಪಟ್ಟಣದ, ಹೊರಗೆ –ಆಚೆಯಲ್ಲಿ, ಬಿಸುಡುವವೊಲು. - ಬೀಸಾಡುವಹಾಗೆ, + ರಾಕ್ಷಸಸೇವಕರು, ರಕ್ಕಸನ - ಮಲಗಿದ ಕುಂಭಕರ್ಣನನ್ನು ,ಖಳರು - ರಾಕ್ಷಸರು, ಮುರಿಗೆಡೆದು – ಅಗ್ನಿಯಿಂದಭಂಗಹೊಂದಿ, ಓಡಿದ — ಓಡಿಹೋದ, ಉಪಲಂಕೆಯಲಿ – ಲಂಕಾಪಟ್ಟಣದ ಸಮೀಪಸ್ಥಳದಲ್ಲಿ, (ಲಂಕೆಯ ಹೊರಗಣಪ್ರದೇಶದಲ್ಲಿ) ಬಿಸುಟರು – ಹಾಕಿದರು.

ಎ|| ಉಪಮಾನ – ಜನರು ತೊರೆದಜೀವದ ಹೆಣನ ನಗರದ ಹೊರಗೆ ಬಿಸುಡುವವೊಲು ಉಪಮೇಯ – ಸರಿಗರಕ್ಕಸಕಿಂಕರರು ಮಲಗಿದರಕ್ಕಸನ ಖಳರುಮುರಿಗೆಡೆದೋಡಿದುಪಲುಪಲಂಕೆಯಲಿ ಬಿಸುಟರು.

35. (ಮುಖ್ಯ):—ಅಸುರೇಂದ್ರನು - ರಾವಣನು. + ಅಗ್ನಿಶಾಪದಿಂದ ಓಡಿ (೧)ಬಿಡುಮುಡಿಯ—ಬಿಚ್ಚಿಹೋಗಿರುವ ಕೇಶಪಾಶವುಳ್ಳ (ಬಿಚ್ಚಿಹೋದ ಕೂದಲಗಂಟುಳ್ಳ), ನೀರುಒರೆವ—ನೀರುಸರಿಯುತ್ತಿರುವ, ಆಲಿಗಳ—ಕಣ್ಣುಗಳುಳ್ಳ, ಕರತಳದ—ಅಂಗೈಯಿಂದಹೊಡಿದ, ಜಠರದ ಹೊಟ್ಟೆಯುಳ್ಳ, ಸೂಳವಿಸ—ಹೊರಡುತ್ತಿರುವ, ಹಾಹಾರವದ—ಹಾಹಾಯೆಂಬಧ್ವನಿಯುಳ್ಳ, ಬಾಲೆಯರ—ತನ್ನಸ್ತ್ರೀಯರ, ಕಳಕಳದ—ಗದ್ದಲದ, ಕಳವಳದ—ಶಬ್ದವನ್ನು, ಕೇಳಿ, ಒಳಿಕೆ—ಅನಂತರದಲ್ಲಿ, ಅಬಲಾಜಾಲವನು — ಅಬಲಾ—ಆ ಸ್ತ್ರೀಯರ, ಜಾಲವನು—ಸಮೂಹವನ್ನು, ಪುಷ್ಪಕದೊಳು ಪುಷ್ಪಕವೆಂಬ ವಿಮಾನದಲ್ಲಿ, ಇರಿಸಿ—ಕುಳ್ಳಿರಿಸಿ, ವಿಶಾಲಬಲನ—ಮಹಾ ಸಾಮ

ರ್ಥ್ಯವುಳ್ಳ, ಅನಿಲಜನ-ಹನುಮಂತನ, ಇದಿರಿನಲಿ-ಮುಂಭಾಗದಲ್ಲಿ, ಗರ್ಜಿಸಿ-ಗರ್ಜನೆಮಾಡಿ, ನಿಂದನು-ನಿಂತುಕೊಂಡನು.

ತಾ|| ರಾವಣನು ಅಗ್ನಿತಾಪದಿಂದ ಓಡಿ ತಲೆಕೂದಲಗಂಟು ಬಿಚ್ಚಿಹೋಗಿ ಕಣ್ಣುಗಳಲ್ಲಿ ನೀರು ಸುರಿಸುತ್ತ ಹೊಟ್ಟೆಯಮೇಲೆ ಕೈಯಿಟ್ಟು ಹಾಹಾ ಎಂದು ಕೂಗುತ್ತಿರುವ ತನ್ನ ಸ್ತ್ರೀಯರ ಗದ್ದಲದ ಧ್ವನಿಯನ್ನು ಕೇಳಿ ಬಳಿಕ ಆ ಸ್ತ್ರೀಯರನ್ನು ಪುಷ್ಪಕ ವಿಮಾನದಲ್ಲಿರಿಸಿ ಕಳುಹಿಸಿ ಶೂರ ಹನುಮನ ಇದಿರಿಗೆ ಗರ್ಜಿಸಿ ನಿಂತನು.

ವಾ|| (೧) ಬಿಟ್ಟುದು ಮುಂದಿ (ಗ)

೩೭. ಕಲಿಹನುಮ-ಶೂರ ಹನುಮಂತನು, ಎಡೆಯೆಡೆಗೆ-ಪ್ರತಿಸ್ಥಳದಲ್ಲೂ (ಆಯಾ ಸ್ಥಳಗಳಲ್ಲಿ), ಮಾರಾಂತು-ಎದುರಿಸಿ, ತರುಬಿದ-ತಡೆದ, ದಡಿಗ ರಕ್ಕಸ ಭಟರ-ಭಾರಿಯಾದ ರಾಕ್ಷಸಯೋಧರುಗಳನ್ನು, ಬೀದಿಯೊಳು-ಬೀದಿಯಲ್ಲಿ, ಅಡಸಿದನು-ತಿವಿದನು, ತತ್ಸದನ ಸದನದೊಳು — ತತ್-ಆ ರಾಕ್ಷಸರ, ಸದನಸದನದೊಳು-ಮನೆಮನೆಯಲ್ಲೂ, ಅನಿಲಬಾಂಧವನ-ಅಗ್ನಿಯನ್ನು, ಬಿಡಿಸುತ-ನುಗ್ಗಿಸುತ್ತ, ಅತಿವೇಗದಲಿ-ಬಹಳ ತ್ವರೆಯಿಂದ, ಕೋಪದ-ರೋಷದ, ಕಿಡಿಯನು-ಬೆಂಕಿಚೂರನ್ನು ಉಗುಳುತ-ಸುರಿಸುತ್ತ, ಇಂದ್ರನ-ದೇವೇಂದ್ರನನ್ನು, ಹಿಡಿದು ತಂದ-ಹಿಡಿದು ತೆಗೆದುಕೊಂಡು ಬಂದ, ನಿಶಾಚರನ-ರಾಕ್ಷಸನ (ಅಂದರೆ ಇಂದ್ರಜಿತ್ತಿನ) ಮನೆಗಾಗಿ-ಮಂದಿರಕ್ಕೋಸ್ಕರ, ಬಂದನು.

ವಿ|| ಇಂದ್ರನ ಹಿಡಿದು ತಂದ ನಿಶಾಚರ—ಇಂದ್ರಜಿತ್ತು.

೩೮. ಈ ಮನೆಯ-ಈ ಮಂದಿರದ, ಒಡೆಯನು-ಯಜಮಾನನು (ಇಂದ್ರಜಿತ್ತು), ಎಮ್ಮನು-ನಮ್ಮನ್ನು, ಕಡಹು-ಬ್ರಹ್ಮಾಸ್ತ್ರದಲ್ಲಿ ಬೀಳಿಸಿ, ಕಟ್ಟಿದನು-ಬಂಧಿಸಿದನು, ನೀವು, ಈ ನಿಳಯವನು-ಈ ಮನೆಯನ್ನು, ಮೆಲ್ಲನೆ-ಸಾವಕಾಶವಾಗಿ, ಸಮಾಧಾನದಲಿ-ಒಂದೇ ಮನಸ್ಸಿನಿಂದ, ಸುಡಿ—ದಹಿಸಿ, ಎಂದು-ಎಂಬುದಾಗಿ, ಹನುಮನು, ಅಗ್ನಿದೇವರಿಗೆ-ಜ್ವಾಲದ ಯಜ್ಞೇಶ್ವರ ದೇವರಿಗೆ, ನುಡಿದು-ಹೇಳಿ, ಅಲ್ಲಿಯೆ-ಆ ಮನೆಯಲ್ಲಿಯೇ, ಪಿಡಿಸಿ-ಅಗ್ನಿಯನ್ನು ಹೊಗಿಸಿ, ಕೈಗಳ-ಹಸ್ತಗಳನ್ನು, ಮುಗಿದನು-ಜೋಡಿಸಿದನು (ಈ ಮನೆಯು ನಿನಗೆ ಸಮರ್ಪಣವಾಗಲಿ ಎಂದು ಕೈಮುಗಿದನು), ತಾ-ತಾನು, ಮೂಗಿನ-ನಾಸಿಕದ, ಉಸಿರನು—ನಿಶ್ವಾಸೋಚ್ಛ್ವಾಸಗಳ ವಾಯುವನ್ನು, ತೊಡಕಿ-ಸಿಗುಲಿ (ಸಂಬಂಧಿಸಿ) ಸಿಕ್ಕಿದ-ಮೂಗಿನ ದ್ವಾರದೊಳಗೆ ಸೇರಿದ, ವೃಷಾರಿಯ-ಇಂದ್ರ ಶತ್ರುವಾದ ಕುಂಭಕ

ರ್ಣನ, ನಿಜನಿಕೇತನಕೆ-ಸ್ವಕೀಯ ಗೃಹಕ್ಕೋಸ್ಕರ, ಮುರಿದನು-ತಿರುಗಿದನು (ಹನುಮನು ಸೀತೆಯನ್ನು ಹುಡುಕುವಾಗ ತಾನು ಮೂಗಿನಉಸಿರಿನಮೂಲಕವಾಗಿ ಮೂಗಿನೊಳಗೆ ಸಿಕ್ಕಿದ ಕುಂಭಕರ್ಣನ ಮನೆಗಾಗಿ ತಿರುಗಿದನು)

ವಿ॥ ಮೂಗಿನುಸಿರನು ತೊಡಕಿತಾ ಸಿಕ್ಕಿದ ವೃಷಾರಿ, ಎಂದಿರಬೇಕು. ಕುಂಭಕರ್ಣನು ಎಂದು ಅರ್ಥವು.

(೩೮). ಈತನಿಗ-ಇವನಾದರೋ! ಎಮ್ಮವನು-ನಮ್ಮನ್ನು, ಮೂಗಿನ-ನಾಸಿಕದ, ಮಾತರಿಶ್ವದ-ಉಸಿರಿನಗಾಳಿಯು, ಬಿರುಬಿನಲಿ-ಅತಿಶಯದಿಂದ, ನೆರೆ-ಬಹಳವಾಗಿ, (೧)ಧಾತುಗೆಡಿಸಿದನು-ಶಕ್ತಿಗುಂದಿಸಿದನು : ಇವನು-ಈತನು, ಜಗಕೆ-ಲೋಕದಲ್ಲಿ, ಅತಿಬಲಂ ಅಲೇ-ಮಹಾಸಾಮರ್ಥ್ಯವುಳ್ಳವನಲ್ಲವೇ ! ಎಂದು-ಎಂದು ಹನುಮನು ಎಂದುಕೊಂಡು, + ನೀನು, ಭೀತಿಗೊಳ್ಳದೆ-ಭಯಪಡದೆ, ಬೆಚ್ಚದೆ-ಗಾಬರಿಬೀಳದೆ, ಅಳುಕದೆ-ದಿಗುಲುಹೊಂದದೆ, ಕಾತರಿಸದೆ-ಕಳವಳಪಡದೆ, ಅನುಮಾನಿಸದೆ-ಸಂದೇಹಗೊಳ್ಳದೆ, ಸಂಪ್ರೀತಿಯಲಿ-ಸಂತೋಷದಿಂದ, ಈ ಮನೆಯನ್ನು, ಕೈಕೊಂಬುದು-ಸ್ವೀಕರಿಸು; ಎಂದು-ಎಂದು ಅಗ್ನಿಗೆಹೇಳಿ, ಶಿಖಿಯ-ಅಗ್ನಿಯನ್ನು, ಒಳಹೊಗಿಸಿದನು-ಕುಂಭಕರ್ಣನ ಮನೆಯೊಳಗೆ ನುಗ್ಗಿಸಿದನು.

ವ್ಯಾ||- (೧) ಧಾತುವಂ + ಕುಂದಿಸಿದನು (ಕ್ರಿ)

೩೯. ಕಲಿಲಲಾಮನು-ಶೂರರಿಗೆ ತಿಲಕಪ್ರಾಯನಾದ (ಅಂದರೆ ಶೂರಶ್ರೇಷ್ಠನಾದ) ಹನುಮನು, ಬಳಿಕ-ಅನಂತರದಲ್ಲಿ, ಶುಕಶಾರ್ದೂಲ.....ನರಾಂತಕರ = ಶುಕ-ಗಿಣಿಯಂತೆ ಮೂಗುಳ್ಳ ಶುಕನು, ಶಾರ್ದೂಲನು, ಸಾರಣ-ಸಂಗೀತ ನಿಪುಣನಾದ ಸಾರಣನು, ಕಲಿಶದಂಷ್ಟ್ರ-ವಜ್ರದಂಷ್ಟ್ರನು, ಸುಪಾರ್ಶ್ವನು, ದುರ್ಮುಖನು, ಖಳಶಿರೋಮಣಿ-ರಾಕ್ಷಸರಿಗೆ ತಲೆಯ ರತ್ನದಂತಿರುವ (ಅಂದರೆ ರಾಕ್ಷಸ ಮುಖ್ಯನಾದ) ಕುಂಭನು, ದೇವಾಂತಕನು, ನರಾಂತಕನು ಇವರ ನಿಳಯನಿಳಯದಲಿ-ಮನೆಮನೆಯಲ್ಲಿ, ಅಗ್ನಿದೇವರ-ಯಜ್ಞೇಶ್ವರಸ್ವಾಮಿಯ, (೧) ಬೆಳೆವಳಿಗೆಗೆ-ಹೆಚ್ಚಿಗೆಗೋಸ್ಕರ (ಹೆಚ್ಚಾದ ದಹನಕ್ಕೋಸ್ಕರ), (೨) ಬೆಸವೇಳ್ದನು ಮತಿಯನ್ನು ಹೇಳಿ (ಆಜ್ಞೆಕೊಟ್ಟು) ಶೂರ್ಪನಖಿಯ-ರಾವಣನ ತಂಗಿಯಾದ ಶೂರ್ಪನಖಿಯೆಂಬವಳ, ನಿಕೇತನಾಂತರಕೆ-ಮನೆಯ ಎಡೆಗೆ, ಬಂದನು.

ವ್ಯಾ||- (೧) ಬೆಳೆ, ಎಂಬ ಧಾತುವಿನ ಭಾವನಾಮರೂಪ (೨) ಬೆಸನಂ+ ಪೇಳ್ದ (ಕ್ರಿ)

೪೦. (ಬಹುಮುಖ್ಯಪದ್ಯ):— + ಇದು, ನಾನು, ಇಷುವ-ಇಕ್ಕುವ ಕಿಚ್ಚು-ಬೆಂಕಿಯು, ಅಲ್ಲ-ಅಲ್ಲವು; ಮೊದಲು-ಪೂರ್ವದಲ್ಲಿ, ಈಕ್ಕೆಸೆ-ಈಮುಂಡೆ

ಯು (ಈ ಶೂರ್ಪನಖಿಯು), ಇಕ್ಕಿದ-ಹಾಕಿದ, ಕಿಚ್ಚು-ಬೆಂಕಿಯು, + ಈ ಬೆಂಕಿಯು (೧) ಇವಳಿಂದ-ಈಮುಂಡೆಯಿಂದ (೨) ಪೂರ್ವಕೃತ್ಯದಲಿ-ಹಿಂದೆ ರಾವಣನಿಗೆ ಮಾಡಿದ ದುರ್ಬೋಧನೆಯ ಕಾರ್ಯದಿಂದ, ವೈರಿದಶಾನನಂಗೆ-ಶತ್ರುವಾದ ರಾವಣನಿಗೋಸ್ಕರ, ಬಂದುದು-ಪ್ರಾಪ್ತವಾಯಿತು, + ನೀವು, ಈನರಕಿರಕ್ಕಸಿಯ ಈ, ನರಕಿ-ಪ್ರಾಣಿಹಿಂಸಕಳಾದ, ರಕ್ಕಸಿಯ-ರಾಕ್ಷಸಿಯ, (ಈ ಶೂರ್ಪನಖಿಯ) ನೆಸೆಗೆ ಸ್ಥಳವನ್ನು (ಮನೆಯನ್ನು), ಅನುಮಾನಿಸದೆ-ಸಂದೇಹಪಡದೆ(೩) ಭವದುದರತೀವ್ರ ಕೃಶಾನುವಿಂಗೆ = ಭವತ್-ನಿಮ್ಮ, ಉದರ-ಗರ್ಭದಲ್ಲಿರುವ, ತೀವ್ರ-ತೀಕ್ಷ್ಣವಾದ, ಕೃಶಾನುವಿಂಗೆ-ಉರಿಗೆ, ಆಹುತಿಯ-ಹೋಮವಸ್ತುವನ್ನಾಗಿ, ಕೊಡಿ, ಎಂದು-ಎಂದುಹೇಳಿ + ಹನುಮನು, ಬಾಲದ ಅಗ್ನಿಗೆ, ಕೈಮುಗಿದ-ಹಸ್ತಗಳನ್ನು ಜೋಡಿಸಿದನು.

ಭಾವಾರ್ಥ:-ಭವದುದರತೀವ್ರಕೃಶಾನುವಿಂಗಾಹುತಿಯಕೊಡಿ- ನಿಮ್ಮೊಳಗಿರುವ ತೀಕ್ಷ್ಣಜ್ವಾಲೆಯಿಂದ ಸುಟ್ಟುಬಿಡಿ.

ತಾತ್ಪರ್ಯ.—ಇದು ಈಗ ನಾನು ಹೊಸದಾಗಿ ಇಕ್ಕುವ ಬೆಂಕಿಯಲ್ಲ. ಈ ಮುಂಡೆಯು ಮೊದಲೇ ಇಕ್ಕಿದ ಬೆಂಕಿಯಾಗಿದೆ. ಏಕೆಂದರೆ,—ಪೂರ್ವದಲ್ಲಿ ಈ ಬೆಂಕಿಯು ಇವಳಿಂದಲೇ ಇವಳು ಪೂರ್ವದಲ್ಲಿ ರಾವಣನಿಗೆ ಮಾಡಿದ ದುರ್ಬೋಧನೆಯ ಕಾರ್ಯದಿಂದ ಶತ್ರುವಾದ ರಾವಣನಿಗೋಸ್ಕರ ಪ್ರಾಪ್ತವಾಯಿತು (ಅಂದರೆ ಇವಳು ಹಿಂದೆ ದುರ್ಬುದ್ಧಿಯಿಂದ ಲಕ್ಷ್ಮಣನಿಂದ ಕಿವಿ ಮೂಗು ಕೊಯಿಸಿಕೊಂಡಮೇಲೆ ಸೀತಾಪಹಾರವನ್ನು ಮಾಡೆಂದು ರಾವಣನಿಗೆ ಮಾಡಿದ ದುರ್ಬೋಧನೆಯ ಕಾರ್ಯದಿಂದ ಸೀತಾಪಹಾರಮಾಡಿದ ಶತ್ರುವಾದ ರಾವಣನಿಗೋಸ್ಕರ ನಾನು ಇಲ್ಲಿ ಬೆಂಕಿಯನ್ನು ಇಕ್ಕ ಬೇಕಾಯಿತು. ಆದುದರಿಂದ ಈ ಬೆಂಕಿಯು ಇವಳಿಂದಲೇ ಇವಳ ಪೂರ್ವ ಕೃತ್ಯದಿಂದ ರಾವಣನಿಗೋಸ್ಕರ ಪ್ರಾಪ್ತವಾಯಿತು ಎಂದು ಭಾವ), ಹೀಗೆ ಅನರ್ಥಕ್ಕೆ ಕಾರಣ ಭೂತೆಯಾದ ಪ್ರಾಣಿಹಿಂಸಕಳಾದ ಇವಳ ಮನೆಯನ್ನು ನೀವು ನಿಮ್ಮೊಳಗಿರುವ ಉರಿಯಿಂದ ಸುಟ್ಟುಬಿಡಿ ಎಂದು ಹನುಮನು ಬಾಲದ ಅಗ್ನಿದೇವರಿಗೆ ಹೇಳಿ ಕೈಮುಗಿದನು.

ವ್ಯಾ|| (೧) ಹೇತ್ವರ್ಥದಲ್ಲಿ ತೃತೀಯಾ ವಿಭಕ್ತಿ (೨) ಕರಣಾರ್ಥದಲ್ಲಿ ತೃತೀಯೆ (೩) ಭವತ್ + ಉದರಂ (ಷ. ತ) ತೀವ್ರವಾದ ಕೃಶಾನು (ವಿ.ಪೂ.) ಭವದುದರ...ಕೃಶಾನು (ಷ. ತ.)

೪೧. + ಹನುಮಂತನು, ತಿರುಗಿ-ಸಂಚರಿಸಿ, ಮನೆಮನೆಗೆ – ರಾಕ್ಷಸರ

ಒಂದೊಂದು ಮನೆಗೂ, ಅಗ್ನಿದೇವರನು-ಯಜ್ಞೇಶ್ವರ ಸ್ವಾಮಿಯನ್ನು, ಇರಿಸುತ-ಇಕ್ಕುತ್ತ, ಅತಿಕಾಯ ಪ್ರಹಸ್ತರ — ಅತಿಕಾಯ-ರಾವಣನ ಮಗನಾದ ಅತಿಕಾಯನು, ಪ್ರಹಸ್ತರ-ಮಂತ್ರಿಯಾದ ಪ್ರಹಸ್ತನು ಇವರನ್ನು, ಕರೆದು-ಕೂಗಿ, ಹೊರವಡಿಸುತ್ತ-ಮನೆಯಿಂದ ಹೊರಗೆ ಕಳುಹಿಸುತ್ತ (ಅತಿಕಾಯನು ಪ್ರಹಸ್ತನು ಇವರಿಬ್ಬರೂ ವಿಷ್ಣುಭಕ್ತರಾದ ಧರ್ಮಾತ್ಮರಾದುದರಿಂದ ಅಗ್ನಿಯಿಂದ ಅವರಿಗೆ ಅಪಾಯವಾಗದಿರಲೆಂದು ಅವರನ್ನು ಮನೆಯಿಂದ ಹೊರಗೆ ಕಳುಹಿಸುತ್ತ), ಪರಮಪಿತೃಸಖನ — ಪರಮಶ್ರೇಷ್ಠನಾದ, ಪಿತೃ-ತನ್ನ ತಂದೆಯಾದ ವಾಯುವಿಗೆ, ಸಖನ-ಸ್ನೇಹಿತನಾದ ಅಗ್ನಿಯನ್ನು, + ಅವರಮನೆಗೆ, ಹೊಗಿಸುತ-ನುಗ್ಗಿಸುತ್ತ, ಮುರಿದು-ಹಿಂದಿರುಗಿ, ಧನಂಜಯನ-ಅಗ್ನಿಗೆ, ಧೂಮ್ರಾಕ್ಷನ, ನಿಕುಂಭನ-ಮಂತ್ರಿಯಾದ ನಿಕುಂಭ ರಾಕ್ಷಸನ, ದುರುಳ ಯುದ್ಧೋನ್ಮತ್ತ ಖಳ ದುರ್ಮರುಷಣರ — ದುರುಳ-ದುಷ್ಟನಾದ, ಯುದ್ಧೋನ್ಮತ್ತನು, ಖಳ-ರಾಕ್ಷಸನಾದ, ದುರ್ಮರ್ಷಣನು ಇವರ, ದುಡುಕನವ-ಅವಲೋಕವನ್ನು, ಮಾಡಿಸಿದನು.

ಭಾವಾರ್ಥ;— ಧೂಮ್ರಾಕ್ಷನ ನಿಕುಂಭನ. . . ಧನಂಜಯನ-ಧೂಮ್ರಾಕ್ಷನು ನಿಕುಂಭನು. . . ದುರ್ಮರ್ಷಣನು ಇವರಿಗೆ ಅಗ್ನಿಯನ್ನು ಚಾಚಿದನು.

೪೨. + ಹನುಮನು, ಮಿಕ್ಕು-ಬಹಳವಾಗಿ, ಮುಂಬರಿವರಿದು-ಮುಂದಕ್ಕೆ ಹೋಗಿ, ಕಿಡಿಸಿಡಿದು-ಕಿಡಿಯೊಡನೆ ಹಾರಿ, ಇಕ್ಕೆಲದ-ಉಭಯ ಪಾರ್ಶ್ವಗಳಲ್ಲಿರುವ, ಕೇರಿಗಳ-ಮನೆಗಳ ಶ್ರೇಣಿಗಳನ್ನು, + ಅಗ್ನಿಗೆ, ನೀಡಿದನು-ಚಾಚಿದನು, ಅರ್ಕಕೇತುವ — ಅರ್ಕಕೇತುವೆಂಬವನ, ಅಕಂಪನನ-ಅಕಂಪನನೆಂಬ ರಾಕ್ಷಸನ ಸದನಕ್ಕೆ-ಮನೆಗಳಿಗೆ, ಲಂಘಿಸಿ-ಹಾರಿ, ಬಾಲದ-ಪುಚ್ಛದ, ಶಿಖಿಯು-ಅಗ್ನಿಯು, ಸೀವರಿಸುವ-ಧಗಧಗಿಸುವ, ಶಿಖಾವಳಿಯ — ಶಿಖಾ-ಜ್ವಾಲೆಗಳ, ಆವಳಿಯ-ಶ್ರೇಣಿಯನ್ನು, ಇಕ್ಕಿ-ಇಟ್ಟು, ಗಾಳುನೇಳಿನನ-ಸಮಾಪದಲ್ಲಿ ದೊಂಬಿ ಮಾಡುವವರಾದ, ರಕ್ಕಸರ-ರಾಕ್ಷಸರ, ಬೀಡಿನಲಿ-ಮನೆಗಳಲ್ಲಿ, ಉರಿಯ-ಜ್ವಾಲೆಗಳನ್ನು, ಪಾಳೆಯವ ಬಿಡಿಸಿದನು-ನೆಲೆಗೊಳಿಸಿದನು.

೪೩. (ಮುಖ್ಯಪದ್ಯ):— ರಾಯಕುವರಶಿಖಾಮಣಿಯೆ — ರಾಯಕುವರ-ರಾಜಪುತ್ರರಿಗೆ, ಶಿಖಾಮಣಿಯೆ-ತಲೆಯ ರತ್ನದಂತಿರುವ ಕುಶನೇ! (ಅಥವಾ ಲವನೇ!) ಕೇಳು ; ಆ ಯಶಸ್ಸಂಭೃತನ — ಆ, ಯಶಃ-ಒಳ್ಳೆಯ ಕೀರ್ತಿಯಿಂದ, ಸಂಭೃತನ-ಪೂರ್ಣನಾದ ಹನುಮನ, ಸಂಭ್ರಮದ-ಸಂಚಾರದಿಂದ ಕೂಡಿದ, ಆಯತವಂ-ಆಕಾರವನ್ನು, ಮನೆಂಬೆನ್ನೆ-ಏನು ಹೇಳಲಿ? (ಅಂದರೆ ಅತ್ಯದ್ಭುತ)

ಶ ನಿಶಿಪ-ಪತ್ರಸಂತ । ಸಮಾಂದೀನ-ಗಿದಪೋಶ್ವರನೇ: ವಿಭೀಷಣನ-ಭವನಂಳಗ ನಾದ ಜನುಮನ, ತನ-ಶರೀರವು, ಅಗ್ನಿಗೆ-ಬೆಂಕಿಯಿಂದ ಕೂಡಿ, ಈ, ಅಶೇಷದ-ಸಮಸ್ತವಾದ, ಭುವನದ ಅಳಿಎನ-ಲೋಕಗಳನ್ನು ನಾಶಮಾಡುವುದಾದ, ವಾಯು ನಾಂಧನ ಭಾಳನೇತ್ರನ —ವಾಯು ಬಾಂಧವ-ಅಗ್ನಿಯೇ. ಭಾಳ—ಹಣೆಯ, ನೇತ್ರನ-ಕಣ್ಣಿನಲ್ಲಿ ಉಳ್ಳವನಾದ ಈಶ್ವರನ, ಕಾಯದಂತಿರೆ-ಶರೀರದ ಹಾಗೆ (ಆಕಾರದಹಾಗೆ), ಮೆರದುದು—ಪ್ರಕಾಶಿಸಿತು.

ವಿ॥ ಆ ಯಶಸ್ಸಂಭೃತನ ಸಂಭ್ರಮದಾಯತ್ತವನೇನೆಂಬೆಸ್ಸೆ — ಇದನ್ನು ಸಮರ್ಥಿಸುವುದು ಹೇಗೆಂದರೆ:—ಆ ಹನುಮನ ಶರೀರವು ಅಗ್ನಿಯಿಂದ ಕೂಡಿ, ಈ ಸಮಸ್ತ ಲೋಕಗಳನ್ನು ನಾಶಮಾಡುವ ಅಗ್ನಿಯನ್ನು ಹಣೆಗಣ್ಣಿನಲ್ಲಿ ಹೊಂದಿ ರುವ ಈಶ್ವರನ ಆಕಾರದಂತೆ ಪ್ರಕಾಶಿಸಿತು. ಆದುದರಿಂದ ಆ ಕೀರ್ತಿಪೂರ್ಣ ನಾದ ಹನುಮನ ಸಂಚಾರದಿಂದ ಕೂಡಿದ ಆಕಾರವನ್ನು ಏನು ಹೇಳಲಿ?

ತಿದ್ದುವಿಕೆ:—'ಮೆರೆದ ವಸ್ನಿಗೆ ಕಲಿ' ಎಂಬುದನ್ನು 'ಮೆರೆದುದಗ್ನಿಗೆತನು', ಎಂದು ತಿದ್ದಬಹುದು.

೪೪. ಹನುಮ – ಹನುಮಂತನು, ಕಂಡು – ವಿಭೀಷಣನ ಮನೆಯನ್ನು ನೋಡಿ, ವೈಷ್ಣವರ – ವಿಷ್ಣುಭಕ್ತರಿಗೆ ಅರಸನ – ಅಧಿಪತಿಯಾದ ವಿಭೀಷಣನ ಅಂದರೆ ವಿಷ್ಣುಭಕ್ತಶ್ರೇಷ್ಠನಾದ ವಿಭೀಷಣನ,) ಆಲಯದ – ಮನೆಯ, ಇದಿ ರನಲಿ – ಮುಂಭಾಗದಲ್ಲಿ, ಗೆರೆಯ – ಗೀಟನ್ನು (ರೇಖೆಯನ್ನು), ಬರೆದನು, ಎಳೆಸಿದನು (ಅಂದರೆ ಈ ವಿಭೀಷಣನು ವಿಷ್ಣುಭಕ್ತ ಶ್ರೇಷ್ಠನಾದುದರಿಂದ ಇವನ ಈ ಮನೆಗೆ ಪ್ರವೇಶಿಸಬೇಡವೆಂದು ಅಗ್ನಿಗೆ ತಿಳಿಯ ಸೂಚನೆಯಾಗಿ ಅವನ ಮನೆಯ ಮುಂದೆ ಅಡ್ಡಗೆರೆಯನ್ನು ಎಳೆದನು ಎಂದು ಭಾವ), ಇದು, ನಿಮ್ಮ, ಉರಿ ವಣಿಗೆ – ದಹನಕ್ಕೆ, ಠಾವು – ಆಸ್ಪದವಾದುದು, ಅಲ್ಲ; (ಇದು ನೀವು ಸುಡ ಬಹುದಾದ್ದಲ್ಲ), ನೀವು, ವಿಭೀಷಣನ, ಅಂಮನೆಯ – ರಾಜಗೃಹವನ್ನು, ಹೊಗ ದಿರಿ – ಪ್ರವೇಶ ಮಾಡಬೇಡಿರಿ; ಎಂದು – ಎಂದುಹೇಳಿ, ವಹ್ನಿಗೆ – ಅಗ್ನಿಗೆ, ಕರವ-ಕೈಗಳನ್ನು, ಮುಗಿದು – ಜೋಡಿಸಿಕೊಂಡು, ಬದಿವಾಲದ – ಬಾಲದ ಕೊನೆಯ, ಅಗ್ನಿಯನು – ಬೆಂಕಿಯನ್ನು, ಉರಿಗೊಳಿಸಿ – ಉರಿಮಾಡಿ, ಅಲ್ಲಿಂದ, ಮುಂದಕೆ-ಬಡೆಕಡೆಗೆ, ತಿರುಗಿದನು – ಚರಿಸಿದನು.

೪೫. + ಹನುಮಂತನು (ಗ) ಕಟ್ಟಣಿಯರದಿ – ಮಹಾತಿಶಯದಿಂದ, ಕೈಚಪ್ಪಳೆಯ – ಕೈಚಪ್ಪಾಳೆಯನ್ನು, ಕಿಪ್ಪರಿಯುತ – ಬಡಿಯುತ್ತ, ಕಾಣಿಕೆಯಾಣಿ

ಒಂದೊಂದು ಮನೆಗೂ, ಅಗ್ನಿದೇವರನು-ಯಜ್ಞೇಶ್ವರ ಸ್ವಾಮಿಯನ್ನು, ಇರಿಸುತ-ಇಕ್ಕುತ್ತ, ಅತಿಕಾಯ ಪ್ರಹಸ್ತರ = ಅತಿಕಾಯ-ರಾವಣನ ಮಗನಾದ ಅತಿಕಾಯನು, ಪ್ರಹಸ್ತರ-ಮಂತ್ರಿಯಾದ ಪ್ರಹಸ್ತನು ಇವರನ್ನು, ಕರೆದು-ಕೂಗಿ, ಹೊರವಡಿಸುತ್ತ-ಮನೆಯಿಂದ ಹೊರಗೆ ಕಳುಹಿಸುತ್ತ (ಅತಿಕಾಯನು ಪ್ರಹಸ್ತನು ಇವರಿಬ್ಬರೂ ವಿಷ್ಣುಭಕ್ತರಾದ ಧರ್ಮಾತ್ಮರಾದುದರಿಂದ ಅಗ್ನಿಯಿಂದ ಅವರಿಗೆ ಅಪಾಯವಾಗದಿರಲೆಂದು ಅವರನ್ನು ಮನೆಯಿಂದ ಹೊರಗೆ ಕಳುಹಿಸುತ್ತ); ಪರಮಪಿತೃಸಖನ = ಪರಮಶ್ರೇಷ್ಠನಾದ, ಪಿತೃ-ತನ್ನ ತಂದೆಯಾದ ವಾಯುವಿಗೆ, ಸಖನ-ಸ್ನೇಹಿತನಾದ ಅಗ್ನಿಯನ್ನು, + ಅವರಮನೆಗೆ, ಹೊಗಿಸುತ-ನುಗ್ಗಿಸುತ್ತ, ಮುರಿದು-ಹಿಂದಿರುಗಿ, ಧನಂಜಯನ-ಅಗ್ನಿಗೆ, ಧೂಮ್ರಾಕ್ಷನ, ನಿಕುಂಭನ-ಮಂತ್ರಿಯಾದ ನಿಕುಂಭ ರಾಕ್ಷಸನ, ದುರುಳ ಯುದ್ಧೋನ್ಮತ್ತ ಖಳ ದುರ್ಧರುಷಣರ = ದುರುಳ-ದುಷ್ಟನಾದ, ಯುದ್ಧೋನ್ಮತ್ತನು, ಖಳ-ರಾಕ್ಷಸನಾದ, ದುರ್ಧರ್ಷಣನು ಇವರ, ದುರುಶನವ-ಅವಲೋಕನವನ್ನು, ಮಾಡಿಸಿದನು.

ಭಾವಾರ್ಥ;—ಧೂಮ್ರಾಕ್ಷನ ನಿಕುಂಭನ..ಧನಂಜಯನ-ಧೂಮ್ರಾಕ್ಷನು ನಿಕುಂಭನು..ದುರ್ಧರ್ಷಣನು ಇವರಿಗೆ ಅಗ್ನಿಯನ್ನು ತಾಕಿಸಿದನು.

೪೭. + ಹನುಮನು, ಮಿಕ್ಕು-ಬಹಳವಾಗಿ, ಮುಂಬರಿವರಿದು-ಮುಂದಕ್ಕೆ ಹೋಗಿ, ಕಿಡಿಸಿಡಿದು-ಕಿಡಿಯೊಡನೆ ಹಾರಿ, ಇಕ್ಕೆಲದ-ಉಭಯ ಪಾರ್ಶ್ವಗಳಲ್ಲಿರುವ, ಕೇರಿಗಳ-ಮನೆಗಳ ಶ್ರೇಣಿಗಳನ್ನು, + ಅಗ್ನಿಗೆ, ನೀಡಿದನು-ಬಾಚಿದನು, ಅರ್ಕಕೇತುವ — ಅರ್ಕಕೇತುವೆಂಬವನ, ಅಕಂಪನನ-ಅಕಂಪನನೆಂಬ ರಾಕ್ಷಸನ ಸದನಕ್ಕೆ-ಮನೆಗಳಿಗೆ, ಲಂಘಿಸಿ-ಹಾರಿ, ಬಾಲದ-ಪುಚ್ಛದ, ಶಿಖಿಯ-ಅಗ್ನಿಯ, ಸೀವರಿಸುವ-ಧಗಧಗಿಸುವ, ಶಿಖಾವಳಿಯ = ಶಿಖಾ-ಜ್ವಾಲೆಗಳ, ಆವಳಿಯ-ಶ್ರೇಣಿಯನ್ನು, ಇಕ್ಕಿ-ಇಟ್ಟು, ಗಾಳುವೇಳಿನನ-ಸಮೀಪದಲ್ಲಿ ಡೊಂಬಿ ಮಾಡುವವರಾದ, ರಕ್ಕಸರ-ರಾಕ್ಷಸರ, ಬೀಡಿನಲಿ-ಮನೆಗಳಲ್ಲಿ, ಉರಿಯ-ಜ್ವಾಲೆಗಳನ್ನು, ಮಾಳೆಯುವ ಬಿಡಿಸಿದನು-ನೆಲೆಗೊಳಿಸಿದನು.

೪೮. (ಮುಖ್ಯಪದ್ಯ):— ರಾಯಕುವರಶಿಖಾಮಣಿಯೆ = ರಾಯಕುವರ-ರಾಜಪುತ್ರರಿಗೆ ಶಿಖಾಮಣಿಯೆ-ತಲೆಯ ರತ್ನದಂತಿರುವ ಕುಶನೇ! (ಅಥವಾ ಲವನೇ!) ಕೇಳು ; ಆ ಯಶಸ್ಸಂಭೃತನ = ಆ, ಯಶಃ-ಒಳ್ಳೆಯ ಕೀರ್ತಿಯಿಂದ, ಸಂಭೃತನ-ಪೂರ್ಣನಾದ ಹನುಮನ, ಸಂಭ್ರಮದ-ಸಂಚಾರದಿಂದ ಕೂಡಿದ, ಅಗುಳವಂ-ಆಕಾರವನ್ನು, ಏನೆಂಬೆನ್ಯ-ಏನು ಹೇಳಲಿ? (ಅಂದರೆ ಅತ್ಯದ್ಭುತ)

ತಿಪನೇನ-ಪತಿಗಳಿರಾ ! ಸಮೀರಣೇ-ಪವನನ ಸಖನೋತ್ಸರನೇ: ವಿಭೀಷಣನ-ಧ್ವಜಂಶಕ ನಾದ ಹನುಮನ, ತನು-ಶರೀರವು, ಅಗ್ನಿಗೆ-ಬೆಂಕಿಯಿಂದ ಕೂಡಿ, ಈ, ಅಶೇಷದ-ಸಮಸ್ತವಾದ, ಭುವನದ ಅಳಿವಿನ-ಲೋಕಗಳನ್ನು ನಾಶಮಾಡುವುದಾದ, ವಾಯು ಬಾಂಧವ ಭಾಳನೇತ್ರನ — ವಾಯು ಬಾಂಧವ-ಅಗ್ನಿಯೇ. ಭಾಳ—ಹಣೆಯ, ನೇತ್ರನ-ಕಣ್ಣಿನಲ್ಲಿ ಉಳ್ಳವನಾದ ಈಶ್ವರನ, ಕಾಯದಂತಿರೆ-ಶರೀರದ ಹಾಗೆ (ಆಕಾರದಹಾಗೆ), ಮೆರೆದುದು—ಪ್ರಕಾಶಿಸಿತು.

೪೩. ಆ ಯಶಸ್ಸಂಭೃತನ ಸಂಭ್ರಮದಾಯತವನೇನೆಂಬೆನ್ನೈ — ಇದನ್ನು ಸಮರ್ಥಿಸುವುದು ಹೇಗೆಂದರೆ:— ಆ ಹನುಮಂತನ ಶರೀರವು ಅಗ್ನಿಯಿಂದ ಕೂಡಿ, ಈ ಸಮಸ್ತ ಲೋಕಗಳನ್ನು ನಾಶಮಾಡುವ ಅಗ್ನಿಯನ್ನು ಹಣೆಗಣ್ಣಿನಲ್ಲಿ ಹೊಂದಿರುವ ಈಶ್ವರನ ಆಕಾರದಂತೆ ಪ್ರಕಾಶಿಸಿತು. ಆದುದರಿಂದ ಆ ಕೀರ್ತಿಪೂರ್ಣನಾದ ಹನುಮನ ಸಡಗರದಿಂದ ಕೂಡಿದ ಆಕಾರವನ್ನು ಏನು ಹೇಳಲಿ?

ತಿದ್ದುಪಡಿ:— ಮೆರೆದ ವಹ್ನಿಗೆ ಕಲಿ ಎಂಬುದನ್ನು ಮೆರೆದುದಗ್ನಿಗೆತನು, ಎಂದು ತಿದ್ದಬಹುದು.

೪೪. ಹನುಮ — ಹನುಮಂತನು, ಕಂಡು — ವಿಭೀಷಣನ ಮನೆಯನ್ನು ನೋಡಿ, ವೈಷ್ಣವರ — ವಿಷ್ಣುಭಕ್ತರಿಗೆ ಅರಸನ — ಅಧಿಪತಿಯಾದ ವಿಭೀಷಣನ (ಅಂದರೆ ವಿಷ್ಣುಭಕ್ತಶ್ರೇಷ್ಠನಾದ ವಿಭೀಷಣನ,) ಆಲಯದ — ಮನೆಯ, ಇದಿರಿನಲಿ — ಮುಂಭಾಗದಲ್ಲಿ, ಗೆರೆಯ — ಗೀಟನ್ನು (ರೇಖೆಯನ್ನು), ಬರೆದನು. ಲಿಖಿಸಿದನು (ಅಂದರೆ ಈ ವಿಭೀಷಣನು ವಿಷ್ಣುಭಕ್ತ ಶ್ರೇಷ್ಠನಾದುದರಿಂದ ಇವನ ಈ ಮನೆಗೆ ಪ್ರವೇಶಿಸಬೇಡವೆಂದು ಅಗ್ನಿಗೆ ತಿಳಿಯ ಸೂಚನೆಯಾಗಿ ಅವನ ಮನೆಯ ಮುಂದೆ ಅಡ್ಡಗೆರೆಯನ್ನು ಬರೆದನು ಎಂದು ಭಾವ), ಇದು, ನಿಮ್ಮ, ಉರಿವಳಿಗೆ — ದಹನಕ್ಕೆ, ಠಾವು — ಆಸ್ಪದವಾದುದು, ಅಲ್ಲ; (ಇದು ನೀವು ಸುಡತಕ್ಕದ್ದಲ್ಲ), ನೀವು, ವಿಭೀಷಣನ, ಅರಮನೆಯ — ರಾಜಗೃಹವನ್ನು, ಹೊಗದಿರಿ — ಪ್ರವೇಶ ಮಾಡಬೇಡಿ; ಎಂದು — ಎಂದುಹೇಳಿ, ವಹ್ನಿಗೆ — ಅಗ್ನಿಗೆ, ಕರವ-ಕೈಗಳನ್ನು, ಮುಗಿದು — ಜೋಡಿಸಿಕೊಂಡು, ಬದಿವಾಲದ — ಬಾಲದ ಕೊನೆಯ, ಅಗ್ನಿಯನು — ಬೆಂಕಿಯನ್ನು, ಉರಿಗೊಳಿಸಿ — ಉರಿಮಾಡಿ, ಅಲ್ಲಿಂದ, ಮುಂದಕೆ-ಆಚೆಕಡೆಗೆ, ತಿರುಗಿದನು — ಚರಿಸಿದನು.

೪೫. + ಹನುಮಂತನು (?) ಕಟ್ಟಣಿಯರದಿ — ಮಹಾತಿಶಯದಿಂದ, ಕೈಚಪ್ಪಳೆಯ [illegible]

ದು - ಬಹಳವಾಗಿ ಕುಣಿದು, ಆಡಿದ - ಆಟವಾಡಿದ, (೨) ಕಣ್ಣುಗುರುಹಿನ-ನೇತ್ರದ ಗುರುತುಳ್ಳ, ಅಸುರರ-ರಾಕ್ಷಸರನ್ನು, ಪಚಾರಿಸಿ - ತಿರಸ್ಕರಿಸಿ, ಚಾಲದಲಿ-ಪುಚ್ಛದಿಂದ, ತರುಬಿ - ತಡೆದು (ಅಥವಾ ಅಟ್ಟಿ) ಚಪ್ಪಾಳೆ ಬಡಿದು ಕುಣಿದಾಡಿದವನಿವನೆಂದು ಕಣ್ಣಿನಿಂದ ಗುರುತಿಟ್ಟುಕೊಂಡಿದ್ದ ರಾಕ್ಷಸರನ್ನು ಬಾಲದಿಂದ ತಡೆದು, ಕಣಜ...ಗಣದಿ = ಕಣಜ-ಧಾನ್ಯಗಳ ಉಗ್ರಾಣವು, ಕಮ್ಮಟ - ಕಬ್ಬಿಣ ಸಾಮಾನು, ಶಸ್ತ್ರ - ಆಯುಧಗಳು ಇವುಗಳ, ಶಾಲಾ - ಮನೆಗಳ, ಗಣದಿ - ಸಮೂಹದಲ್ಲೂ, ವಸ್ತ್ರಸುರತ್ನ ಸದ್ಭೂಷಣದ=ವಸ್ತ್ರ - ಬಟ್ಟೆಗಳು, ಸುರತ್ನ - ಒಳ್ಳೆಯ ಮಣಿಗಳು, ಸತ್ - ಸಮೀಚೀನವಾದ, ಭೂಷಣದ - ಆಭರಣಗಳು ಇವುಗಳ, ಕೋಶಂಗಳಲಿ - ಬಂಡಾರಗಳಲ್ಲಿ, ಅನಿಲಬಾಂಧವನ - ಅಗ್ನಿಯನ್ನು, ಹೊಗಿಸಿದನು - ನುಗ್ಗಿಸಿದನು.

ವ್ಯಾ||— (೧) ಕಡಿದು + ಅಣಿಯರಂ = ಕಟ್ಟಣಿಯರಂ (ಕ. ವಿ. ಪೂ.)

(೨) ಕಣ್ಣು + ಕುರುಹು = ಕಣ್ಗುರುಹು (ಕಣ್ಣುಗುರುಹು) ಕ. ಷ.ತ.

೪೬. ಆ ಹನುಮ, ಹಯಗಜ-ಕುದುರೆಯಾನೆಗಳು, ಬಿರಿತು-ಬೆದರಿ, ಬೀದಿಬೀದಿಯಲಿ-ಎಲ್ಲಾ ಬೀದಿಯಲ್ಲೂ, ಓಡೆ-ಓಡುವಹಾಗೆ, ಕರಿಘಟೆಯ-ಆನೆಗಳ ಸಮೂಹದ ಶಾಲೆಗಳ-ಮಂದಿರಗಳುಳ್ಳ (ಗಜಶಾಲೆಗಳುಳ್ಳ), ಹಯಮಂದಿರದ-ಅಶ್ವಶಾಲೆಗಳುಳ್ಳ, ಬೀದಿಯ-ಬೀದಿಯನ್ನು, ಚಾಲದಲಿ-ಪುಚ್ಛದಿಂದ, ಬೋಹರಿಸಿದನು-ಆಕ್ರಮಿಸಿದನು. (ಗಜಾಶ್ವಶಾಲೆಗಳ ಬೀದಿಗಳಿಗೆಲ್ಲ ಬಾಲದ ಅಗ್ನಿಯನ್ನು ಇಕ್ಕಿದನು.)

(ಮುಖ್ಯಭಾಗ):—ಆ ಹನುಮ, ಮುರಿದು-ತಿರುಗಿ, ಹರದರ-ವೈಶ್ಯರ, ಹಾರುವರ-ಬ್ರಾಹ್ಮಣರ, ಶೂದ್ರರ-ಶೂದ್ರವರ್ಣದವರ, ಮಹಾಕ್ಷತ್ರಿಯರ-ದೊಡ್ಡ ಅರಸುಗಳ, ಕೇರಿಯ-ಪೇಟೆಗಳ, ಕಳವಳಿಕೆಯನು-ಗದ್ದಲವನ್ನು (ಮಹಾ ಶಬ್ದವನ್ನು), ತಂದೆಗೆ-ತನ್ನ ಪಿತೃವಾದ ವಾಯುವಿಗೆ, ಇತ್ತು-ಕೊಟ್ಟು, ಒಡಮುರಿದನು-ಕೂಡಲೇ ತಿರುಗಿದನು.

ಉತ್ತರಾರ್ಧದ ಭಾವ;—ಆ ಹನುಮನು ವೈಶ್ಯ ಬ್ರಾಹ್ಮಣ ಶೂದ್ರ ಕ್ಷತ್ರಿಯ ವರ್ಣದವರ ಕೇರಿಗಳಿಗೆ ಬೆಂಕಿಯಿಕ್ಕಿ ಆ ಚತುರ್ವರ್ಣದವರು ತಾಪದಿಂದ ಕೂಗಿಕೊಳ್ಳುವ ಮಹಾಶಬ್ದವು ವಾಯುವಿನಲ್ಲಿ ಸೇರಿ ವ್ಯಾಪಿಸಿ ಎಲ್ಲಾದಿಕ್ಕಿಗೂ ಕೇಳಿಬರುವಂತೆ (ಕೇಳಿಸುವಂತೆ) ಮಾಡಿ ಕೂಡಲೇ ತಿರುಗಿದನು.

೪೭. ಕಪಿ-ಹನುಮಂತನು, ಉಬ್ಬರದ-ಅಧಿಕವಾದ, ಅಬ್ಬರದಿ-ಗರ್ಜನೆ ಯಿಂದಕೂಡಿ, ಮಸಗಿ-ರೇಗಿ, [೧] ಮುಂದಣ-ಮುಂಭಾಗದಲ್ಲಿರುವ, ಬಡಗಿ ಕಮ್ಮಟಿ... ತಿರುಕರ=ಬಡಗಿ-ಮರಗೆಲಸದವರು, ಕಮ್ಮಟಿ-ಕಮ್ಮಾರರು [ಕಬ್ಬಿಣ ಗೆಲಸದವರು], ವಸುವಿಭೇದಕ-ಚಿನ್ನದ ಕೆಲಸಗಾರರು [ಅಕ್ಕಸಾಲಿಗರು], ತಾಮ್ರ ಮರ್ದನ-ತಾಮ್ರದ ಪಾತ್ರೆಯ ಕೆಲಸಗಾರರು, ಮಸೆಗ-ಸಾಣೆಹಿಡಿಯುವವರು, ಮೊಚ್ಚಿಗ-ಮೋಚಿಗಳು [ಪಾದರಕ್ಷೆಯ ಕೆಲಸಗಾರರು] ರಜಕ-ಅಗಸರು, ಚಿತ್ರಕ-ಚಿತ್ರಗಾರರು, ಕಟಿಗ-ಆಹಾರ ಪ್ರಾಣಿಯನ್ನು ಕೊಲ್ಲುವ ಕೆಲಸದವರು, ಕುಸುಮ ಮಾಲಿಕ-ಹೂವಾಡಿಗರು (ಹೂವಿನ ಸರವನ್ನು ಮಾರುವವರು) (೧) ಹಾವಡಿಗ-ಹಾವು ಹಿಡಿದು ಆಡಿಸುವವರು, ಹೊಲೆಹೊಸಿಗ-ಚಂಡಾಲರು, ತಿರುಕ-ಭಿಕ್ಷೆಗಾರರು ಇವರ, ಕೇರಿಗಳಲಿ-ಪೇಟೆಗಳಲ್ಲಿ, ಹವ್ಯವಾಹನನ-ಅಗ್ನಿಯನ್ನು, ಉಬ್ಬಿಸಿದನು-ಹೊತ್ತಿಸಿದನು.

ವಿ॥- ವಸುವಿಭೇದಕ-ಅಕ್ಕಸಾಲಿಗನು

ವ್ಯಾ॥- (೧) ಹಾವು + ಆಡಿಗಂ, ಇದರಿಂದ ಜೀವಿಸುವವನು ಎಂಬರ್ಥ ದಲ್ಲಿ ಆಡಿಗ, (ತದ್ಧಿತ ಪ್ರತ್ಯಯ)

೪೮. (ಮುಖ್ಯಪದ್ಯ);— + ಹನುಮನು, ಕಳವಳಿಕೆ-ವಾದ್ಯಗಾರರು ಕೋಳಾಹಳಿಕ-ದೊಂಬಿದಾಸರು, ಕದ್ದಳಿಗ-ಅಂಜನದ ಕೆಲಸದವರು (ಕಪ್ಪಿನ ಕೆ ಲಸದವರು,) ದೂಸಿಗ-ಬಟ್ಟೆಮಾರುವವರು, ಭೂಸಡಡಿಗ-ಕೃಷಿಗಾರರು, ಕೊಲಸ ಶಿಲ್ಪಿಕುಲಶ್ರೇಷ್ಠರು, ಚಿಪ್ಪಿಗ-ದರ್ಜಿಗಳು, ಬಚ್ಚರಣೆ-ಬಣ್ಣಹಾಕುವವರು, ಬ ಕಾರ-ಬಳೆಮಾಡುವವರು, ಬೋಗಾರ-ಪಾತ್ರೆಕೆಲಸದವರು (ಕಂಚುಗಾರರು) ತಿಲವಿಘಾತಕ-ಗಾಣಿಗರು, ವಾಳಸಿಗ-ಅಡಿಗೆ ಕೆಲಸದವರು, ತಂಬುಲಿಗ-ವೀಳೆಯದೆ ಲೆಯನ್ನು ಮಾರುವವರು, ಜಂಗಮ-ಬಾಹ್ಯಕರ್ಮ ತ್ಯಾಗಿಗಳಾದ ಶಿವಲಿಂಗಧಾರಿ ಗಳು, ಜೋಗಿಗಳ-ಜೀವೇಶ್ವರರ ಐಕ್ಯವನ್ನು ಭಾವಿಸುವ ಯೋಗದ ಅಭ್ಯಾಸಿ ಗಳು ಇವರ, ಜಂಗುಳಿಗ ಕೇರಿಗಳೊಳಗೆ ಜನಸಂಘವುಳ್ಳ ಪೇಟೆಗಳಲ್ಲಿ ಶಿಖಾಳಿಗಳ= ಶಿಖಾ-ಜ್ವಾಲೆಗಳ, ಆಳಿಗಳ-ಶ್ರೇಣಿಗಳನ್ನು, ಝಾಡಿಸಿದನು-ಒದರಿದನು

ವ್ಯಾ॥ ಕದ್ದಳ, ಚಿಪ್ಪ, ವಾಳಸ...ಇವುಗಳ ಮೇಲೆ ಮಾಡುವವನು ಎಂ ಬರ್ಥದಲ್ಲಿ ಇಗ, ಎಂಬ ತದ್ಧಿತ ಪ್ರತ್ಯಯ. ದೂಸ, ತಂಬುಲ-ಇವುಗಳ ಮೇ ಮಾರುವವನು ಎಂಬರ್ಥದಲ್ಲಿ ಇಗ. ತದ್ಧಿತ ಪ್ರ.

ಟಿಪ್ಪಣಿ;— ಜಂಗಮ-ಬಾಹ್ಯಕರ್ಮಗಳನ್ನು ಬಿಟ್ಟು ಮಾನಸಪೂಜೆಯಿಂದ ನಿತ್ಯಾನಂದಪಡುವ ಶಿವಲಿಂಗಧಾರಿಗಳಿಗೆ ಜಂಗಮರೆಂದು ಹೆಸರು.

೪೯. + ಹನುಮಂತನು, ತಳವರರ-ಕಂಬಾಯವನ್ನು ತೆಗೆಯುವ ತಳವಾರರ (೧) ಸುಂಕಿಗರ-ಸುಂಕವನ್ನು ತೆಗೆಯುವವರ, ದಂತಾವಳ ರಥಾಶ್ವಾರೋಹಕರ— ದಂತಾವಳ-ಆನೆಗಳು, ರಥ-ತೇರುಗಳು, ಅಶ್ವ-ಕುದುರೆಗಳು ಇವುಗಳನ್ನು, ಆರೋಹಕರ- ಏರುವವರ, ಮನೆಗಳಲಿ- ಮಂದಿರಗಳಲ್ಲಿಯೂ, ಅಮಾತ್ಯ ನಿಯೋಗಿ ಪರಿಜನರ— ಅಮಾತ್ಯ-ಮಂತ್ರಿಗಳು, ನಿಯೋಗಿ-ಗುಮಾಸ್ತರು (ಅಥವಾ ಕಾರ್ಯಭಾರಿಗಳು), ಸಚಿವ-ಆಲೋಚನಾಸಹಾಯಕರು, ಪ್ರಧಾನ-ಮುಖ್ಯ-ಅಧಿಕಾರಿಗಳು, ಪರಿಜನರ-ಸೇವಕರು ಇವರ, ದಳಪತಿಗಳ- ಸೈನ್ಯಾಧಿಪತಿಗಳ ಸುಸಂಧಿವಿಗ್ರಹಗಳಲಿ— ಸು-ಸಮ್ಯಗ್ರೀತಿಯಿಂದ, ಸಂಧಿ-ಶತ್ರುವಿನೊಡನೆ ಸಮಾಧಾನಮಾಡಿಕೊಳ್ಳುವಿಕೆಯು, ವಿಗ್ರಹ-ಶತ್ರುವಿನೊಡನೆ ಯುದ್ಧಮಾಡುವಿಕೆಯು ಇವುಗಳಲ್ಲಿ, ಸುಪ್ರೌಢರ- ಚೆನ್ನಾಗಿ ಸಮರ್ಥರ (ಚೆನ್ನಾಗಿ ಗಟ್ಟಿಗರ), ನಿವಾಸಂಗಳಲಿ-ಮನೆಗಳಲ್ಲಿಯೂ, ತಚ್ಛಿಖಿಯು-ತತ್-ಆ, ಶಿಖಿಯು-ಜ್ವಾಲದಅಗ್ನಿಯನ್ನು, ವಾಸವನ್ನಾಡಿಸಿದನು-ನೆಲೆಗೊಳಿಸಿದನು; ಮತ್ತು, ಒಲಿಸಿದನು-ಸಂತೋಷಪಡಿಸಿದನು (ಅವರ ಮನೆಗಳನ್ನು ಅಗ್ನಿಗೆ ಆಹಾರವಾಗಿ ಕೊಡುವುದರಿಂದ ಅಗ್ನಿಯನ್ನು ಸಂತೋಷಪಡಿಸಿದನು)

ವ್ಯಾ|| (೧)ಸುಂಕ + ಇಗ, ಇದರಲ್ಲಿ ನಿಯುಕ್ತನಾದವನು ಎಂಬರ್ಥದಲ್ಲಿ (ನಿಯೋಗಾರ್ಥದಲ್ಲಿ) ಇಗ, ತದ್ಧಿತ ಪ್ರ.

೫೦. ಎಲ್ಲೆ, ಕುಶ-ಕುಶನೇ! ಕೇಳು; + ಹನುಮಂತನು, ವಿಭೀಷಣನ, ನಿಜನಿಲಯಂ-ಸ್ವಕೀಯಗೃಹವು, ಒಂದು-ಒಂದುಮಾತ್ರ, ಉಳಿಯೆ-ಹೊರತಾಗಿ, ಕೋಟಾವಳಯಮಧ್ಯದ— ಕೋಟಾ-ಕೋಟೆಯ, ವಳಯ-ಸುತ್ತಿನ (ಮಂಡಲದ), ಮಧ್ಯದ-ನಡುವೆಯಿರುವ, ಮಿಕ್ಕ-ಉಳಿದ, ದೊರೆಗಳ-ಅರಸುಗಳ, ಬಿನುಗುಬಿಜ್ಜಟೆಯ— ಬಿನುಗು-ಸ್ವಾಧಾರಣರು, ಬಿಜ್ಜಟೆಯ-ಬಡವರು ಇವರ, (೧)ಹಲವುಜಾತಿಯ—ನಾನಾಜಾತಿಯ, ವರ್ಣಭೇದದ-ವರ್ಣವಿಧಗಳ (ಅನೇಕವರ್ಣಗಳ), ಹೊಳಲಜನದ-ಪಟ್ಟಣದವರ, ಸಮಸ್ತಭವನಾವಳಿಯ— ಸಮಸ್ತ-ಸಕಲವಾದ, ಭವನ-ಮನೆಗಳ, ಆವಳಯ-ಶ್ರೇಣಿಯ, ಭರಬಾರವನು-ಅತಿಶಯಗಹೊರೆಯನ್ನು, ವಹ್ನಿದೇವರಿಗೆ-ಅಗ್ನಿದೇವರಿಗೆ; ಹೊರಿಸಿದನು. ಹೊರಿಸಿಬಿಟ್ಟನು.

ಭಾವಾರ್ಥ ; ಸಮಸ್ತಭವನಾವಳಿಯ ಭರಭಾಗವನುಹೊರಿಸಿದ ವಹ್ನಿದೇವರಿಗೆ-ಸವ ಸ್ತ್ರೀಕಾಗಳಿಗೂ ಅಗ್ನಿಯನ್ನು ಇಕ್ಕಿದನು.

ವ್ಯಾ|| (೧)ಹಲವು + ಜಾತಂ (೧)

೫೧. ಹನುಮಂ-ಹನುಮಂತನು, ಮನೆಗಳಂ-ಶ್ರೀಕೃಷ್ಣನ ಗೃಹಗಳಲ್ಲಿ, ಮುರಿದು-ಹಿಂದಿರುಗಿ, ಉರಿಗೊಳದ-ಜ್ವಾಲೆಯನ್ನು ಹೊಂದದಿರುವ (ಬೆಂಕಿತಗುಲದೆ ಬಿಟ್ಟುಹೋಗಿರುವ), ಮಂದಿರಕೆ-ಮನೆಗಳಿಗೆ, ಒದೆದು-ಝಾಡಿಸಿ, ನೂಕಿದನು-ಉರಿಯನ್ನು ತಳ್ಳಿದನು; ಕಿಱಿದು-ಸ್ವಲ್ಪವಾದ, ಹೊಗೆಯದ-ಹೊಗೆತೋರದಿರುವ (ಬೆಂಕಿಬಿದ್ದು ಆರಿಹೋಗಿರುವ); ಆಲಯಂಗಳ-ಮನೆಗಳನ್ನು ಹಿರಿದು-ಬಹಳವಾಗಿ, (೧)ಹೆಗ್ಗೊಳ್ಳಿಗಳಿಂ-ದೊಡ್ಡ ಕೊಂಡಗೊಳ್ಳಿಗಳಿಂದ, ಇಟ್ಟನು-ಹೊಡೆದನು; ಚರಿಸಲಾರದ-ಸಂಚರಿಸುವುದಕ್ಕಾಗದಿರುವ, ಸಂದಿಗೊಂದಿಯ = ಸಂದಿ-ಓಣಿಯು, ಗೊಂದಿಯು-ಇಕ್ಕಟ್ಟಾದಪ್ರದೇಶವು ಇವುಗಳಲ್ಲಿರುವ; ತಿರುಕಜಾತಿಯ-ಭಿಕ್ಷುಗಾರ ಜಾತಿಯ, ಜಳ್ಳು ಜರುಗಿನ = ಜಳ್ಳು-ಅಶಕ್ತರು, ಜರುಗಿನ-ಅಂಗಹೀನರ, ಇವರ; ಸೆರಪಿಗಳ-ಸಮೂಹಗಳ, ನಿಳಯದಲಿ-ಮನೆಗಳಲ್ಲಿ, ಬಾಲವ-ಬಾಲದ, ಅಗ್ನಿಯನ್ನು, ನೀಡಿದನು-ಚಾಚಿದನು.

ವ್ಯಾ||-(೧)ಹಿರಿದುಕೊಳ್ಳಿ, ಹಿರಿಯುವು + ಕೊಳ್ಳಿಗಳು = ಹೆಗ್ಗೊಳ್ಳಿ (ಹೆಗ್ಗೊಳ್ಳಿಗಳು) ಕ. ವಿ. ಪೂ.

ವಿ|| ಸಂದಿ-ಓಣಿ, ಗೊಂದಿ-ಇಕ್ಕಟ್ಟಾದಪ್ರದೇಶ. ಭರ-ಅತಿಶಯ, ಭಾರ-ಹೊರೆ ಭವನ-ಮನೆ, ಭುವನ-ಲೋಕ. ಉರುಬು-ಮುಂದುವರಿ, ತರುಬು-ತಡೆ, ಅಸ್ತ್ರ-ಮಂತ್ರೋಚ್ಚಾರಣಪೂರ್ವಕವಾಗಿ ಬಿಡುವ ದೇವಬಾಣ, ಶಸ್ತ್ರ-ಆಯುಧ, ಅನಲ-ಅಗ್ನಿ, ಅನಿಲ-ವಾಯು.

೫೨. ಹೆಚ್ಚಿ-ವೃದ್ಧಿಯಾಗಿ, ಹಿಂಗುವ-ಕಡಮೆಯಾಗುವ, ವರಸುಧಾಸೂತಿಯ = ವರ-ಶ್ರೇಷ್ಠನಾದ, ಸುಧಾಸೂತಿಯ-ಚಂದ್ರನ, (೧)ಕಲಾತ್ಮ ಚಿತ್ರದ-ಆಶ್ಚರ್ಯಕರವಾದ ಕಳೆಯು, ಅಂದದಲಿ-ರೀತಿಯಿಂದ, ಉರಿ-ಅಗ್ನಿಜ್ವಾಲೆಯು, ಬಾಲದೊಳಗೆ-ಹನುಮಂತನ ಬಾಲದಲ್ಲಿ, ಥಳಥಳಿಸಿ-ಹೆಚ್ಚಿ, ಒಳಸರಿಯುತ-ಅಡಗುತ್ತ, ಇರ್ದುದು-ಇದ್ದಿತು; ಶಿಖಿ-ಅಗ್ನಿಯು, ಸಮೀರಜನ-ಹನುಮಂತನನ್ನು, ಸೋಕದಾದುದು-ಮುಟ್ಟದೆಹೋಯಿತು (ಸುಡದೇಹೋಯಿತು) + ಇದು, ಧರಣೀತನಜೆಯ-ಸೀತಾದೇವಿಯ, ವಹ್ನಿಸೂಕ್ತದ-ವೇದೋಕ್ತವಾದ ಅಗ್ನಿಸ್ತೋತ್ರದ, ಪರಮಮಹಿಮೆಯೊ-ಮಹಾ ಮಾಹಾತ್ಮ್ಯೆಯೋ? ಪೋಣನ-ಅಧಿಪನ, ವಿಶ್ವಂಭರನ ವಿಷ್ಣುಸ್ವರೂಪನಾದ ರಾಮನ, ಮಹಿಮೆಯೊ-ಮಾಹಾತ್ಮ್ಯವೋ!

ವ್ಯಾ||—[೧] ವಿಚಿತ್ರವೇ ವೈಚಿತ್ರ್ಯಂ, ವೈಚಿತ್ರ್ಯವಾದ ಕಲೆ—ಕಲಾ ವೈಚಿತ್ರ್ಯ [ಏ. ತ್ರ]

ವಿ||ಉಪಮಾನ—ಹೆಚ್ಚಿ ಹಿಂಗುವವರಸುಧಾಸೂತಿಯ ಕಲಾವೈಚಿತ್ರ್ಯದಂದದಲಿ-[ಶ್ರೇಷ್ಠನಾದ ಚಂದ್ರನ ವಿಚಿತ್ರಕಳೆಯು ಹೆಚ್ಚಿ ಕಡಮೆಯಾಗುವಹಾಗೆ] ಉಪಮೇಯ-ಉರಿಭಿಡಾಳಿಸಿ ಬಾಲದೊಳಗೊಳಸರಿಯ ಎತಿರ್ದುದು [ಹನುಮನಬಾಲದ ಉರಿಯು ಹೆಚ್ಚಿ ಅಡಗುತ್ತಿದ್ದಿತು) ಏಕೆ ? ಶಿಖಿಸವಿಾರ ಜನಸೋಕದಾದುದು ಏಕೆ ? ಸೀತಾದೇವಿಯು ಹನುಮನನ್ನು ಅಗ್ನಿಯು ಸುಡದೆ ಇರಲೆಂದು ಪಠಿಸಿದ ಅಗ್ನಿಸೂಕ್ತದ (ವೇದೋಕ್ತವಾದ ಅಗ್ನಿಸ್ತೋತ್ರದ) ಮಹಾಮಹಿಮೆಯಿಂದಾಗಲಿ, ಶ್ರೀರಾಮನ ಮಹಿಮೆಯಿಂದಾಗಲಿ ಹನುಮನ ಬಾಲದ ಅಗ್ನಿಯು ಹೆಚ್ಚಿ ತಗ್ಗುತ್ತಿದ್ದಿತು. ಮತ್ತು ಅಗ್ನಿಯು ಹನುಮನನ್ನು ಸುಡದೆ ಹೋಯಿತು.

ತಿದ್ದುವಿಕೆ:—ಬಾಲದೊಳಗೊಳಸರಿಯು, ಎಂದು ತಿದ್ದಬಹುದು. 'ವೈಚಿತ್ರ್ಯ' ಎಂದು ತಿದ್ದಬಹುದು.

೫೩. (ಬಹು ಮುಖ್ಯಪದ್ಯ):—ತಂದೆ-ಹನುಮನ ಪಿತೃವಾದ, ಮಾರುತ-ವಾಯುದೇವನು, ಹಿತವನು-ಅಗ್ನಿಗೆ ಸ್ನೇಹಿತನು ; + ಆದುದರಿಂದ, + ಹನುಮನಿಗೆ, ಈ ಪ್ರಿಯದ—ಈ ಉಪಕಾರದ, ಅಂದಂ-ರೀತಿಯು, ಆದುದು-ಆಯಿತು + ಕುಶನೇ ! ನೋಡು-ತಿಳಿ ; ಬಲಿಮುಖರು-ಕಪಿಗಳು, ದಶಮುಖನಿಂದ-ರಾವಣನಿಗಿಂತ, ಅಗ್ಗಳರೊ-ಮೇಲಾದವರೋ ! ನಿರ್ಗಳರೊ-ಕೀಳಾದವರೋ ! ಚಿತ್ತೈಸು-ಮನಸ್ಸಿಗೆ ತೆಗೆದುಕೊ ! (ಯೋಚಿಸು), ಅಂದು-ಪೂರ್ವದಲ್ಲಿ, + ನೀನು, ಭೀತಿಯನು-ಭಯವನ್ನು, ಸಂಧಿಸದೆ-ಹೊಂದದೆ, ಪುರಹರಗೆ-ತ್ರಿಪುರನಾಶಕನಾದ ಈಶ್ವರನಿಗೆ, ಕೈಸೆರವು ಆಗಿ-ಸಹಾಯಕನಾಗಿ, ಕಾಣಿಸಿದ-ತೋರ್ಪಡಿಸಿದ, ಅಂದವನು-ರೀತಿಯನ್ನು, ಕರುಣಿಸಲು ಬೇಕು-ಕೃಪೆಮಾಡಬೇಕು ; + ಎಂದು, ಹನುಮನು, ಎರಗಿ-ತಂದೆಯಾದ ವಾಯುವಿಗೆ ನಮಸ್ಕರಿಸಿ, ಕೈಮುಗಿದ-ಹಸ್ತಗಳನ್ನು ಜೋಡಿಸಿದನು.

ತಾತ್ಪರ್ಯ:—ಅಥವಾ ಹನುಮನ ತಂದೆಯಾದ ವಾಯುದೇವನು ಅಗ್ನಿಗೆ ಸ್ನೇಹಿತನು. ಆದುದರಿಂದ ಹನುಮನಿಗೆ ಅಗ್ನಿಯು ಸುಡದೆ ಇರುವ ಈ ಉಪಕಾರವಾಯಿತು ; ನೋಡು. ಕಪಿಯಾದ ಹನುಮನ ಬಾಲದ ಅಗ್ನಿಯು ಬಾಧೆಗೆ ಒಳಗಾಗದೆ ಬಾಲದ ಮಹಾಗ್ನಿಯಿಂದ ರಾವಣನ ಪಟ್ಟಣವನ್ನು ಸುಟ್ಟು ಮಾಡಿ

ಸೆಯುಳ್ಳವನಾದುದರಿಂದ ಕಪಿಗಳು ರಾವಣನಿಗಿಂತ ಮೇಲಾದವರೋ ಕೀಳಾ ದವರೋ ಯೋಚಿಸು (ಅಂದರೆ ಕಪಿಗಳು ರಾವಣನಿಗಿಂತ ಅಧಿಕರೇ ಹೊರತು ಕೀಳಾದವರಲ್ಲವೆಂದು ಭಾವ), ನೀನು ಭಯಪಡದೆ ಪೂರ್ವದಲ್ಲಿ ತ್ರಿಪುರಗಳನ್ನು ಸುಟ್ಟ ಪರಮೇಶ್ವರನಿಗೆ ಸಹಾಯಕನಾಗಿ, ಆ ಈಶ್ವರನ ಹಣೆಗಣ್ಣಿನಗ್ನಿಯನ್ನು ಅಂತರಿಕ್ಷದ ತ್ರಿಪುರಗಳವರೆಗೆ ಹೆಚ್ಚಿಸಿದ ರೀತಿಯಿಂದ, ಈಗ ನೀನು ಕೃಪೆಯಿಟ್ಟು ನನ್ನ ಬಾಲಾಗ್ನಿಯನ್ನು ಅಂತರಿಕ್ಷದವರೆಗೆ ಹೆಚ್ಚಿಸಬೇಕೆಂದು ಹೇಳಿ ವಾಯುವಿಗೆ ನಮಸ್ಕಾರಮಾಡಿ ಕೈಮುಗಿದನು.

ವಿ|-ಅಗ್ಗಳ-ಅಧಿಕ (ಮೇಲು); ನಿರ್ಗಳ-ಕೀಳು.

೫೪. +ವಾಯುದೇವನು, ಮಗನ-ಪುತ್ರನಾದ ಹನುಮನ, ಮಾತನು-ವಾಕ್ಯವನ್ನು, ಸಲಿಸಬೇಕೆಂದು-ನೆರವೇರಿಸಬೇಕೆಂದು (ತ್ರಿಪುರ ದಹನಕಾಲದಲ್ಲಿ ಶಿವನಿಗೆ ಸಹಾಯಕನಾಗಿ ಅವನ ನೇತ್ರಾಗ್ನಿಯನ್ನು ಅಂತರಿಕ್ಷದವರೆಗೆ ಹೆಚ್ಚಿಸಿ ದಂತೆ ನನ್ನ ಬಾಲಾಗ್ನಿಯನ್ನು ಅಂತರಿಕ್ಷಕ್ಕೆ ಹೆಚ್ಚಿಸಬೇಕೆಂದು ಹನುಮನು ಹೇಳಿದ ಮಾತನ್ನು ನಡಿಸಬೇಕೆಂದು), ಬಗುಮಿಗೆಯ-ಅಧಿಕವಾದ, ಹರ್ಷದಲಿ-ಸಂತೋಷದಿಂದ, ನೀರೇಜಜಾಂಡ ಕಟಾಹ ಪರಿಯಂತ-ಬ್ರಹ್ಮಾಂಡದ ಮೇಲ ಣಕೊಪ್ಪರಿಗೆಯವರೆಗೆ, ಬಾಲದ ಅಗ್ನಿಯನ್ನು, ನೆಗಹಿದನು-ಏರಿಸಿದನು, ಹನು ಮನ ಬಾಲದ ಅಗ್ನಿಯು, ಭುಗಿಭುಗಿಲ್ ಭುಗಿಲೆಂದು-ಭುಗ್‌ಭುಗ್‌ಭುಗ್ ಎಂಬು ದಾಗಿಯೂ, ಧಗಧಗಧಗಿಲು ಧಗಿಲೆಂದು-ಧಗಧಗಧಗಿಲ್‌ಧಗಿಲ್ ಎಂಬುದಾಗಿಯೂ, ಒದರಿ-ಶಬ್ದಮಾಡಿ, ನಿಖಿಳಾಮರಪುರಂಗಳಿಗೆ=ನಿಖಿಳ-ಸಮಸ್ತವಾದ, ಅಮರಪು ರಂಗಳಿಗೆ-ದೇವತಾಪಟ್ಟಣಗಳಿಗೆ, (೧) ತುದಿನಾಲಗೆಗಳನು-ನಾಲಗೆಯ ರೂಪ ವಾದ ಜ್ವಾಲೆಗಳ ಕೊನೆಗಳನ್ನು, ನೀಡಿದುದು-ಚಾಚಿತು (ಅಗ್ನಿಯು ಅಂತರಿ ಕ್ಷದ ದೇವಪಟ್ಟಣಗಳವರೆಗೆ ಉರಿಗಳನ್ನು ಚಾಚಿತು.).

ವ್ಯಾ-(೧) ನಾಲಗೆಗಳ+ತುದಿಗಳು=ತುದನಾಲಗೆಗಳು (ಕ. ಅ. ಭಾ.)

ಟಿಪ್ಪಣಿ:—ಬ್ರಹ್ಮನು ತನ್ನ ಮೊಟ್ಟೆಯನ್ನು (ಬ್ರಹ್ಮಾಂಡವನ್ನು) ಕೊಪ್ಪ ರಿಗೆಯ ಆಕಾರದಿಂದ ಎರಡು ಹೋಳಾಗಿ ವಿಭಾಗಿಸಿ ತಾನು ಒಳಹೊಕ್ಕು ಕೊಪ್ಪರಿಗೆಯ ಆಕಾರದ ಆ ಎರಡು ಹೋಳುಗಳನ್ನೂ ಸೇರಿಸಿ ಅದರಲ್ಲಿ ಹದಿ ನಾಲ್ಕು ಲೋಕಗಳನ್ನೂ ನಿರ್ಮಿಸಿರುವನು. ಆದುದರಿಂದ ಬ್ರಹ್ಮಾಂಡದೊ ಳಗೆ ಕೆಳಗೆ ಒಂದು ಕೊಪ್ಪರಿಗೆಯ ಆಕಾರವೂ ಮೇಲ್ಗಡೆ ಒಂದು ಕೊಪ್ಪರಿ ಗೆಯ ಆಕಾರವೂ ಇವೆ.

೫೫. ಹನುಮನ ಬಾಲದಗ್ನಿಯು ಎಲ್ಲೆಡೆಯಿಂದ, ಜ್ವಾಲೆ ತಾಗಿದ ಬ್ರಹ್ಮಾಂಡದ, ಚಿಪ್ಪು-ಕರಟವು, ಛಿಳಿಛಿಳಿಲು ಛಿಳಿಲೆಂದು – ಛಿಳ್ ಛಿಳಿಲ್ ಛಿಳಿಲೆಂಬುದಾಗಿ, ಚಿಮ್ಮಿತು-ಸಿಡಿಯಿತು. ತತ್ಕಮಲಜಾಂಡಾವರಣ ಜಲ ರಾಶಿ— ತತ್-ಆ, ಕಮಲಜಾಂಡ-ಬ್ರಹ್ಮಾಂಡವನ್ನು, ಆವರಣ-ಸುತ್ತಿಕೊಂಡಿರುವ, ಜಲರಾಶಿ-ನೀರಿನಸಮೂಹವು, ಥಳಥಳನೆ-ಥಳಥಳಯೆಂಬುದಾಗಿ, ಕುದಿದುದು-ಕುದಿಯಿತು (ಮರಳಿತು); ಅಂಬುಧಿ-ಸಮುದ್ರವು, ಇಳಿದುದು-ನೀರುತಗ್ಗಿತು; ಇಳೆ-ಭೂಮಿಯು, ಕಾದ-ಕಾಯಿಸಲ್ಪಟ್ಟ (೧)ಕಡುಗಾವಲಿವೊಲು-ದೊಡ್ಡದಾದ ಕಬ್ಬಿಣದ ಕಾವಲಿಯಂತೆ, ಆಯ್ತು-ಆಯಿತು. ವಾಸುಗಿಯ-ಭೂಮಿಯನ್ನು ಹೊತ್ತಿರುವ ಆದಿಶೇಷನ, (೨)ಹೆಡತಲೆಯ-ಹೆಡೆಗಳ ಮೇಲ್ಭಾಗದ, ಮಣಿ-ರತ್ನಗಳು (೩)ಅರಳಿದುವು-ಬಿರಿದುಹೋದುವು (ಅಥವಾ ಅರಳಾಗಿಹೋದುವು), ಅದ್ಭುತವನ ಆಶ್ಚರ್ಯವನ್ನು, ಏನನು-ಎಂಥಾದ್ದನ್ನಾಗಿ, ಹೊಗಳ್ವೆ-ಕೊಂಡಾಡಲಿ? (ಆಶ್ಚರ್ಯವನ್ನು ಏನು ಹೊಗಳಲಿ?)

ವ್ಯಾ|| (೧) ಕಡಿದು+ಕಾವಲಿ (ಕ.ವಿ.ಪ್ರ.) (೨)ಹೆಡೆಗಳತಲೆ (ಷ.ತ) (೩)ಮಣಿ ಎಂಬ ಜಾತ್ಯೇಕವಚನ ಕರ್ತೃವಿರುವುದರಿಂದ ಈ ಕ್ರಿಯೆ ಬಹುವಚನದಲ್ಲಿದೆ,

ವಿ|| ಹೇಳುವೆನೇನ ನದ್ಭುತವ-ಇಲ್ಲಿ ಅದ್ಭುತವೇನು? ಎಂದರೆ—

ಹನುಮನ ಬಾಲದಗ್ನಿಯ ವ್ಯಾಪನೆಯಿಂದ ಬ್ರಹ್ಮಾಂಡದಚಿಪ್ಪು ಛಿಳ್ ಛಿಳ್ ಎಂದು ಸಿಡಿದುಹೋಯಿತು. ಬ್ರಹ್ಮಾಂಡದಸುತ್ತಲೂ ಇರುವ ಜಲಸಮೂಹವು ಥಳಥಳವೆಂದು ಕುದಿಯಿತು. ಸಮುದ್ರವೆಲ್ಲ ನೀರಿಂಗಿತು; ಜ್ವಾಲೆಯ ಕಾಹಿನಿಂದ ಭೂಮಿಯು ಕಾದ ಕಾವಲಿಯಂತೆ ಆಯಿತು. ಹೀಗೆ ಜ್ವಾಲೆಯಿಂದ ಕಾಯ್ದುಹೋದ ಭೂಮಿಯನ್ನು ಹೊತ್ತಿರುವ ಆದಿಶೇಷನ ಹೆಡೆತಲೆಗೆ ತಾಪವು ತಟ್ಟಿ ಶೇಷನ ಹೆಡೆತಲೆಯಲ್ಲಿರುವ ರತ್ನಗಳು ಅರಳಿದುವು. ಹೀಗೆ ಹನುಮನ ಬಾಲದ ಅಗ್ನಿಯು ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿ ಸುಡುವುದು ಅದ್ಭುತವು (ಆಶ್ಚರ್ಯವು.) ಇದನ್ನು ನಾನು ಏನು ಹೊಗಳಲಿ? (ಹೊಗಳಲಸಾಧ್ಯವೆಂದು ಭಾವ.)

೫೬. ಲಂಕಾನಗರದಹನದಲಿ – ಲಂಕಾಪಟ್ಟಣದಸುಡುವಿಕೆಯಕಾಲದಲ್ಲಿ, ಸುರನಗರಾಳಿ — ಸುರನಗರ-ಸ್ವರ್ಗಲೋಕದ, ಆಳಿ-ದೇವಶ್ರೇಣಿಗಳು, (೧)ದಾಳಿಚ್ಚಿಗೆ-ಆವರಿಸುತ್ತಿರುವ ಅಗ್ನಿಯ ದಸೆಯಿಂದ, ಬೆಚ್ಚಿ-ಬೆದರಿ, ಅಲ್ಲಲ್ಲಿ-ಆಯಾಸ್ಥಳಗಳಲ್ಲಿ, ಪಾಳೆಯ ಮಂ-ನೆಲಸಿದ್ದಸ್ಥಳವನ್ನು, ತೆಗೆದವು-ಬಿಟ್ಟುಬಿಟ್ಟುವು(ಬಿಟ್ಟೋಡಿದುವು)